# ಅಧ್ಯಾಯ - 14

## ಸಾಹಿತ್ಯ ಮತ್ತು ಸಂಸ್ಕೃತಿ

ಧಾರವಾಡವು ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ. ಪ್ರಾಚೀನ ಕಾಲದ ದೇವಾಲಯ, ಮಠ, ಅಗ್ರಹಾರಗಳು ವಿದ್ಯೆಗೆ ಜಿಲ್ಲೆಯಲ್ಲಿ ಪ್ರೋತ್ಸಾಹ ಕೊಟ್ಟಂತೆ ಸಾಹಿತ್ಯ, ಜಾನಪದಗಳ ವಿಕಾಸಕ್ಕೂ ಇಲ್ಲಿ ದಾರಿಯಾಯಿತು. ಪಂಪ ಹುಟ್ಟಿದ್ದು ಅಣ್ಣಿಗೇರಿಯಲ್ಲಿ. ಕುಮಾರವ್ಯಾಸ, ಕನಕದಾಸ, ಸರ್ವಜ್ಞರಿಂದ ಮೊದಲುಗೊಂಡು ಶಿಶುನಾಳ ಶರೀಫ, ಬೇಂದ್ರೆಯವರವರೆಗಿನ ಕಾವ್ಯ ಪರಂಪರೆ ಇಲ್ಲಿ ಹರಿದಿದೆ. ಟ್ರೇನಿಂಗ್ ಕಾಲೇಜು, ಬಾಸೆಲ್ ಮಿಶನ್, ವಿದ್ಯಾವರ್ಧಕ ಸಂಘಗಳು ಕರ್ನಾಟಕ ವಿಶ್ವವಿದ್ಯಾಲಯ, ಆಕಾಶವಾಣಿ ಕೇಂದ್ರ ಇವೆಲ್ಲವೂ ಹಲವು ಹತ್ತು ರೀತಿಯಲ್ಲಿ ವಿದ್ವತ್ತು, ಸೃಜನಶೀಲತೆ ಬೆಳೆಯಲು ಹಾದಿ ಮಾಡಿವೆ. ಕರ್ನಾಟಕದ ಪ್ರಥಮ ಗ್ರಂಥಕರ್ತರ ಸಮ್ಮೇಳನವನ್ನು ಆಲೂರರು ಕರೆದುದು ಇಲ್ಲಿಯೇ. ಸಾಹಿತ್ಯ ಕ್ಷೇತ್ರದಲ್ಲಿ ಬೇಂದ್ರೆಯವರ ಸುತ್ತ ಗೆಳೆಯರ ಗುಂಪು ಹುಟ್ಟಿ ಬೆಳೆದದ್ದು ಇಲ್ಲಿಯೇ. ಹಿಂದುಸ್ತಾನೀ ಸಂಗೀತದ ಒಂದು ಗಣ್ಯ ಕೇಂದ್ರವಾಗಿ ಬೆಳೆದು, ಧಾರವಾಡ ಅಖಿಲ ಭಾರತ ಕೀರ್ತಿ ಗಳಿಸಿದೆ. ಮಲ್ಲಿಕಾರ್ಜುನ ಮನ್ಸೂರರು ಧಾರವಾಡದವರು. ರಂಗಭೂಮಿಯಲ್ಲಿ ಶ್ರೀರಂಗರ ಹವ್ಯಾಸೀ ಪ್ರಯೋಗಗಳೂ ಶಿರಹಟ್ಟಿ ವೆಂಕೋಬರಾವ್, ವಾಮನರಾವ್ ಮಾಸ್ತರ್, ಗರುಡ ಸದಾಶಿವರಾವ್ ಮುಂತಾದ ವೃತ್ತಿಪರರ ಚಟುವಟಿಕೆಗಳೂ ಈ ಜಿಲ್ಲೆಯಲ್ಲಿಯೇ ಸಾಗಿದವು. ವೃತ್ತಿಪರ ರಂಗಭೂಮಿಗೆ ಹುಬ್ಬಳ್ಳಿ ನಗರ ಸತತ ಬೆಂಬಲ ಕೊಟ್ಟಿದೆ. ರಂಗಭೂಮಿಯಿಂದ ಕಲಾವಿದರು ಚಲನಚಿತ್ರರಂಗಕ್ಕೂ ನುಗ್ಗಿದ್ದಾರೆ. ರಾಷ್ಟ್ರೀಯ ಜಾಗೃತಿಯಲ್ಲಿ ಸಾಹಿತ್ಯ, ರಂಗಭೂಮಿಗಳು ತಮ್ಮದೇ ಪಾತ್ರ ವಹಿಸಿವೆ. ಇಲ್ಲಿನ ದೇವಾಲಯ, ಜಾತ್ರೆಗಳು ಜಾನಪದ ಕಲೆಗೆ ಸ್ಫೂರ್ತಿಯ ಚಿಲುಮೆಗಳು. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅನೇಕ ಯಶಸ್ವಿ ಪ್ರಯೋಗಗಳು ಧಾರವಾಡ ಹುಬ್ಬಳ್ಳಿಗಳಲ್ಲಿ ಆಗಿವೆ. ಗಳಗನಾಥರಂಥ ಸಾಹಿತಿ ರಾಷ್ಟ್ರೀಯ ಜಾಗೃತಿಗೆ ಯಶಸ್ವಿಯಾಗಿ ಲೇಖನಿ ಬಳಸಿದ್ದು ಇಲ್ಲಿಂದಲೇ. ಹುಬ್ಬಳ್ಳಿ, ಧಾರವಾಡ, ಗದಗುಗಳು ಚಿತ್ರಕಲೆಯ ಕೇಂದ್ರಗಳೆನಿಸಿವೆ. ಇತಿಹಾಸ ಸಂಶೋಧನೆಯಂಥ ಕ್ಷೇತ್ರದಲ್ಲಿ ರಾಜಾಶ್ರಯವಿಲ್ಲದಿದ್ದರೂ ಕರ್ನಾಟಕದಲ್ಲಿ ಮೈಸೂರಿನ ನಂತರ ಧಾರವಾಡವು ಗಣ್ಯಕೇಂದ್ರವಾಗಿ ಬೆಳೆಯಿತು. ಇಲ್ಲಿ ಮರಾಠಿ ಲೇಖಕರೂ ಆಗಿಹೋಗಿದ್ದಾರೆ. ಹಲವು ಗಣ್ಯ ಸಂಸ್ಕೃತ ವಿದ್ವಾಂಸರು ಪ್ರಾಚೀನ ಅಗ್ರಹಾರಗಳ ಪರಂಪರೆಯ ಹರಿವಾಗಿ ಇಂದಿಗೂ ಇದ್ದಾರೆ.

### ಸಾಹಿತ್ಯ

ಧಾರವಾಡ ಜಿಲ್ಲೆಯು ಸಾಹಿತ್ಯ ಕ್ಷೇತ್ರದಲ್ಲಿ ಉತ್ತರ ಕರ್ನಾಟಕದ ಇತರ ಜಿಲ್ಲೆಗಳಿಗಿಂತ ಮುಂದಿದೆ. ಕವಿರಾಜ ಮಾರ್ಗಕಾರನು ಹೇಳಿರುವ ತಿರುಳ್ಗನ್ನಡ ಪ್ರದೇಶದ ಬಹುಭಾಗವನ್ನು ಈಗಿನ ಧಾರವಾಡ ಜಿಲ್ಲೆಯು ಒಳಗೊಂಡಿದೆ. ಅಲ್ಲದೆ ಫಲವತ್ತಾದ ಬೆಳುವಲನಾಡೂ ಸಹ ಈ ಜಿಲ್ಲೆಯ ಹೆಚ್ಚಿನ ಭಾಗವನ್ನು ಒಳಗೊಂಡಿದೆ. ಅನೇಕ ಶಿವಶರಣರು ಈ ಪ್ರದೇಶದಲ್ಲಿ ವಾಸಿಸಿದ್ದರು. ಪುಲಿಗೆರೆಯ ಸೋಮೇಶ್ವರನು ಆರಂಭದ ಶಿವಶರಣರಿಗೆ ಪ್ರಮುಖ ಆರಾಧ್ಯ ದೈವ. ಜೈನಕವಿಗಳಿಗೆ ಮುಳಗುಂದ, ಲಕ್ಷ್ಮೇಶ್ವರ, ಲಕ್ಕುಂಡಿ ಮುಂತಾದವು ಪ್ರಮುಖತೀರ್ಥಗಳಾಗಿದ್ದವು. ಸಾಹಿತ್ಯಾಸಕ್ತರೂ, ಸಾಹಿತ್ಯ ಪೋಷಕರೂ ಈ ಜಿಲ್ಲೆಯಲ್ಲಿದ್ದುದರಿಂದ ಸಹಜವಾಗಿ

ಸಾಹಿತ್ಯದ ಬೆಳವಣಿಗೆಯಾಗಲು ಕಾರಣವಾಯಿತು. ಪ್ರಾಚೀನಕಾಲವೇ ಅಲ್ಲದೆ ಇತ್ತೀಚಿಗೆ ಕೂಡ ಈ ಜಿಲ್ಲೆ ಸಾಹಿತ್ಯೋಪಾಸಕರ ಬಹು ಪ್ರಮುಖ ನೆಲೆಯಾಗಿದೆ.

ಕವಿರಾಜ ಮಾರ್ಗಕಾರನು ತಿರುಳ್ಗನ್ನಡ ಪ್ರದೇಶಗಳನ್ನು ಹೆಸರಿಸುವಾಗ, ಈಗಿನ ಧಾರವಾಡ ಜಿಲ್ಲೆಯ ಪುಲಿಗೆರೆ (ಲಕ್ಷ್ಮೇಶ್ವರ), ರಾಯಚೂರು ಜಿಲ್ಲೆಯ ಕೊಪಣನಗರ, ಬಿಜಾಪುರ ಜಿಲ್ಲೆಯ ಕಿಸುವೊಳಲು ಹಾಗೂ ಬೆಳಗಾವಿ ಜಿಲ್ಲೆಯ ಒಕ್ಕುಂದವನ್ನು ಹೆಸರಿಸುತ್ತಾನೆ. ಆದಿಕವಿ ಪಂಪನು (ಕ್ರಿ.ಶ.949) ವೇಮಲವಾಡದಲ್ಲಿ ಕಾವ್ಯ ರಚಿಸಿದ್ದರೂ ಅವನ ಸಾಹಿತ್ಯಕ್ಕೆ ಪ್ರೇರಕವಾದ ನಾಡು ಬನವಸೆನಾಡು ಮತ್ತು ಅವನ ತಾಯಿಯ ಊರಾಗಿದ್ದ ಅಣ್ಣಿಗೇರಿ. ಗದಾಯುದ್ಧ ಅಥವಾ ಸಾಹಸಭೀಮ ವಿಜಯ ಮುಂತಾದ ಕೃತಿಗಳನ್ನು ಬರೆದ ರನ್ನನು ಮುಧೋಳದವನಾದರೂ ಕಾವ್ಯ ರಚಿಸಿದ್ದು ಲಕ್ಕುಂಡಿಯಲ್ಲಿದ್ದ ಅತ್ತಿಮಬ್ಬೆಯ ಆಶ್ರಯದಲ್ಲಿ. ನರಗುಂದದಲ್ಲಿದ್ದ ಜೈನಕವಿಯಾದ ಶ್ರೀಧರಾಚಾರ್ಯನು (1049) 'ಜಾತಕ ತಿಲಕ'ವೆಂಬ ಜ್ಯೋತಿಷ್ಯ ಗ್ರಂಥವನ್ನು ಬರೆದಿದ್ದಾನೆ. ರೋಣ ತಾಲೂಕಿನ ಸವಡಿ ಗ್ರಾಮದಲ್ಲಿದ್ದ ದುರ್ಗಸಿಂಹನು (1015-1042) ಚಾಲುಕ್ಯ ಜಯಸಿಂಹನ ಬಳಿ ಸಂಧಿವಿಗ್ರಹಿಯಾಗಿದ್ದ. ಸಂಸ್ಕೃತದಲ್ಲಿ ವಸುಭಾಗಭಟ್ಟ ಬರೆದಿದ್ದ 'ಪಂಚತಂತ್ರ'ವನ್ನು ಕನ್ನಡದಲ್ಲಿ ಬರೆದಿರುತ್ತಾನೆ. ಆಚಣ್ಣನೆಂಬ ಜೈನಕವಿಯು (1195) ಪುಲಿಗೆರೆಯಲ್ಲಿದ್ದು 'ವರ್ಧಮಾನ ಪುರಾಣ'ವೆಂಬ ಚಂಪೂಕಾವ್ಯವನ್ನು ಬರೆದಿದ್ದಾನೆ. ಇನ್ನೊಬ್ಬ ಜೈನ ಕವಿಯಾದ ನಯಸೇನನು ಮುಳುಗುಂದದವನಾಗಿದ್ದು 'ಧರ್ಮಾಮೃತ'ವನ್ನು ಬರೆದಿದ್ದಾನೆ.

12 ನೇಯ ಶತಮಾನದಲ್ಲಿ ಕಲ್ಯಾಣದಲ್ಲಿ ಬಸವಣ್ಣನ ಮುಂದಾಳತ್ವದಲ್ಲಿ ನಡೆದ ಸಾಮಾಜಿಕ ಚಳುವಳಿಯಲ್ಲಿ ಈ ಜಿಲ್ಲೆಯ ಅನೇಕ ಶರಣರು ಭಾಗವಹಿಸಿದ್ದರು. ಬಳ್ಳಿಗಾವೆಯ ಕಡೆಯಿಂದ ಅಲ್ಲಮ, ಅಬ್ಬಲೂರಿನಲ್ಲಿ ಏಕಾಂತ ರಾಮಯ್ಯ, ಪುಲಿಗೆರೆಯಲ್ಲಿ ಆದಯ್ಯ ಮುಂತಾದವರು ಈ ಚಳವಳಿಯನ್ನು ಇಲ್ಲಿ ಮುಂದುವರಿಸಿದರು. ಇವರು ಅನೇಕ ವಚನಗಳನ್ನೂ ಬರೆದಿರುತ್ತಾರೆ. ಚೌಡದಾನಪುರದ ಅಂಬಿಗರ ಚೌಡಯ್ಯ ಖ್ಯಾತ ವಚನಕಾರ. ಅಬ್ಬಲೂರಿನಲ್ಲಿ ನಿಂತು ಅಲ್ಲಿ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿ ಪವಾಡಗಳನ್ನು ಮೆರೆದ ಏಕಾಂತದ ರಾಮಯ್ಯನೂ ಅನೇಕ ವಚನಗಳನ್ನು ಬರೆದಿದ್ದಾನೆ. ಸೌರಾಷ್ಟ್ರದಿಂದ ಬಂದು ಪುಲಿಗೆರೆ(ಲಕ್ಷ್ಮೇಶ್ವರ)ಯಲ್ಲಿ ನೆಲೆಸಿದ್ದ ಆದಯ್ಯನು 'ಸೌರಾಷ್ಟ್ರ ಸೋಮೇಶ್ವರ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿರುತ್ತಾನೆ. ಲಕ್ಕುಂಡಿಯಲ್ಲಿದ್ದ ಮುಕ್ತಾಯಕ್ಕ ಖ್ಯಾತ ವಚನಕಾರ್ತಿ. 1425 ರಲ್ಲಿ ಪುಲಿಗೆರೆಯಲ್ಲಿದ್ದ ಮಹಲಿಂಗನು 'ಏಕೋತ್ತರ ಶತಸ್ಥಲ'ವೆಂಬ ಕೃತಿಯನ್ನು ಬರೆದಿದ್ದಾನೆ. ಸುಮಾರು 1430 ರಲ್ಲಿ ಗದಗಿನಲ್ಲಿದ್ದ ಕೋಳಿವಾಡದ ನಾರಾಣಪ್ಪನು ಗದಗಿನ ವೀರನಾರಾಯಣನ ಅಂಕಿತದಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕನ್ನಡದ ಹೆಮ್ಮೆಯ ಕಾವ್ಯ ಬರೆದಿದ್ದಾನೆ. ಭಾಮಿನಿ ಷಟ್ಪದಿಯಲ್ಲಿ ಬರೆದಿರುವ ಈ ಬೃಹತ್ಕೃತಿಯನ್ನು 'ಕುಮಾರ ವ್ಯಾಸ ಭಾರತ', 'ಗದುಗಿನ ಭಾರತ'ವೆಂದು ಕರೆಯುವುದೂ ರೂಢಿ. ಇದು ಮರಾಠಿಗೂ ಅನುವಾದವಾಗಿದೆ. ಬೆಟಗೇರಿಯ ಸಿದ್ಧಮಲ್ಲಾರ್ಯನು (ಕ್ರಿ.ಶ.ಸು. 1500) 'ದೇವಾಂಗ ಪುರಾಣ'ವನ್ನು ರಚಿಸಿರುತ್ತಾನೆ. ಇದೇ ಕಾಲದ ನಾರಣಾಪುರದ ಚಾಮರಸನು 'ಪ್ರಭುಲಿಂಗ ಲೀಲೆ'ಯ ಕರ್ತೃವಾಗಿದ್ದಾನೆ. ಇದು ಅಲ್ಲಮಪ್ರಭುವಿನ ಜೀವನಚಿತ್ರಣವಾಗಿದ್ದು ಒಂದು ಪ್ರಸಿದ್ಧವಾದ ಸಾಹಿತ್ಯ ಕೃತಿ. 1448 ರಲ್ಲಿ ಅಮ್ಮಿನಭಾವಿಯಲ್ಲಿದ್ದ ಜೈನಕವಿ 'ದ್ವಾದಶಾನುಪ್ರೇಕ್ಷೆ' ಯೆಂಬ ಕೃತಿಯನ್ನು ಬರೆದಿದ್ದಾನೆ. ಸು.1500 ರಲ್ಲಿ ಪುಲಿಗೆರೆಯಲ್ಲಿದ್ದ, ವೀರಶೈವ ಕವಿಯಾದ ಸುರಂಗನು 'ತ್ರಿಷಷ್ಟಿ ಪುರಾತನದ ಚರಿತ್ರೆ'ಯೆಂಬ ಚಂಪೂಕೃತಿಯ ರಚನಕಾರ. ಸು.1530 ರಲ್ಲಿದ್ದ ಸರ್ವಜ್ಞನು ತ್ರಿಪದಿಗಳ ರೂಪದಲ್ಲಿ ಅನೇಕ ನೀತಿಬೋಧಕ ಪದ್ಯಗಳನ್ನು ರಚಿಸಿರುತ್ತಾನೆ. ಈತ ಅಬ್ಬಲೂರವನೆಂದು ನಂಬಿಕೆ. ಗದಗಿನ ಬೆಟಗೇರಿಯಲ್ಲಿದ್ದ ದಾನಪಾರ್ಯನೆಂಬುವವನು (1550) 'ಶಿವಸಂವಾದಿನಿ'ಯೆಂಬ ದ್ವಿಪದಿಕಾವ್ಯ ರಚಿಸಿರುತ್ತಾನೆ. ಇದೇ ಜಿಲ್ಲೆಯ ಬಾಡಗ್ರಾಮದಲ್ಲಿ ಜನಿಸಿ ಕಾಗಿನೆಲೆಯ ಆದಿಕೇಶವನನ್ನು ಇಷ್ಟ ದೈವವನ್ನಾಗಿ ಪಡೆದಿದ್ದ ಕನಕದಾಸನು 'ರಾಮಧಾನ್ಯಚರಿತ್ರೆ', 'ನಳಚರಿತ್ರೆ', 'ಮೋಹನ ತರಂಗಿಣಿ' ಮುಂತಾದ ಕಾವ್ಯಗಳನ್ನಲ್ಲದೆ ಅನೇಕ ಕೀರ್ತನೆಗಳನ್ನು ರಚಿಸಿ ದಾಸಪಂಥದ ಅಗ್ರಗಣ್ಯನಾಗಿದ್ದಾನೆ. ರಾಣೆಬೆನ್ನೂರು ತಾಲೂಕು ಮೆಡ್ಲೇರಿಯಲ್ಲಿದ್ದ ಶಿವಲಿಂಗನೆಂಬ ಕವಿ (1570) 'ಇಷ್ಟಲಿಂಗ ಶತಕ'ವನ್ನು ಬರೆದಿದ್ದಾನೆ. ಬೆಟಗೇರಿಯ ರುದ್ರಮುನಿಯು (1600) ಅನೇಕ ಹಾಡುಗಳನ್ನು ಬರೆದಿದ್ದಾನೆ. ಇದೇ ಊರಿನಲ್ಲಿ ರಾಮನೆಂಬ ಕವಿಯಿದ್ದಂತೆ ತಿಳಿಯುತ್ತದೆ. ಮುಳುಗುಂದದ ಬಸಪ್ಪಾರ್ಯನು (1650) ಕೃತಿಯೊಂದನ್ನು ರಚಿಸಿರುತ್ತಾನೆ. ಲಕ್ಷ್ಮೇಶ್ವರದ ಪರಮಭಕ್ತನೆಂಬ ಕವಿ (1700) ವಾರ್ಧಕ ಷಟ್ಪದಿಯಲ್ಲಿ 'ಘೋರಾಸುರಯುದ್ಧವೆಂಬ ಗ್ರಂಥವನ್ನು ಬರೆದಿದ್ದಾನೆ. ಹುಬ್ಬಳ್ಳಿಯ ಸಂಗಯ್ಯನೆಂಬುವವನು (ಸು.1700) ತೆಲುಗಿನಿಂದ 'ಶಿವಯೋಗ ರತ್ನಾಕರ'ವೆಂಬ ಕೃತಿಯನ್ನು ಅನುವಾದಿಸಿರುತ್ತಾನೆ. ಸು.1750 ರಲ್ಲಿ ರಾಣೆಬೆನ್ನೂರಿನಲ್ಲಿ ಜನಿಸಿದ ಹೆಳವನಕಟ್ಟೆ ಗಿರಿಯಮ್ಮ ಅನೇಕ ಕೃತಿಗಳನ್ನಲ್ಲದೆ ಹಾಡುಗಳನ್ನು ರಚಿಸಿರುತ್ತಾಳೆ. ಈಕೆಯ ಅಂಕಿತ 'ಹೆಳವನಕಟ್ಟೆರಂಗ'. ಕುರ್ತಕೋಟಿಯ ನಾರಸಿಂಹ (1768)

ನೆಂಬ ಕವಿಯ 'ಅನುಭವ ಶಿಖಾಮಣಿ'ಯ ಕರ್ತೃ. ಸು.1800ರಲ್ಲಿ ಕುಂದಗೋಳದಲ್ಲಿದ್ದ 'ಬಸವಲಿಂಗ'ನೆಂಬ ಕವಿ 'ಸೌಮಿನೀಕಥೆ'ಯನ್ನು ಬರೆದಿರುತ್ತಾನೆ. ಧಾರವಾಡದ ಸಕ್ಕರೆಯ ಶಾಂತನೆಂಬ ಕವಿ (ಸು. 1800) 'ಪ್ರಭುದೇವ ಚರಿತ್ರೆ'ಯೆಂಬ ಯಕ್ಷಗಾನ ಕೃತಿಯ ಕರ್ತೃ. ಧಾರವಾಡದ ಶಾಲಿಚನ್ನಬಸವನೆಂಬಾತ (ಸು.1800) 'ವೀರಸಂಗಯ್ಯನ ದುಂಧುಮೆ'ಯನ್ನು ಬರೆದಿದ್ದಾನೆ. ತಿಳವಳಿ (ತಿಳುವಳ್ಳಿ)ಯಲ್ಲಿದ್ದ ವಿರಕ್ತದೇವ 'ಸಾನಂದಗಣೇಶ್ವರನ ಸಾಂಗತ್ಯ'ಯೆಂಬ ಕೃತಿಯನ್ನು ರಚಿಸಿರುತ್ತಾನೆ. ಮುಳುಗುಂದದ ಕಲ್ಮಠದ ಸ್ವಾಮಿಯಾಗಿದ್ದ ಬಾಲಲೀಲಾ ಮಹಾಂತ ಶಿವಯೋಗಿಯು ಅನುಭಾವಿ ಕವಿಯಾಗಿದ್ದು 'ಕೈವಲ್ಯ ದರ್ಪಣ'ವೆಂಬ ಕೃತಿ ಹಾಗೂ ಹಾಡುಗಳನ್ನು ಬರೆದಿದ್ದಾನೆ. ಶಿಶುನಾಳ ಶರೀಫನ ಗುರುವಾದ ಕಳಸದ ಗೋವಿಂದ ಭಟ್ಟನು (ಸು.1820) 'ಗುಡಿಪುರ', 'ಕಲ್ಮೇಶ್ವರ'ಯೆಂಬ ಅಂಕಿತಗಳಲ್ಲಿ ಪದಗಳನ್ನು ಬರೆದಿದ್ದಾನೆ. ಹಾನಗಲ್ಲು ವಿರಕ್ತಮಠದ ಸ್ವಾಮಿಯಾಗಿದ್ದ ಕುಮಾರವಿಭುಯೆಂಬುವವನು 'ಭಿಕ್ಷುಕಮಹೇಶವಿಲಾಸ'ವೆಂಬ ಚಂಪೂ ಕೃತಿಯ ರಚನಕಾರ. ಶಿಶುನಾಳದ ಅನುಭಾವಿ ಕವಿಯಾದ ಶಿಶುನಾಳ ಷರೀಫ್ ಸಾಹೇಬನು (ಸು. 1840) 'ಶಿಶುನಾಳಾಧೀಶ'ನೆಂಬ ಅಂಕಿತದಲ್ಲಿ ಅನೇಕ ತತ್ವಪದಗಳಿಂದ ಖ್ಯಾತನಾಗಿದ್ದಾನೆ. ನರೇಗಲ್ಲಿನ ಶಿವಬಸಪ್ಪ ಶಾಸ್ತ್ರಿಯು (ಸು. 1840) 'ಬಸವ ಪವಾಡ ಲೀಲಾಮೃತ' ವೆಂಬ ಭಾಮಿನಿಷಟ್ಪದಿ ಕೃತಿಯನ್ನು ಬರೆದಿದ್ದಾನೆ. ನವಿಲುಗುಂದದ ನಾಗಲಿಂಗಪ್ಪ (1820-1878) 'ಗುರುನಾಗಲಿಂಗ', 'ನಾಗಲಿಂಗ'ಯೆಂಬ ಅಂಕಿತದಲ್ಲಿ ಪದಗಳನ್ನು ಬರೆದಿರುತ್ತಾನೆ. ಅನ್ನದಾನಪ್ಪಯ್ಯ ಬಸಲಿಂಗಾರ್ಯ ಅರಳೆಲೆಮಠ (ಅನ್ನದಾನಿ ಬಸವಲಿಂಗಾರ್ಯ) (1830) ಮುಂಡರಗಿಯಲ್ಲಿ ನೆಲೆಸಿ 'ಸಟೀಕಾ ರಾಜಶೇಖರ ತೃತೀಯಾಶ್ವಾಸವು'ಯೆಂಬ ಗ್ರಂಥ ರಚಿಸಿರುತ್ತಾನೆ. ಮಲ್ಲಿಗವಾಡದ ಅನುಭಾವಿಕವಿ ನರಸಪ್ಪ ಕುಲಕರ್ಣಿ ("ಭವತಾರಕ") (1832) ತತ್ವ ಪದಗಳನ್ನು ಬರೆದಿದ್ದಾನೆ. ಕೋಳಿವಾಡದ ಹುಲಗಪ್ಪನು (1840) 'ಕೋಳಿವಾಡದ ಕಲ್ಲ', 'ಕಲಮೇಶ್ವರ'ಯೆಂಬ ಅಂಕಿತದಲ್ಲಿ ಬೆಡಗಿನ ಪದಗಳನ್ನು ರಚಿಸಿದ್ದಾನೆ. ಕುಂದಗೋಳದ ಬಸವಲಿಂಗ (ಸು.1850) ಅನೇಕ ಕೃತಿಗಳ ರಚನಕಾರ. ಸಕ್ಕರಿಬಾಳಾಚಾರ್ಯರ (ಶಾಂತಕವಿ) ಪೂರ್ವಜನಾದ ಶ್ರೀನಿವಾಸತೀರ್ಥನು ಸಾತೇನಹಳ್ಳಿಯ ಶಾಂತೇಶನನ್ನು ಕುರಿತಂತೆ ಕೆಲವು ಪರಾಕುಗಳನ್ನು ರಚಿಸಿದ್ದಾನೆ. ರಾಮದುರ್ಗ ತಾಲೂಕಿನ ಕಡಕೋಳದ ಮಡಿವಾಳ ಯೋಗಿಯು ಗದಗದಲ್ಲಿ ನೆಲಸಿ ಅನೇಕ ಅನುಭಾವಿ ಪದಗಳನ್ನು ಬರೆದಿದ್ದಾನೆ.

### ಅರುಣೋದಯ ಕಾಲ

ಬ್ರಿಟಿಷರು ಪೇಶ್ವೆಯನ್ನು ಸೋಲಿಸಿದಾಗ (1818) ಧಾರವಾಡ, ಬಿಜಾಪುರ, ಬೆಳಗಾವಿ ಜಿಲ್ಲೆಗಳು ಮರಾಠರ ಆಳ್ವಿಕೆಯಿಂದ ಮುಕ್ತವಾಗಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಮರಾಠರ ಆಳ್ವಿಕೆ ಕೊನೆಗೊಂಡರೂ ಮುಂಬೈಯಿಂದ ನಡೆದ ಆಡಳಿತದಿಂದಾಗಿ ಪುಣೆಯ ಸಾಂಸ್ಕೃತಿಕ ಪ್ರಭಾವದಿಂದಾಗಿ ಸಾರ್ವಜನಿಕ ಜೀವನದಲ್ಲಿ ಮರಾಠಿಯ ಪ್ರಭಾವ ಇದ್ದೇ ಇತ್ತು. ಸಾರ್ವಜನಿಕ ಸಭೆಗಳು ಮರಾಠಿಯಲ್ಲಿ ನಡೆಯುತ್ತಿದ್ದವು. ಧಾರವಾಡದಿಂದ ಹೊರಟ ಪ್ರಥಮ ಪತ್ರಿಕೆಗಳು ಮರಾಠಿಯವೇ. 1920 ರವರೆಗೂ ಇಂಥದೇ ಸ್ಥಿತಿ ಇತ್ತು. ಕನ್ನಡದ ಜನ ವಿದ್ಯೆ ಕಲಿಯುತ್ತಿದ್ದುದು ಮರಾಠಿಯಲ್ಲಿ; ಉನ್ನತ ವಿದ್ಯಾಭ್ಯಾಸ ಬೇಕೆಂದರೆ ಪುಣೆ, ಕೊಲ್ಲಾಪುರ ಅಥವಾ ಮುಂಬಯಿಗೆ ಹೋಗಬೇಕಿತ್ತು. ಸಹಜವಾಗಿ ವಿದ್ಯಾವಂತರ ಮೇಲೆ ಮರಾಠಿಯ ಪ್ರಭಾವ ಬಲವಾಗಿತ್ತು.

ಬ್ರಿಟಿಷ್ ಅಧಿಕಾರಿಗಳು ಮೊದಮೊದಲು ಧಾರವಾಡ ಪ್ರದೇಶವನ್ನು 'ಸದರ್ನ್ ಮರಾಠಾ ಕಂಟ್ರಿ' ಎಂದು ಕರೆದರೂ ಈ ಪ್ರಾಂತ್ಯಕ್ಕೆ ಬಂದ ಬ್ರಿಟಿಷ್ ಅಧಿಕಾರಿಗಳು ಇಲ್ಲಿನ ಭಿನ್ನತೆಯನ್ನು ಗಮನಿಸಿ ಈ ಪ್ರದೇಶದಲ್ಲಿ ಬೇರೆ ಪಥ್ಯ ಮತ್ತು ಮರಾಠಿಗೆ ಬದಲಾಗಿ ಕನ್ನಡ ಭಾಷೆಯನ್ನು ಕಲಿಸಬೇಕೆಂದು ಹೇಳಿ ಇದು ಮರಾಠಿ ಪ್ರದೇಶವಲ್ಲವೆಂಬ ಭಾವನೆಯನ್ನು ಸರಕಾರದ ಮೇಲೆ ಬಿಂಬಿಸಿದರು. ಇದರೊಂದಿಗೆ 1850 ರ ನಂತರ ತಮ್ಮ ಶಿಕ್ಷಣ ನೀತಿಗಳಲ್ಲಿ ಬ್ರಿಟಿಷರು ಕೆಲವು ಮಾರ್ಪಾಟುಗಳನ್ನು ಮಾಡಿ ಇಂಗ್ಲಿಷ್ ಶಿಕ್ಷಣ ನೀಡಲು ಪ್ರೋತ್ಸಾಹಿಸಿದರು. ಈ ಕಾಲದ ನಂತರ ಭಾರತದ ಸಾಹಿತ್ಯದ ಜೊತೆಗೆ ಕನ್ನಡ ಸಾಹಿತ್ಯದ ದಿಕ್ಕು ಬದಲಾಯಿತು. ಅನೇಕ ಆಂಗ್ಲ ಅಧಿಕಾರಿಗಳು ಸ್ಥಳೀಯ ಭಾಷೆಯಾದ ಕನ್ನಡದಲ್ಲಿ ಶಾಲೆ ತೆರೆಯಲು ಕಾರಣರಾದರು. ರಸೆಲ್, ಎಲಿಯೆಟ್ ಮುಂತಾದವರನ್ನು ಇಲ್ಲಿ ನೆನೆಯಬಹುದು. ವಿದ್ಯಾವಂತ ಕನ್ನಡಜನರನ್ನು ಈ ಭಾಗಕ್ಕೆ ವರ್ಗಮಾಡಿದರು. ಇಂತಹವರಲ್ಲಿ ಚನ್ನಬಸಪ್ಪ, ವೆಂಕಟರಂಗೋಕಟ್ಟಿ, ಶೇಷಗಿರಿರಾವ್ ಚುರಮರಿ ಮುಂತಾದವರು ಪ್ರಮುಖರು. ಇದೇ ಕಾಲಕ್ಕೆ ಕಲ್ಲಚ್ಚು ಮುದ್ರಣ ಯಂತ್ರ ಮತ್ತು ಮೊಳೆಗಳನ್ನು ಜೋಡಿಸಿ ಮುದ್ರಣ ಮಾಡುವ ಯಂತ್ರಗಳ ಅನುಕೂಲ ದೊರೆಯಿತು. ಬಾಸೆಲ್ ಮಿಶನ್‌ನವರು ಧಾರವಾಡದಲ್ಲಿ ಚಟುವಟಿಕೆ ಆರಂಭಿಸಿ ಕನ್ನಡದ ಮುದ್ರಣ, ಕನ್ನಡ ಕಲಿಕೆಯ ಬಗ್ಗೆ ವಿಶೇಷ ಕುತೂಹಲ ತೋರಿದರು.

ಇಂಗ್ಲೀಷ್ ವಿದ್ಯಾಭ್ಯಾಸದ ಅನುಕೂಲ, ಮರಾಠಿಭಾಷಿಕರ ದರ್ಪ, ಸ್ಥಳೀಯ ಭಾಷೆಯ ಬಗ್ಗೆ ತೋರುತ್ತಿದ್ದ ಅನಾದರ ಇವುಗಳಿಂದ ಬೇಸತ್ತ ಜನರು ಇಂತಹ ದಾಸ್ಯದಿಂದ ಬಿಡುಗಡೆಗೊಳ್ಳಲು ಕಾತರರಾಗಿದ್ದರು. ಇಂತಹ ಸನ್ನಿವೇಶದಲ್ಲಿ ಸ್ಥಳೀಯ ಭಾಷೆ ಕಲಿಯಲು ನೀಡಿದ ಪ್ರೋತ್ಸಾಹದಿಂದಾಗಿ ಕನ್ನಡ ಶಾಲೆಗಳು ಪ್ರಾರಂಭವಾದವು. ಶಾಲೆಗಳು ಪ್ರಾರಂಭವಾದಾಗ ವಿದ್ಯಾರ್ಥಿಗಳಿಗೆ ಬೇಕಾದ ಪಠ್ಯಪುಸ್ತಕಗಳ ಕೊರತೆ ನೀಗಿಸಲು ಪಠ್ಯಪುಸ್ತಕಗಳ ರಚನೆಯಾಯಿತು. ಈ ಅವಧಿಯ ಮೊದಲ ಸುತ್ತಿನ ಬರಹಗಾರರು ಪಠ್ಯ ಪುಸ್ತಕಗಳ ರಚನೆಗೆ ಹೆಚ್ಚಿನ ಗಮನ ನೀಡಿದ್ದರು. ಪಠ್ಯಗಳೊಂದಿಗೆ ಅನುವಾದಗಳು, ವಿಚಾರಮಂಥನದ ಪುಸ್ತಕಗಳೂ ಪ್ರಕಟವಾಗ ತೊಡಗಿದವು. ಈ ಲೇಖಕರಲ್ಲಿ ಕೆಲವರು ಪತ್ರಿಕೆಗಳನ್ನು ಹುಟ್ಟುಹಾಕಿ ನಡೆಸಿದರು. ಈ ಪ್ರದೇಶದಲ್ಲಿ ಹೆಚ್ಚಿನ ಸಾಹಿತ್ಯ ಕೃಷಿ ನಡೆಯಲು ಈ ಸನ್ನಿವೇಶ ಕಾರಣವಾಯಿತು.

ಹುಬ್ಬಳ್ಳಿ - ಧಾರವಾಡವು ಉತ್ತರ ಕರ್ನಾಟಕದಲ್ಲಿ ಪ್ರಮುಖ ವಾಣಿಜ್ಯ ಕೇಂದ್ರ ಹಾಗೂ ವಿದ್ಯಾಭ್ಯಾಸದ ಕೇಂದ್ರವಾಗಿ ಬೆಳೆದದ್ದರಿಂದ ಸುತ್ತಲಿನ ಪ್ರದೇಶದ ವಿದ್ಯಾವಂತ ಜನರು ಹಾಗೂ ನಾಟಕಕಾರರು, ನಟರು, ಲೇಖಕರು, ಜೀವನಾಧಾರಕ್ಕಾಗಿ ಧಾರವಾಡ ಮತ್ತು ಹುಬ್ಬಳ್ಳಿ ಕಡೆಗೆ ಬಂದು ನೆಲೆಸಿದರು. ಹೀಗಾಗಿ ಇಲ್ಲಿ ಇತರ ಜಿಲ್ಲೆಗಳಿಗಿಂತ ಹೆಚ್ಚಿನ ಸಾಹಿತ್ಯ ಕೃಷಿ ನಡೆದಿದೆ.

ರಾಮದುರ್ಗದ ಶೇಷಗಿರಿರಾವ್ ಚುರಮರಿಯವರು (1827-1884) ಧಾರವಾಡದಲ್ಲಿ ನೆಲೆಸಿ 1870 ರಲ್ಲಿ ಕಾಳಿದಾಸನ ಶಾಕುಂತಲ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. ಇನ್ನೂ ಅನೇಕ ನಾಟಕಗಳನ್ನು ಅನುವಾದಿಸಿ 'ಜೈಮಿನಿ ಭಾರತ'ವನ್ನು ಮರಾಠಿಗೆ ಅನುವಾದಿಸಿದರು. ಬಟಕುರಿಕಿಯ ವೆಂಕಟರಂಗೋಕಟ್ಟಿ (1833-1909)ಯವರು ಧಾರವಾಡದಲ್ಲಿ ನೆಲೆನಿಂತು ಅನೇಕ ಪತ್ರಿಕೆಗಳ ಸಂಪಾದಕರಾಗಿ ಮರಾಠಿ ಹಾಗೂ ಕನ್ನಡದಲ್ಲಿ ಸಾಹಿತ್ಯ ಕೃಷಿ ನಡೆಸಿದರು. 'ನರತನು', 'ಸವಾಯಿ ಮಾಧವರಾಯಾಂ ಚೀ ನಾಟಕ' ಮುಂತಾದ ಮರಾಠಿ ಕೃತಿಗಳನ್ನು, ಕರ್ನಾಟಕದ ವರ್ಣನೆಯ ಇತಿಹಾಸವನ್ನು, ಕರ್ನಾಟಕ ಗ್ಯಾಸೆಟಿಯರ್ (1889), 'ವಿಧವೆಗಳ ಮುಂಡನ ಅನಾಚಾರವೂ', ಮುಂತಾದ ವಿಚಾರ ಗ್ರಂಥಗಳನ್ನು ಬರೆದಿದ್ದಾರೆ. ನಾಟಕವೊಂದನ್ನು ರಚಿಸಿರುತ್ತಾರೆ. ಡೆಪ್ಯುಟಿ ಚನ್ನಬಸಪ್ಪ (1834-1881)ಇವರು ಧಾರವಾಡ ಜಿಲ್ಲೆಯಲ್ಲದೆ, ಮುಂಬೈ ಕರ್ನಾಟಕ ಪ್ರಾಂತ್ಯದಲ್ಲಿ ಕನ್ನಡದ ಪೋಷಕರಾಗಿ ನಿಂತವರು. ಕನ್ನಡದಲ್ಲಿ ಗ್ರಂಥ ರಚನೆಗೆ ಉತ್ತೇಜನ, ಕನ್ನಡ ಶಾಲೆಗಳ, ವಿದ್ಯಾರ್ಥಿನಿಲಯಗಳ ಸ್ಥಾಪನೆಯಂತಹ ಕಾರ್ಯಗಳಲ್ಲದೆ ಗಣಿತದ ಮೇಲೆ ಎರಡು ಪಠ್ಯ ಪುಸ್ತಕಗಳನ್ನೂ, 'ನಗದವರನ್ನು ನಗಿಸುವ ಕಥೆ' ಎಂಬ ಷೇಕ್ಸ್‌ಪಿಯರನ 'ಕಾಮಿಡಿ ಆಫ್ ಎರರ್ಸ್' ಎಂಬ ಕೃತಿಯ ಅನುವಾದವನ್ನು ಮಾಡಿರುವರು. ಧಾರವಾಡದ ಧೋಂಡೋ ನರಸಿಂಹ ಮುಳಬಾಗಲ್ (1848-1878) ಅವರು ಸಂಸ್ಕೃತ ನಾಟಕಗಳ ಭಾಷಾಂತರವಲ್ಲದೆ 'ನುಡಿಗಟ್ಟು' ಎಂಬ ಕನ್ನಡ ವ್ಯಾಕರಣವನ್ನು ಬರೆದರು. 'ಮ್ಯಾಕ್‌ಬೆತ್' ನಾಟಕವನ್ನು ಅನುವಾದಿಸಿದರು. ಧಾರವಾಡದ ರೊದ್ದ ಶ್ರೀನಿವಾಸರಾಯರು (1850-1929) ಶಿಕ್ಷಕರಾಗಿ ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿದ್ದಲ್ಲದೆ ಕರ್ನಾಟಕ ಕಾಲೇಜಿನ ಸ್ಥಾಪನೆಗೆ ದುಡಿದವರು. ಹೊಸಪೇಟೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳದ ಅಧ್ಯಕ್ಷರಾಗಿದ್ದರು. ಕನ್ನಡದಲ್ಲಿ ಕವಿತೆಗಳನ್ನು ಬರೆದಿದ್ದಾರೆ.

ಧಾರವಾಡದ ಮಾನವಿ ವೀರಪ್ಪ (ಸು. 1851) 'ಕಥಾಸಾಗರ'ವೆಂಬ ಕೃತಿ ಬರೆದರು. ಹೂಲಿಯ ಗುರುಬಸಪ್ಪ ಹಳಕಟ್ಟಿಯವರು (1854-1936) ಧಾರವಾಡದಲ್ಲಿ ನೆಲೆಸಿ ಅನೇಕ ಇತಿಹಾಸ ಗ್ರಂಥಗಳನ್ನು ಬರೆದರು. ಇದೇ ಊರಿನ ಭೀಮರಾವ್ ಸ್ವಾಮಿರಾವ್ ಕಮಲಾಪುರ (1854-1916) ಮೂರು ಧಾರ್ಮಿಕ ಗ್ರಂಥಗಳನ್ನಲ್ಲದೆ 'ಘಟಿಶಾಸ್ತ್ರ'ವೆಂಬ ಗ್ರಂಥವನ್ನು ಬರೆದರು. ಸಾತೇನ ಹಳ್ಳಿಯ ಸಕ್ಕರಿ ಬಾಳಾಚಾರ್ಯರು 'ಶಾಂತಕವಿ' (1856-1921) ಯೆಂಬ ಹೆಸರಿನಲ್ಲಿ ಅನೇಕ ನಾಟಕಗಳನ್ನು ಬರೆದರು. ಸುಮಾರು 65 ಕೃತಿಗಳನ್ನು ಇವರು ರಚಿಸಿದಂತೆ ತಿಳಿಯುತ್ತದೆ. ಹರಿಕೀರ್ತನೆಗಳ ಮೂಲಕವೂ ಇವರು ಕನ್ನಡದ ಪ್ರಚಾರ ಮಾಡಿದರು. 'ಶಾಂತೇಶ', 'ಶಾಂತ ವಿಠಲ' ಎಂಬ ಅಂಕಿತದಲ್ಲಿ ಪದ್ಯಗಳನ್ನು ಬರೆದಿದ್ದಾರೆ. ಜಾನಪದ ಸೊಗಡಿನ ಜನಪ್ರಿಯ ಕವಿಯಾಗಿದ್ದರು. ಗಾಂತ್ರಿವಾಡದ ಭೀಮಾಜಿ ಶ್ರೀನಿವಾಸ ಅಡಬಡ್ಡಿ (1860-1894) ಅವರು 'ಧ್ರುವಪದ ವಿಠಲ'ಯೆಂಬ ಅಂಕಿತದಲ್ಲಿ ಹಾಡುಗಳನ್ನು ಬರೆದಿದ್ದರಲ್ಲದೆ 'ಪೆಣ್ಣಡೆಗನ್ನಡಿ', 'ಸ್ತ್ರೀಧರ್ಮಸಾರ' ಎಂಬ ಕೃತಿಗಳನ್ನೂ ನಾಟಕಗಳನ್ನೂ ಬರೆದಿದ್ದಾರೆ. ಗೋವಿಂದ ವೆಂಕಟೇಶ ದೇಶಪಾಂಡೆ (1860-1945) ಸವಣೂರಿನವರಾಗಿದ್ದು 'ಕಾರಡಗಿಮಹಾಲ ದೇಶಪಾಂಡೆಯವರ ಚರಿತ್ರೆ'ಯೆಂಬ ಕೃತಿ ಬರೆದಿದ್ದಾರೆ. ಹೊಂಬಳದ ಗುಂಡಭಟ್ಟ ಚಿಟಗುಪ್ಪಿಯವರು (ಸು.1860) 'ಗಣೇಶೋಪಾಸಕ' ಕಾವ್ಯನಾಮದಿಂದ 'ರಂಭಾ-ಶುಕ ಸಂವಾದವು' ಮುಂತಾದ ಎರಡು ಕೃತಿಗಳನ್ನು ರಚಿಸಿರುತ್ತಾರೆ. ಗಜೇಂದ್ರ ಗಡದ ಗೂಳಪ್ಪ ಕೊಟ್ರಪ್ಪ ಅರಳಿ (ಸು.1860) ಅವರು 'ಕನ್ನಡ ಶೌರ್ಯಸಾಗರ' ಕೃತಿಯ

ಕರ್ತೃ. ಅಪ್ಪಯ್ಯಪ್ಪ ಹಿರೇಮಠ ಶಾಂತಗಿರಿ (ಸು. 1860) 'ಸ್ತ್ರೀಯರ ಹಾಡು', 'ಬೀಗಿತ್ತಿಯರ ಹಾಡು' ಮುಂತಾದ ಕೃತಿಗಳನ್ನು ಬರೆದಿದ್ದಾರೆ.

ನರೇಂದ್ರ ಗ್ರಾಮದ ರಾಮಚಂದ್ರ ಹನುಮಂತ ದೇಶಪಾಂಡೆ (1861-1931)ಯವರು ಕನ್ನಡದ ಸೇನಾನಿಯಾಗಿ, ಕವಿ ಹಾಗೂ ಇತಿಹಾಸಕಾರರಾಗಿದ್ದರು. ಈ ಭಾಗದಿಂದ ಎಂ.ಎ. ಪಾಸಾದವರಲ್ಲಿ ಮೊದಲಿಗರಾಗಿ ಧಾರವಾಡದ ವಿದ್ಯಾವರ್ಧಕ ಸಂಘದ ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಕರ್ನಾಟಕದ ಇತಿಹಾಸ ಹಾಗೂ ಹಲವು ಜೀವನಚರಿತ್ರೆಗಳನ್ನು ರಚಿಸಿದರು. ಹೊಳೆ ಮಣ್ಣೂರಿನ ಅನಂತ ಅಣ್ಣಾಜಿ ಮಂಟಗಣೀಕರ್ (1865) ಅವರು 'ವಿವೇಕಾನಂದ', 'ಗಾಂಧೀಜಿ'ಯವರನ್ನು ಕುರಿತಂತೆ ಕೃತಿ ರಚನೆ ಮಾಡಿರುತ್ತಾರೆ. ಕಿನ್ನಾಳದಲ್ಲಿ ಹುಟ್ಟಿ ಕದರಮಂಡಲಗಿಗೆ ಬಂದು ನೆಲೆನಿಂತ ಶ್ರೀನಿವಾಸದಾಸರು (1865-1885) 'ಕದರ ಮಂಡಲಗೀಶ' ಎಂಬ ಅಂಕಿತದಲ್ಲಿ ಹಾಡುಗಳನ್ನು ಬರೆದಿದ್ದಾರೆ. ಧಾರವಾಡದ ಗುರುರಾವ್ ರಾಘವೇಂದ್ರ ಮಮದಾಪುರ (1865) ಅವರು 'ಲೋಕಬಂಧು' ಪತ್ರಿಕೆಯ ಸಂಪಾದಕರಾಗಿ 'ಶೃಂಗಾರ ಪದಗಳ ಸಂಗ್ರಹ'ಯೆಂಬ ಕೃತಿಯಲ್ಲದೆ ಇನ್ನೂ ಎಂಟು ಕೃತಿಗಳನ್ನು ರಚಿಸಿರುತ್ತಾರೆ. ಜೋಯಿಸರ ಅರಳಹಳ್ಳಿಯಲ್ಲಿ ಜನಿಸಿದ ಹಾನಗಲ್ಲ ಕುಮಾರಸ್ವಾಮಿಗಳು ಶಿವಯೋಗ ಮಂದಿರದ ಸ್ಥಾಪಕರಾಗಿ 'ಬಸವಭಾಷೆ', 'ನೀತಿಸಂಗ್ರಹ' ಮತ್ತು ಭಜನಾವಳಿಗಳನ್ನು ರಚಿಸಿದರು. ಕೃಷ್ಣಾಜಿ ಅನಂತ (ಸು. 1868) ಅವರು ಹಾನಗಲ್‌ನಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ಕೆಲವು ಕವನಗಳನ್ನು ಬರೆದರು. ಹಾವೇರಿ ತಾಲೂಕಿನ ಮಲ್ಲೂರು ಗ್ರಾಮದ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ (1869-1918) 'ಗೌರೀಶ'ಯೆಂಬ ಅಂಕಿತದಲ್ಲಿ ಪಠ್ಯ ಪುಸ್ತಕಗಳನ್ನು ಮತ್ತು ಕವನಗಳನ್ನೂ ಕೆಲವು ವೈದ್ಯ ಗ್ರಂಥಗಳನ್ನೂ ಬರೆದಿದ್ದಾರೆ.

ಗಳಗನಾಥದ ವೆಂಕಟ ತಿರಕೊ ಕುಲಕರಣಿ (1869-1942) 'ಗಳಗನಾಥ'ಯೆಂಬ ಹೆಸರಿನಲ್ಲಿ ಅನೇಕ ಕೃತಿಗಳನ್ನು ಬರೆದಿದ್ದರಲ್ಲದೆ ಸ್ವಂತ ಮುದ್ರಣಾಲಯವನ್ನು ಹೊಂದಿ 'ಸದ್ಬೋಧ ಚಂದ್ರಿಕೆ'ಯೆಂಬ ಪತ್ರಿಕೆಯನ್ನು ಮುದ್ರಿಸಿ ತಮ್ಮ ಕಾದಂಬರಿಗಳನ್ನು ಅದರಲ್ಲಿ ಧಾರವಾಹಿಯಾಗಿ ಮುದ್ರಿಸುತ್ತಿದ್ದರು. ಗುತ್ತಲದಲ್ಲಿ ಗುರುಕುಲವನ್ನು ಸ್ಥಾಪಿಸಿ 'ಸದ್ಗುರು' ನಿಯತಕಾಲಿಕೆಯನ್ನು ಪ್ರಾರಂಭಿಸಿದರು. ಸುಮಾರು 80 ಕೃತಿಗಳನ್ನು ಬರೆದಿದ್ದು ಅವುಗಳಲ್ಲಿ 60 ಪ್ರಕಟವಾಗಿವೆ. ಕನ್ನಡದಲ್ಲಿ ಸದಭಿರುಚಿಯ ಕಾದಂಬರಿಗಳನ್ನು ಬರೆದು ಓದುಗರ ಸಮೂಹವನ್ನು ಸೃಷ್ಟಿಸಿದರು. ರಾಷ್ಟ್ರೀಯ ಜಾಗೃತಿಗೂ ಕಾರಣರಾದರು. ಇವರ ಜೊತೆಗಾರರಾಗಿದ್ದ ಗ.ತ್ರಂ. ಕರ್ಪೂರರು ಟಿಳಕ ಜೀವನ ಚರಿತ್ರೆಯೇ ಅಲ್ಲದೆ ಹಲವಾರು ರಾಷ್ಟ್ರೀಯ ವಿಚಾರ ಪ್ರತಿಪಾದಿಸುವ ಕೃತಿಗಳನ್ನು ರಚಿಸಿದರು. ಬಿ.ಫ. ಕಾಳೆ ಇವರ ಸಮಕಾಲೀನ ಇನ್ನೊಬ್ಬ ಲೇಖಕರಾಗಿದ್ದು ಪತ್ತೇದಾರಿ ಕಾದಂಬರಿಗಳನ್ನು ಬರೆದಿದ್ದಾರೆ. 'ನಾಗೇಶ' ಎಂಬ ಕಾವ್ಯನಾಮದಲ್ಲಿ ಹಲವಾರು ಕಾದಂಬರಿಗಳನ್ನು ರಚಿಸಿದರು. ಗದಿಗಯ್ಯ ಹುಚ್ಚಯ್ಯಾ ಹೊನ್ನಪುರಮಠ (1870-1933) ಅವರು 'ನೀತಿ ಮಂಜರಿ' ಮುಂತಾದ ಕೃತಿಗಳಲ್ಲದೆ ಕಾಯಿದೆ ಮೇಲೆ ಅನೇಕ ಕೃತಿಗಳನ್ನು ರಚಿಸಿರುತ್ತಾರೆ. ಕನ್ನಡದ ಖ್ಯಾತ ಪತ್ರಿಕೋದ್ಯಮಿಗಳಲ್ಲಿ ಅವರು ಅಗ್ರಗಣ್ಯರು. ಮಡಿಕೇರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಆಯ್ಕೆಯಾಗಿದ್ದರು.

ಹುಬ್ಬಳ್ಳಿಯ ಕಬೀರದಾಸರು (ಸಂ. 1870) ಸಿದ್ಧಾರೂಢಾಶ್ರಮದ ಪ್ರವಚನಕಾರರಾಗಿದ್ದು ಸಿದ್ಧಾರೂಢ ಕಥಾಮೃತವನ್ನು ಬರೆದಿದ್ದಾರೆ. ಹುಬ್ಬಳ್ಳಿಯಲ್ಲಿದ್ದ ಜೈನಕವಿ, ಹಿರಣ್ಯ ಗರ್ಭನೆಂಬುವವರು (ಸು. 1870) 'ವಿಶ್ವಕೃತಿ ಪರೀಕ್ಷಣ' ಹಾಗೂ 'ಸರಸ್ವತೀ ಪ್ರಬಂಧ'ವೆಂಬ ಕೃತಿಗಳನ್ನು ರಚಿಸಿರುತ್ತಾರೆ. 'ವಿಶ್ವಕೃತಿ ಪರೀಕ್ಷಣ'ವು ಪ್ರಾಚೀನ ಹಾಗೂ ಅರ್ವಾಚೀನ ಕೃತಿಗಳ ವಿಮರ್ಶಾ ಗ್ರಂಥವಾಗಿದೆ.

ಹಾನಗಲ್ಲಿನ ವಲ್ಲಭ ಮಹಾಲಿಂಗ ತಟ್ಟಿಯೆಂಬುವವರು (1870-1922) 'ಕನ್ನಡಿಗರ ಜನಸ್ವಾರ್ಥಕತೆ' ಮುಂತಾದ ಐದು ಕೃತಿಗಳನ್ನು ರಚಿಸಿರುತ್ತಾರೆ. ಹಾನಗಲ್ಲಿನ ವೆಂಕಟೇಶ ನಾರಾಯಣ ಜಮಖಂಡಿ (1870) ಅಂಕಗಣಿತ ಬಗ್ಗೆ ಪುಸ್ತಕ ಬರೆದಿದ್ದಾರೆ. ಶ್ರೀನಿವಾಸ ವೆಂಕಟೇಶ ಕಟ್ಟಿ (1872-1922) 'ಸಂಗೀತ ಪ್ರಿಯದರ್ಶಿಕಾ'ಯೆಂಬ ಹೆಸರಿನಲ್ಲಿ ಹರ್ಷನ ನಾಟಕವನ್ನು ಅನುವಾದಿಸಿದ್ದಾರೆ. ಇವರ ಅನೇಕ ಕವನಗಳು 'ಪ್ರಭಾತ' ಮಾಸಪತ್ರಿಕೆಯಲ್ಲಿ ಅಚ್ಚಾಗಿವೆ. ರಾಣೆಬೆನ್ನೂರಿನವರಾಗಿದ್ದ ಮುದುವೀಡು ಕೃಷ್ಣರಾಯರು (1874-1947) ಕೆಲಕಾಲ 'ಧಾರವಾಡ ವೃತ್ತ'ವೆಂಬ ಮರಾಠಿ ಪತ್ರಿಕೆಯ ಸಂಪಾದಕರಾಗಿದ್ದು ಕನ್ನಡ ಪತ್ರಿಕೆಗಳಾದ 'ಕರ್ನಾಟಕ ವೃತ್ತ', 'ಧನಂಜಯ' ಎಂಬ ಪತ್ರಿಕೆಗಳಿಗೂ ಸಂಪಾದಕರಾಗಿದ್ದರು. ಇವರು ನಾಟಕಕಾರರೂ ಉತ್ತಮ ಭಾಷಣಕಾರರೂ ಆಗಿದ್ದು ಹರಿಕತೆಗಳನ್ನೂ ಮಾಡುತ್ತಿದ್ದರು. ಬೆಳಗಾವಿಯ 24 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನರಗುಂದದ ಜಿವಾಜಿ ವಿಷ್ಣು ಗೋಠೆ (1874-) ಜಾನ್ಸನ್‌ನ 'ರಾಸೆಲಾಸ್' ಎಂಬ ಕಾದಂಬರಿಯನ್ನು ಕನ್ನಡಕ್ಕೆ ತಂದಿರುವುದಲ್ಲದೆ ಸುಮಾರು 10 ಕೃತಿಗಳನ್ನು ರಚಿಸಿದ್ದಾರೆ. ಹಾವೇರಿ ತಾಲೂಕಿನ ಗುತ್ತಲಗ್ರಾಮದ ಯಲ್ಲೋ ಗುಡ್ಡೊ ಕುಲಕರ್ಣಿಯವರು (1878-1955) ಅಗಡಿಯ ಶೇಷಾಚಲಸ್ವಾಮಿಗಳ ಸನ್ನಿಧಿಯಲ್ಲಿದ್ದು 'ವಾಸುದೇವಾಗ್ರಜ'ಯೆಂಬ ಹೆಸರಿನಿಂದ ಮರಾಠಿ ಪತ್ರಿಕೆ 'ಕೇಸರಿ'ಯ ಲೇಖನಗಳ ಕನ್ನಡಾನುವಾದವಲ್ಲದೆ ಅನೇಕ ಮಹಾತ್ಮರ ಮೇಲೆ ಕೃತಿಗಳನ್ನು ರಚಿಸಿರುತ್ತಾರೆ. ಸಮರ್ಥ ರಾಮದಾಸರ 'ದಾಸಬೋಧ'ವನ್ನು ಕನ್ನಡಿಸಿದ್ದಾರೆ.

ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು (1880-1964) ಧಾರವಾಡದಲ್ಲಿ ಜನಿಸಿ ಬಿಜಾಪುರದಲ್ಲಿ ನೆಲೆಸಿ 'ಶಿವಾನುಭವ' ಮತ್ತು 'ನಮ್ಮ ಕರ್ನಾಟಕ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾಗಿ ಅನೇಕ ಶರಣರ ವಚನಗಳನ್ನು ಸಂಪಾದಿಸಿದವರಲ್ಲಿ ಅಗ್ರಗಣ್ಯರು, 'ವಚನಪಿತಾಮಹ'ಯೆಂಬ ಬಿರುದನ್ನು ಪಡೆದವರು. 1926 ರಲ್ಲಿ ಬಳ್ಳಾರಿಯಲ್ಲಿ ನಡೆದ 12 ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಹೊಳೆಆಲೂರಿನವರಾದ ಆಲೂರು ವೆಂಕಟರಾಯರದು (1880-1964) ಕನ್ನಡ ಚಳುವಳಿ, ಏಕೀಕರಣ ಮುಂತಾದ ವಿಷಯಗಳಲ್ಲಿ ಎದ್ದು ಕಾಣುವ ಹೆಸರು, 'ಕರ್ನಾಟಕ ಗತ ವೈಭವ', 'ಕರ್ನಾಟಕದ ವೀರರತ್ನಗಳು' ಮುಂತಾದ ಗ್ರಂಥಗಳನ್ನು ಬರೆದು ಜನರಲ್ಲಿ ಜಾಗೃತಿ ಮೂಡಿಸಿದವರು. ಜನತೆ ಇವರನ್ನು 'ಕರ್ನಾಟಕ ಕುಲ ಪುರೋಹಿತ'ರೆಂದು ಕರೆದು ಗೌರವಿಸಿದೆ.

ಅಗಡಿಯ ಶರಣಪ್ಪ ಎಂಬುವವರು (ಸು. 1880) 'ವಿರಾಟ ಪರ್ವ ಮೂಡಪಾಯದ ಭಾಗವತರಾಟ'ಯೆಂಬ ಕೃತಿ ರಚಿಸಿದ್ದಾರೆ. ಧಾರವಾಡದ ರೆವರೆಂಡ್ ಚೆನ್ನಪ್ಪ ಉತ್ತಂಗಿಯವರು (1881-1962) ಧಾರವಾಡ, ಹುಬ್ಬಳ್ಳಿ, ಮುಂಡರಗಿ ಮತ್ತು ಹಾವೇರಿಗಳಲ್ಲಿ ಸೇವೆ ಸಲ್ಲಿಸಿ ಹಿಂದೂಧರ್ಮ, ಅಸ್ಪೃಶ್ಯತೆ ಮತ್ತು ವಚನಗಳ ಮೇಲೆ ಪುಸ್ತಕ ಬರೆದಿದ್ದು ಇವರ ಪ್ರಮುಖ ಸಂಪಾದಿತ ಕೃತಿ 'ಸರ್ವಜ್ಞ ವಚನಗಳು'. ಇಂಗ್ಲೀಷಿನಲ್ಲಿಯೂ ಇವರು ಯಲ್ಲಮ್ಮನ ಮೇಲೆ, ಬಸವಣ್ಣನವರ ಮೇಲೆ ಕೃತಿಗಳನ್ನು ರಚಿಸಿದ್ದಾರೆ. ಕಲ್ಬುರ್ಗಿಯಲ್ಲಿ ನಡೆದ (1939) 32 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಬಂಕಾಪುರದ ಮಹದೇವ ಪ್ರಭಾಕರ ಶಾಸ್ತ್ರಿ ಪೂಜಾರ (1884-1962) ಅಗ್ರಗಣ್ಯ ವೈಯಾಕರಣಿಯಾಗಿದ್ದು, ಧಾರವಾಡದಲ್ಲಿ ನೆಲಸಿ ಬೇರೆ ಬೇರೆ ವಿಷಯಗಳ ಮೇಲೆ 13 ಕೃತಿಯನ್ನು ರಚಿಸಿದ್ದಾರೆ. ಕಲಘಟಗಿಯ ಗೋಪಾಲಾಚಾರ್ಯ ಅಡಬಡ್ಡಿ (1884-1936)ಯವರು 'ಅಭಿಜ್ಞಕವಿ'ಯೆಂಬ ಹೆಸರಿನಲ್ಲಿ ನಾಟಕಗಳನ್ನು ಬರೆದಿದ್ದಾರೆ. ಇವರ ಪ್ರಮುಖ ನಾಟಕ 'ವಿವೇಕ ವಿಜಯ', ಗದಗಿನವರಾದ ನಾರಾಯಣರಾವ್ ಕೃಷ್ಣರಾವ್ ಹುಯಿಲಗೋಳರು (1884-1971) ಕವಿಗಳಾಗಿ ನಾಟಕಕಾರರಾಗಿ ರಂಗಭೂಮಿಯ ಸುಧಾರಣೆಗಾಗಿ ದುಡಿದಿದ್ದಾರೆ. 'ಉದಯವಾಗಲಿ ಚೆಲುವ ಕನ್ನಡನಾಡು' ಈ ಪ್ರಖ್ಯಾತ ಗೀತೆ ಇವರದೇ. ಅಣ್ಣಿಗೇರಿಯ ವತನದಾರರಾಗಿದ್ದ ರಾಘವೇಂದ್ರ ಕೃಷ್ಣ ಇನಾಮತಿ (1885-1940) ಯವರು ಇತಿಹಾಸ ಗ್ರಂಥಗಳನ್ನು ಹಾಗೂ ನಾಟಕಗಳನ್ನು ಬರೆದಿದ್ದಾರೆ. ಗರುಡ ಸದಾಶಿವರಾಯರು (1884-1955) ಗದಗನಲ್ಲಿ ವಾಸಿಸುತ್ತಿದ್ದು ನಾಟಕ ಕ್ಷೇತ್ರದಲ್ಲಿ ದುಡಿದು ಸುಮಾರು 58 ಕೃತಿಗಳನ್ನು ಬರೆದಿದ್ದಾರೆ. ಗುಂಡೋ ಕೃಷ್ಣ ಚುರಮರಿ (ಸು. 1885) ಹುಬ್ಬಳ್ಳಿಯಲ್ಲಿ ಕೆಲಸದಲ್ಲಿದ್ದು ಒಥೆಲೋ ನಾಟಕವನ್ನು 'ರಾಘವೇಂದ್ರರಾವ್ ನಾಟಕ'ಯೆಂಬ ಹೆಸರಿನಲ್ಲಿ ಕನ್ನಡಿಸಿದ್ದಾರೆ. ಗದಗಿನ ಅಚ್ಯುತರಾವ್ ಕೃಷ್ಣರಾವ್ ಹುಯಿಲಗೋಳರು (1885) ನಾಟಕ, ಜೀವನ ಚರಿತ್ರೆ ಹಾಗೂ ಸ್ವಾತಂತ್ರ್ಯ ಸಂಗ್ರಾಮ ಬರವಣಿಗೆ ನಡೆಸಿ ಒಟ್ಟು 14 ಕೃತಿಗಳನ್ನು ಬರೆದಿದ್ದಾರೆ. ರೋಣ ತಾಲೂಕು ಕೋಡಿಕೊಪ್ಪದ ಮಠದ ಬಸವರಾಜಶಾಸ್ತ್ರಿ (1886-1953) ಸಂಸ್ಕೃತ ಹಾಗೂ ಕನ್ನಡ ಪಂಡಿತರಾಗಿದ್ದು 12 ಕೃತಿಗಳನ್ನು ಬರೆದಿದ್ದಾರೆ. ಇವರ 'ಕನ್ನಡ ಗದ್ಯದ ಐದು ಮಾಗಟ್ಟೆಗಳು' ಕೃತಿಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಶಸ್ತಿ ಬಂದಿದೆ. ನಾರಾಯಣ ಶ್ರೀನಿವಾಸ ರಾಜ ಪುರೋಹಿತರು ಅಗಡಿಯವರಾಗಿದ್ದು ಕರ್ನಾಟಕ ಇತಿಹಾಸದ ಬಗ್ಗೆ ಅನೇಕ ಸಂಶೋಧನಾತ್ಮಕ ಗ್ರಂಥಗಳನ್ನು ಬರೆದಿದ್ದಾರೆ. ಧಾರವಾಡದಲ್ಲಿ ನೆಲಸಿದ್ದ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳರು (1893-1951) ಕನ್ನಡ, ಮರಾಠಿ, ಇಂಗ್ಲೀಷಿನಲ್ಲಿ ಕೃತಿ ರಚನೆ ಮಾಡಿದ್ದಾರೆ. ವಚನ ಸಾಹಿತ್ಯಕ್ಕೆ ಇವರ ಕೊಡುಗೆ ಅತ್ಯಂತ ಗಣ್ಯ. ಕುಂದಗೋಳದ ದತ್ತಾತ್ರಯ ಕೃಷ್ಣ ಭಾರದ್ವಾಜರು (1891-1953) ವೈದ್ಯರಾಗಿದ್ದು ಅನೇಕ ಪತ್ರಿಕೆಗಳ ಸಂಪಾದಕ, ಉಪ ಸಂಪಾದಕರಾಗಿದ್ದರು. ಅನೇಕ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ 'ವೈದ್ಯಗುರು'ಯೆಂಬ ಪ್ರಶಸ್ತಿಯನ್ನು ಜನರು ನೀಡಿದ್ದರು. ಭೀಮಾಜಿ ಜೀವಾಜಿ ಹುಲಕವಿ (1895-1959) 'ಶಾರದೆಯ ಮುತ್ತಿನ ಸರ' ಗ್ರಂಥಮಾಲೆಯ ಸಂಚಾಲಕರಾಗಿದ್ದರು. ರಾಮರಾವ್ ನರಗುಂದಕರರು (ಸು. 1885) ಕಾಯಿದೆ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿರುವುದಲ್ಲದೆ ಚಿಕ್ಕ ಪ್ರಹಸನವೊಂದನ್ನು ರಚಿಸಿರುತ್ತಾರೆ. ಗದಗಿನವರಾದ ಗುರುರಾಜ ಭೀಮಾಚಾರ್ಯ ಜೋಶಿ (1897) ಒಂದೆರಡು ಕೃತಿಗಳನ್ನು ಬರೆದಿದ್ದಾರೆ. ಕೃಷ್ಣಾಜಿ ಬಾಪೂರಾವ್

ಕುರಂದವಾಡ (ಸು.1900) ಬಂಕಾಪುರದಲ್ಲಿ ಶಿಕ್ಷಕರಾಗಿದ್ದು 'ದ್ರೌಪದೀ ಸ್ವಯಂವರ'ಯೆಂಬ ಕೃತಿಯನ್ನು ರಚಿಸಿರುತ್ತಾರೆ. ಧಾರವಾಡದಲ್ಲಿ ಶಿಕ್ಷಕರಾಗಿದ್ದ ಕೃಷ್ಣರಾವ್ ಬಾಳಾಜಿ ಬೆಂಡಿಗೇರಿಯವರು ಜೈಮಿನಿ ಭಾರತದ 11 ರಿಂದ 13 ನೇ ಸಂಧಿಗಳಿಗೆ ಇಂಗ್ಲೀಷಿನಲ್ಲಿ ಅರ್ಥ ಬರೆದಿದ್ದಾರೆ.

**ವಿದೇಶಿ ಲೇಖಕರು :** ಧಾರವಾಡ ಜಿಲ್ಲಾ ಭಾಗವು ಬ್ರಿಟೀಷರ ಅಧೀನಕ್ಕೆ ಬಂದ ಮೇಲೆ ಅನೇಕ ವಿದೇಶಿ ಪಾದ್ರಿಗಳು ಮತ್ತು ಅಧಿಕಾರಿಗಳು ಆ ಪ್ರದೇಶದಲ್ಲಿ ಕನ್ನಡ ಕಂಪನ್ನು ಎತ್ತಿ ತೋರಿಸಲು ಪ್ರಯತ್ನಿಸಿರುತ್ತಾರೆ. ಕಾವ್ಯ ರಚನೆಯಂತಹ ಕ್ಷೇತ್ರ ನಮ್ಮವರಿಗೆ ಹಳೆಯದಾದರೂ ಇಂಗ್ಲೀಷ್ ಅಧಿಕಾರಿಗಳ ಸಹವಾಸ, ಇಂಗ್ಲೀಷ್ ವಿದ್ಯಾಭ್ಯಾಸ ಮತ್ತು ಮುಂಬೈ, ಪುಣೆಯಂತಹ ಊರುಗಳ ಸಂಪರ್ಕದಿಂದ ಕಾವ್ಯರಚನೆಯಲ್ಲಿ ಮಾರ್ಪಾಟಾದುದಲ್ಲದೆ, ಅದುವರೆಗೆ ಸವಾರಿ ಮಾಡುತ್ತಿದ್ದ ಮರಾಠಿ ಪ್ರಭಾವದಿಂದ ಬಿಡುಗಡೆಯಾಗಲು ಈ ವಿದೇಶಿ ಅಧಿಕಾರಿಗಳು ಹಾಗೂ ಬರಹಗಾರರು ಧಾರವಾಡದಂತಹ ಪ್ರದೇಶದಲ್ಲಿ ಬಹುಮಟ್ಟಿಗೆ ಪ್ರಭಾವ ಬೀರಿದ್ದಾರೆ. ಧಾರವಾಡದ ಟ್ರೈನಿಂಗ್ ಶಾಲೆಯ ಸ್ಥಾಪನೆಯಂತಹ ಕಾರ್ಯದಿಂದ ಹಿಡಿದು ದಕ್ಷಿಣ ಮರಾಠಾ ಪ್ರದೇಶ ಮರಾಠಿ ಭಾಷೆಯ ಪ್ರದೇಶವಲ್ಲ, ಕನ್ನಡದ ಪ್ರದೇಶವೆಂದು ಮೇಲಿನ ಅಧಿಕಾರಿಗಳಿಗೆ ವರದಿ ಮಾಡಿ ಆ ಮೂಲಕ ಈ ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ತೆರೆಯಲು, ಕನ್ನಡ ಬಲ್ಲ ಅಧಿಕಾರಿಗಳನ್ನು ಸರ್ಕಾರಿ ಕಾರ್ಯದಲ್ಲಿ ಅದರಲ್ಲೂ ಶಿಕ್ಷಣ ಇಲಾಖೆಯಲ್ಲಿ ನಿಯೋಜಿಸಲು ಇವರ ಬೆಂಬಲವಿದ್ದದ್ದು ಬಹುಮುಖ್ಯ ಅಂಶ. ಹೀಗಾಗಿ ಡೆಪ್ಯೂಟಿ ಚನ್ನಬಸಪ್ಪ, ವೆಂಕಟರಂಗೋಕಟ್ಟಿ, ರೊದ್ದ ಶ್ರೀನಿವಾಸರಾವ್, ಆರ್.ಎಸ್. ಕಿತ್ತೂರ ಮುಂತಾದ ಕನ್ನಡದ ಕಟ್ಟಾಳುಗಳು ಈ ಭಾಗದಲ್ಲಿ ಅಧಿಕಾರಿಗಳಾಗಿ ಕನ್ನಡದ ಏಳ್ಗೆಗೆ ದುಡಿಯಲು ಕಾರಣವಾಯಿತು. ಇಂತಹ ಅಧಿಕಾರಿಗಳಲ್ಲಿ ವಿಲಿಯಮ್ ಆಲೇನ್ ರಸೆಲ್ ಎಂಬುವವರು ಯಾವ ಕೃತಿಗಳನ್ನು ಬರೆಯದಿದ್ದರೂ ಕೃತಿ ಬರೆಯುವವರಿಗೆ ಪ್ರೋತ್ಸಾಹದಾಯಕರಾಗಿ ನಿಂತರು (1892)ವಾಲ್ಟರ್ ಎಲಿಯಟ್ (1822-1883)ತಮ್ಮ ಜೀವನ ಸ್ಮೃತಿಯನ್ನು ಇಂಗ್ಲೀಷ್‌ನಲ್ಲಿ ಬರೆದರಲ್ಲದೆ ಶಾಸನಗಳ ಸಂಗ್ರಹಕ್ಕೆ ಪುರಾತತ್ವಶೋಧನೆಗೂ ದುಡಿದರು. ಧಾರವಾಡದಲ್ಲಿ ಕನ್ನಡ ಶಾಲೆ ತೆರೆಯಲು ಕಾರಣರಾದರು. ರೆವರೆಂಡ್ ಫರ್ಡಿನೆಂಡ್ ಎಫ್ ಕಿಟ್ಟೆಲ್ಲರು (1832-1903) ಧಾರವಾಡದಲ್ಲಿ ಕೆಲಕಾಲ (1882-86) ನೆಲಸಿದ್ದರು. ಇಲ್ಲಿಯೇ ಅವರು ಕನ್ನಡವನ್ನು ಗಾಢವಾಗಿ ಅಭ್ಯಸಿಸಿದರು. ರೆವರೆಂಡ್ ಫೆಡ್ರಿಕ್ ಜಿಗ್ಲರ್ ಹುಬ್ಬಳ್ಳಿ-ಧಾರವಾಡಗಳಲ್ಲಿ 35 ವರುಷವಿದ್ದರು. ಇವರು ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ 1893-94 ರಲ್ಲಿ ಅಧ್ಯಕ್ಷರೂ ಆಗಿದ್ದರು. ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಅನೇಕ ಕೃತಿಗಳನ್ನು ರಚಿಸಿರುವರಲ್ಲದೆ ಶಾಲಾನಿಘಂಟನ್ನು ಮೊದಲು ರಚಿಸಿದವರು (1876). ಜಾನ್ ಎಫ್. ಫ್ಲೀಟ್ (1847-1917) ರು ವಿದ್ಯಾವರ್ಧಕ ಸಂಘದ ಗೌರವ ಸದಸ್ಯತ್ವ ಪಡೆದಿದ್ದರಲ್ಲದೆ ಮಹಾರಾಷ್ಟ್ರದ ದಕ್ಷಿಣ ವಿಭಾಗದ ಶಿಕ್ಷಣಾಧಿಕಾರಿಗಳಾಗಿದ್ದರು. ಇಂಗ್ಲೀಷಿನಲ್ಲಿ ಕರ್ನಾಟಕದ ಅರಸರ ಮೇಲೆ ಕೃತಿಯನ್ನು ಬರೆದಿದ್ದರಲ್ಲದೆ ಆ ಭಾಗದ ಅನೇಕ ಶಾಸನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಉತ್ತರ ಕರ್ನಾಟಕದ ಅನೇಕ ಐತಿಹಾಸಿಕ ಲಾವಣಿಗಳನ್ನು ಸಂಗ್ರಹಿಸಿರುತ್ತಾರೆ. ಜೆ. ಮ್ಯಾಕ್ (ಸು. 1862) ಇವರು ಮತ್ತು ಕಿಟ್ಟೆಲ್ಲರೂ ಸೇರಿ 'ವಿಚಿತ್ರ ವರ್ತಮಾನ ಸಂಗ್ರಹ'ವೆಂಬ ಪಾಕ್ಷಿಕ'ವನ್ನು ನಡೆಸಿದರು. ಇದು ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಲ್ಲಿತ್ತು. 'ಕಾವ್ಯಪುಂಜ'ವೆಂಬ ಕವನಸಂಕಲನ ರಚಿಸಿರುತ್ತಾರೆ. ರೊದ್ದ ಶ್ರೀನಿವಾಸರಾವ್ ಮುಂತಾದವರು ಇವರ ಶಿಷ್ಯರಾಗಿದ್ದರು.

ಹೀಗೆ ಈ ವಿದೇಶಿಯರು ದೇಶೀಯರಿಗೆ ಅನೇಕ ರೀತಿಯಲ್ಲಿ ಬೆನ್ನಲ್ಲಿ ನಿಂತು ಪ್ರೋತ್ಸಾಹಿಸಿದುದರಿಂದ ಧಾರವಾಡ ಪ್ರಾಂತ್ಯದಲ್ಲಿ ಕನ್ನಡದ ಕುಡಿ ಮತ್ತೆ ಚಿಗುರಲು ಕಾರಣವಾಯಿತು.

## ನವೋದಯ ಕಾಲ

ಹತ್ತೊಂಬತ್ತನೆಯ ಶತಮಾನದ ಅಂತ್ಯ ಭಾಗದಲ್ಲಿದ್ದ ಕವಿಗಳು ಇನ್ನೂ ಪಾರಂಪರಿಕ ಕಾವ್ಯ ರಚನೆಯಿಂದ ಬಿಡುಗಡೆಗೊಳ್ಳುವ ಪ್ರಯತ್ನದ ಸೂಚನೆಗಳು ಕಾಣಬರುತ್ತವೆ. ಶಾಂತ ಕವಿಗಳಂತಹವರ ಒಂದೆರಡು ರಚನೆಗಳಲ್ಲಿ ಈ ಛಾಯೆಯನ್ನು ಕಾಣುತ್ತೇವೆ. ಹೆಚ್ಚಳಗೊಂಡ ಪ್ರಾಂತ್ಯಾಭಿಮಾನ, ಪತ್ರಿಕೆಗಳು, ಇಂಗ್ಲೀಷ್ ಭಾಷೆಯ ಜ್ಞಾನ, ಹೆಚ್ಚಿದ ಮುದ್ರಣ ವ್ಯವಸ್ಥೆ ಮತ್ತು ಪ್ರಯಾಣ ಸೌಕರ್ಯ ಇವುಗಳಿಂದ ಪ್ರೇರಣೆಗೊಂಡು ಹೊಸ ಬಗೆಯ ಕಾವ್ಯ ಪ್ರಯೋಗಗಳು ನಡೆದವು. ಛಂದಸ್ಸೂ ಸಹ ಹಳೆಯ ಜಾಡನ್ನು ಬಿಟ್ಟು ಹೊಸ ಜಾಡನ್ನು ಹಿಡಿಯಿತು. ಸಣ್ಣ ಕಥೆ, ಕಾದಂಬರಿ, ನಾಟಕ ಪ್ರವಾಸಕಥನ, ಲಲಿತ ಪ್ರಬಂಧ, ಪ್ರಾಚೀನ ಕೃತಿಗಳ ಸಂಪಾದನೆ, ನೀಳ್ಗವನಗಳು ಮುಂತಾದುವಲ್ಲದೆ ಅನುವಾದಗಳೂ ಈ ಕಾಲದಲ್ಲಿ ಬಂದವು. ಲೇಖನದ ವಸ್ತು ಸಾಮಾನ್ಯ ಜನರ ಜೀವನ ಹಾಗೂ ನೈಸರ್ಗಿಕ ಪರಿಸರದೆಡೆಗೆ ತಿರುಗಿತು. ಕರ್ನಾಟಕ ಸಾಹಿತ್ಯ ಪರಿಷತ್ತು, ವಿದ್ಯಾವರ್ಧಕ ಸಂಘ, ಇತಿಹಾಸ ಸಂಶೋಧನ ಮಂಡಳ ಮುಂತಾದ

ಸಾಹಿತ್ಯಕ ಸಂಸ್ಥೆಗಳ ಉದಯ, 'ಪ್ರಬುದ್ಧ ಕರ್ನಾಟಕ', 'ಸಾಹಿತ್ಯ ಪರಿಷತ್ಪತ್ರಿಕೆ', 'ವಾಗ್ಭೂಷಣ', 'ಜಯಕರ್ನಾಟಕ', 'ಜೀವನ', 'ಜಯಂತಿ'ಯಂತಹ ಸಾಹಿತ್ಯಕ ಪತ್ರಿಕೆಗಳು ಈ ಕಾಲದ ಕವಿಗಳಿಗೆ ಕಾವ್ಯ ರಚಿಸಲು ಪ್ರೋತ್ಸಾಹ ನೀಡಿದವು. ಹೀಗಾಗಿ ಅನೇಕ ಕವಿಗಳು ಉದಿಸಲು ಕಾರಣವಾಯಿತು. ಧಾರವಾಡದಲ್ಲಿ ಇವರ ಸಂಖ್ಯೆ ಅಧಿಕವಾಗಿತ್ತು. ನೌಕರಿ ಸಂಬಂಧವಾಗಿ ಧಾರವಾಡದಂತಹ ಊರಿನ ಸಂಪರ್ಕವೂ ಈ ಬಗೆಯ ಚಟುವಟಿಕೆ ಹೆಚ್ಚಲು ಕಾರಣವಾಯಿತು. ಇಂತಹ ವಾತಾವರಣವೇ ಅಲ್ಲದೆ ಧಾರವಾಡದಲ್ಲಿ ಕವಿತೆ ಬರೆಯುವವರಿಗೆ ಹಾಗೂ ವಾಚಿಸುವವರಿಗೆ ಪ್ರೇರಕವೆನ್ನುವಂತೆ 'ಗೆಳೆಯರ ಗುಂಪು' ತಲೆಯೆತ್ತಿತ್ತು. ಇದಕ್ಕೂ ಮೊದಲು ರೈಟರ್ ಓಣಿಯಲ್ಲಿ ಸಣ್ಣ ಪ್ರಮಾಣದಲ್ಲಿ ಸಾಹಿತ್ಯಕ ಚಟುವಟಿಕೆ ನಡೆದಿತ್ತು. ಆದರೂ ಗೆಳೆಯರಗುಂಪು ಮಾಡಿದ ಕಾರ್ಯ ಬಹುಪ್ರಮುಖವಾದದ್ದು.

**ಗೆಳೆಯರ ಗುಂಪು :** ಅನೇಕ ವ್ಯಕ್ತಿಗಳು ಗೆಳೆಯರ ಗುಂಪಿನಿಂದ ಪ್ರೇರಿತರಾಗಿ ಸಾಹಿತ್ಯ ಚಟುವಟಿಕೆಯನ್ನು ನಡೆಸಿದವರು. ಬೇಂದ್ರೆಯವರು ವಿದ್ಯಾಭ್ಯಾಸ ಮುಗಿಸಿಕೊಂಡು ಧಾರವಾಡಕ್ಕೆ 1918 ರಲ್ಲಿ ಬಂದಾಗ ಈ ಗುಂಪು ಆರಂಭವಾಗಿರಬೇಕು. ಈ ಗುಂಪಿನಲ್ಲಿ ಬೇಂದ್ರೆಯವರು, ಅವರ ಮಿತ್ರರು, ವಿದ್ಯಾರ್ಥಿಗಳು, ಆಸಕ್ತರು ಸೇರಿದ್ದರು. ಕವಿತೆಗಳನ್ನು ಬರೆದವರು ಅದನ್ನು ವಾರಕ್ಕೊಮ್ಮೆ ವಾಚಿಸುವ, ಅದರಲ್ಲಿನ ಗುಣಾವಗುಣಗಳನ್ನು ವಿಮರ್ಶೆಗೊಳಪಡಿಸುವ ಅವಕಾಶ ಹೊಂದಿದ್ದರು. ಈ ಗುಂಪಿನ ಕೇಂದ್ರ ವ್ಯಕ್ತಿ ಬೇಂದ್ರೆಯವರಾದರೂ, ಕೃಷ್ಣ ಶರ್ಮ ಬೆಟಗೇರಿ, ವಿನಾಯಕ ಕೃಷ್ಣ ಗೋಕಾಕ, ರಂಗನಾಥ ಶ್ರೀನಿವಾಸ ಮುಗಳಿ, ಶೇ.ಗೋ. ಕುಲಕರ್ಣಿ, ಪ್ರಹ್ಲಾದ ನರೇಗಲ್ಲ, ನಾರಾಯಣ ಸಂಗಮ ಮುಂತಾದವರೂ ಇದ್ದು ಕನ್ನಡದ ಕಾವ್ಯದ ವಿವಿಧ ಮುಖಗಳ ಬೆಳವಣಿಗೆಗೆ ಕಾರಣಕರ್ತರಾದರು. ವಿಜಾಪುರ ಜಿಲ್ಲೆಯ ಹಲಸಂಗಿಯ ಮಧುರಚೆನ್ನ, ರೇವಪ್ಪಾಕಾಪಸೆ, ಧೂಲಾ ಮುಂತಾದವರೂ ಇದರಿಂದ ಪ್ರಭಾವಿತರಾದರು. ಈ ಗುಂಪಿನ ಮತ್ತೊಂದು ಕಾರ್ಯವೆಂದರೆ ಆಲೂರು ವೆಂಕಟರಾಯರಿಂದ 'ಜಯ ಕರ್ನಾಟಕ'ವನ್ನು ವಹಿಸಿಕೊಂಡದ್ದು. ಇದು ಈ ಗುಂಪಿನ ಅಧಿಕೃತ ವಾಣಿಯಾಯಿತು ಹಾಗೂ ಆ ಕಾಲದ ನವೋದಯ ಸಾಹಿತ್ಯದ ಆಶೋತ್ತರಗಳನ್ನು ಪೂರೈಸಬಲ್ಲ ಒಂದು ಮಾಧ್ಯಮವಾಯಿತು. ಈ ಕಾರಣಗಳಿಂದ 'ಜಯ ಕರ್ನಾಟಕ'ದ ಪ್ರಸಾರವೂ ವೃದ್ಧಿಯಾಯಿತು. ಇದರದೇ ಒಂದು ಮುದ್ರಣ ಸ್ಥಾಪಿತವಾಯಿತು. 1933 ರ ನಂತರ ಈ ಗೆಳೆಯರ ಗುಂಪು ಚದುರಿದ ಮೇಲೆ ಇಲ್ಲಿದ್ದ ಅನೇಕ ಕವಿಗಳು ಬೇರೆಡೆ ನೆಲೆಸಿದಾಗಲೂ ಅದೇ ಹುರುಪಿನಲ್ಲಿ ಕೆಲಸ ಮಾಡಿರುವುದು ತಿಳಿಯುತ್ತದೆ.

ನವೋದಯದ ಆರಂಭ ಕಾಲದ ಕವಿಗಳಲ್ಲಿ ಅನೇಕರು ಪಾರಂಪರಿಕ ರೀತಿಯ ಛಂದಸ್ಸು, ಧಾಟಿಗಳನ್ನು ಬಳಸಿ ಕಾವ್ಯ ರಚನೆ ಮಾಡಿರುತ್ತಾರೆ. ಆದರೂ ಹೊಸರೀತಿಯ ವಿಷಯವನ್ನು ಸಾಹಿತ್ಯ ರಚನೆಗೆ ಆರಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಕ್ರಿ.ಶ. 1900ರ ಸುಮಾರಿಗೆ ಮತ್ತು ಅಲ್ಲಿಂದೀಚೆಗೆ ಹುಟ್ಟಿದ ಬಹುತೇಕ ಕವಿಗಳು ಈ ಪರಂಪರೆಯನ್ನು ಬೆಳೆಸುತ್ತಾರೆ. ಮುಂದೆ 'ನವ್ಯಪಂಥ' ಸಾಹಿತ್ಯ ರಚನೆ ಬಳಕೆಗೆ ಬಂದಾಗ ಅನೇಕ ನವೋದಯ ಕವಿಗಳೂ ಈ ನವ್ಯಪಂಥದಲ್ಲಿ ಸಾಹಿತ್ಯ ರಚನೆ ಮಾಡಿರುವುದನ್ನು ಅರಿಯಬಹುದಾಗಿದೆ. ಈ ಪಂಥದ ಪ್ರಮುಖ ಉದ್ದೇಶ ಜನಸಾಮಾನ್ಯರ ಆಶೋತ್ತರಗಳನ್ನು ಕುರಿತು ಕಾವ್ಯ ರಚನೆ ಮಾಡುವುದಾಗಿತ್ತು. ಈ ಪಂಥವು ಸುಮಾರು 1950 ರ ದಶಕದಲ್ಲಿ ಆರಂಭವಾಯಿತು. ಗೋಕಾಕ, ಕಣವಿ ಮುಂತಾದವರು ಈ ಎರಡೂ ರೀತಿಗಳಲ್ಲಿ ಕಾವ್ಯ ರಚನೆ ಮಾಡಿದರು. ಮುಂದೆ 'ಬಂಡಾಯ ಸಾಹಿತ್ಯ' ಬಂದಾಗ ಈ ಕವಿಗಳಲ್ಲೇ ಅನೇಕರು ಅದರಲ್ಲೂ ಸಾಹಿತ್ಯ ರಚನೆ ಮಾಡಿರುತ್ತಾರೆ. ಹೀಗಾಗಿ ಪುನರುಕ್ತಿ ಹಾಗೂ ಐತಿಹಾಸಿಕ ಬೆಳವಣಿಗೆಯ ದೃಷ್ಟಿಯಿಂದ ಇಲ್ಲಿ ಕವಿಗಳ ವಿಷಯ ಹೇಳುವಾಗ ಕಥೆ, ಕಾದಂಬರಿ, ಕಾವ್ಯ, ಪ್ರಬಂಧ, ಪ್ರವಾಸ ಕಥನ ಮುಂತಾಗಿ ವಿಂಗಡಿಸದೆ ಕವಿಗಳು ಹುಟ್ಟಿದ ಕಾಲಾನುಕ್ರಮಣಿಕೆಯನ್ನು ಅನುಸರಿಸಿದೆ. ನಾಟಕವು ಶ್ರವ್ಯ ಮತ್ತು ದೃಶ್ಯ ಮಾಧ್ಯಮವಾಗಿರುವುದರಿಂದ ಅದನ್ನು ಪ್ರತ್ಯೇಕವಾಗಿ ಬರೆದಿದೆ.

**ನವ್ಯಸಾಹಿತ್ಯ :** ನವ್ಯ ಸಾಹಿತ್ಯ ರಚನಕಾರರು ಜನಜೀವನಕ್ಕೆ ಸಮೀಪವಾದ ಕಾವ್ಯಗಳನ್ನು ರಚಿಸಿದರು. ಕಾವ್ಯದಲ್ಲಿ ಮಣ್ಣಿನ ವಾಸನೆ ಇರಬೇಕೆಂಬುದು ಇವರ ಧ್ಯೇಯ, ಖಚಿತವಾದ ಮೌಲ್ಯಗಳನ್ನು ಹೊಂದಿರದ ಇವರು ಮೌಲ್ಯಗಳ ಶೋಧಕರೆನ್ನಬಹುದು. ಇಂತಹ ಕವನಗಳನ್ನು ರಚಿಸಿದವರಲ್ಲಿ ವಿನಾಯಕ ಕೃಷ್ಣಗೋಕಾಕರು ಮೊದಲಿಗರು. ಮುಂದೆ ಅನೇಕ ನವೋದಯದ ಕವಿಗಳು ಈ ನವ್ಯಪಂಥಕ್ಕೆ ಪಕ್ಷಾಂತರಗೊಂಡವರೇ ಆಗಿರುತ್ತಾರೆ.

ಇದೇ ಪಂಥ ಮುಂದುವರಿದು ಮುಂದೆ ಬಂಡಾಯ ಸಾಹಿತ್ಯವೆಂಬ ಹೆಸರಿನಲ್ಲಿ ಪ್ರಕಟಗೊಂಡಿತು. ಸ್ವಲ್ಪಮಟ್ಟಿಗೆ ಇದು ಯುವಕವಿಗಳನ್ನು ಆಕರ್ಷಿಸಿದ್ದರೂ ಅನೇಕ ನವ್ಯಕವಿಗಳು ಇದರಲ್ಲೂ ಕಾವ್ಯ ರಚನೆ ಮಾಡಿರುತ್ತಾರೆ. ಶೋಷಣೆ, ಅನ್ಯಾಯಗಳ ವಿರುದ್ಧ ಧ್ವನಿ ತೆಗೆಯುವುದು ಈ ಬಂಡಾಯ ಸಾಹಿತ್ಯದ ಗುರಿ.

ಧಾರವಾಡ ಜಿಲ್ಲೆಯು ಬೇಂದ್ರೆ, ಮುಗಳಿ, ಗೋಕಾಕ, ವಿ.ಎಂ. ಇನಾಂದರ, ಬಸವನಾಳ, ಸಾಲಿ ರಾಮಚಂದ್ರರಾವ್, ಬೆಟಗೇರಿ ಕೃಷ್ಣಶರ್ಮ, ದ.ಬಾ. ಕುಲಕರ್ಣಿ, ಕೃಷ್ಣಕುಮಾರ ಕಲ್ಲೂರು, ಪ್ರಹ್ಲಾದ ನರೇಗಲ್, ಸ.ಸ. ಮಾಳವಾಡ, ಎನ್.ಕೆ. ಕುಲಕರ್ಣಿ, ನಾರಾಯಣ ಸಂಗಮ, ಹುಯಿಲುಗೋಳ ನಾರಾಯಣರಾವ್, ಪಾ.ವೆಂ. ಆಚಾರ್ಯ, ಮುದವೀಡು ಕೃಷ್ಣರಾವ್, ಶಂ.ಬಾ ಜೋಶಿ, ಎಸ್.ಎಸ್.ಒಡೆಯರ್, ಆರ್.ಸಿ. ಹಿರೇಮಠ, ಆಲೂರು ವೆಂಕಟರಾವ್, ಜಿ.ಬಿ. ಜೋಶಿ (ಜಡಭರತ), ಭೂಸನೂರಮಠ, ವರದರಾಜ ಹುಯಿಲುಗೋಳ, ಸಿದ್ಧಲಿಂಗ ದೇಸಾಯಿ, ಚನ್ನಮಲ್ಲಪ್ಪ ಕವಲಿ, ನೆಗಳೂರು ರಂಗನಾಥ, ಬಿ.ಆರ್. ವಾಡಪ್ಪಿ, ಡಿ.ಎಸ್. ಕರ್ಕಿ, ರಾವಬಹದ್ದೂರ, ವಾಲಿಗಂಗಪ್ಪ, ದ.ಲ. ಕೆರೂರ, ಎನ್.ಎಸ್. ಗದಗಕರ, ಜಿ.ಎಸ್. ಆಮೂರ, ಶಾಂತಿನಾಥದೇಸಾಯಿ, ರಾಮಚಂದ್ರ ಕೊಟ್ಟಲಗಿ, ಕಲಮದಾನಿ ಗುರುರಾಯರು, ಬುರ್ಲಿ ಬಿಂದುಮಾಧವ, ಕುರ್ತಕೋಟಿ, ಬಸವರಾಜ ಕಟ್ಟೀಮನಿ ಮುಂತಾದ ಹಳೆಯ ಪೀಳಿಗೆಯ ಬಹುಮುಖ ಪ್ರತಿಭೆಯ ಸಾಹಿತಿಗಳನ್ನು ಈ ಶತಮಾನದಲ್ಲಿ ಕಂಡಿದೆ.

ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಚಂದ್ರಶೇಖರ ಕಂಬಾರ, ಶ್ರೀನಿವಾಸ ತೋಫಖಾನೆ, ದೇವೇಂದ್ರಕುಮಾರ ಹಕಾರಿ, ಜಿ.ವಿ. ಕುಲಕರ್ಣಿ, ಆರ್.ಜಿ. ಕುಲಕರ್ಣಿ, ಗೋವಿಂದಮೂರ್ತಿ ದೇಸಾಯಿ, ಎಂ. ದಸ್ತಗೀರ್, ವೆಂ.ಮು. ಜೋಶಿ, ಎಂ.ಎಂ. ಕಲಬುರ್ಗಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ವೀರಣ್ಣಾ ರಾಜೂರು, ಪಂಚಾಕ್ಷರಯ್ಯ ಹಿರೇಮಠ, ಸೋಮಶೇಖರ ಇಮ್ರಾಪುರ, ವಿ.ಜಿ. ಮಾರಿಹಾಳ, ಎಂ. ಜೀವನ, ಎಂ.ಎನ್. ರಾಜಶೇಖರಯ್ಯ, ಸದಾನಂದನಾಯಕ, ನೇಗಿನಾಳ, ಗಿರೀಶ್ ಕಾರ್ನಾಡ್, ಪರಡ್ಡಿ ಮಲ್ಲಿಕಾರ್ಜುನ, ಬಿ.ವಿ. ಶಿರೂರ, ವಿ.ಎಸ್. ಹಿತ್ತಲಮನಿ, ಸುರೇಂದ್ರದಾನಿ, ಕೆ.ಎಸ್. ನಾರಾಯಣಾಚಾರ್ಯ, ದೇಶಪಾಂಡೆ ಸುಬ್ಬರಾಯ, ಮುಂತಾದ ಮುಂದಿನ ಪೀಳಿಗೆಯ ಪ್ರಭಾವಶಾಲಿಗಳನ್ನು ಕಂಡಿದೆ. ಸ್ತ್ರೀಬರಹಗಾರರೂ ಅನೇಕರಿದ್ದು ಅವರ ಬಗ್ಗೆ ಪ್ರತ್ಯೇಕವಾಗಿ ಚರ್ಚಿಸಿದೆ. ಸುದರ್ಶನ ದೇಸಾಯಿ ಪತ್ತೇದಾರಿ ಕಾದಂಬರಿಗಳ ಲೇಖಕರು.

ಇತಿಹಾಸ ಸಂಶೋಧನೆಯಲ್ಲಿ ಆಲೂರ ವೆಂಕಟರಾವ್, ನಾ.ಶ್ರೀ. ರಾಜಪುರೋಹಿತ, ಬೆಂಗೇರಿ ಹುಚ್ಚೂರಾವ್, ಆರ್.ಎಸ್. ಪಂಚಮುಖಿ, ಕೆ.ಬಿ. ಪಾಠಕ (ಹುಬ್ಬಳ್ಳಿ), ಪಿ.ಬಿ. ದೇಸಾಯಿ, ಜಿ.ಎಸ್. ದೀಕ್ಷಿತ್, ವರದರಾಜ ಉಮರ್ಜಿ, ಎ.ಎಂ. ಅಣ್ಣಿಗೇರಿ, ಎಸ್.ಎಸ್. ಒಡೆಯರ್, ಶ್ರೀನಿವಾಸ ರಿತ್ತಿ, ಬಿ.ಆರ್. ಗೋಪಾಲ, ಎಸ್. ಶೆಟ್ಟರ್, ಕೆ.ಆರ್. ಬಸವರಾಜ್, ರಘುನಾಥಭಟ್, ಲೀಲಾ ಶಾಂತಕುಮಾರಿ, ರು.ಮ. ಷಡಕ್ಷರಯ್ಯ, ಪಾಡಿಗಾರ್, ಸಿಂದಗಿ ರಾಜಶೇಖರ ಇವರೆಲ್ಲ ಉಲ್ಲೇಖನೀಯರು. ಕರ್ನಾಟಕ ಇತಿಹಾಸ ಸಂಶೋಧ ಮಂಡಲ (1914), ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ ಇವೆಲ್ಲ ಇವರಿಗೆ ಸ್ಫೂರ್ತಿ ಪ್ರೋತ್ಸಾಹ ಒದಗಿಸುತ್ತ ಬಂದಿವೆ.

ರಾಷ್ಟ್ರೀಯ ಜಾಗೃತಿಯ ಕಾಲದಲ್ಲಿ ಜೀವನ ಚರಿತ್ರೆ, ವಿಚಾರ ಸಾಹಿತ್ಯ, ಹಾಡುಗಳನ್ನು ರಚಿಸಿ ಜನಜಾಗೃತಿಗೆ ಶ್ರಮಿಸಿದವರಲ್ಲಿ ಆಲೂರು, ಮುದುವೀಡು ಇವರ ಸಾಲಿಗೆ ಸೇರತಕ್ಕವರು ಖ್ಯಾತ ಬುದ್ಧಿಜೀವಿ ಆರ್.ಆರ್. ದಿವಾಕರ, ಅಲ್ಲದೆ ನಾ.ಸಂ. ಹರ್ಡೀಕರ್, ರಾ.ವೆ. ಕರಗುದರಿ, ಶ್ರೀಧರ ಖಾನೋಳಕರ, ಕಲ್ಲನಗೌಡ (ಕೆ.ಎಫ್.) ಪಾಟೀಲ, ಬಾಲಚಂದ್ರ ಘಾಣೇಕರ, ಗುರುನಾಥ ಜೋಶಿ, ಶಂ.ಬಾ. ಮನಗೋಳಿ, ಸಿದ್ಧನಾಥಪಂಥ, ಬಿಂದು ಮಾಧವ ಬುರ್ಲಿ, ಅಬ್ದುಲ್ ಸಮದ್, ಮುಂತಾದವರು. ಇವರುಗಳು ನವೋದಯದ ಕಾಲದ ನಂತರ ವ್ಯಾಪಕ ಕೆಲಸ ಮಾಡಿದವರು.

ದತ್ತಾತ್ರೇಯ ರಾಮಚಂದ್ರ ಬೇಂದ್ರೆ (1896-1982) 'ಗೆಳೆಯರ ಗುಂಪಿ'ನ ಕೇಂದ್ರ ವ್ಯಕ್ತಿಗಳು. 'ಅಂಬಿಕಾತನಯದತ್ತ' ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಕಾವ್ಯ ನಾಟಕಗಳನ್ನು ಬರೆದವರು. ಮಕ್ಕಳ ಸಾಹಿತ್ಯಕ್ಕೂ ಕೊಡುಗೆ ನೀಡಿದ್ದಾರೆ. 1943 ರಲ್ಲಿ ಶಿವಮೊಗ್ಗದಲ್ಲಿ ನಡೆದ 27ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರಿಗೆ ಕರ್ನಾಟಕ ಸರ್ಕಾರ, ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಲ್ಲದೆ ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ಬಂದಿದೆ. ಇದಲ್ಲದೆ 1974 ರಲ್ಲಿ ಭಾರತೀಯ ಜ್ಞಾನ ಪೀಠ ಪ್ರಶಸ್ತಿಯನ್ನು ಪಡೆದಿರುತ್ತಾರೆ. ರೋಣ ತಾಲೂಕು ಮೆಣಸಿಗಿಯ ಕರವೀರಪ್ಪ ಬಸಪ್ಪ ಅಂಗಡಿ (1897) ಅವರು ಆರತಿ ಪದಗಳನ್ನು ಬರೆದಿದ್ದಾರೆ. ಚನ್ನಬಸಪ್ಪ ಎಲ್ಲಪ್ಪ ಕವಲಿ (1900-1985) ಬ್ಯಾಡಗಿಯರಾಗಿದ್ದು ಇವರು ಬರೆದ ಹಲವಾರು ಕೃತಿಗಳಲ್ಲಿ

ಮಕ್ಕಳ ಪುಸ್ತಕ 'ಪುಟ್ಟಣ್ಣನ ಪ್ರಪಂಚ'ಕ್ಕೆ ಕೇಂದ್ರ ಸರ್ಕಾರದ ಬಹುಮಾನ ಬಂದಿದೆ. ಗದಗಿನ ಕೋಟೆ ಬಸಪ್ಪ ಶಾಸ್ತ್ರಿಗಳು (1900) 'ಷಡಕ್ಷರದೇವನ ಸ್ತೋತ್ರ ಮಂಜರಿ' ಗ್ರಂಥವನ್ನು ಬರೆದಿದ್ದಾರೆ. ಇದೇ ಗ್ರಾಮದ ಗಿರಿಯಪ್ಪ ಗೌಡ ಬಸವಗೌಡ ಬಾಬೂಗೌಡ್ರ (1900) ಇವರು ತಂದೆ ಮಗಳಿಗೆ ಬರೆದ ಓಲೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇದೇ ಗ್ರಾಮದ ಅಯ್ಯನಗೌಡ ಮಲ್ಲೇಶಗೌಡ ಪಾಟೀಲ (1901) ಮೂರು ಕೃತಿಗಳ ಲೇಖಕರು. ರೋಣ ತಾಲೂಕಿನ ಹಾಲಕೆರೆಯ ಟಿ.ಎಲ್. ಕೆಂಪಣ್ಣ ನಾಯಕ (1901-1975) ವಿಶ್ವಧರ್ಮ ಪ್ರಕಾಶವೆಂಬ ಕೃತಿ ಬರೆದಿದ್ದಾರೆ. ಹೊಂಬಳದ ಗೋವಿಂದಾಚಾರ್ಯರ ಭೀಮಾಚಾರ್ಯ ಜೋಶಿ (1905-1994) (ಜಡಭರತ) ಇವರು ನಾಟಕಕಾರರಾಗಿ, ರಂಗಭೂಮಿಯ ಯಶಸ್ಸಿಗಾಗಿ ದುಡಿದು ಅನೇಕ ನಾಟಕಗಳನ್ನು ಬರೆದಿದ್ದಾರೆ. ಇವರಿಗೆ 'ಪದ್ಮಶ್ರೀ' ಪ್ರಶಸ್ತಿ ಸಂದಿದೆ. ಮೇವುಂಡಿಯವರಾದ ಮೇವುಂಡಿಮಲ್ಲಾರಿಯವರು (1906-1975) ಮಕ್ಕಳ ಸಾಹಿತ್ಯವನ್ನು ಹೆಚ್ಚಾಗಿ ಬರೆದಿದ್ದು, 'ಕನ್ನಡ ಶಾಸನ ಕವಿಗಳು' ಎಂಬ ಕೃತಿಯ ಲೇಖಕರು. ರೋಣ ತಾಲೂಕಿನ ಹೊಳೆ ಆಲೂರಿನ 'ರಸಿಕರಂಗ' ಕಾವ್ಯನಾಮದ ರಂಗನಾಥ ಶ್ರೀನಿವಾಸ ಮುಗಳಿಯವರು (1906-1993) ಅನೇಕ ಕಾದಂಬರಿ, ನಾಟಕ ಹಾಗೂ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದಿದ್ದಾರೆ. ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳೆರಡರಲ್ಲೂ ಕೃತಿರಚನೆ ಮಾಡಿರುತ್ತಾರೆ. ಇವರಿಗೆ ಪುಣೆ ವಿಶ್ವವಿದ್ಯಾಲಯವು ಡಿಲಿಟ್ ಪದವಿ ನೀಡಿದೆ. ಸಿದ್ದಗಂಗೆಯಲ್ಲಿ ನಡೆದ 44 ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1976 ರಲ್ಲಿ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಪಡೆದಿದ್ದರು. ಧಾರವಾಡ ಜಿಲ್ಲೆಯ ಜಾವೂರಿನ ಪ್ರಹ್ಲಾದ ಬಂಡೇರಾವ ನರೇಗಲ್ಲ (ವತ್ಸ) (1907) ಪ್ರಬಂಧ, ಕಾದಂಬರಿ, ವಿಮರ್ಶೆಯ ಮೇಲೆ ಕೃತಿಗಳನ್ನು ರಚಿಸಿರುತ್ತಾರೆ. ರವೀಂದ್ರರ 'ಗೀತಾಂಜಲಿ'ಯನ್ನು ಭಾಷಾಂತರಿಸಿದ್ದಾರೆ. ಕೆಲವು ಕೃತಿಗಳನ್ನು ಸಂಪಾದಿಸಿರುತ್ತಾರೆ. ಅಗಡಿಯ ಗುಡ್ಡೋ ಯಲ್ಲೋ ಕುಲಕರ್ಣಿಯವರು (1908) 40 ವರ್ಷಗಳ ಕಾಲ 'ಸದ್ಬೋಧಚಂದ್ರಿಕೆ'ಯ ಸಂಪಾದಕರಾಗಿದ್ದರು. ಧಾರವಾಡ ಜಿಲ್ಲೆಯ ಕಲ್ಲೂರಿನವರಾದ ಕೃಷ್ಣಕುಮಾರ ಕಲ್ಲೂರವರು (1909-1982) ಅವರು ನವೋದಯ ಕಾಲದ ಸಣ್ಣಕತೆಗಳ ಬರಹಗಾರರಲ್ಲಿ ಒಬ್ಬರು. ಅವರು ಬರೆದಿರುವ 'ಜಾಗೃತ ಭಾರತ' ನಾಟಕಕ್ಕೆ ಮುಂಬೈ ಸರ್ಕಾರ 1955 ರಲ್ಲಿ ಪ್ರಥಮ ಬಹುಮಾನ ನೀಡಿದೆ. ರೋಣ ತಾಲೂಕು ಮೆಣಸಗಿ ಗ್ರಾಮದ ಪಾಂಡುರಂಗ ತಮ್ಮಾಜಿ ಕುಲಕರ್ಣಿಯವರು (ಸು. 1900) ವೈದ್ಯರಾಗಿ ವೈದ್ಯಕೀಯಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಬರೆದಿದ್ದಾರೆ. ಮರಾಠಿಯ 'ದಾಸಬೋಧ'ವನ್ನೂ ಕನ್ನಡಕ್ಕೆ ತಂದಿರುತ್ತಾರೆ.

ವಿನಾಯಕ ಕೃಷ್ಣ ಗೋಕಾಕ್ (ಸವಣೂರಿನಲ್ಲಿ ಹುಟ್ಟಿದವರಾಗಿದ್ದು) ಕಾವ್ಯಸಂಕಲನ, ನಾಟಕ, ವಿಮರ್ಶೆ, ಪ್ರಬಂಧ ಹಾಗೂ ಪ್ರವಾಸ ಸಾಹಿತ್ಯವನ್ನು ಕುರಿತು ಕೃತಿಗಳನ್ನು ರಚಿಸಿರುತ್ತಾರೆ. ಇವರ ಪ್ರಸಿದ್ಧ ಕಾದಂಬರಿ 'ಸಮರಸವೇ ಜೀವನ'. 'ಭಾರತ ಸಿಂಧುರಶ್ಮಿ' ಇವರ ಬೃಹತ್ ಕಾವ್ಯ. ಇವರು ನವೋದಯ ಹಾಗೂ ನವ್ಯಪಂಥರ ಕವಿಗಳು. ಇವರಿಗೆ ಪದ್ಮಶ್ರೀ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಬಂದಿವೆ.

ಹಾನಗಲ್ಲಿನ ವಿರಕ್ತಮಠದ ಕುಮಾರ ವಿಭುಸ್ವಾಮಿಗಳು 'ಭಿಕ್ಷುಕ ಮಹೇಶ ವಿಲಾಸ' ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇದೇ ಮಠದ ಗಿರಿಯಾಪುರದ ಕುಮಾರಸ್ವಾಮಿಗಳು ಶಿವಯೋಗಿ ಸಿದ್ಧರಾಮನ ವಚನಗಳನ್ನು ಸಂಪಾದಿಸಿರುತ್ತಾರೆ. ಸಂಗಪ್ಪ ಸಂಗನಬಸಪ್ಪ ಮಾಳವಾಡರು (1910-1987) ಮೆಣಸಗಿ ಗ್ರಾಮದವರಾಗಿದ್ದು ಸಂಶೋಧಕರಾಗಿ ಹಾಗೂ ಲಲಿತ ಸಾಹಿತ್ಯ ಕರ್ತೃವಾಗಿ ಪ್ರಸಿದ್ಧರು. 1972 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕೃತರು. ಸಂಗಯ್ಯ ಶಿವಮೂರ್ತಯ್ಯ ಭೂಸನೂರುಮಠ (1911) ನಿಡಗುಂದಿಯವರಾಗಿದ್ದು 'ಶೂನ್ಯ ಸಂಪಾದನೆ ಪರಾಮರ್ಶೆ' ಗ್ರಂಥವಲ್ಲದೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಮೇಲಿನ ಗ್ರಂಥಕ್ಕೆ 1969 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ; 'ಭವ್ಯಮಾನವ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಕುಂದಗೋಳದ ಹಿರೇಹರಕುಣಿಯ ಸದಾಶಿವಸ್ವಾಮಿ ಶಿವಾನಂದ ಮಠ (1913) ಅವರು ವೀರಶೈವ ಜಗದ್ಗುರುಗಳ ಮೇಲೆ ಕೃತಿಗಳನ್ನು ಬರೆದಿದ್ದು ಕೀರ್ತನಕಾರರೂ ಆಗಿರುತ್ತಾರೆ. ನಾರಾಯಣ ಕೃಷ್ಣ ಕುಲಕರ್ಣಿ (ಎನ್ಕೆ) (1913) ಇವರು ಗದಗಿನವರಾಗಿದ್ದು ನಾಟಕ ವಿಮರ್ಶೆಗಳನ್ನು ವಿನೋದಪರ ಬರಹಗಳನ್ನೂ ರಚಿಸಿದ್ದು ಇವರು 1981 ರ ಸಾಹಿತ್ಯ ಅಕಾಡೆಮಿಯ ಪುರಸ್ಕೃತರು. ಅಣ್ಣಿಗೇರಿಯ ಅಮೃತ ಮಹಾದೇವ ಅಣ್ಣಿಗೇರಿಯವರು (1914-1987) ವಾಸ್ತುಶಿಲ್ಪ ಕೇಂದ್ರಗಳ ಮೇಲೆ (ಐಹೊಳೆ, ಬಾದಾಮಿ, ಬಿಜಾಪುರ ಇತ್ಯಾದಿ) ಅನೇಕ ಕೃತಿಗಳನ್ನು ಬರೆದಿದ್ದಾರೆ. ಇವರು ಶಾಸನತಜ್ಞರೂ ಆಗಿದ್ದರು. ಅದೇ ಊರಿನ ಬಿ.ಆರ್. ವಾಡಪ್ಪಿ (ಭಾರತೀಶ) (1914) ಅವರು ನಾಟಕ, ಪ್ರಬಂಧ ಕಥೆಗಳನ್ನು ಬರೆದಿದ್ದಾರೆ. ಇವರು ಬರೆದ 'ತಾರಕಂಬಿ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ

ಬಹುಮಾನ ಬಂದಿದೆ. ಜಿ.ಡಿ. ನಾಡಕರ್ಣಿ ಸಾಹಿತ್ಯ ವಿಮರ್ಶೆ, ಲಲಿತ ಪ್ರಬಂಧಗಳಿಂದ ಖ್ಯಾತರು, ನೆಗಳೂರು ರಂಗನಾಥ (ನೆರಂಗ) ಬಹುಮುಖ ಪ್ರತಿಭೆಯ ಬರಹಗಾರ, ವೆಂಕಟೇಶ ಕುಲಕರ್ಣಿ ಕಾನೂನು ಗ್ರಂಥಗಳ ಅನುವಾದಕ. ನಾಟಕಕಾರ ಎಚ್.ಕೆ. ರಂಗನಾಥ ಧಾರವಾಡದಲ್ಲಿ ಬಹುಕಾಲ ಇದ್ದವರು. ಎಸ್.ಆರ್. ಮಳಗಿ ಖ್ಯಾತ ವಿಮರ್ಶಕರು. ಹಾನಗಲ್ಲಿನ ನಾರಾಯಣ ಶ್ರೀನಿವಾಸ ಗದಗಕರ (ಎಸ್. ರಮಾನಂದ) (1915) ವ್ಯಕ್ತಿ ಚಿತ್ರ, ಕವನ, ಪ್ರಬಂಧಗಳನ್ನು ಬರೆದಿದ್ದಾರೆ. ಅವರ 'ವಾಗ್‌ಲಹರಿ' ಕೃತಿಗೆ 1956 ರಲ್ಲಿ ರಾಜ್ಯ ಸರ್ಕಾರದ ಬಹುಮಾನ ಬಂದಿದೆ. ರೋಣ ತಾಲೂಕು ಅಬ್ಬಿಗೇರಿಯ ರಾಮಚಂದ್ರ ವೆಂಕಟೇಶ ಕುಲಕರ್ಣಿಯವರು (1918) 'ಗಾಳಿಪಟ' ಮುಂತಾದ ಲಲಿತ ಪ್ರಬಂಧಗಳನ್ನು ಬರೆದಿದ್ದಾರೆ. ತುಮ್ಮಿನ ಕಟ್ಟಿಯ ಕೃಷ್ಣಾಚಾರ್ಯ ತಮ್ಮಣ್ಣಾಚಾರ್ಯ ಪಾಂಡುರಂಗಿ (1918) ಯವರು ಸಂಸ್ಕೃತದ ವಿದ್ವಾಂಸರಾಗಿದ್ದು ಸಂಸ್ಕೃತ ಸಾಹಿತ್ಯದ ಮೇಲೆ ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದಿದ್ದಾರೆ. ಸಂಸ್ಕೃತ ವಿದ್ವಾಂಸರಾಗಿ ಕನ್ನಡದಲ್ಲಿ ಬರೆದವರಲ್ಲಿ ಪಂಡರಿನಾಥಾಚಾರ್ಯ ಗಲಗಲಿ, ರಾಮಚಾರ್ಯ ಗಲಗಲಿ, ಕೆ. ಕೃಷ್ಣಮೂರ್ತಿ, ಬಿ.ಆರ್. ಮೊಡಕ್, ಕೆ.ಎಸ್. ನಾರಾಯಣಾಚಾರ್ಯ, ಕೇಶವಶರ್ಮ ಗಲಗಲಿ, ದಯಾನಂದ ಶಾನಭಾಗ, ಖಿಡಬಡಿ, ಚಂದ್ರಮೌಳಿ ನಾಯ್ಕರ್, ಬಾಲಚಂದ್ರ ಶಾಸ್ತ್ರಿ ಮಹೇಶ್ವರ ಜೋಶಿ, ರಾಜೇಶ್ವರಶಾಸ್ತ್ರಿ ಉಲ್ಲೇಖನೀಯರು. ಧಾರವಾಡ ಜಿಲ್ಲೆಯ ಹರವಿಯ ಚನ್ನಪ್ಪ ಎರೆಸೀಮೆಯವರು (1919) ಅನೇಕ ಕೃತಿಗಳನ್ನು ಬರೆದಿದ್ದು ಅವರು 'ಜೇನು' ಕೃತಿಗೆ ವೈಜ್ಞಾನಿಕ ಪುಸ್ತಕದ ಬಹುಮಾನ ಬಂದಿದೆ. (1964) ರೋಣ ತಾಲೂಕಿನ ಕುರುಡಗಿಯ ರುದ್ರಯ್ಯ ಚಂದಯ್ಯ ಹಿರೇಮಠರು (1920) ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ವಿಮರ್ಶಕರಾಗಿ, ಕವಿಗಳಾಗಿ, ಖ್ಯಾತರಾಗಿದ್ದಾರೆ. 1970 ರಲ್ಲಿ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿದ್ದಾರೆ.

ಗಜೇಂದ್ರಗಡದ ಕನಕಪ್ಪ ಹನುಮಪ್ಪ ದಾಸರ (1921) ಅವರು 'ಕನಕದಾಸ' ಎಂಬ ಕಾವ್ಯನಾಮದಲ್ಲಿ ಎರಡು ಆಧ್ಯಾತ್ಮಿಕ ಕೃತಿಗಳನ್ನು ಬರೆದಿದ್ದಾರೆ. ಮರಿಬಸಣ್ಣ ಸಣ್ಣಬಸಪ್ಪ ಸುಂಕಾಪುರ (1921) ಅವರು ಮುಳಗುಂದದವರಾಗಿದ್ದು ಅನೇಕ ಪ್ರಾಚೀನ ಗ್ರಂಥಗಳ ಸಂಪಾದನೆ, ಜಾನಪದ ಸಾಹಿತ್ಯ ಮುಂತಾದವುಗಳ ಮೇಲೆ ಕೃತಿಗಳನ್ನು ರಚಿಸಿರುತ್ತಾರೆ. 1981 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಶಿಗ್ಗಾಂವಿ ತಾಲೂಕು ಹಿರೇಮಲ್ಲೂರಿನ ಈಶ್ವರನ್ (1922) ಅವರು 'ಹರಿಹರನ ಕೃತಿಗಳು ಸಂಖ್ಯಾನಿರ್ಣಯ'ವೇ ಅಲ್ಲದೆ ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ. ಇಂಗ್ಲಿಷ್ ರಚನೆಗಳೂ ಸೇರಿ ಸುಮಾರು 50 ಕೃತಿಗಳನ್ನು ರಚಿಸಿರುತ್ತಾರೆ. 1983 ರಲ್ಲಿ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರು (1923) ರಾಣೆಬೆನ್ನೂರಿನವರಾಗಿದ್ದು ಖ್ಯಾತ ಕವಿ, ಅಲ್ಲದೆ ವಿಮರ್ಶೆ, ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ರಾಜ್ಯಶಿಕ್ಷಕ ಪ್ರಶಸ್ತಿ ಮತ್ತು ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ಪಡೆದಿರುತ್ತಾರೆ. 1982 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ವಸಂತ ಮಧ್ವರಾವ್ ಕೋರವಾರ ಮುಂಡರಗಿಯವರಾಗಿದ್ದು ವಿಜ್ಞಾನ ಕೃತಿಗಳನ್ನು ರಚಿಸಿರುತ್ತಾರೆ. ಹಾವೇರಿ ತಾಲೂಕಿನ ಗುತ್ತಲದ ದತ್ತಾತ್ರೇಯ ಮಲ್ಹಾರ ಕುಲಕರ್ಣಿಯವರು 'ಮಲ್ಹಾರಿ ಸಹಸ್ರನಾಮ ಮತ್ತು ನಾಮಾವಳಿ' ಮುಂತಾದ ಕೃತಿಗಳನ್ನು ರಚಿಸಿರುತ್ತಾರೆ. ಮರೇವಾಡದ ಸದಾಶಿವ ಶಿವದೇವ ಒಡೆಯರು (1924) ಕನ್ನಡ ಹಾಗೂ ಇಂಗ್ಲಿಷಿನಲ್ಲಿ ಅನೇಕ ಕೃತಿಗಳನ್ನು ಬರೆದಿದ್ದು ಅವರು ಬರೆದಿರುವ 'ರವೀಂದ್ರದರ್ಶನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ (1966). 'ರಾಣಿಚನ್ನಮ್ಮ' ಕೃತಿ ಇಂಗ್ಲಿಷ್‌ನಲ್ಲಿ ಪ್ರಕಟವಾಗಿ ಅನೇಕ ಭಾಷೆಗಳಿಗೆ ತರ್ಜುಮೆಯಾಗಿದೆ. ಬೊಮ್ಮನಹಳ್ಳಿಯವರಾದ ಗುರುರಾಜ ಶಾಮಾಚಾರ್ಯ ಅಮೂರ (1925) ವಿಮರ್ಶೆ, ಗ್ರಂಥ ಸಂಪಾದನೆ ಕ್ಷೇತ್ರದಲ್ಲಿ ದುಡಿದವರಾಗಿದ್ದಾರೆ. ಇವರಿಗೆ 1991 ರ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಗದಗ್ ತಾಲೂಕು ಹೊಂಬಳ ಗ್ರಾಮದ ಖ್ಯಾತಕವಿ ಚನ್ನವೀರ ಕಣವಿಯರು (1928) ಅನೇಕ ಕವನ ಸಂಕಲನಗಳನ್ನು ತಂದಿರುತ್ತಾರೆ. ಹಲವು ಕೃತಿಗಳ ಸಂಪಾದಕರಾಗಿರುತ್ತಾರೆ. ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪುರಸ್ಕೃತರು. ಸವಣೂರಿನ ಗೋವಿಂದಮೂರ್ತಿ ದೇಸಾಯಿ (1926) ಯವರು ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ಗದಗಿನ ಕೀರ್ತಿನಾಥ ಕುರ್ತಕೋಟಿ (1928) ಯವರು ವಿಮರ್ಶಕರು ಹಾಗೂ ನಾಟಕಕಾರರು, 'ನಡೆದು ಬಂದ ದಾರಿ' ಇವರ ಮಹತ್ವದ ಕೃತಿ. ಇವರಿಗೆ 1971 ರ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಬಂದಿದೆ. ಧಾರವಾಡದ ಶಂಕರ ಮೊಕಾಶಿ ಪುಣೇಕರ್ ಅವರು (1929) 'ಕನಸಿಗ' ಕಾವ್ಯ ನಾಮದಿಂದ ಅನೇಕ ಕೃತಿಗಳನ್ನು ಬರೆದಿದ್ದಾರೆ. 'ಗಂಗವ್ವ ಗಂಗಾಮಾಯಿ' 'ಅವಧೇಶ್ವರಿ' ಇವರ ಪ್ರಸಿದ್ಧ ಕಾದಂಬರಿಗಳು. ಇವರಿಗೆ 1986 ರ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ ಬಂದಿದೆ. ಅಗಡಿಯ ಶೇಷಾಚಲ ನಾ.ಕುಲಕರ್ಣಿ (1929) ಯವರು ಚಿದಂಬರ ಭಕ್ತಿ ಸಾಹಿತ್ಯದ ಮೇಲೆ ಅನೇಕ ಕೃತಿಗಳನ್ನು ಬರೆದಿದ್ದಾರೆ.

ಹಾವೇರಿ ತಾಲೂಕು ಹಾವನೂರಿನ ಶ್ರೀನಿವಾಸ ಹಾವನೂರ (1929) ಅವರು ಸಂಶೋಧನೆ, ಸಂಪಾದನಾ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಇವರ 'ಕಾಗೆಗೆ ಹೇಳಿದ ಕಥೆ'ಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಹಾವೇರಿಯ ವಸಂತ ಕವಲಿಯವರು (1930) ಸಂಗೀತ ಹಾಗೂ ನಾಟಕ ರಚನಕಾರರು. ಭಾಸನ ನಾಟಕಗಳನ್ನು ಭಾಷಾಂತರಿಸಿದ್ದಾರೆ. 'ಕುಮಾರವ್ಯಾಸ' ಇವರ ಕಾವ್ಯನಾಮ. ಕೊಣ್ಣೂರಿನ ಸಿ.ಶಂ. ಭೂಸರೆಡ್ಡಿ (1930) ಯವರು ವಿಮರ್ಶೆ, ಸಂಪಾದನೆ, ಜೀವನ ಚರಿತ್ರೆಗೆ ಸಂಬಂಧಿಸಿದಂತೆ 25 ಕೃತಿಗಳನ್ನು ಬರೆದಿದ್ದಾರೆ. ಕೃಷ್ಣ ಶಾಮಾಚಾರ್ಯ ಅಮೂರ (1931) ಅವರು ಗಣಿತಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ಬರೆದಿದ್ದಾರೆ. ಗಜೇಂದ್ರಗಡದ ಎಂ.ಆರ್. ಗಜೇಂದ್ರಗಡ (1931) ಅವರು ಕುವೆಂಪು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಅನೇಕ ಪ್ರೌಢ ಪ್ರಬಂಧಗಳನ್ನು ಬರೆದಿದ್ದಾರೆ. 'ಬಾಳಿನಗಿಡ' ಮುಂತಾದ ಕೃತಿಗಳಿಂದ ಪ್ರಸಿದ್ಧರಾದ ಎಂ. ಹರಿದಾಸರಾಯರು, 'ಕೈಮಾಂಸ' ಮುಂತಾದ ಕಾದಂಬರಿಗಳ ಖ್ಯಾತರಾದ ಜನಾರ್ಧನ ಗುರಕಾರ ದಕ್ಷಿಣ ಕನ್ನಡದವರು. ಖ್ಯಾತ ಆರೋಗ್ಯ ವಿಜ್ಞಾನ ಲೇಖಕ ಎಂ. ಗೋಪಾಲಕೃಷ್ಣರಾವ್ ಧಾರವಾಡದಲ್ಲಿ ಬಹುಕಾಲ ಇದ್ದವರು. ರೋಣ ತಾಲೂಕಿನ ಇಟಗಿಯ ಬಸಲಿಂಗಯ್ಯವೀರಯ್ಯ ಮಲ್ಲಾಪುರ (1931) ಅವರು ಹಳಗನ್ನಡ ಹಾಗೂ ವೀರಶೈವ ಸಾಹಿತ್ಯದ ಮೇಲೆ ಹಲವಾರು ಕೃತಿಗಳ ರಚನಕಾರರು. ರೋಣ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

ಕೋಳಿವಾಡದ ಶಿವಪುತ್ರಪ್ಪರಾಯಪ್ಪ ಗುಂಜಾಳ ಅವರು (1932) ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ಹಲವು ಗ್ರಂಥಗಳನ್ನು ರಚಿಸಿರುತ್ತಾರೆ. ರೊಟ್ಟಿಗವಾಡದ ಡಿ.ಎಸ್. ಬಗರಿ ಇಂಥದೇ ಕೃತಿಗಳ ಲೇಖಕರಾಗಿ ಪ್ರಸಿದ್ಧರು. ರೋಣ ತಾಲೂಕಿನ ಸೂಡಿ ಗ್ರಾಮದ ಹುಲಗಪ್ಪ ರಾಮಪ್ಪ ಬಂಡಿವಡ್ಡರ (1932) ಇವರು ಕೆಲವು ಕೃತಿಗಳನ್ನು ಬರೆದಿದ್ದಾರೆ. ಗದಗಿನ ಎಚ್.ಎನ್. ಹೂಗಾರ (1932) ಅವರು ಖ್ಯಾತ ನಾಟಕಕಾರರು. ಅನೇಕ ನಾಟಕ ಕಂಪನಿಗಳು ಇವರ ನಾಟಕಗಳನ್ನು ಪ್ರದರ್ಶಿಸಿವೆ. ನಟರೂ, ಸಂಭಾಷಣೆ ಬರೆಯುವವರೂ ಆದ ಇವರಿಗೆ ರಾಜ್ಯ ನಾಟಕ ಅಕಾಡೆಮಿ ಬಹುಮಾನ ಬಂದಿದೆ. ರೋಣ ತಾಲೂಕಿನ ಕುರಡಗಿಯ ಷಡಕ್ಷರಯ್ಯ ಚಂದ್ರಯ್ಯ ಹಿರೇಮಠ (1932) ಅವರು ಅನೇಕ ಕಾನೂನು ಪುಸ್ತಕಗಳನ್ನು ರಚಿಸಿರುತ್ತಾರೆ. ಇವರ 'ಹಿಂದೂ ವಾರಸಾ ಕಾನೂನು' ಕೃತಿಗೆ ಕನ್ನಡ ಸಂಸ್ಕೃತಿ ಇಲಾಖೆಯ ಬಹುಮಾನ ಬಂದಿದೆ. ಹಾವೇರಿ ತಾಲೂಕಿನ ಭರಡಿ ಗ್ರಾಮದ ಎಸ್.ಕೆ. ಜೋಗಳೇಕರ (1932) ಅವರು ಜ್ಯೋತಿಷ್ಯಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ರಚಿಸಿರುತ್ತಾರೆ. ವಸಂತ ರಂಗನಾಥ ಮುತಾಲಿಕ ದೇಸಾಯಿ (1933) ಯವರು ಧಾರವಾಡದವರಾಗಿದ್ದು 'ಚಿದಂಬರ ಭಕ್ತಿ ಗೀತೆಗಳು' ಮುಂತಾದ 50 ಕೃತಿಗಳನ್ನು ಬರೆದಿದ್ದಾರೆ. ರೋಣದ ಬಸವರಾಜಪ್ಪ ವೀರಪ್ಪ ಡಂಬಳ (1935) ಕವನಸಂಕಲನ, ಜಾನಪದ ಸಾಹಿತ್ಯ, ಕಾದಂಬರಿಗಳನ್ನು ರಚಿಸಿರುವುದಲ್ಲದೆ ಅನೇಕ ಕಾನೂನು ಪುಸ್ತಕಗಳನ್ನು ಬರೆದಿರುತ್ತಾರೆ. ಹಾವೇರಿಯ ಮುರುಘ ರಾಜೇಂದ್ರ ಮಾಗಾವಿ (1936) ಅವರು 'ಎಲ್ಲಾರೂ ನಮ್ಮವರೇ' ಎಂಬ ಕಥಾ ಸಂಕಲವನ್ನು ಪ್ರಕಟಿಸಿದ್ದಾರೆ. ರೋಣ ತಾಲೂಕು ಅರಹುಣಸಿಯ ಕಲ್ಲಪ್ಪ ಬಾಳಪ್ಪ ಕಂಬಳಿ (1938) ಅವರು ಅನೇಕ ವ್ಯಕ್ತಿಚಿತ್ರಗಳ ಲೇಖಕರು. ಅದೇ ತಾಲೂಕು ನಿಡಗುಂದಿಯ ರಾಜಶೇಖರಯ್ಯಾ ಸಂಗಯ್ಯಾ ಭೂಸನೂರುಮಠ (1938) ಅವರು ವೈಜ್ಞಾನಿಕ ಕಥೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯವನ್ನೊಳಗೊಂಡಂತೆ 60 ಕೃತಿಗಳನ್ನು ರಚಿಸಿರುತ್ತಾರೆ. ಹತ್ತಿಮತ್ತೂರಿನ ಚಂದ್ರಶೇಖರ ಪಾಟೀಲರು (1939) ಅನೇಕ ನಾಟಕಗಳನ್ನೂ ಬರೆದಿದ್ದಾರೆ, 'ಸಂಕ್ರಮಣ' ನಿಯತಕಾಲಿಕೆಯ ಸಂಪಾದಕರು, ಬಂಡಾಯ ಚಳವಳಿಯ ಗಣ್ಯರು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಅದೇ ತಾಲೂಕಿನ ಅಬ್ಬಿಗೇರಿಯ ಗಿರಡ್ಡಿ ಗೋವಿಂದರಾಜ (1939) ಅವರು ಕವನ, ಕಥಾ ಸಂಕಲನ, ವಿಮರ್ಶೆ, ರಂಗಭೂಮಿಯನ್ನು ಕುರಿತಂತೆ ಕೃತಿರಚನೆ ಮಾಡಿರುತ್ತಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ವಿದ್ಯಾವರ್ಧಕ ಸಂಘ, ಮುಂತಾದ ಅನೇಕ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿವೆ. ರೋಣ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇದೇ ತಾಲೂಕಿನ ಅಯ್ಯಪಯ್ಯ ಸಿದ್ದಯ್ಯ ಹಿರೇಮಠ (1939) ಇವರು ಅನೇಕ ಕೃತಿಗಳ ರಚನಕಾರರು ಹಾಗೂ ಸಂಪಾದಕರಾಗಿದ್ದಾರೆ. ಇದೇ ತಾಲೂಕಿನ ಅಬ್ಬಿಗೇರಿಯ ಸೋಮಶೇಖರ ಇಮ್ರಾಪುರ (1940) ಅವರು ಜಾನಪದ, ಕಾವ್ಯ, ವಿಮರ್ಶೆ ಕುರಿತಂತೆ ಸುಮಾರು 20 ಪುಸ್ತಕಗಳನ್ನು ಬರೆದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ವಿದ್ಯಾವರ್ಧಕ ಸಂಘದ ಪ್ರಶಸ್ತಿಗಳು ಇವರಿಗೆ ಬಂದಿವೆ. ಅದೇ ತಾಲೂಕಿನ ಬೆಳವಣಿಕೆಯ ಗಡಾದ ರಾಜೇಂದ್ರ (ಸು. 1940) ಕವಿಗಳಾಗಿದ್ದು ಕವನ ಸಂಕಲನಗಳನ್ನು ತಂದಿರುತ್ತಾರೆ. ಇದೇ ತಾಲೂಕಿನ ಗೋಗೇರಿಯ ಮಹಮ್ಮದ್ಅಲಿ ದಸ್ತಗೀರ್ ಗೋಗೇರಿ (1942) ಅವರು ಅನೇಕ ಕವನ ಸಂಕಲನ ಹಾಗೂ ನಾಟಕಗಳನ್ನು ಬರೆದಿದ್ದಾರೆ.

ಎಂ. ಜೀವನ ಪತ್ರಕರ್ತರೂ ನಾಟಕಕಾರರೂ ಕಾದಂಬರಿಕಾರರೂ ಆಗಿ ಖ್ಯಾತರು. ಹಾವೇರಿಯ ಗಂಗಾಧರ ಮಲ್ಲಿಕಾರ್ಜುನಪ್ಪ ನಂದಿ (1944) ಅವರು ಸುಮಾರು 15 ಕೃತಿಗಳನ್ನು ರಚಿಸಿರುತ್ತಾರೆ. ಅದೇ ತಾಲೂಕಿನ ಸರ್ಜಾಪುರದ ಬಸಪ್ಪ ಭೀಮಪ್ಪ ನಾಗನೂರ (1944) ಅವರು ಮಕ್ಕಳ ಸಾಹಿತ್ಯದ ಮೂರು ಕವನ ಸಂಕಲನ ಪ್ರಕಟಿಸಿರುತ್ತಾರೆ. ಹೊಳೆಮಣ್ಣೂರಿನ ಕೃಷ್ಣ ಗುರುನಾಥ ಜೋಶಿ (1944) ಇವರು ಸಮಾಜ ಶಾಸ್ತ್ರದ ಮೇಲೆ ಪುಸ್ತಕಗಳನ್ನು ಬರೆದಿದ್ದಾರೆ.

ಶಿರಹಟ್ಟಿ ತಾಲೂಕಿನ ಬಟ್ಟೂರು ಗ್ರಾಮದ ವೀರಭದ್ರಪ್ಪ ಶಿವಬಸಪ್ಪ ಕಾಶೆಟ್ಟಿ (1946) ಇವರ ಕವನ ಸಂಕಲನಗಳು ಪ್ರಕಟವಾಗಿವೆ. ಗಜೇಂದ್ರಗಡದ ಎಚ್ಚರಪ್ಪಯ್ಯಸ್ವಾಮಿ (1947-1979) ಇವರು ಎಚ್ಚರಸ್ವಾಮಿ ಸುಪ್ರಭಾತ ಮತ್ತು ಭಜನಾ ಪದಗಳನ್ನು ಬರೆದಿದ್ದಾರೆ. ಇದೇ ತಾಲೂಕು ಜಕ್ಕಲಿ ಗ್ರಾಮದ ಲೋಕನಗೌಡ ವೆಂಕನಗೌಡ ಪಾಟೀಲ (1948) ಇವರು ಸಾಹಿತ್ಯ ಹಾಗೂ ಸಂಶೋಧನೆ ಮೇಲೆ ಕೃತಿಗಳನ್ನು ರಚಿಸಿದ್ದಾರೆ. ಹಾವೇರಿಯ ಜಿ.ಎಸ್. ಕರಬಸವಗೌಡರ್ (1951) 'ಬದುಕಿನ ಚಿತ್ರಗಳು' ಕಥಾಸಂಕಲನವನ್ನು ಹೊರತಂದಿದ್ದಾರೆ. ಧಾರವಾಡದ ಸತೀಶಕುಲಕರ್ಣಿ (1951) ಎರಡು ಕವನ ಸಂಗ್ರಹ ಹಾಗೂ ಸಂಪಾದಿತ ಕೃತಿಗಳ ಕರ್ತೃವಾಗಿದ್ದಾರೆ. ರೋಣ ತಾಲೂಕಿನ ಹಿರೇ ಅಳಗುಂಡಿಯ ಅಳಗುಂಡಿ ಅನ್ನದಾನಯ್ಯ (1953) 'ಆಕಾಂಕ್ಷಾ' ಕವನ ಸಂಕಲನವನ್ನೂ ಅದೇ ತಾಲೂಕಿನ ಸವಡಿಯ ದೊಡ್ಡಣ್ಣವರ ಶಂಕರಣ್ಣ (1953) ಕಾದಂಬರಿ ಹಾಗೂ ಕವನಗಳನ್ನು ಬರೆದಿದ್ದಾರೆ. ಹುಲ್ಲೂರಿನ ಎಂ.ಬಿ. ಅಡ್ನೂರು (1954) ಅವರು 'ಕಣ್ಣಾಗಲಿಸದೇ ಕೇಳು ಗೆಳೆಯಾ' ಕವನ ಸಂಕಲನ ತಂದಿದ್ದಾರೆ. ರೋಣ ತಾಲೂಕಿನ ಮಲ್ಲಾಪುರದ ಮಹಾಂತೇಶ ಮಲ್ಲನಗೌಡರು (1954) ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ಹಿರೇಹಾಳದ ಜಿ. ಶೌಕತ್ ಅಲಿ (1954) ಅವರು ದುರುಗಮುರುಗಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ವಸಂತ ಕುಲಕರ್ಣಿ, 'ಕುವರ ಹಿರೇಹಾಳ' ಎಂಬ ಹೆಸರಿನಿಂದ ಕವನಗಳನ್ನು ರಚಿಸಿದ್ದಾರೆ.

ಯಾವಗಲ್ಲಿನ ಯಲ್ಲಪ್ಪ ಹಲಕುರ್ಕಿ (1954) ಅನೇಕ ಕೃತಿಗಳನ್ನು ಬರೆದಿದ್ದು 'ಯಲ್ಲೇಶಪ್ರಿಯ ಯಾವಗಲ್ ವೀರಭದ್ರೇಶ್ವರ' ಅಂಕಿತದಲ್ಲಿ ಅನೇಕ ವಚನಗಳನ್ನು ಬರೆದಿದ್ದಾರೆ. ಗದಗ ತಾಲೂಕಿನ ಹರಲಾಪುರದ ಬಿ.ಎಸ್. ಪತ್ತಾರ (1955) ಅವರು ಉಲ್ಲೇಖನೀಯ ಬರಹಗಾರರು. ರೋಣ ತಾಲೂಕು ಸವಡಿ ಗ್ರಾಮದ ಚಿಕ್ಕನರಗುಂದ ಸಂಗಮೇಶ (1956) ಅವರು ಅನೇಕ ಕೃತಿಗಳನ್ನು ಬರೆದಿದ್ದಾರೆ. ಬಂಕಾಪುರದ ವೈದ್ಯ ಎಂ.ಬಿ. ಕುಲಕರ್ಣಿ (1962) ಅವರು 'ಆಯುರ್ವೇದ ಮತ್ತು ಆರೋಗ್ಯ'ವೆಂಬ ಕೃತಿಯನ್ನು ಬರೆದಿದ್ದಾರೆ. ರೋಣ ತಾಲೂಕಿನ ಗಾಡಗೋಳಿಯ ಶಿವಯೋಗಿ ಬಸಪ್ಪ ಸುರೇಬಾನ (1963) ಇವರು ಸುಪರಿಚಿತ ಬರಹಗಾರರು. ಹಾವೇರಿಯ ಜಿ.ಎಂ. ಕುಲಕರ್ಣಿ (1964) ಇವರು 'ಕತ್ತಲಲ್ಲಿ ಖಾಲಿತಟ್ಟೆ ಹಿಡಿದವರು' ಎಂಬ ಕವನ ಸಂಕಲನ ಹೊರತಂದಿದ್ದಾರೆ. ರಾಣೆಬೆನ್ನೂರಿನ ಮಹಾದೇವ ಬಣಕಾರ ಗಣ್ಯ ಕವಿಗಳಾಗಿದ್ದು ವಚನಗಳನ್ನು ಷಟ್ಪದಿ ಶೈಲಿಯ ಕಾವ್ಯಗಳನ್ನು ಬರೆದಿದ್ದಾರೆ. ಗ.ಸ. ಹಾಲಪ್ಪ, ಪಾಟೀಲ ಪುಟ್ಟಪ್ಪ, ಕೆ.ಎಸ್. ದೇಶಪಾಂಡೆ, ಎಚ್.ವಿ. ನಾಗೇಶ, ಸದಾನಂದ ಕನವಳ್ಳಿ, ಶಿವಾನಂದ ಗುಬ್ಬಣ್ಣನವರ, ಎಸ್.ಎ. ಪಾಟೀಲ, ಎಂ.ಎಸ್. ರಾಜಶೇಖರಯ್ಯ, ಮೇಟಿ ಮುಂತಾದ ಸಮಾಜಶಾಸ್ತ್ರಜ್ಞರ ಬರಹಗಳೂ ಉಲ್ಲೇಖನೀಯ.

ನಾಟಕರಂಗದಲ್ಲಿ ತಮ್ಮದೇ ಪ್ರಯೋಗಗಳಿಂದ ಖ್ಯಾತರಾದ ಶ್ರೀರಂಗರ ಪ್ರತಿಭೆ ಅರಳಿದ್ದು ಧಾರವಾಡದಲ್ಲಿಯೇ. ಅವರು ವಿಜಾಪುರ ಜಿಲ್ಲೆಯ ಅಗರಖೇಡದವರು. 'ಹರಿಜನ್ವಾರ' ಮುಂತಾದ ಅವರ ಕೃತಿಗಳು ಇಲ್ಲೇ ಪ್ರಯೋಗ ಕಂಡವು. ಇವರು ಕಾದಂಬರಿಕಾರರೂ ವಿಮರ್ಶಕರು ಆಗಿ ಖ್ಯಾತನಾಮರು. ಬೆಳಗಾವಿ ಜಿಲ್ಲೆಯ ಬೆಟಗೇರಿಯ ಕೃಷ್ಣಶರ್ಮರು ಕತೆಗಾರರಾಗಿ, ಕಾದಂಬರಿಕಾರರಾಗಿ, ಪತ್ರಿಕಾಕರ್ತರಾಗಿ ಪ್ರಸಿದ್ಧರು. ಅಗ್ರಗಣ್ಯ ಸಂಶೋಧಕ, ವಿಮರ್ಶಕ ಹಾಗೂ ಶಾಸನತಜ್ಞ ಎಂ.ಎಂ. ಕಲಬುರ್ಗಿ, ವಿಜಾಪುರ ಜಿಲ್ಲೆಯ ಸಿಂದಗಿಯವರು. ಖ್ಯಾತ ಇತಿಹಾಸಕಾರರಾಗಿ ಮುಂಬೈಯಲ್ಲಿ ನೆಲೆಸಿದ್ದ ಸಿ.ಎಂ. ಕುಲಕರ್ಣಿ ಧಾರವಾಡ ಜಿಲ್ಲೆಯವರು. 'ಚಿದಂಬರಾನಂದ' ಎಂಬ ಕಾವ್ಯನಾಮದ ಸಿ.ಎಸ್. ಕುಲಕರ್ಣಿ ಧಾರವಾಡದಲ್ಲಿ ಅಧ್ಯಾಪಕರಾಗಿದ್ದರು. ಉತ್ತರ ಕನ್ನಡದ ಶಾಂತಿನಾಥ ದೇಸಾಯಿ ಗಣ್ಯ ಸಾಹಿತಿಗಳು, ನಾಟಕಕಾರರು ಹಾಗೂ ವಿಮರ್ಶಕರು. ಬಾಗಲಕೋಟೆಯಿಂದ ಬಂದು ಧಾರವಾಡದಲ್ಲಿ ನೆಲೆಸಿದ ರಾ.ಯ. ಧಾರವಾಡಕರೂ ಗಣ್ಯ ವಿಮರ್ಶಕ, ಲೇಖಕ ಹಾಗೂ ವಿದ್ವಾಂಸ. ಬೆಂಗಳೂರಲ್ಲಿ ನೆಲೆಸಿದ ನಾರಾಯಣ ಮಹಿಷಿ ವಿಜ್ಞಾನ ಬರಹಗಾರರು. ಎಂ.ಎಸ್. ವೃಷಭೇಂದ್ರಸ್ವಾಮಿ ಖ್ಯಾತ ಲೇಖಕರು ಹಾಗೂ ವಿಮರ್ಶಕರು.

**ಲೇಖಕಿಯರು :** ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಅನೇಕ ವಚನಕಾರ್ತಿಯರನ್ನು ಗುರುತಿಸಿದರೂ ಅನಂತರ ಬಹುಕಾಲ ಮಹಿಳೆಯರ ಬರಹಗಳು ಕಾಣೆಸವು. ಅಲ್ಲಲ್ಲಿ ಅಪರೂಪಕ್ಕೆ ಒಬ್ಬೊಬ್ಬ ಲೇಖಕಿ ಕಂಡು ಬಂದರೂ ಆಕೆಯ ಪ್ರಭಾವಗೌಣ. ಲಕ್ಕುಂಡಿಯಲ್ಲಿ ನೆಲಸಿ ರನ್ನನಂತಹ ಕವಿಗೆ ಪ್ರೋತ್ಸಾಹ ನೀಡಿ, ಪೊನ್ನನ ಶಾಂತಿ ಪುರಾಣವನ್ನು ಅನೇಕ ಸಂಖ್ಯೆಯಲ್ಲಿ ಪ್ರತಿ ಮಾಡಿ

ಹಂಚಿದ ಲಕ್ಕುಂಡಿಯ ಅತ್ತಿಮಬ್ಬೆ ಯಾವುದೇ ಗ್ರಂಥವನ್ನು ಬರೆದಿಲ್ಲ, ಇದೇ ಊರಿನಲ್ಲಿದ್ದ ಮುಕ್ತಾಯಕ್ಕ ಈ ಜಿಲ್ಲೆಯ ಮೊದಲ ವಚನಕಾರ್ತಿಯಾಗಿ ಕಾಣಬರುತ್ತಾಳೆ. 'ಅಜಗಣ್ಣತಂದೆ'ಯೆಂಬ ಹೆಸರಿನಲ್ಲಿ ಅನೇಕ ವಚನಗಳನ್ನು ಬರೆದಿದ್ದಾಳೆ. ಮುಂದೆ ಹೆಳವನಕಟ್ಟೆ ಗಿರಿಯಮ್ಮ ಹೆಸರಾಂತ ಕವಯತ್ರಿಯಾಗಿ ಈ ಭಾಗದಲ್ಲಿ ಕಾಣಿಸಿಕೊಂಡು 'ಚಂದ್ರಹಾಸನ ಕಥೆ' ಮುಂತಾದ ಗ್ರಂಥಗಳನ್ನು ಬರೆದಿರುವಳಲ್ಲದೆ ಹೆಳವನಕಟ್ಟೆ ರಂಗನಾಥನ ಮೇಲೆ ಅನೇಕ ಹಾಡುಗಳನ್ನು ಬರೆದಿದ್ದಾಳೆ. ಇಂತಹ ಕೆಲವು ಉದಾಹರಣೆಗಳನ್ನು ಬಿಟ್ಟರೆ ಸ್ತ್ರೀಯರು ಕಾವ್ಯಗಳನ್ನು ರಚಿಸಿದ್ದು ಇಲ್ಲವೆಂದರೂ ತೀರಿತು.

20ನೇ ಶತಮಾನದ ಆದಿಭಾಗದಲ್ಲಿ ಸರ್ಕಾರಿ ನೌಕರಿ, ಜಾಗೃತ ವ್ಯಕ್ತಿತ್ವ ವಿಕಸನ, ಸ್ವಾತಂತ್ರ್ಯ ಚಳುವಳಿ ಮುಂತಾದ ಕಾರಣಗಳಿಂದ ಸ್ತ್ರೀ ವಿದ್ಯಾರ್ಜನೆ ಕಡೆಗೆ ಹೆಚ್ಚಿನ ಗಮನ ನೀಡಲಾಯಿತು. ಧಾರವಾಡ ಜಿಲ್ಲೆಯಲ್ಲಿ ಇಂದು ನೆಲೆಸಿರುವ ಲೇಖಕಿಯರಲ್ಲಿ ಹೆಚ್ಚಿನವರು ಈ ಜಿಲ್ಲೆಗೆ ಸೊಸೆಯರಾಗಿ ಬಂದವರು. ಸುನಂದಾ ಬೆಳಗಾಂವಕರ ನವೋದಯ ಯುಗದ ಖ್ಯಾತ ಲೇಖಕಿ. ಶಾಂತಾದೇವಿ ಮಾಳವಾಡ ಅನೇಕ ಕೃತಿಗಳ ಲೇಖಕಿ. ಗೀತಾ ಕುಲಕರ್ಣಿ ಪ್ರಸಿದ್ಧ ಕಾದಂಬರಿಕಾರ್ತಿ ಅಕಾಡೆಮಿಯ ಪ್ರಶಸ್ತಿ ಪಡೆದವರು.

ಧಾರವಾಡದ ಚಂಪಾವತಿ ಮಹಿಷಿಯವರು ಕಥಾ ಸಂಕಲನ ಹಾಗೂ ನೀಳ್ಗತೆಗಳನ್ನು ಬರೆದಿದ್ದಾರೆ. ಶಾರದಾಗೋಕಾಕ್ ಅವರು ಎರಡು ಕವನ ಸಂಕಲನ ಹಾಗೂ ಒಂದು ಜೀವನ ಚರಿತ್ರೆ ರಚಿಸಿರುತ್ತಾರೆ. ಧಾರವಾಡದ ಸರೋಜಿನಿ ಮಹಿಷಿಯವರು ರಾಜಕೀಯ ಹಾಗೂ ಸಾಹಿತ್ಯ ಕ್ಷೇತ್ರಗಳೆರಡರಲ್ಲು ಸಲ್ಲುವವರಾಗಿದ್ದು ಸುಮಾರು 13 ಕೃತಿಯನ್ನು ಬರೆದಿದ್ದು ಮಂಕುತಿಮ್ಮನ ಕಗ್ಗವನ್ನು ಹಿಂದಿಗೆ ಅನುವಾದಿಸಿದ್ದಾರೆ. ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದಿರುತ್ತಾರೆ. ಹಾವೇರಿಯ ಆಶಾಲತಾಯಾದವಾಡ 'ನವ ವಿವಾಹ'ವೆಂಬ ಕಾದಂಬರಿ ಸಹಿತ ಅನೇಕ ಕೃತಿರಚಿಸಿದ್ದು ಇಂಗ್ಲೀಷಿನಲ್ಲಿಯೂ ಪುಸ್ತಕ ಬರೆದಿದ್ದಾರೆ. ಧಾರವಾಡದ ಶಾಂತಾ ಯೋಗೀಶ ಯಾಡ್ರಾಮಿಯವರು ಕಾದಂಬರಿ ಹಾಗೂ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ವಿಮಲಾ ಚನ್ನಬಸಪ್ಪ ಕೆಂಕೆರೆಮಠ ಅವರು ಚಿತ್ರಕಲೆ, ಭರತನಾಟ್ಯಗಳನ್ನು ಕುರಿತು ಮೂರು ಪುಸ್ತಕಗಳನ್ನು ಬರೆದಿದ್ದಾರೆ. ಅವರು ಕವಯಿತ್ರಿಯೂ ಹೌದು. ಧಾರವಾಡದ ವೀಣಾ ಶಾಂತೇಶ್ವರ ಅವರು ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ಇವರು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿವಿಜೇತೆ. ಮಾಲತಿ ಪಟ್ಟಣಶೆಟ್ಟಿ ಕವಯಿತ್ರಿ ಹಾಗೂ ವಿಮರ್ಶಕಿ. ಸರೋಜಿನಿ ಶಿಂತ್ರಿ ಇಂಗ್ಲೀಷ್, ಕನ್ನಡಗಳಲ್ಲಿ ಕೃತಿರಚನೆ ಮಾಡಿದ್ದಾರೆ. ಈಗ ಬೆಂಗಳೂರಿನಲ್ಲಿ ನೆಲೆಸಿರುವ ವನಮಾಲಾ ಆಚಾರ್ಯ ಕತೆಗಾರ್ತಿ ಹಾಗೂ ವಿಮರ್ಶಕಿ. ಲೀಲಾ ಶಾಂತಕುಮಾರಿ ಪ್ರಸಿದ್ಧ ಇತಿಹಾಸ ಸಂಶೋಧಕಿ. ಶಿಗ್ಗಾಂವಿಯ ಸುಧಾ ನಾರಾಯಣಮೂರ್ತಿಯವರು ಪ್ರವಾಸ ಕಥನ ಹಾಗೂ ಕಾದಂಬರಿಗಳನ್ನು ಬರೆದಿದ್ದಾರೆ. ಗದಗಿನ ಲೀಲಾ ಗರಡಿಯವರು ಕವನ ಸಂಕಲನವೊಂದನ್ನು ತಂದಿರುವುದರ ಜೊತೆಗೆ ಕನ್ನಡದಿಂದ ಹಿಂದಿಗೆ ಭಾಷಾಂತರ ಮಾಡಿರುತ್ತಾರೆ. ಧಾರವಾಡದ ಹೇಮಾ ಪಟ್ಟಣ ಶೆಟ್ಟಿಯವರು ಕವನ ಸಂಕಲನ, ನಾಟಕ, ವ್ಯಕ್ತಿ ಚಿತ್ರ ಹಾಗೂ ಕಥಾಸಂಕಲನಗಳನ್ನು ತಂದಿರುತ್ತಾರೆ. ಧಾರವಾಡದ ದಾಕ್ಷಾಯಣಿ ಹಿರೇಮಠ ಅವರು 'ಸಂಗೀತ' ಎಂಬ ಕಾದಂಬರಿ ಬರೆದಿದ್ದಾರೆ. ಅದೇ ಊರಿನ ಲತಾ ಗುತ್ತಿ ಎಂಬುವವರು 'ವರ್ತಮಾನ'ವೆಂಬ ಕವನ ಸಂಕಲನ ಹೊರತಂದಿರುತ್ತಾರೆ. ರುದ್ರಾಪುರ ಸರೋಜಿನಿ ಚವಲಾರ ಅವರು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದಂತೆ ಕೃತಿಗಳ ರಚನೆ ಮಾಡಿರುತ್ತಾರೆ. ರಾಣೆಬೆನ್ನೂರು ತಾಲೂಕಿನ ಕುಲಶೇಖರಿಯವರು ಕವಯಿತ್ರಿ ಹಾಗೂ ಅನೇಕ ಕೃತಿಗಳನ್ನು ಬರೆದಿದ್ದಾರೆ. ನವಲಗುಂದದ ಲಲಿತಾ ಕೆರಿಮನಿಯವರು 'ಮಹಾತಾಶ್ರೀಶರೀಫರು' ಎಂಬ ಕೃತಿ ರಚಿಸಿದ್ದಾರೆ. ಧಾರವಾಡದ ಲೀಲಾ ಕಲಕೋಟಿಯವರು ಮೂರು ಕವನಸಂಕಲನಗಳನ್ನು ತಂದಿದ್ದಾರೆ. ಇವರಲ್ಲದೆ ಹಾವೇರಿ ತಾಲೂಕಿನ 'ಭೀಮೇಶಕೃಷ್ಣ' ಅಂಕಿತದಲ್ಲಿ ಓರ್ವ ಮಹಿಳೆ ದಾಸರ ಪದಗಳನ್ನು ರಚಿಸಿದ್ದಾರೆ. ಧಾರವಾಡದಲ್ಲಿ ಇದ್ದ ಜ್ಯೋತ್ಸ್ನಾ ಕಾಮತ್, ಮಧ್ಯಯುಗೀನ ಸಾಮಾಜಿಕ ಇತಿಹಾಸದ ಮೇಲೆ ಕೃತಿಗಳನ್ನು ಬರೆದಿದ್ದಾರೆ. ಧಾರವಾಡದ ಚೆನ್ನಕ್ಕ ಎಲಿಗಾರ (ಪಾವಟೆ) ಸಂಶೋಧನಾ ಬರಹಗಳಿಗೆ ಹೆಸರಾಗಿದ್ದಾರೆ. ವಸುಂಧರಾ ಫಿಲಿಯೋಜಾ ಅವರು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ಬರೆದಿದ್ದಾರೆ. ಶಾಂತಾದೇವಿ ಕಣವಿ ಕತೆ, ಲಲಿತ ಪ್ರಬಂಧಗಳಿಂದ ಪ್ರಸಿದ್ಧರಾಗಿದ್ದಾರೆ. ಇವಲ್ಲದೆ ಶಿರಸಿಯ ಶಾಲಿನಿ ರಘುನಾಥ, ಬಾಗಲಕೋಟೆಯ ಸಂಗವ್ವ ಕರವೀರಶೆಟ್ಟರ್, ಬಾಗಲಕೋಟೆಯ ಶಿವಲಿಂಗಮ್ಮಶೆಟ್ಟಿ, ಸೊಲ್ಲಾಪುರದ ಶೀಲಾ ಟೆಂಗಿನಕಾಯಿ, ಮುದ್ದೇಬಿಹಾಳದ ಶಾಂತಾ ಇಮ್ರಾಪುರ, ಸಿರಸಿ ತಾಲೂಕಿನ ಜಯಶ್ರೀ ಬಿ.ಬೆಳದಲದವರ, ದಾವಣಗೆರೆಯ ಪಿ. ಪಾರ್ವತಮ್ಮ, ಕೊಟ್ಟೂರಿನ ಸುಕನ್ಯಾಮಾರುತಿ, ಈ ಜಿಲ್ಲೆಯಲ್ಲಿ ನೆಲೆಸಿದ ಖ್ಯಾತ ಬರಹಗಾರ್ತಿಯರು.

## ಮುದ್ರಣ ಹಾಗೂ ಪ್ರಕಾಶನ

ಧಾರವಾಡ ಜಿಲ್ಲೆಯಲ್ಲಿ ಕನ್ನಡ ಮುದ್ರಣವು ಸು. 1850 ರ ನಂತರ ಪ್ರಾರಂಭವಾದಂತೆ ತಿಳಿಯುತ್ತದೆ. ಕ್ರಿ.ಶ. 1860 ರ ಸುಮಾರಿನಲ್ಲಿ ಸವಣೂರಿನಲ್ಲಿ ಸವಣೂರು ಪ್ರೆಸ್ ಮತ್ತು ಜ್ಞಾನಬೋಧಕ ಪ್ರೆಸ್‌ಗಳೆಂಬ ಎರಡು ಕಲ್ಲಚ್ಚಿನ ಮುದ್ರಣ ಶಾಲೆಗಳಿದ್ದವು. ಸವಣೂರು ಪ್ರೆಸ್‌ನಲ್ಲಿ ಪರ್ಶಿಯನ್ ಮುದ್ರಣವೂ, ಜ್ಞಾನಬೋಧಕ ಪ್ರೆಸ್‌ನಲ್ಲಿ ಕನ್ನಡ ಪುಸ್ತಕಗಳ ಮುದ್ರಣವೂ ನಡೆಯುತ್ತಿತ್ತು. 1862 ರ ಹೊತ್ತಿಗೆ ಈ ಪ್ರೆಸ್ಸಿನಲ್ಲಿ 'ಶ್ರೀಕೃಷ್ಣ ಪಾರಿಜಾತ' ದುಂದುಮೆ ಹಾಡಿನ ಪುಸ್ತಕಗಳು, 'ಜೈಮಿನಿ ಭಾರತ', 'ಬಸವ ಪುರಾಣ', 'ಸರ್ವಜ್ಞನ ತ್ರಿಪದಿಗಳು' ನಾಗವರ್ಮನ 'ಛಂದೋಂಬುಧಿ' ಮುಂತಾದ ಗ್ರಂಥಗಳು ಅಚ್ಚಾಗಿವೆ. ಈ ಮುದ್ರಣ ಶಾಲೆ 1865 ರ ಸುಮಾರಿಗೆ ಧಾರವಾಡಕ್ಕೆ ಸ್ಥಳಾಂತರವಾಯಿತು. ಇದರ ಯಜಮಾನ ದುರ್ಗಾಪ್ರಸಾದ ಮಿಸರ ಅವರಾಗಿದ್ದರು. 1860 ರಿಂದ 1867 ರಷ್ಟು ಹೊತ್ತಿಗೆ ಧಾರವಾಡದಲ್ಲಿ ಸನ್ಮಾರ್ಗದರ್ಶಕ, ಜ್ಞಾನವರ್ಧಕ ಮತ್ತು ಜ್ಞಾನಸಾಗರ ಮುಂತಾದ ಕಲ್ಲಚ್ಚಿನ ಮುದ್ರಣ ಶಾಲೆಗಳು ಇದ್ದವು. ಸನ್ಮಾರ್ಗ ದರ್ಶನದಲ್ಲಿ ಮರಾಠಿ ಪುಸ್ತಕಗಳೂ ಅಚ್ಚಾಗುತ್ತಿದ್ದವು. ಗೋವಿಂದ ಪ್ರಭಾಕರ ಜೋಶಿ ಇದರ ಒಡೆಯರಾಗಿದ್ದರು. ಕನ್ನಡದ ಮೊದಲ ಮುದ್ರಿತದ ಹಿಂದೂ ಪಂಚಾಂಗ 1865 ರಲ್ಲಿ ಜ್ಞಾನವರ್ಧಕ ಪ್ರೆಸ್‌ನಲ್ಲಿ ಮುದ್ರಣವಾಯಿತು. ಚಂದ್ರೋದಯ ಮುದ್ರಣಾಲಯವೂ 1866 ರ ಮೊದಲೇ ಇತ್ತು.

ಕಲ್ಲಚ್ಚಿನ ಪ್ರತಿಗಳ ಲಿಪಿ ಒಂದೇ ತೆರನಾಗಿಲ್ಲದಿದ್ದುದರಿಂದ ಇದನ್ನು ಹೋಗಲಾಡಿಸಲು ಅಚ್ಚಿನ ಮೊಳೆಗಳನ್ನು ಜೋಡಿಸಿ ಮುದ್ರಿಸುವ ಸಲುವಾಗಿ ಪ್ರಯತ್ನಗಳು ನಡೆದವು. ಬ್ರಿಟೀಷ್ ಅಧಿಕಾರಿ ರಸೆಲ್ ಅವರ ಬೆಂಬಲದಿಂದ ಸು. 1870 ರ ಸುಮಾರಿಗೆ ವೆಂಕಟ ರಂಗೋ ಕಟ್ಟಿಯವರು ಬೆಳಗಾವಿಯ ಒಬ್ಬ ಕಂಚುಗಾರನ ಸಹಾಯದಿಂದ ಅಚ್ಚಿನ ಮೊಳೆಗಳನ್ನು ಸಿದ್ಧಪಡಿಸಿದರು. ಇದು ಈ ಪ್ರಾಂತ್ಯದ ಮುದ್ರಣ ಶಾಲೆಗಳ ಬೆಳವಣಿಗೆಗೆ ಕಾರಣವಾದುದಲ್ಲದೆ ಅಚ್ಚಿನ ಮೊಳೆಗಳನ್ನು ಸಿದ್ಧಪಡಿಸುವ ಕೇಂದ್ರವಾಯಿತು. ಇಲ್ಲಿಂದ ಮುಂದೆ ಅನೇಕ ಮುದ್ರಣ ಶಾಲೆಗಳು ಆರಂಭವಾಗಿ ಅದೇ ಒಂದು ವೃತ್ತಿಯಾಗಿ ಬೆಳೆಯುವಂತಾಯಿತು.

ಗ್ರಂಥಗಳ ಮುದ್ರಣ ಮತ್ತು ಪ್ರಕಾಶನ ಹೆಚ್ಚಿದಂತೆ ಕ್ರಿ.ಶ. 1867 ರಲ್ಲಿ ಮುಂಬೈ ಪ್ರಾಂತ್ಯದಲ್ಲಿ ಮುದ್ರಣ ಹಾಗೂ ಪುಸ್ತಕಗಳ ಕಾಯಿದೆ ಜಾರಿಗೆ ಬಂತು. ಗ್ರಂಥಗಳ ಮುದ್ರಣ ಮತ್ತು ಮಾರಾಟವೇ ಒಂದು ಉದ್ಯಮವಾದದ್ದರಿಂದ ಅನೇಕರು ಅವರಲ್ಲಿ ಮುಖ್ಯವಾಗಿ ಕಲ್ಯಾಣಪ್ಪ ಮಾದನಶೆಟ್ಟಿ, ಅನಾಡ ಚನ್ನವೀರಪ್ಪ, ಎಸ್.ಎಂ. ಖಾನೋಳಕರ ಮುಂತಾದವರು ಜಾತ್ರೆ, ಸಮ್ಮೇಳನ ಮುಂತಾದ ಕಡೆಗೆ ಹೋಗಿ ಪುಸ್ತಕಗಳ ಮಾರಾಟವನ್ನು ಮಾಡುತ್ತಿದ್ದರು. ಇದು ಆರಂಭದ ಗ್ರಂಥೋದ್ಯಮದ ಬೆಳವಣಿಗೆಗೆ ಕಾರಣವಾಯಿತು. ಪ್ರಾರಂಭದಲ್ಲಿ ಮುದ್ರಣ ಶಾಲೆಗಳನ್ನು ಹೊಂದಿದ್ದವರೇ ಪ್ರಕಾಶಕರೂ ಆಗಿದ್ದರು. ಅನೇಕ ವೇಳೆ ಲೇಖಕರು ತಮ್ಮ ಪುಸ್ತಕಗಳ ಮಾರಾಟದ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದರು. ಗಳಗನಾಥರು ತಮ್ಮ ಪುಸ್ತಕಗಳನ್ನು ಊರೂರಿಗೆ ಹೋಗಿ ತಾವೇ ಮಾರಾಟ ಮಾಡುತ್ತಿದ್ದರು. ಇದು ಒಂದು ಉದಾಹರಣೆ ಅಷ್ಟೆ. ಪುಸ್ತಕ ಮಾರಾಟ ಒಂದು ಲಾಭದಾಯಕ ವ್ಯವಸಾಯವಾಗಿ ಬೆಳೆದ ಮೇಲೆ ಅನೇಕರು ಪುಸ್ತಕದ ಮಳಿಗೆಗಳನ್ನೇ ಪ್ರತ್ಯೇಕವಾಗಿ ತೆರೆದರು. ಇಂದಿಗೂ ಕನ್ನಡ ಸಾಹಿತ್ಯವನ್ನು ಮಾರಾಟ ಮಾಡುವ ಪ್ರಕಟಿಸುವ ಅನೇಕ ಪ್ರತಿಷ್ಠಿತ ಮಳಿಗೆಗಳು ಧಾರವಾಡ ಜಿಲ್ಲೆಯಲ್ಲಿವೆ. ಈ ಪ್ರಕಾಶನ ಸಂಸ್ಥೆಗಳು ಕನ್ನಡ ಪುಸ್ತಕ ಉದ್ಯಮ ಬೆಳೆಯಲು ಕಾರಣವಾಗಿದೆ. ಇದರೊಂದಿಗೆ 1907 ರಲ್ಲಿ ಗ್ರಂಥಕರ್ತರ ಸಮ್ಮೇಳನವೊಂದು ಧಾರವಾಡದಲ್ಲಿ ನಡೆಯಿತು. ಪ್ರತಿಭಾ ಗ್ರಂಥಮಾಲೆ, ಮನೋಹರ ಗ್ರಂಥಮಾಲೆ, ಮಿಂಚಿನಬಳ್ಳಿ, ಸಮಾಜ ಪುಸ್ತಕಾಲಯ 'ಸಾಹಿತ್ಯ ಭಂಡಾರ' ಸಂಕ್ರಮಣ ಪ್ರಕಾಶನ, ಬುರ್ಲಿ ಬಿಂದು ಮಾದವ ಸ್ಮಾರಕ ಪ್ರತಿಷ್ಠಾನದ ಮಿಂಚಿನಬಳ್ಳಿ ಪ್ರಕಾಶನ, ಕರ್ನಾಟಕ ವಿಶ್ವವಿದ್ಯಾಲಯದ ಹಾಗೂ ಕೃಷಿ ವಿಶ್ವವಿದ್ಯಾಲಯ ಪ್ರಕಟಣ ವಿಭಾಗಗಳು, ಮೂರು ಸಾವಿರ ಮಠ ಹಾಗೂ ಗದಗಿನ ತೋಂಟದಾರ್ಯಮಠ, ಲೋಕ ಶಿಕ್ಷಣ ಟ್ರಸ್ಟ್ ಇವೆಲ್ಲ ಜಿಲ್ಲೆಯ ಕೆಲವು ಗಣ್ಯ ಪ್ರಕಾಶನ ಸಂಸ್ಥೆಗಳು. ಮಿಂಚಿನಬಳ್ಳಿಯು ವಿಚಾರಸಾಹಿತ್ಯಕ್ಕೆ ಮೀಸಲಾಗಿ ಬಿಂದುಮಾಧವ ಬುರ್ಲಿಯವರಿಂದ ಆರಂಭವಾಗಿ (1937) ಈಗ ಸುರೇಂದ್ರದಾನಿಯವರ ಸಂಪಾದಕತ್ವದಲ್ಲಿ ಮುಂದುವರೆದಿದೆ. ಗದಗು ರಾಜ್ಯದಲ್ಲೇ ಮುದ್ರಣ ಉದ್ಯಮದಲ್ಲಿ ಅಗ್ರಗಣ್ಯವಾದ ಊರಾಗಿದೆ.

## ಸಂಸ್ಕೃತ ಸಾಹಿತ್ಯ

ಈ ಜಿಲ್ಲೆಯ ಸುಮಾರು 100 ಕ್ಕೂ ಹೆಚ್ಚು ಅಗ್ರಹಾರಗಳು ಸಂಸ್ಕೃತ ಪಾಂಡಿತ್ಯಕ್ಕೆ ಹೆಸರಾಗಿದ್ದವು. ಆದರೂ ಸಂಸ್ಕೃತದಲ್ಲಿ ಕಾವ್ಯ ರಚಿಸಿರುವವರ ಸಂಖ್ಯೆ ಕಡಿಮೆ. ಸಂಸ್ಕೃತದಲ್ಲಿ ವಿದ್ವಾಂಸರಾದವರು ಕನ್ನಡದಲ್ಲಿಯೂ ವಿದ್ವಾಂಸರಾಗಿದ್ದು ಉಭಯ ಭಾಷೆಗಳಲ್ಲಿ ಕಾವ್ಯರಚನೆ ಮಾಡಿರುತ್ತಾರೆ. ಸಂಸ್ಕೃತ ಭಾಷೆಯ ಗ್ರಂಥಗಳನ್ನು ಕನ್ನಡದ ಟೀಕು ಅಥವಾ ಅನುವಾದದೊಂದಿಗೆ ಸಂಪಾದಿಸಿರುತ್ತಾರೆ.

ಇಂತಹ ಸಂದರ್ಭಗಳಲ್ಲಿ ಈ ಗ್ರಂಥಗಳ ಲಿಪಿ ಕನ್ನಡವೇ ಆಗಿರುತ್ತದೆ. ಅನೇಕ ಶಾಸನ ರಚಕರು ಉಭಯ ಭಾಷೆಯನ್ನು ಶಾಸನಗಳಲ್ಲಿ ಬಳಸಿರುತ್ತಾರೆ. ಸಂಸ್ಕೃತ ಭಾಷೆಯ ಮೊಟ್ಟ ಮೊದಲ ಶಾಸನವು ಕದಂಬರದಾಗಿದ್ದು ಅದು ಸಂಸ್ಕೃತ ಭಾಷೆಯವಾಗಿದೆ. ಬಂಕಾಪುರದಲ್ಲಿದ್ದ ಜಿನಸೇನಾಚಾರ್ಯರು ಸಂಸ್ಕೃತದಲ್ಲಿ 'ಮಹಾಪುರಾಣ'ವನ್ನು ರಚಿಸಿದರು. ಚೌಡದಾನಪುರದಮಠದ ಸ್ವಾಮಿಗಳಾದ ವಿರೂಪಾಕ್ಷ ಒಡೆಯರು ಸಂಸ್ಕೃತದಲ್ಲಿ ಅಪ್ರತಿಮ ವಿದ್ವಾಂಸರಾಗಿದ್ದರು. ಕಲಕತ್ತ ವಿಶ್ವವಿದ್ಯಾಲಯದಿಂದ ಸುವರ್ಣ ಪದಕ ಪಡೆದು 'ವೇದತೀರ್ಥ' ಪದವಿ ಪಡೆದರು. ಹೊಳೆ ಆಲೂರು ತಾಲೂಕು ಆಚಾರ್ಯಕೊಪ್ಪದ ಖ್ಯಾತ ಶಾಸನ ತಜ್ಞ ಆರ್.ಎಸ್. ಪಂಚಮುಖಿಯವರು ಖ್ಯಾತ ವಿದ್ವಾಂಸರಾಗಿದ್ದು ಅನೇಕ ಕೃತಿಗಳ ರಚನೆ ಮಾಡಿದ್ದಾರೆ. 'ಶ್ರೀ ರಾಘವೇಂದ್ರ ಗುರು ಸಾರ್ವಭೌಮ ಸಪ್ತ ರಾತ್ರ್ಯೋತ್ಸವ ಚಂಪು' ಎಂಬ ಕೃತಿಗೆ ಕಾಶಿ ವಿದ್ಯಾಪೀಠವು ಇವರಿಗೆ 'ಮಹಾಮಹಿಮೋಪಾಧ್ಯಾಯ' ಎಂಬ ಬಿರುದನ್ನಿತ್ತಿದೆ.

ಗದಗಿನ ಜಾಲಿಹಾಳ್ ಕೇಶವಾಚಾರ್ಯರು ಮಾಧ್ವಸಿದ್ಧಾಂತಕ್ಕೆ ಸಂಬಂಧಿಸಿದಂತೆ ಸುಮಾರು ಐದು ಕೃತಿಗಳನ್ನು ರಚಿಸಿರುತ್ತಾರೆ. ಜಾಲಿಹಾಳ್ ಶ್ರೀನಿವಾಸರಾಯರು ಅನೇಕ ಕೃತಿಗಳನ್ನು ರಚಿಸಿರುತ್ತಾರೆ. ಕಟ್ಟಿಮಾಧವಾಚಾರ್ಯರು ತಿರುಪತಿಯ ಮಾಧ್ವಸಿದ್ಧಾಂತದ ಸಭೆಯ ಉಪಾಧ್ಯಕ್ಷರಾಗಿದ್ದರು. ಕನ್ನಡ, ಸಂಸ್ಕೃತ, ಇಂಗ್ಲೀಷಿನಲ್ಲಿ ಅನೇಕ ಕೃತಿಗಳನ್ನು ರಚಿಸಿರುತ್ತಾರೆ. ಮಂಗಳವೇಡೆ ಬಾಳಾಚಾರ್ಯರು ಕನ್ನಡ ಹಾಗೂ ಸಂಸ್ಕೃತಗಳಲ್ಲಿ ಕಾವ್ಯ ರಚಿಸಿದ್ದು ಇವರಿಗೆ ಅನೇಕ ಪುರಸ್ಕಾರಗಳು ಬಂದಿವೆ. ತುಮ್ಮಿನಕಟ್ಟಿಯ ಕೆ.ಟಿ. ಪಾಂಡುರಂಗಿಯವರು ಸಂಸ್ಕೃತ, ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಕೃತಿರಚನೆ ಮಾಡಿರುತ್ತಾರೆ. ಅನೇಕ ಪುರಸ್ಕಾರಗಳನ್ನು ಇವರು ಪಡೆದಿರುತ್ತಾರೆ. ಗದಗಿನ ಪಂಡರಿನಾಥಾಚಾರ್ಯ ಗಲಗಲಿ ಅವರು 'ಮಧುರವಾಣಿ' ಎಂಬ ಸಂಸ್ಕೃತ ನಿಯತಕಾಲಿಕವನ್ನು ನಡೆಸುತ್ತಿದ್ದು ಅವರ 'ಶ್ರೀ ಶಂಭುಲಿಂಗೇಶ್ವರ ವಿಜಯ ಚಂಪೂ' ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಸಂದಿದೆ. ಎನ್.ಸಿ. ನಂದೀಮಠರು 'ನಿರುಕ್ತ'ದಲ್ಲಿ ಗಣ್ಯ ವಿದ್ವಾಂಸರು.

## ಮರಾಠಿ ಸಾಹಿತ್ಯ

ಕರ್ನಾಟಕದಲ್ಲಿ ಮರಾಠಿಗರು ಬಹು ಹಿಂದಿನಿಂದಲೂ ಬಂದು ನೆಲೆಸಿದ್ದರೂ ಅವರನ್ನು 'ಆರೇರು' ಎಂದು ಕರೆಯುತ್ತಿದ್ದರು. ದೇವಗಿರಿಯ ಸೇಉಣರ ಕಾಲದಲ್ಲಿ ಮರಾಠಿ (ಆರೇರ) ಅಧಿಕಾರಿಗಳು ಜಿಲ್ಲೆಯಲ್ಲಿ ಇದ್ದರೂ ಆಡಳಿತ ಕನ್ನಡದಲ್ಲಿ ಸಾಗಿತ್ತು. ಇವರು ಇಲ್ಲಿ ಸಾಹಿತ್ಯ ಸೃಷ್ಟಿ ಅಷ್ಟಾಗಿ ಮಾಡಿಲ್ಲ. ಸ್ಥಳೀಯರೊಂದಿಗೆ ಬೆರೆತು ಅಲ್ಲಿನ ಸಾಂಸ್ಕೃತಿಕ ಜೀವನದೊಂದಿಗೆ ತಮ್ಮನ್ನು ಬೆರೆಸಿಕೊಂಡರು. ಬಿಜಾಪುರ ಸುಲ್ತಾನರ ಕಾಲದಲ್ಲಿ ಅವರ ಸೈನ್ಯದಲ್ಲಿದ್ದ ಮರಾಠಿಗರ ವಲಸೆ ದಕ್ಷಿಣದ ಕಡೆಗೆ ಹೆಚ್ಚಿಗೆ ಬರಲಾರಂಭಿಸಿತು. ಪುಣೆ ಮುಂತಾದ ಕಡೆಯ ಮರಾಠಿ ಜನ ದಕ್ಷಿಣ ಪ್ರಾಂತ್ಯಗಳನ್ನು ಗೆಲ್ಲುವಾಗ ಸೈನ್ಯದೊಂದಿಗೆ ಬಂದವರು ಅನೇಕರು ಮರಳಿ ಹೋಗಲಿಲ್ಲ; ಅನುಕೂಲವಾದ ಸ್ಥಳಗಳಲ್ಲಿ ನೆಲೆನಿಂತರು. 1753ರಲ್ಲಿ ಪೇಶ್ವೆಯು ಧಾರವಾಡ ಗೆದ್ದ ಮೇಲೆ ಈ ಸಂಪರ್ಕ ಬಲವಾಯಿತು. ಮರಾಠರ ನಂತರ ಬಂದ ಬ್ರಿಟಿಷರ ಕಾಲದಲ್ಲಿ ಕೆಲವು ತುಂಡರಸರು ಮರಾಠರೇ ಆಗಿದ್ದು ಮರಾಠಿಗರಿಗೆ ಹಾಗೂ ಭಾಷೆಗೆ, ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದರು.

ಆದರೆ, 16ನೇಯ ಶತಮಾನದಲ್ಲಿ ಡಂಬಳದ ಮುಕ್ತೇಶ್ವರ ಎಂಬ ಕವಿ (ಇವನು ಸಂತ ಏಕನಾಥರ ಮೊಮ್ಮಗ) ಮರಾಠಿಯಲ್ಲಿ ಭಾರತಕತೆಯನ್ನು ಬರೆದ. 18 ನೇಯ ಶತಮಾನದ ಸುಮಾರಿಗೆ ಚಂದ್ರಾತ್ಮಜರುದ್ರ ಎಂಬಾತನು ಕುಮಾರವ್ಯಾಸನ ಭಾರತವನ್ನು ಮರಾಠಿಗೆ ಭಾಷಾಂತರಿಸಿದ. ಹೀಗಿದ್ದರೂ ಬ್ರಿಟಿಷ್‌ರ ಆಗಮನಾನಂತರವೂ ಅವರ ಪ್ರದೇಶಗಳಲ್ಲೂ ಮರಾಠಿ ಪ್ರಾಬಲ್ಯ ಮುಂದುವರಿಯಿತು. ಧಾರವಾಡದಿಂದ ಹೊರಟ 'ಧಾರವಾಡ ವೃತ್ತ' ಮತ್ತು 'ಛಾವಾ'ಯೆಂಬ ಎರಡು ಮೊದಲ ಪತ್ರಿಕೆಗಳೂ ಮರಾಠಿಯಲ್ಲೇ ಇದ್ದವು. ಶೇಷಗಿರಿರಾವ್ ಚುರಮರಿಯವರು ಜೈಮಿನಿ ಭಾರತವನ್ನು ಮರಾಠಿಗೆ ಅನುವಾದಿಸಿದರು. ಇವರ ಶಾಕುಂತಲ ನಾಟಕವನ್ನು ಕಿರ್ಲೋಸ್ಕರರು ಮರಾಠಿಗೆ ಅನುವಾದಿಸಿದರು. ಹಾಗೆಯೇ ಗಳಗನಾಥರು ಹರಿನಾರಾಯಣ ಆಪ್ಟೆಯವರ ಐತಿಹಾಸಿಕ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿರುತ್ತಾರೆ. ಬಟಕುರಿಕೆಯ ವೆಂಕಟ ರಂಗೋ ಕಟ್ಟಿಯವರು ಮರಾಠಿಯಲ್ಲಿ ಅನೇಕ ಕೃತಿಗಳನ್ನು ಬರೆದಿದ್ದಾರೆ. ಮೂಲತಃ ರಾಣೆಬೆನ್ನೂರಿನ ಮುದವೀಡು ಕೃಷ್ಣರಾಯರು 'ಧಾರವಾಡ ವೃತ್ತ' ಎಂಬ ಮರಾಠಿ ಪತ್ರಿಕೆಯ ಸಂಪಾದಕರಾಗಿದ್ದರು. ಖ್ಯಾತ ಮರಾಠಿ ಕವಿ 'ಕೇಶವಸುತ' ಅವರು ಕೆಲಕಾಲ ಹುಬ್ಬಳ್ಳಿಯಲ್ಲಿ ಅಧ್ಯಾಪಕರಾಗಿದ್ದರು.

ಸಮರ್ಥರಾಮದಾಸರ ದಾಸಬೋಧವನ್ನು ಯಲ್ಲೊ ಗುಡ್ಡ ಕುಲಕರ್ಣಿಯವರು ಕನ್ನಡಿಸಿರುತ್ತಾರೆ. ಟಿಳಕರ 'ಗೀತಾರಹಸ್ಯ'ದ ಕನ್ನಡ ಭಾಷಾಂತರ ಆಲೂರು ವೆಂಕಟರಾಯರಿಂದ ಆಯಿತು. ಶಿ.ಶಿ. ಬಸವನಾಳರು ಮರಾಠಿಯಲ್ಲಿ ಕೃತಿರಚನೆ ಮಾಡಿರುತ್ತಾರೆ.

ಶಂ.ಬಾ. ಜೋಶಿಯವರು ಮರಾಠಿಯ ನೆಲೆಯ ಬಗ್ಗೆ ಪಾಂಡಿತ್ಯ ಪೂರ್ಣಕೃತಿ ರಚಿಸಿದ್ದಾರೆ. ಗದಗಿನ ಜಿ.ಡಿ ಖರೆಯೆಂಬುವವರು ಐದು ಕೃತಿಗಳನ್ನು ಬರೆದಿದ್ದು 'ಮಾಜೆ ಬಕ್ಷಿಸಾಚೇ ನಿಬಂಧ' ಎಂಬ ಕೃತಿಗೆ ಬೆಳಗಾವಿಯಲ್ಲಿ 1946 ರಲ್ಲಿ ನಡೆದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಹುಮಾನ ತಂದಿದೆ. ಧಾರವಾಡದ ಶ್ರೀಕೃಷ್ಣ ಸೀತಾರಾಮ ಗೋಖಲೆಯವರು 'ಆಕಾಶಾಸಿ ಜಡವು ನಾತೇ' ಎಂಬ ಖಗೋಲ ವಿಜ್ಞಾನ ಕೃತಿ ರಚಿಸಿದ್ದಾರೆ. ಹುಬ್ಬಳ್ಳಿಯ ರಾಮಚಂದ್ರ ಗೋವಿಂದ ಕೋಳಂಗಡೆ ಎಂಬುವವರು ಧರ್ಮಕ್ಕೆ ಸಂಬಂಧಿಸಿದಂತೆ ಏಳು ಕೃತಿಗಳನ್ನು ಬರೆದಿದ್ದಾರೆ. ಧಾರವಾಡದಲ್ಲಿದ್ದ ಮರಾಠಿಯ ಖ್ಯಾತ ಕತೆಗಾರ ಜಿ.ವಿ. ಕುಲಕರ್ಣಿಯವರು 12 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಪಂಡಿತ ಅವಳೀಕರರು ಮೂಡಲಗಿ ಸಂಪ್ರದಾಯದ ಮೇಲೆ ಪುಸ್ತಕ ಬರೆದಿದ್ದಾರೆ. ವರದರಾಜ ಪುರಸ್ಕಾರವನ್ನೂ ಪಡೆದಿರುತ್ತಾರೆ. ವಿದ್ಯಾ ಸಪ್ರೇಚೌಧರಿಯವರು ಐದು ಕಾದಂಬರಿಗಳನ್ನು ಬರೆದಿದ್ದಾರೆ. ಅಮೃತ ಆರ್. ಯಾರ್ದಿಯವರು ಹಿಂದಿಯಿಂದ ಮರಾಠಿಗೆ, ಮರಾಠಿಯಿಂದ ಕನ್ನಡಕ್ಕೆ ಕೃತಿಗಳನ್ನು ಅನುವಾದಿಸಿದ್ದಾರೆ. ಬಾಬೂರಾವ್ ಗಾಯಕವಾಡ್ ಅವರು ಕವನ, ಸಣ್ಣಕತೆ, ಹಾಗೂ ಒಂದಂಕದ ನಾಟಕಗಳ ರಚನಕಾರರು. ಮಂಗಳಾ ದೇಸಾಯಿಯವರು ಸಣ್ಣ ಕಥಾಸಂಕಲನ ತಂದಿದ್ದಾರೆ. ಬಿ.ಆರ್. ಮೋಡಕ್ ಅವರು ಜೀವನ ಚರಿತ್ರೆಗಳನ್ನು ರಚಿಸಿದ್ದಲ್ಲದೆ ಶಂಕರಾಚಾರ್ಯರ ಕೃತಿಗಳನ್ನು ಮರಾಠಿಗೆ ತಂದಿದ್ದಾರೆ. ಬೇಂದ್ರೆಯವರ ಪದ್ಯಗಳನ್ನು 'ಉಮಾಳಾ' ಎಂಬ ಹೆಸರಿನಲ್ಲಿ ಮರಾಠಿಗೆ ಅನುವಾದಿಸಿರುತ್ತಾರೆ. ಹುಬ್ಬಳ್ಳಿಯ ಪತ್ರಕರ್ತ ಸೋಹನಿಯವರು ಮರಾಠಿಯಿಂದ ಕನ್ನಡಕ್ಕೂ ಕನ್ನಡದಿಂದ ಮರಾಠಿಗೂ ಭಾಷಾಂತರ ಮಾಡುವುದರ ಜೊತೆ ಉಭಯ ಭಾಷೆಗಳಲ್ಲೂ ಬರವಣಿಗೆ ಮಾಡಿದ್ದಾರೆ.

## ನಾಟಕ ಮತ್ತು ರಂಗಭೂಮಿ

ಕರ್ನಾಟಕದಲ್ಲಿ ನಾಟಕದ ಇತಿಹಾಸ ಸುಮಾರು 18 ನೇಯ ಶತಮಾನದಿಂದ ಖಚಿತವಾಗಿ ಆರಂಭವಾಗುತ್ತದೆ. ಇದಕ್ಕೆ ಹಿಂದೆ ದೃಶ್ಯಮನರಂಜನೆಗೆ ದಶಾವತಾರ ಆಟ, ಕೋಲಾಟ, ಪುರವಂತರಾಟ, ದಾಸರಾಟ, ದೊಡ್ಡಾಟ, ಸಣ್ಣಾಟ ಮುಂತಾದವು ಇದ್ದವು. ಸು. 1764 ರಲ್ಲಿ ಧಾರವಾಡದ ಶುಕ್ರವಾರ ಪೇಟೆಯಲ್ಲಿ ದಶಾವತಾರ ನಡೆಸಲು ರಾಮಭಟ್ ಜೋಯಿಸ್ ಎನ್ನುವವನಿಗೆ ವಾರ್ಷಿಕ ಅನುದಾನವನ್ನು ಪೇಶ್ವೆಯವರು ನೀಡಿದಂತೆ ತಿಳಿಯುತ್ತದೆ. ಪೇಶ್ವೆಯರ ವಶವಿದ್ದ ಈ ಪ್ರದೇಶವು ಬ್ರಿಟಿಷರ ವಶವಾದ ಮೇಲೂ ಮುಂಬೈ ಮತ್ತು ಪುಣೆಯ ಸಂಸ್ಕೃತಿ ಮತ್ತು ಭಾಷೆಗಳು ತಮ್ಮ ಪ್ರಭಾವವನ್ನು ಈ ಪ್ರಾಂತ್ಯದ ಮೇಲೆ ಗಾಢವಾಗಿ ಮುದ್ರಿಸಿದ್ದವು. ಹಾಗೆಯೇ ಮರಾಠಿ ನಾಟಕ ಕಂಪನಿಗಳು ಈ ಪ್ರದೇಶದಲ್ಲಿ ಸಂಚಾರ ಮಾಡಿ ಮರಾಠಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. 'ಸವಾಯ್ ಗಂಧರ್ವ'ರೆಂದು ಪ್ರಸಿದ್ಧರಾದ ರಾಮಭಾವು ಕುಂದಗೋಳಕರ್ ಸ್ತ್ರೀಪಾತ್ರ ವಹಿಸುತ್ತಿದ್ದು ಉತ್ತಮ ಹಾಡುಗಾರರೂ, ಮರಾಠಿ ರಂಗಭೂಮಿಯ ಹೆಮ್ಮೆಯ ನಟರೂ ಆಗಿದ್ದು ಇವರು ಕುಂದಗೋಳದವರಾಗಿದ್ದರು. ಈ ಪ್ರದರ್ಶನಗಳನ್ನು ನೋಡಿ ಜನ ಮೋಡಿಗೊಳಗಾದವರಂತೆ ಮರಾಠಿ ನಾಟಕದ ಹಾಡುಗಳನ್ನು ಗುನುಗುನಿಸುತ್ತಿದ್ದರು. ಅನೇಕರಿಗೆ ಈ ನಾಟಕಗಳ ಹೇರಿಕೆ ವಿರುದ್ಧ ಪ್ರತಿಭಟಿಸಬೇಕೆಂಬ ಮನಸ್ಸಿದ್ದರೂ ಪ್ರತಿಭಟಿಸಲಾರದ ಸ್ಥಿತಿಯಲ್ಲಿದ್ದರು. 'ಕೃಷ್ಣ ಪಾರಿಜಾತ'ದಂತಹ ದೊಡ್ಡಾಟಗಳು ಸ್ವಲ್ಪಮಟ್ಟಿಗೆ ಜನರಂಜಕವಾಗಿದ್ದರೂ ಅದ್ದೂರಿಯ ಮರಾಠಿ ನಾಟಕಗಳ ಮುಂದೆ ನಿಲ್ಲಲು ಶಕ್ಯವಿರಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕನ್ನಡದಲ್ಲಿ ನಾಟಕಗಳನ್ನು ರಚಿಸಿ ಅವನ್ನು ರಂಗದ ಮೇಲೆ ಆಡಿಸಿದವರು ಗದಗಿನ ಶಾಂತಕವಿಗಳು (ಸಕ್ರಿ ಬಾಳಾಚಾರ್ಯ). ಅವರು ಮರಾಠಿ ನಾಟಕಗಳ ಮೋಡಿಗೊಳಗಾಗಿದ್ದ ಜನರಿಗೆ ಕನ್ನಡದಲ್ಲೂ ನಾಟಕಗಳನ್ನು ರಚಿಸಬಹುದು, ಅವನ್ನು ರಂಗದ ಮೇಲೆ ಪ್ರದರ್ಶಿಸಬಹುದು ಎಂಬುದನ್ನು ಕಾರ್ಯತಃ ತೋರಿಸಿಕೊಟ್ಟರು. ತಾವೇ ಅನೇಕ ನಾಟಕಗಳನ್ನು ರಚಿಸಿದರು. 'ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿ' ಎಂಬ ನಾಟಕ ಮಂಡಳಿಯನ್ನು 1877 ರಲ್ಲಿ ಕಟ್ಟಿ ಅದರಡಿಯಲ್ಲಿ ತಾವು ಬರೆದಿದ್ದ ನಾಟಕಗಳ ಪ್ರಯೋಗ ಮಾಡಿ ತೋರಿಸಿದರು. ಅವರ 'ಉಷಾಹರಣ' ನಾಟಕ ಪ್ರಸಿದ್ಧವಾಯಿತು. ಅಂದಿನಿಂದ ಈ ಪ್ರಾಂತ್ಯದಲ್ಲಿ ಕನ್ನಡ ನಾಟಕಗಳ ಪ್ರದರ್ಶನಕ್ಕೆ ಹೆಚ್ಚು ಒತ್ತು ಸಿಕ್ಕಿತು. ಅನೇಕ ಕವಿಗಳು ಸಂಸ್ಕೃತ, ಇಂಗ್ಲೀಷ್ ನಾಟಕಗಳ ಅನುವಾದವನ್ನು ಕೈಗೊಂಡು, ಕನ್ನಡಕ್ಕೆ ಅನುವಾದಿಸಿದರು. ಜಿಲ್ಲೆಯಲ್ಲಿ ಅನೇಕ ನಾಟಕ ಕಂಪನಿಗಳು ಪ್ರಾರಂಭವಾದವು. ಹೀಗಾಗಿ ಕನ್ನಡ ನಾಟಕ ಚಳುವಳಿಗೆ ಹೊಸ ಹುರುಪು ಬಂತು. ಆದರೂ ಈ ಜಿಲ್ಲೆಯಲ್ಲಿ ಆಗಿ ಹೋದ ನಾಟಕಕಾರರ ಸಂಖ್ಯೆ ಕಡಿಮೆಯೆಂದೇ ಹೇಳಬೇಕಾಗಿದೆ. ಹವ್ಯಾಸಿರಂಗಭೂಮಿ 1930 ರಲ್ಲಿ ಶ್ರೀರಂಗರ ಪ್ರಯತ್ನದ ಫಲವಾಗಿಯೇ ವಿಶೇಷವಾಗಿ ಬೆಳೆಯಲು ಹಾದಿಯಾಯಿತು.

## ವೃತ್ತಿ ರಂಗಭೂಮಿ

ಶಾಂತಕವಿಗಳು 'ಉಷಾಹರಣ' ನಾಟಕವನ್ನು ಪ್ರಯೋಗಿಸಿದಾಗ ಅವರು ಯಕ್ಷಗಾನದ ತಂತ್ರವನ್ನು ಬಳಸಿಕೊಂಡಿದ್ದರು. ಗದಗಿನ ಜೀವೂ ಬಾಳಪ್ಪ ಎಂಬುವರು ಇದರ ಸೂತ್ರಧಾರರಾಗಿದ್ದರು. ಗದಗಿನ ಕಲಾವಿದರಿಂದ ಕೂಡಿದ್ದ ಈ ನಾಟಕ ಕಂಪನಿ ಗದಗಿನ ಸುತ್ತಮುತ್ತಲ ಊರುಗಳಲ್ಲಿ ಸಂಚರಿಸಿ ನಾಟಕ ಪ್ರದರ್ಶನವನ್ನು ನೀಡಿತು. ಇದರಿಂದ ಪ್ರೇರಿತರಾಗಿ 'ಶಾಂತ ಕವಿ'ಗಳು ಇನ್ನೂ ಹಲವು ಇಂತಹ ನಾಟಕಗಳನ್ನು ರಚಿಸಿದರು. ಶಾಂತ ಕವಿಗಳು ತಮ್ಮ ನಾಟಕಗಳನ್ನು ಬರೆಯಲು ಯಕ್ಷಗಾನ ಪ್ರೇರಣೆಯೆಂದು ಹೇಳಿದೆಯಷ್ಟೆ. ವೃತ್ತಿರಂಗಭೂಮಿ ಸ್ಥಾಪನೆಗೆ ಮುಂಚೆ ಉತ್ತರ ಕರ್ನಾಟಕದಲ್ಲಿ ಸಣ್ಣಾಟ-ದೊಡ್ಡಾಟಗಳು ಪ್ರಯೋಗದಲ್ಲಿದ್ದವು. ರಾಯಚೂರು ಜಿಲ್ಲೆಯ ಕನಕಗಿರಿಯ ರಂಗಭೂಪಾಲನ ಪ್ರೋತ್ಸಾಹದಿಂದ ಅಪರಾಳ ತಮ್ಮಣ್ಣನು 'ಶ್ರೀ ಕೃಷ್ಣಪಾರಿಜಾತ' ಎಂಬ ಕೃತಿ ರಚಿಸಿದನು. ಇದು ಗೀತನಾಟಕ, ತನ್ನ ಮಗನ ಸಹಾಯದಿಂದ ಇದನ್ನು ರಂಗದ ಮೇಲೆ ಪ್ರಯೋಗ ಮಾಡಿದನು. ಮುಂದೆ ಇದರ ಜನಪ್ರಿಯತೆ ಎಷ್ಟಾಯಿತೆಂದರೆ ಊರು - ಊರುಗಳಲ್ಲಿ ಪಾರಿಜಾತ ಮೇಳಗಳು ಉದಯವಾದವು. ಈ ಕೃತಿ 1863 ರಲ್ಲಿ ಸವಣೂರು ಮುದ್ರಣಾಲಯದಲ್ಲಿ ಮುದ್ರಿತವಾಯಿತು. ಈ ಪಾರಿಜಾತದ ಪ್ರಭಾವದಿಂದ ಅದು ಕೃಷ್ಣನ ಕಥೆಯೆಂಬ ಅರ್ಥ ಹೊರಟು ಹೋಗಿ ಶೈವಪುರಾಣದಿಂದ ಅಥವಾ ವಿಷ್ಣು ಪುರಾಣದಿಂದ ಯಾವುದೇ ಕಥೆ ತೆಗೆದುಕೊಂಡು ಈ ಧಾಟಿಯಲ್ಲಿ ಬರೆದಿದ್ದಕ್ಕೆ ಕೊನೆಯಲ್ಲಿ 'ಪಾರಿಜಾತ' ಎಂಬ ಪದ ಸೇರಿಸುವಷ್ಟರ ಮಟ್ಟಿಗೆ ಈ ಗೀತಮೇಳ ಜನಪ್ರಿಯವಾಯಿತು. ಮುಂದೆ 'ಶಿವ ಪಾರಿಜಾತ', 'ವೆಂಕಟೇಶ ಪಾರಿಜಾತ ', 'ವೀರಭದ್ರ ಪಾರಿಜಾತ' ಮುಂತಾದ ಕೃತಿಗಳು ರಚಿತವಾದವು. ಚುರಮರಿ ಶೇಷಗಿರಿರಾಯರು 1869 ರಲ್ಲಿ ಶಾಕುಂತಲ ನಾಟಕದ ಕನ್ನಡಾನುವಾದ ಮಾಡಿದಾಗ ಹಾಗೂ ಶಾಂತಕವಿಗಳು ನಾಟಕ ರಚನೆ ಮಾಡಿದಾಗ ಇದೇ 'ಕೃಷ್ಣ ಪಾರಿಜಾತ'ದ ಪ್ರಭಾವವನ್ನು ಕಾಣುತ್ತೇವೆ. ಮುಂದೆ 1879 ರಲ್ಲಿ ಚುರಮರಿಯವರ ಶಾಕುಂತಲ ನಾಟಕ ಮರಾಠಿಗೆ ಭಾಷಾಂತರವಾದಾಗ ಅದನ್ನು ಅನುವಾದ ಮಾಡಿದ ಲಕ್ಷ್ಮಣರಾವ್ ಕಿರ್ಲೋಸ್ಕರ್ ಅವರು ಪಾರಿಜಾತದ ಪದ್ಯಗಳ ಧಾಟಿಯನ್ನೇ ಮರಾಠಿಗೆ ಕೊಂಡೊಯ್ದರು. ಶಾಂತಕವಿಗಳು ರಚಿಸಿದ 'ಉಷಾಹರಣ' ಹಾಗೂ ಅವರು ನಾಟಕ ಮಂಡಳಿ ಆಡಿದ ನಾಟಕಗಳು ಕನ್ನಡವೃತ್ತಿ ರಂಗಭೂಮಿಗೆ ಸೋಪಾನವಾದವು. ಮುದವೀಡು ಕೃಷ್ಣರಾಯರು ಚುರಮರಿಯವರ ನಾಟಕಗಳನ್ನು ಆಡುವುದಕ್ಕೆಂದೇ 'ಭಾರತ ಕಲೋತ್ತೇಜಕ ಸಂಗೀತ ಸಮಾಜ'ವೆಂಬ ನಾಟಕ ಮಂಡಳಿಯನ್ನು ಕಟ್ಟಿದ್ದು, ಇದರ ಮೂಲಕ ಅವರು ಕನ್ನಡ ದೇಸಿಮಟ್ಟುಗಳನ್ನು ಜನರಿಗೆ ಪರಿಚಯಿಸಿದರು.

ಇಷ್ಟಾದರೂ ಧಾರವಾಡ ಭಾಗದಲ್ಲಿ ಮರಾಠಿ ನಾಟಕಗಳ ಪ್ರದರ್ಶನಗಳ ಜನಪ್ರಿಯತೆ ಕಡಿಮೆಯಾಗಲಿಲ್ಲ. ಇದಕ್ಕೆ ಕಾರಣ ಅವರ ರಂಗಸಜ್ಜಿಕೆ ಹಾಗೂ ಸಂಗೀತಗಳ ಪ್ರಭಾವ. ಪ್ರಾರಂಭದ ಅನೇಕ ಕನ್ನಡ ನಾಟಕ ಕಂಪನಿಗಳು ಅಭಿನಯಿಸುತ್ತಿದ್ದ ನಾಟಕಗಳಲ್ಲಿನ ಹಾಡುಗಳು ಮರಾಠಿ ರಂಗಗೀತೆಗಳ ಅನುಕರಣವಾಗಿದ್ದವು. ಇಂತಹ ಸನ್ನಿವೇಶದಲ್ಲಿ ತಮಗೆ ಎದುರಾಗುತ್ತಿದ್ದ ಸವಾಲುಗಳನ್ನು ದಾಟಿ ಮುನ್ನುಗ್ಗಬೇಕಾಗುತ್ತಿತ್ತು. ಶಿವಮೂರ್ತಿಸ್ವಾಮಿ ಕಣಬುರ್ಗಿಮಠ ಅವರು 'ಕೊಣ್ಣೂರಕರ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ'ಯಲ್ಲಿ ಸ್ತ್ರೀ ಪಾತ್ರಗಳಿಗೆ ಸ್ತ್ರೀಯರನ್ನೇ ನೇಮಿಸಿಕೊಂಡರು. ಇಂತಹವರಲ್ಲಿ ಎಲ್ಲವ್ವ ಗುಳೇದಗುಡ್ಡ ಪ್ರಥಮಳು. ಇವರ ಮಗಳಾದ ಗುಳೇದಗುಡ್ಡ ಗಂಗೂಬಾಯಿಯು ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರು. ಟ್ರಾನ್ಸ್‌ಫರ್ ಸೀನರಿಗಳನ್ನು ಈ ಕಂಪನಿ ಬಳಕೆಗೆ ತಂದಿತು.

ಸುಮಾರು 1900 ರಿಂದ 1935 ವರೆಗಿನ ಅವಧಿ ವೃತ್ತಿರಂಗಭೂಮಿಯ ಉಚ್ಛ್ರಾಯದ ಅವಧಿ. ಈ ಕಾಲಕ್ಕೆ ಕೊಣ್ಣೂರು ಕಂಪನಿ, ಶಿರಹಟ್ಟಿ ವೆಂಕೋಬರಾಯರ ಕಂಪನಿ, ಅಬ್ಬಿಗೇರಿ ಕಂಪನಿ, ಹಲಗೇರಿ ಚೆಟ್ಟಪ್ಪನವರ 'ಹಾಲಾಸಿದ್ದೇಶ್ವರ ಪ್ರಾಸಾದಿತ ನಾಟಕ ಕಂಪನಿ' ವಾಮನರಾವ್ ಮಾಸ್ತರರ 'ವಿಶ್ವಗುಣಾದರ್ಶ ನಾಟಕ ಮಂಡಳಿ', ಲಕ್ಷ್ಮೇಶ್ವರದ ಬಚ್ಚಾಸಾನಿಯ 'ಸ್ತ್ರೀ ಸಂಗೀತ ನಾಟಕ ಮಂಡಳಿ', ಗರುಡ ಸದಾಶಿವರಾಯರ 'ಗದಗ ದತ್ತಾತ್ರೇಯ ನಾಟಕ ಮಂಡಳಿ', 'ಆಸುಂಡಿಕಂಪನಿ'ಗಳು ಪ್ರಸಿದ್ಧವಾಗಿದ್ದವು. ಧಾರವಾಡದಲ್ಲಿ ನೆಲೆಸಿರುವ ಅಥವಾ ನೆಲೆಸಿದ್ದ ಪ್ರಸಿದ್ಧ ಸಂಗೀತಗಾರರೂ ಸಹ ಪರೋಕ್ಷವಾಗಿ ಈ ವೃತ್ತಿ ರಂಗಭೂಮಿಯಿಂದ ಬೆಳೆದವರೆಂದರೆ ತಪ್ಪಾಗಲಾರದು. ಮನ್ಸೂರ ಸೋದರರು ವಾಮನರಾವ್ ಮಾಸ್ತರರ ಕಂಪನಿಯಲ್ಲಿ ಇದ್ದರು. ಲಕ್ಷ್ಮೇಶ್ವರದ ಸ್ತ್ರೀಸಂಗೀತ ನಾಟಕ ಮಂಡಳಿ ಕೇವಲ ಸ್ತ್ರೀಯರಿಂದಲೇ ನಡೆಯುತ್ತಿತ್ತು. ಪುರುಷ ಪಾತ್ರಗಳನ್ನು ಸ್ತ್ರೀಯರೇ ನಟಿಸುತ್ತಿದ್ದರು. ಅದಕ್ಕಿಂತ ಮೊದಲು ಕೊಣ್ಣೂರು ಕಂಪನಿಯಲ್ಲಿ ಬಿಜ್ಜಳನ ಪಾತ್ರವನ್ನು ಎಲ್ಲವ್ವ ಎಂಬುವವರು ಮಾಡುತ್ತಿದ್ದರು.

ವೃತ್ತಿರಂಗಭೂಮಿಯಲ್ಲಿಯೂ ಕಾಲದಿಂದ ಕಾಲಕ್ಕೆ ಕೆಲವು ಬದಲಾವಣೆಗಳು ನಡೆದಿವೆ. ಆ ಬದಲಾವಣೆಗಳನ್ನು ಅನಿವಾರ್ಯವೆಂಬಂತೆ ಸ್ವೀಕರಿಸಿದೆ. ಈ ದಿಸೆಯಲ್ಲಿ ವಿದ್ಯುತ್ ದೀಪಗಳ ಬಳಕೆಯೂ ಒಂದು. ಕೊಣ್ಣೂರು ಕಂಪನಿ ಡೈನಮೋ ಬಳಸಿ ವಿದ್ಯುದ್ದೀಪಗಳನ್ನು ಬಳಸಿದ ಮೊದಲ ಸಂಸ್ಥೆ. ಅಲ್ಲದೆ ಸ್ತ್ರೀಪಾತ್ರಗಳನ್ನೂ ರಂಗದ ಮೇಲೆ ಮೊದಲಿಗೆ ತಂದ ಸಂಸ್ಥೆ. ಅದು ರಂಗದ

ಮೇಲೆ ಬಂದ ಅನೇಕ ನಾಟಕಗಳು ಅವುಗಳ ಜನಪ್ರಿಯತೆಯಿಂದ ಸಿನಿಮಾಗಳೂ ಆಗಿವೆ. ಕೆ.ಎನ್. ಸಾಳುಂಕೆಯವರು ಬರೆದ ನಾಟಕ 'ಬದುಕು ಬಂಗಾರವಾಯಿತು' 500 ಪ್ರಯೋಗಗಳನ್ನು ಕಂಡಿದೆ. ಫ.ಶಿ. ಭಾಂಡಗೆಯವರ 'ಜೀವಂತ ಜನ' ಸು.470 ಪ್ರದರ್ಶನಗಳನ್ನು ಕಂಡಿದೆ. ಇದಕ್ಕೆ ಭಾರತ ಸರ್ಕಾರದ ಕೃಷಿ ಮತ್ತು ಪಂಚಾಯತ್ ರಾಜ್ಯದ ರಾಷ್ಟ್ರ ಪ್ರಶಸ್ತಿ ಬಂದಿದೆ. ಹುಬ್ಬಳ್ಳಿಯಲ್ಲಿ ವೃತ್ತಿರಂಗ ಭೂಮಿಗೆ ಸದಾ ಬೆಂಬಲವಿದ್ದು ಕೆಲವೊಂದು ನಾಟಕಗಳ 500 ಕ್ಕೂ ಹೆಚ್ಚು ಪ್ರಯೋಗವನ್ನು ಸತತವಾಗಿ ಮಾಡಿದ ದಾಖಲೆ ಇದೆ. ಕಲಾವೈಭವ ನಾಟಕ ಸಂಘ, ಬೆಳಗಾವಿ, ಇದರ 'ಜಗಜ್ಯೋತಿ ಬಸವೇಶ್ವರ' ಇಂಥ ಒಂದು ನಾಟಕವಾಗಿದ್ದು ಏಣಗಿ ಬಾಳಪ್ಪ ಇದರಲ್ಲಿ ಬಸವೇಶ್ವರರ ಪಾತ್ರ ಮಾಡುತ್ತಿದ್ದರು.

### ಹವ್ಯಾಸಿ ರಂಗಭೂಮಿ

ವೃತ್ತಿರಂಗಭೂಮಿಯಲ್ಲಿನ ನಾಟಕಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೇ ಭಾರತದಲ್ಲಿ ಚಲನಚಿತ್ರರಂಗದ ಪ್ರವೇಶವೂ ಆಗಿತ್ತು. ಅಲ್ಲದೆ ಜನ ಹೆಚ್ಚು ವಿದ್ಯಾವಂತರಾಗಿ ಪಾಶ್ಚಾತ್ಯ ಸಂಸ್ಕೃತಿ, ಆಧುನಿಕ ವಿಚಾರ ವಿಮರ್ಶೆ ಮುಂತಾದವುಗಳಿಂದ ಪ್ರೇರಿತರಾಗಿ ಹೊಸಬಗೆಯ ನಾಟಕಗಳನ್ನು ಆಡಬೇಕೆಂಬ ಕುತೂಹಲವನ್ನು ಹೊಂದಿದ್ದರು. ಇದಕ್ಕೆ ಮೊದಲು ಪೌರಾಣಿಕ ನಾಟಕಗಳ ಬದಲು ಬೇರೆ ಬೇರೆ ನಾಟಕಗಳನ್ನು ಅಲ್ಲಲ್ಲಿ ಜನ ಆಡುತ್ತಿದ್ದರು. ಈ ಬಗೆಯ ಒಂದೆರಡು ನಾಟಕಗಳನ್ನು ಶಾಂತಕವಿಗಳಂತಹವರು ಆಡಿಸಿದ್ದರು. 1904 ರಲ್ಲಿ ಮುದವೀಡು ಕೃಷ್ಣರಾಯರು, ರಂಗರಾವ್ ಹಿರೇಕೆರೂರು ಮುಂತಾದವರು ನಾಟಕ ಮಂಡಳಿಗಳನ್ನು ಕಟ್ಟಿ ಆ ಕಾಲಕ್ಕೆ ಹೊಸದೆನ್ನಬಹುದಾದ ನಾಟಕಗಳನ್ನು ಪ್ರದರ್ಶಿಸಿದರು. ಈ ನಾಟಕ ಮಂಡಳಿಗಳ ನಾಟಕಗಳು ಧಾರವಾಡದಲ್ಲಿ ಗದಗದವರ ಥಿಯೇಟರಿನಲ್ಲಿ ಪ್ರದರ್ಶಿತವಾಗುತ್ತಿದ್ದವು. 1920 ರಲ್ಲಿ ಕರ್ನಾಟಕ ಕಾಲೇಜಿನ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಸೇರಿ ಕೆರೂರು ವಾಸುದೇವಾಚಾರ್ಯರ 'ಸೂರತನಗರದ ಶ್ರೇಷ್ಠಿ', ಹುಯಿಲಗೋಳ ನಾರಾಯಣ ರಾಯರ 'ಸ್ತ್ರೀ ಧರ್ಮ ರಹಸ್ಯ' ಗರುಡರ 'ಏಚ್ಚಮನಾಯಕ' ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು. ಧಾರವಾಡದಲ್ಲಿದ್ದ ರೈಲ್ವೇ ಕಚೇರಿಯ ನೌಕರರು ನಾಟಕಪ್ರಯೋಗ ಮಾಡುತ್ತಿದ್ದರು. ಅವು ಬೇರೆ ಬೇರೆ ಭಾಷೆಯವಾಗಿದ್ದು ಆ ಕಚೇರಿ ಮದ್ರಾಸಿಗೆ ಹೋದಾಗ ಈ ಚಟುವಟಿಕೆ ನಿಂತುಹೋಯಿತು.

ಆದರೂ ಇವನ್ನು ಸ್ಪಷ್ಟವಾಗಿ ಹವ್ಯಾಸಿಯೆಂದು ಹೇಳುವಂತಿರಲಿಲ್ಲ, ಮುಂದೆ ಧಾರವಾಡಕ್ಕೆ ಶ್ರೀರಂಗರು 1930 ರಲ್ಲಿ ಬಂದು ನೆಲೆಸಿದ ಮೇಲೆ ಈ ನಾಟಕ ಚಳುವಳಿಗೆ ಹೊಸ ಆಯಾಮ ಬಂದಿತು. ಹವ್ಯಾಸಿ ನಾಟಕವೆಂದು ಸ್ಪಷ್ಟವಾಗಿ ಹೇಳುವ ನಾಟಕಗಳನ್ನು ಇವರು ಬರೆದರು. 1933 ರಲ್ಲಿ 'ಕನ್ನಡ ನಾಟ್ಯ ವಿಲಾಸಿ ಸಂಘ'ವನ್ನು ಕಟ್ಟಿ ತಾವೇ ಬರೆದ ನಾಟಕಗಳನ್ನು ಅಲ್ಲಿ ಪ್ರದರ್ಶಿಸಿದರು. ಇದೇ ಬಗೆಯ ಇನ್ನೊಂದು ಸಂಸ್ಥೆ 1943 ರಲ್ಲಿ ಜಿ.ಬಿ. ಜೋಶಿಯವರಿಂದ ಆಯಿತು. ಅವರು ಧಾರವಾಡದಲ್ಲಿ 'ಕಲೋಪಾಸಕಮಂಡಲ'ವೆಂಬ ಸಂಸ್ಥೆಯನ್ನು ಕಟ್ಟಿ ನಾಟಕಕಾರರಾಗಿ ಅನೇಕ ನಾಟಕಗಳನ್ನು ಬರೆದು ರಂಗಪ್ರಯೋಗ ಮಾಡಿದರು. ಇವರು ಧಾರವಾಡವೇ ಅಲ್ಲದೆ ಉತ್ತರ ಕರ್ನಾಟಕದ ಹಾಗೂ ಮಹಾರಾಷ್ಟ್ರದ ಪ್ರದೇಶದಲ್ಲೂ ಕನ್ನಡ ನಾಟಕಗಳನ್ನು ಪ್ರದರ್ಶಿಸಿದರು.

ಮುಂದೆ ಅನೇಕ ಹವ್ಯಾಸಿ ನಾಟಕ ತಂಡಗಳು ಉದಯವಾದವು. ಇವುಗಳಲ್ಲಿ ಬಹಳಷ್ಟು ಕಾಲೇಜಿನ ವಾರ್ಷಿಕೋತ್ಸವ, ವಿಶೇಷ ಸಂದರ್ಭಗಳಲ್ಲಿ ನಾಟಕ ಪ್ರದರ್ಶನ ಮಾಡುವಷ್ಟಕ್ಕೆ ಮಾತ್ರ ಸೀಮಿತವಾಗಿದ್ದವು. 1954 ರಲ್ಲಿ 'ಕಲೋದ್ಧಾರಕ ಸಂಘ' 1970 ರಲ್ಲಿ 'ಅಂತರಂಗ' ಮುಂತಾದ ಸಂಸ್ಥೆಗಳ ಉದಯವಾಯಿತು. ಇದೇ ಕಾಲಕ್ಕೆ ಬಿ.ವಿ. ಕಾರಂತ, ಗಿರೀಶ್ ಕಾರ್ನಾಡ್, ಶಾಂತಿನಾಥ ದೇಸಾಯಿ, ಸಿದ್ಧಲಿಂಗಪಟ್ಟಣಶೆಟ್ಟಿ, ಚಂದ್ರಶೇಖರಪಾಟೀಲ, ಬಿ.ಟಿ. ದೇಸಾಯಿ ಮುಂತಾದವರು ನಾಟಕಕಾರರಾಗಿ, ನಿರ್ದೇಶಕರಾಗಿ ನಾಟಕ ಕ್ಷೇತ್ರಕ್ಕೆ ಪ್ರವೇಶಿಸಿದ್ದರಿಂದ ಹವ್ಯಾಸಿ ನಾಟಕಗಳಿಗೆ ಹೊಸಚಾಲನೆ ಸಿಕ್ಕಿತು. ಅನೇಕ ಮಂಡಳಗಳು, ಸಂಸ್ಕೃತಿ ಇಲಾಖೆ, ಅಂತರ ಕಾಲೇಜು ಸ್ಪರ್ಧೆ, ಕೈಗಾರಿಕೆಗಳು ನಾಟಕಗಳ ಸ್ಪರ್ಧೆಗಳನ್ನು ನಡೆಸಲು ಮುಂದೆ ಬಂದುದು, ಇವೆಲ್ಲ ಕಾರಣಗಳಿಂದ ನಾಟಕಗಳು ಹಾಗೂ ನಾಟಕ ಸಂಸ್ಥೆಗಳು ಬೆಳೆಯಲು ಕಾರಣವಾದವು. ಹುಬ್ಬಳ್ಳಿಯಲ್ಲಿ ಗುಜರಾತಿ ಸಮಾಜ, ಕೇರಳ ಸಮಾಜ, ಅಕ್ಯಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಡಾ॥ ಗೀತಾಸದಾನಂದ ಕಾಮತ್ ಸ್ಮಾರಕ, ಮಹಾ ನಗರ ಪಾಲಿಕೆ, ಲಯನ್ಸ್ ಕ್ಲಬ್ ಇವರು ಉತ್ತೇಜನ ನೀಡಿದ್ದಾರೆ.

ಧಾರವಾಡದಲ್ಲಿ ಬಹಳ ಹಿಂದೆಯೇ ಹವ್ಯಾಸಿರಂಗ ಚಟುವಟಿಕೆಗಳು ಪ್ರಾರಂಭವಾದರೂ ಅದರ ನೆರೆಯ ಹುಬ್ಬಳ್ಳಿಯಲ್ಲಿ 1954ರ ನಂತರ ಚಟುವಟಿಕೆಗಳು ಆರಂಭವಾದವು. 1954 ರಲ್ಲಿ ರೈಲ್ವೆ ವರ್ಕ್‌ಷಾಪ್‌ನಲ್ಲಿ ಕೆಲಸಕ್ಕೆಂದು ಬಂದವರ ಮೈಸೂರು ಅಸೋಸಿಯೇಷನ್ ಎಂಬ ಹೆಸರಿನಲ್ಲಿ ಆಗಾಗ್ಗೆ ನಾಟಕಗಳನ್ನು ಆಡುತ್ತಿದ್ದರು. 1958 ರಿಂದೀಚೆಗೆ ಇದರ ಚಟುವಟಿಕೆ ಹೆಚ್ಚಾಯಿತು. 1962 ಇದು ತನ್ನ

ಹೆಸರನ್ನು 'ರೈಲ್ವೆ ಕಲಾವಿದರು' ಎಂದು ಬದಲಿಸಿಕೊಂಡಿತು. 1968 ರಲ್ಲಿ ಚಿತ್ತರಂಜನ ಚಟರ್ಜಿಯವರ ಪ್ರಯತ್ನದಿಂದ ಪ್ರೊಗ್ರೆಸಿವ್ ಆರ್ಟ್ ಸರ್ಕಲ್ (ಪ್ರಗತಿ ಕಲಾ ವೃಂದ) ಎಂಬ ಸಂಸ್ಥೆ ಉದಿಸಿ ಹಿಂದಿ ಹಾಗೂ ಕನ್ನಡ ನಾಟಕಗಳ ರಂಗಪ್ರದರ್ಶನವಾಗುತ್ತದೆ. ಇವರಲ್ಲದೆ ಅನಿಲ್ ಠಕ್ಕರ್ ಅವರ 'ಎ.ಟಿ. ತಂಡ', 'ರಂಗರಂಜನಿ', 'ಅಭಿನಯಭಾರತಿ', 'ಅಲೆಮಾರಿಗಳು', 'ಅಂಚೆ ತಂತಿ ಸ್ನೇಹಕುಂಜ' ಮುಂತಾದ ತಂಡಗಳು ಈ ಪ್ರದೇಶದಲ್ಲಿ ಕಾರ್ಯಶೀಲವಾಗಿವೆ.

1971 ರಲ್ಲಿ ಬಿ.ವಿ. ಕಾರಂತರು ಧಾರವಾಡದ ಕರ್ನಾಟಕ ಕಾಲೇಜಿನ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನಾಟಕದ ತರಪೇತು ನೀಡಿದರು. ಇದರ ಫಲವಾಗಿ ನಾಟಕದ ಮೇಲೆ ಹೊಸ ಅಲೆಯ ಗಾಳಿಬೀಸಿ ಅನೇಕ ನಾಟಕಗಳ ರಂಗ ಪ್ರದರ್ಶನವಾದುದ್ದರ ಜೊತೆಗೆ ಅನೇಕ ಅಸಂಗತ ನಾಟಕಗಳ ಪ್ರಯೋಗ ನಡೆಯಿತು. ಇದೇ ಸುಮಾರಿನಲ್ಲಿ ಶಾಂತಿನಾಥ ದೇಸಾಯಿ, ಸಿದ್ದಲಿಂಗ ಪಟ್ಟಣಶೆಟ್ಟಿ, ಚಂದ್ರಶೇಖರ ಪಾಟೀಲ, ಬಿ.ಟಿ. ದೇಸಾಯಿ, ಎಸ್.ಆರ್. ತೋಂಟದಾರ್ಯ ಮೊದಲಾದವರು ಸೇರಿ 'ಅಂತರಂಗ ನಾಟಕ ಕೂಟ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಅನೇಕ ನಾಟಕಗಳನ್ನು ಪ್ರಯೋಗಕ್ಕೆ ತಂದರು.

ಮುಂದೆ ಬೀದಿನಾಟಕಗಳು ಈ ಜಿಲ್ಲೆಯನ್ನು ಪ್ರವೇಶಿಸಿ ಹಲವಾರು ಪ್ರದರ್ಶನಗಳನ್ನು ನೀಡಿದವು. ಸೊಲಬಕ್ಕನವರ್, ಪುಂಡಲೀಕಶೇಟ್, ರಮಜಾನ ದರ್ಗಾ, ಘನಶ್ಯಾಮ್ ಮುಂತಾದವರು ಬೀದಿ ನಾಟಕಗಳನ್ನು ಸಂಘಟಿಸಿದರು. ಹಾವೇರಿಯಲ್ಲಿ ಸತೀಶ್‌ಕುಲಕರ್ಣಿ, ಹಾನಗಲ್‌ನಲ್ಲಿ ಉದಯನಾಸಿಕ್ ಮುಂತಾದವರು ಹವ್ಯಾಸಿ ನಾಟಕಗಳು ಬೆಳೆಯಲು ಕಾರಣರಾಗಿದ್ದಾರೆ. 1914 ರಲ್ಲಿ ಗದಗಿನಲ್ಲಿ 'ಯಂಗ್‌ಮೆನ್ಸ್ ಕ್ಲಬ್ ಅಸೋಸಿಯೇಷನ್'ನವರು ವಾರ್ಷಿಕ ಸಮಾರಂಭಗಳಲ್ಲಿ ಪ್ರತೀವರ್ಷ ಒಂದು ಸಾಮಾಜಿಕ ನಾಟಕವನ್ನು ಆಡುತ್ತಿದ್ದರು. 1977 ರಲ್ಲಿ ಜಯತೀರ್ಥ ಜೋಶಿ, 'ಅಭಿನಯರಂಗ'ಯೆಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಅನೇಕ ನವ್ಯನಾಟಕಗಳನ್ನು ಪ್ರಯೋಗಿಸಿದರಲ್ಲದೆ 1984ರಲ್ಲಿ ಒಂದು ತರಬೇತಿ ಶಿಬಿರವನ್ನು ಸಹ ನಡೆಸಿದರು. ಫ.ಶಿ. ಭಾಂಡಗೆಯವರು ಒಂದು ತಂಡಕಟ್ಟಿ ತಮ್ಮ ನಾಟಕಗಳನ್ನು ಆಡಿಸುತ್ತಿದ್ದರು. ವೀರೇಶ ಹಿರೇಮಠ ಅವರೂ ಸಹ ರಂಗಭೂಮಿಗೆ ಸಾಕಷ್ಟು ಸೇವೆ ಸಲ್ಲಿಸಿರುತ್ತಾರೆ.

ಕನ್ನಡ ನಾಟಕಗಳಲ್ಲದೆ 'ಕೊಂಕಣಿ ರಂಜನಾ ಕಲಾವಿದರು' ಕೊಂಕಣಿ ನಾಟಕಗಳ ಪ್ರಯೋಗ ಮಾಡಿದ್ದಾರೆ. ಹಾಗೆಯೇ ಕೇರಳ ಸಮಾಜ, ಗುಜರಾತಿ ಸಮಾಜ ಮುಂತಾದವರು ಆಯಾ ಭಾಷೆಯ ನಾಟಕಗಳನ್ನು ಇಲ್ಲಿ ಪ್ರದರ್ಶಿಸಿರುತ್ತಾರೆ.

**ನಾಟಕಕಾರರು :** ವೃತ್ತಿರಂಗಭೂಮಿ ಬೆಳೆಯಲು ನಾಟಕಗಳ ಅವಶ್ಯಕತೆ ಇತ್ತು. ದಕ್ಷಿಣದಲ್ಲಿ ಮೈಸೂರಿನ ಅರಸರ ಪ್ರೋತ್ಸಾಹದಿಂದ ಕನ್ನಡ ನಾಟಕಗಳ ರಚನೆಯಾದರೂ ಉತ್ತರ ಕರ್ನಾಟಕದಲ್ಲಿ ಅಷ್ಟು ಪ್ರೋತ್ಸಾಹವಿಲ್ಲದಿದ್ದುದರಿಂದ ಮರಾಠಿ ನಾಟಕಗಳನ್ನೇ ಕನ್ನಡಕ್ಕೆ ತಂದು ಆಡುತ್ತಿದ್ದರು. ಅನೇಕ ಊರುಗಳಲ್ಲಿ ನಾಟಕ ಪ್ರದರ್ಶನಗಳ ಎರಡು ಕಂಪನಿಗಳ ಪ್ರದರ್ಶನ ನಡೆದಾಗ ಮೂಲಮರಾಠಿ ನಾಟಕವನ್ನು ಮರಾಠಿ ಕಂಪನಿ ಆಡಿದರೆ ಈ ಕಡೆಯ ಕಂಪನಿಗಳು ಅದೇ ನಾಟಕದ ಕನ್ನಡ ಅನುವಾದ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಕಾಲಕ್ರಮೇಣ ಕನ್ನಡ ನಾಟಕಗಳ ರಚನೆ ಹೆಚ್ಚಾದ ಮೇಲೆ ಇಂತಹ ಪರಿಸ್ಥಿತಿ ತಪ್ಪಿತು. ಅನೇಕ ಜನ ಕನ್ನಡದ ನಾಟಕಗಳನ್ನು ರಚಿಸಲು ಪ್ರಾರಂಭಿಸಿದರು. ಇಂತಹವರಲ್ಲಿ ಹುಯಿಲಗೋಳ ನಾರಾಯಣರಾಯರು, ಎಚ್.ಎನ್. ಹೂಗಾರ, ಮಹಂತೇಶಶಾಸ್ತ್ರಿ ಮಾರುತೇಶಮಾಂಡ್ರೆ, ಕೆ.ಎನ್. ಸಾಳುಂಕೆ, ಎನ್.ಎಸ್. ಜೋಶಿ, ಶಾಂತಕವಿ, ಕಣಬರಗಿಮಠ, ಕಂದಗಲ್ಲ ಹನುಮಂತರಾಯರು, ಚನ್ನಮಲ್ಲಪ್ಪ ಕವಲಿ, ಗುರುರಾವ ರಾಘವೇಂದ್ರ ಮಮದಾಪುರ, ದ.ರಾ. ಬೇಂದ್ರೆ, ಸುಂಕಾಪುರ, ಲಕ್ಷ್ಮಣರಾವ್ ಬೇಂದ್ರೆ, ಜಿ.ಬಿ. ಜೋಶಿ, ಚಂದ್ರಶೇಖರ ಪಾಟೀಲ, ಸಿದ್ದಲಿಂಗ ಪಟ್ಟಣಶೆಟ್ಟಿ, ಗರುಡ ಸದಾಶಿವರಾವ್, ಹುಯಿಲಗೋಳ ಅಚ್ಯುತರಾಯರು, ಮಹಾಂತೇಶ್ ಹಿರೇಮಠ, ಫಕೀರಸಾ ಭಾಂಡಗೆ, ನಲವಡಿ ಶ್ರೀಕಂಠ ಶಾಸ್ತ್ರಿ ಪುಟ್ಟರಾಜಗವಾಯಿ, ವಾಮನರಾವ್ ಮಾಸ್ತರ್, ಜಿ.ಎಚ್. ರಾಘವೇಂದ್ರ ಪುಂಡಲಕಶೇಟ್, ಗೋವಿಂದ ಮಣ್ಣೂರ್, ಎನ್.ಕೆ. ಸಾರಂಗಯ್ಯಮಠ, ಉಮಚಗಿ ಶೀನಪ್ಪ, ಉದಯ ನಾಸಿಕ್, ಅರಿಶಿನಗೋಡಿ, ಬಿ. ದುತ್ತರಗಿ, ಶಂಕರಪ್ಪ ಬಸಪ್ಪ ಬ್ಯಾಳಿ, ಬಸವಂತಪ್ಪ ವೀರಪ್ಪ ಮಡಿವಾಳ, ಮೂಡಲಗೇರಿ ಯತಿರಾಜ ಬಸವಲಿಂಗಶಾಸ್ತ್ರಿ ಬಾಳಿಮಠ, ಮಹಮದ್ ದಸ್ತಗೀರ್ ಸಾಹೇಬ ಗೋಗೇರಿ, ರುದ್ರಯ್ಯ ಚನ್ನವೀರಯ್ಯ ಭೂಸನೂರಮಠ, ತಮ್ಮನಗೌಡ್ರ, ಎಸ್.ವಿ. ಪ್ರಹ್ಲಾದ, ಈರಪ್ಪ ಮುಂಡಾಸದ, ಎಂ. ಜೀವನ ಮೊದಲಾದವರು ಮುಖ್ಯರಾದವರು.

**ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡವರು :**

ಮುದವೀಡು ಕೃಷ್ಣರಾಯರು, ಶಾಂತಕವಿ, ಹುಯಿಲುಗೋಳ ನಾರಾಯಣರಾಯರು, ಶ್ರೀರಂಗ, ಅ.ತು.ಸಾಸನೂರ, ಸ.ಸ.ಮಾಳವಾಡ, ಜಿ.ಬಿ.ಜೋಶಿ, ಆರ್.ಪಿ. ಕುಲಕರ್ಣಿ, ಭಾರತಿ ಹಾವನೂರ, ಕೌಲಗಿ, ದ.ರಾ.ಬೇಂದ್ರೆ, ಲಕ್ಷ್ಮಣರಾವ ಬೇಂದ್ರೆ, ಮಾಲತಿಕಟ್ಟಿ, ಆಶಾ ಮೆಳ್ಳಿಗಟ್ಟಿ, ಮೆಂಕು, ಹರ್ಷ, ಡಂಬಳ ವೀರಣ್ಣ, ಕುಲಿಗಾ, ಚಂದ್ರಶೇಖರ ಪಾಟೀಲ, ಶಾಂತಿನಾಥದೇಸಾಯಿ, ಸಿದ್ದಲಿಂಗ ಪಟ್ಟಣಶೆಟ್ಟಿ, ಬಿ.ಟಿ.ದೇಸಾಯಿ, ಎಸ್.ಆರ್. ತೋಂಟದಾರ್ಯ, ಜಯತೀರ್ಥ ಜೋಶಿ, ರಾಮಚಂದ್ರನಾಯುಡು, ಗುರುರಾಜಕಾಟೆ, ಗೋವಿಂದ ಮಣ್ಣೂರ, ಚಿತ್ತರಂಜನ ಚಟರ್ಜಿ, ಸುರೇಶಕಣಿ, ಅನಿಲ ಠಕ್ಕರ, ಜಿ.ಎಚ್.ರಾಘವೇಂದ್ರ, ಎಚ್.ಎ. ಪಾರ್ಶ್ವನಾಥ, ಈರಣ್ಣ ಪಾಳೇದ, ಮಹಾನಂದಾ ಹುಲ್ಲೂರ, ಸಿದ್ದಣ್ಣ ಅಂಗಡಿ, ಸುರೇಶ ಜಕಾತಿ, ಸಿದ್ದರಾಜ ಕಲ್ಯಾಣಕರ, ಸೇತುಮಾಧವ ಮಾನ್ವಿ, ಸುಭಾಷ ನರೇಂದ್ರ, ಯಶವಂತ ಸರ್‌ದೇಶಪಾಂಡೆ, ಗಣೇಶ ಜೋಶಿ, ಎನ್.ಎಸ್.ಗೋಠೆ, ರವಿ ಪಾಟೀಲ, ಪ್ರಮೋದ ನಿಂಬಾಳ್ಕರ, ಗಜಾನನಮಹಾಲೆ, ಸತೀಶ ಕುಲಕರ್ಣಿ, ಶರಭೇಂದ್ರ ಸ್ವಾಮಿ, ಪ್ರಭುಸ್ವಾಮಿ ಮಳೀಮಠ, ಸೊಲಬಕ್ಕನವರ, ಲೋಕೇಶ್ ವಿ. ಪಾಟೀಲ, ಎಲ್.ವಿ. ಪಾಟೀಲ, ಎಂ.ಎನ್.ಎಡಳ್ಳಿ, ವೀರೇಶ್ವರ ಹಿರೇಮಠ, ಮಾರುತೇಶ ಮಾಂದ್ರೆ, ಹಾಗೂ ಉದಯನಾಸಿಕ.

**ನಟ - ನಟಿಯರು :**

ಧಾರವಾಡ ಪ್ರದೇಶದಲ್ಲಿ ನಾಟಕಗಳು ಹಾಗೂ ನಾಟಕ ಕಂಪನಿಗಳು ಪ್ರಸಿದ್ಧವಾಗಲು ನಾಟಕ ಕರ್ತರು ಹೇಗೆ ಕಾರಣರೋ ಹಾಗೆಯೇ ನಟರೂ ಕಾರಣ. ಅನೇಕ ನಟರು ತಾವೇ ಸ್ವತಃ ನಾಟಕ ಕಂಪನಿಗಳನ್ನು ಕಟ್ಟಿ ನಡೆಸಿದ್ದೂವುಂಟು. ಅನೇಕ ನಾಟಕ ರಸಿಕರಿಂದ ತಮಗೆ ಬೇಕಾದ ನಾಟಕಗಳನ್ನು ನಾಟಕ ಕಂಪನಿಗಳ ಒಡೆಯರು ಬರೆಸುತ್ತಿದ್ದರು. ನಾಟಕ ಕಂಪನಿಗಳು ನಟರಿಗೆ ಹಾಗೂ ನಾಟಕಕಾರರಿಗೆ ಪೋಷಕರು ಹಾಗೂ ಪ್ರೋತ್ಸಾಹಕರಾಗಿದ್ದರು. ಇಂತಹ ಕಂಪನಿಗಳಲ್ಲಿದ್ದ ಕೆಲವು ನಟ - ನಟಿಯರು ಇವರು :

ಗರುಡ ಸದಾಶಿವರಾಯರು, ವಾಮನರಾವ್ ಮಾಸ್ತರ್, ಶಿರಹಟ್ಟಿ ವೆಂಕೋಬರಾಯರು, ಗುಳೇದಗುಡ್ಡ ಗಂಗೂಬಾಯಿ, ಹಮ್ಮಿಗಿ ನೀಲಕಂಠಪ್ಪ, ಬಸವರಾಜ ಮನ್ಸೂರ್, ಸೋನುಬಾಯಿ ದೊಡ್ಡನಿ, ಯಲಿವಾಳ ಸಿದ್ದಯ್ಯಸ್ವಾಮಿ, ಶ್ರೀಪಾದರಾವ್ ಗರುಡ. ಸುಭದ್ರಮ್ಮ ಮನಸೂರ್, ಮಲ್ಲಿಕಾರ್ಜುನ ಮನಸೂರ, ಎನ್. ಬಸವರಾಜ, ಭೀಮಸೇನ ಜೋಶಿ, ವೀರಭದ್ರಪ್ಪ ಹಡಗಲಿ, ಭೀಮರಾವ್ ಪುರುಷಪ್ಪನವರು, ರಾಜಣ್ಣ ಹೂಗಾರ, ಬಿ.ಕೆ. ಶಂಕರ್, ಹುಬ್ಬಳ್ಳಿಯ ಗಾರ್‌ಜಾನ್, ಜುಬೇರಾಬಾಯಿ ಸವಣೂರು, ವಜೀರಾಬಾಯಿ ಮನ್ಸೂರಿ, ಶಂಕರಯ್ಯ ರಕ್ಕಸಗಿ, ಕೊಟ್ರೇಶ್, ಅಂಬುಜಮ್ಮ ಕುಕನೂರು, ಬಾಬು, ಪ್ರೇಮಾ ಪಟ್ಟಣಶೆಟ್ಟಿ, ರಾಘವೇಂದ್ರಾಚಾರ್ಯ ಗುಡಿ, ಮಲ್ಲರಿರಾವ್ ಕಲಘಟಗಿ, ಸಿದ್ದರಾಮ ಜಂಬಲದಿನ್ನಿ, ಅನೂರಾಧಾ ಧಾರೇಶ್ವರ, ಪ.ಶಿ. ಭಾಂಡಗೆ, ಎರಾಸಿ ಭೀಮಪ್ಪ, ಸುಶೀಲೇಂದ್ರಜೋಶಿ, ಸರೋಜಮ್ಮ ದುತ್ತರಗಿ, ಇಮಾಮ್‌ಸಾನಿ ಶಿರಹಟ್ಟಿ, ರೇಣಮ್ಮ ಬೆಟದೂರ, ಸುಲೋಚನಾಬಾಯಿ ಬೆಟದೂರು, ಖಟವಟೆ, ಪುರಿಲಕ್ಷ್ಮಣರಾವ್, ಪ್ಯಾರಿನಾಬಾಯಿ, ಪಂಚಾಕ್ಷರಿಗವಾಯಿಗಳು, ಗಡಾದ ರಾಜೇಂದ್ರ, ಏಕಪಾತ್ರಾಭಿನಯದ ಹಾನಗಲ್ಲಿನ ಶ್ರೀಪಾದರಾವ ಉಡುಗಣಿ, ಹಾನಗಲ್ಲಿನ ಬಸವರಾಜ ಬಳ್ಳಾರಿ, ಶ್ಯಾಡಗುಪ್ಪಿಯ ಬಾಳೂರ ಬರ್ಮಣ್ಣ, ಅದೇ ಊರಿನ ಐಯ್ಯನಗೌಡ ಪಾಟೀಲ, ಅಶೋಕಬೆಟದೂರ, ರೊಟ್ಟಿ ಗೋವಿಂದಾಚಾರ್ಯ, ಶೀಮಣ್ಣ ಅಕ್ಕಿ, ಮರಿಯಪ್ಪ ತಳವಾರ, ವೀರಪ್ಪ ಕರ್ಜಗಿ, ರಾಚಯ್ಯ, ತಿಗಳೀಮಠ, ಅಬ್ದುಲ್ ಖಲಾಸ್, ಬಸವಣ್ಣೆಪ್ಪ ಹೊಂಬಾಳಿ, ಮುದಕಪ್ಪ ಮಟ್ಟಿ, ಶಿವಪ್ಪ ಕಪ್ಪತ್ತನವರ್, ಅಬ್ದುಲ್ ಖಾದರ್ ಅತ್ತಾರ, ಸಂಕದಾಳ ಶಿವಯೋಗಪ್ಪ, ಮಲಕಾಜಪ್ಪ ಭೂರಶೆಟ್ಟರ, ಬಸವಣ್ಣೆಪ್ಪ ಹವಳದ, ಚನ್ನವೀರಪ್ಪ ಸಂಕದಾಳ, ಶಿವಪ್ಪ ಭೊರಶೆಟ್ಟಿ, ಬಿ.ಎಫ್. ಹೋಳಿಬಸಯ್ಯ, ಎಫ್. ಜಿಗುರಣ್ಣ, ಸಾಳುಂಕೆ, ಕಡ್ಲಿಕೊಪ್ಪ ಸಂಕದಾಳ, ಚಿಕ್ಕನೂರಿನ ಶಿವಪ್ಪ ಬಳಿಗಾರ, ಎಮ್ಮಿಗನೂರು ಗದಿಗಯ್ಯಾ ಹಿರೇಮಠ, ಕಣಬರ್ಗಿಮಠ, ಹಾಸ್ಯಪಾತ್ರದ ಗದಗಿನ ವೀರಭದ್ರಪ್ಪ ಹಡಗಲಿ (ಹಣ್ಣಿ), ರಾಜಣ್ಣ ಹೂಗಾರ, ಗದಗಿನ ಮಹಾಲಕ್ಷ್ಮಿ ರಾಘವೇಂದ್ರಾಚಾರ್ಯಗುಡಿ, ಹಾನಗಲ್ಲಿನ ಬಸವರಾಜ ಬಳ್ಳಾರಿ ಹಾಗೂ ಚನ್ನವೀರೇಶ್ವರ ಗುತ್ತಲ ('ತಬರನ ಕತೆ' ಚಲನಚಿತ್ರದಲ್ಲೂ ಅಭಿನಯಿಸಿದ್ದಾರೆ) ಉಲ್ಲೇಖನೀಯರು.

**ನಾಟಕಮಂದಿರಗಳು :** ನಾಟಕಗಳು ಅಭಿವೃದ್ಧಿ ಹೊಂದಬೇಕಾದಲ್ಲಿ ನಾಟಕಮಂದಿಗಳೂ ಬಹುಮುಖ್ಯ. ರಂಗತಂಡಗಳು ತಾವು ಬೀಡುಬಿಡುವ ಸ್ಥಳಕ್ಕೆ ರಂಗಪರಿಕರಗಳನ್ನು ತೆಗೆದುಕೊಂಡು ಹೋಗಬೇಕಾಗುತ್ತಿತ್ತು. ಮುಂದೆ ಅಲ್ಲಲ್ಲಿ ನಾಟಕಗಳಿಗಾಗಿ ಕೆಲವು ಕಟ್ಟಡಗಳು ನಿರ್ಮಿತವಾದವು. ಮುಂದೆ ಇವುಗಳ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ಇವುಗಳ ಪಟ್ಟಿಯನ್ನು ಈ ಕೆಳಗೆ ನೀಡಿದೆ.

ಕಲಾಭವನ, ಧಾರವಾಡ; ಸವಾಯಿ ಗಂದರ್ವ ಹಾಲ್, ಹುಬ್ಬಳ್ಳಿ; ಗಣೇಶ್ ನಾಟಕ ಗೃಹ ಹುಬ್ಬಳ್ಳಿ; ಎಸ್.ಎಸ್.ಎನ್. ನಾಟಕಮಂದಿರ, ಧಾರವಾಡ; ಗಜಾನನ ಡ್ರಾಮಾ ಥಿಯೇಟರ್, ಹುಬ್ಬಳ್ಳಿ; ಮಹಾಲಕ್ಷ್ಮಿ ಡ್ರಾಮಾ ಥಿಯೇಟರ್, ಹುಬ್ಬಳ್ಳಿ; ಶ್ರೀಶಕ್ತಿ ಡ್ರಾಮಾ ಥಿಯೇಟರ್, ಹುಬ್ಬಳ್ಳಿ; ಬಸವರಾಜ ನಾಟಕ ಮಂದಿರ, ಹುಬ್ಬಳ್ಳಿ; ಐಹೊಳೆ ಡ್ರಾಮಾ ಥಿಯೇಟರ್, ರೋಣ; ಪುಷ್ಪಾ ಡ್ರಾಮಾ ಥಿಯೇಟರ್, ಗದಗ; ಕಂಪನಿ ನಾಟಕ ಮಂದಿರ, ಹಾವೇರಿ; ಮಲ್ಲಿಕಾರ್ಜುನ ನಾಟಕ ಗೃಹ, ಧಾರವಾಡ; ಟಾಗೋರ್ ಹಾಲ್, ಮುಂಡರಗಿ; ಟೌನ್‌ಹಾಲ್, ಶಿರಹಟ್ಟಿ; ಟೌನ್‌ಹಾಲ್, ಹಾನಗಲ್; ಟೌನ್‌ಹಾಲ್, ಹುಬ್ಬಳ್ಳಿ; ಯೂನಿವರ್ಸಿಟಿ ರಂಗಮಂದಿರ, ಧಾರವಾಡ; ಕೆ.ಎಂ.ಸಿ. ರಂಗಮಂದಿರ, ಹುಬ್ಬಳ್ಳಿ; ಜೆ.ಟಿ. ಕಾಲೇಜು ಜಮ್ಮಾನಾಹಾಲ್, ಗದಗ; ಹಾಗೂ ತೋಂಟದ ಸಿದ್ದಲಿಂಗ ಕಲ್ಯಾಣಮಂಟಪ, ಗದಗ.

ಬಯಲು ರಂಗಮಂದಿರಗಳು: ಧಾರವಾಡ ಪುರಸಭೆ, ರಾಣೆಬೆನ್ನೂರು, ಕರ್ನಾಟಕ ಕಾಲೇಜು ಬಯಲು ರಂಗಮಂದಿರ, ಜೆ.ಎಸ್.ಎಸ್. ಕಾಲೇಜು ಬಯಲು ರಂಗಮಂದಿರ. ಈ ಮೇಲಿನ ಪಟ್ಟಿಕೆಯಲ್ಲದೆ ಎಲ್ಲಾ ಕಾಲೇಜು, ಜೂನಿಯರ ಕಾಲೇಜುಗಳಲ್ಲಿ ಬಯಲು ವೇದಿಕೆ ಇದ್ದರೂ ಅವು ನಾಟಕಕ್ಕೆ ಹೇಳಿಮಾಡಿಸಿದವುಗಳಲ್ಲ.

ಜಿಲ್ಲೆಯ ನಾಟಕ ತಂಡಗಳು : ಅಂಕುರ (ಮಕ್ಕಳ ತಂಡ), ಧಾರವಾಡ; ಅಂಟಿ ತಂತಿ ಸ್ನೇಹಕುಂಜ, ಹುಬ್ಬಳ್ಳಿ; ಅಂತರಂಗ ನಾಟಕಕೂಟ, ಧಾರವಾಡ (ಕ.ವಿ.ವಿ.ಯ ಅಧ್ಯಾಪಕರು); ಅಂತರಂಗ, ಧಾರವಾಡ (ಶಾಂತಿನಾಥ ದೇಸಾಯಿ); ಅನಿಲತಕ್ಕರ ತಂಡ, ಹುಬ್ಬಳ್ಳಿ; ಅನ್ವೇಷಣೆ ವೇದಿಕೆ, ಗದಗ; ಅಭಿನಯ ಭಾರತಿ, ಧಾರವಾಡ; ಅಭಿನಯ ರಂಗ, ಗದಗ; ಅಮರ ಆರ್ಟ್ಸ್ ಅಸೋಸಿಯೇಷನ್, ಧಾರವಾಡ; ಅರಿಷಿಣ ಗೋಡಿ ನಾಟಕ ಕಂಪನಿ; ಅಲೆಮಾರಿಗಳು, ಹುಬ್ಬಳ್ಳಿ; ಆಧುನಿಕ ರಂಗಭೂಮಿ, ಗದಗ-ಬೆಟಗೇರಿ; ಆರ್.ಎನ್.ಕೆ. ಮಿತ್ರಮಂಡಳಿ, ಗದಗ; ಆಸುಂಡಿ ಕಂಪನಿ; ಕಡಪಟ್ಟಿ ನಾಟಕ ಕಂಪನಿ; ಕರ್ನಾಟಕ ಕಲೋದ್ಧಾರಕ ಸಂಘ, ಧಾರವಾಡ; ಕಲಾಕಿರಣವೃಂದ, ನರಗುಂದ; ಕಲಾಕ್ಷೇತ್ರ, ಹುಬ್ಬಳ್ಳಿ; ಕಲಾದರ್ಪಣ, ಧಾರವಾಡ (ಮಳೀಮಠ); ಕಲಾದೇಗುಲ, ಧಾರವಾಡ; ಕಲಾ ಪ್ರಕಾಶ ನಾಟಕ ಮಂಡಳಿ, ಧಾರವಾಡ; ಕಲಾಪ್ರಕಾಶ ನಾಟ್ಯಸಂಘ, ಬ್ಯಾಡಗಿ; ಕಲಾ ಪೋಷಕ ಸಂಘ, ಬ್ಯಾಡಗಿ; ಕಲಾವಿಕಾಸ, ಹುಬ್ಬಳ್ಳಿ; ಕಲೋಪಾಸಕ ಮಂಡಳಿ, ಧಾರವಾಡ; ಜಿ.ಬಿ. ಕಾಮಧೇನು ನಾಟ್ಯ ಕಲಾ ಸಂಘ, ಕವಿವಿ, ಧಾರವಾಡ; ಕೆ.ಎಂ.ಸಿ. ಕಲಾವಿದರು, ಧಾರವಾಡ; ಕೊಣ್ಣೂರಕರ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ (ಕಣಬರ್ಗಿಮಠ); ಖುದಾಬಂದ್ ನಾಟಕ ಕಂಪನಿ, ಅಣ್ಣಿಗೇರಿ; ಗದಗಿನ ಗೆಳೆಯರು, ಗದಗ; ಗುಡಿಗೇರಿ ಸಂಗಮೇಶ್ವರ ನಾಟ್ಯ ಸಂಘ (ಬಸವರಾಜ); ಗೋಪಾಲಕೃಷ್ಣ ಕೃಪಾಪೋಷಿತ ಯಕ್ಷಗಾನ ಕಲಾವೃಂದ, ಹುಬ್ಬಳ್ಳಿ; ಚಿಗುರು (ಮಕ್ಕಳ ತಂಡ) ಧಾರವಾಡ; ಜಂಭುಲಿಂಗೇಶ್ವರ ನಾಟ್ಯಸಂಘ (ಯಮಟ್ಟಿ, ಕಲಘಟಗಿ ತಾ:); ಡೆಫರ್ ಅಸೋಸಿಯೇಷಮ್, ಧಾರವಾತ; ತಂತುಪುರ ನಾಟಕ ಕಂಪನಿ, ಗದಗ; ದತ್ತಾತ್ರೇಯ ನಾಟಕ ಮಂಡಳಿ, ಗದಗ; ದೊಳಿಬಸವೇಶ್ವರ ಯಕ್ಷಗಾನ ನಾಟಕ ಸಂಘ, ಹರನಗಿರಿ; ಧಾರವಾಡ ಕಲಾಕೇಂದ್ರ, ಧಾರವಾಡ; ಧಾರವಾಡ ಗೆಳೆಯರು, ಧಾರವಾಡ; ನಂಕಂಪ್ನಿ, ಬೆಂಗಳೂರು - ಧಾರವಾಡ; ನಟರಾಜ ನಾಟ್ಯ ಕಲಾನಿಕೇತನ; ನವಚೇತನ ಮಿತ್ರವೃಂದ, ಹಾನಗಲ್; ನಾಕೋಡ ನಾಟಕ ಕಂಪನಿ, ಗದಗ; ನಾಟ್ಯವಿಲಾಸಿಗಳು, ಧಾರವಾಡ (ಶ್ರೀರಂಗ); ಪಡೇಸೂರು ನಾಟಕ ಕಂಪನಿ; ಪಲ್ಲವಿ (ಮಕ್ಕಳು) ಧಾರವಾಡ; ಫೇತ್‌ಫುಲ್ ಫ್ರೆಂಡ್ಸ್, ಧಾರವಾಡ; ಪ್ರಗತಿ ಕಲಾ ವೃಂದ, ಹುಬ್ಬಳ್ಳಿ; ಪ್ರೇಮಚಂದ್ ಕಲಾ ವೃಂದ, ಹಾವೇರಿ; ಭರತ ಕಲೋತ್ತೇಜಕ ಸಂಗೀತ ನಾಟಕ ಮಂಡಳಿ, ಧಾರವಾಡ; ಮಿತ್ರಕಲಾವೃಂದ, ಹಿರೇಕೆರೂರು; ರಂಗ ಆಸಕ್ತರು, ಹುಬ್ಬಳ್ಳಿ; ರಂಗಚೇತನ; ರಂಗದರ್ಪಣ, ಧಾರವಾಡ; ರಂಗಭೂಮಿ, ಧಾರವಾಡ; ರಂಗರಂಜನಿ, ಹುಬ್ಬಳ್ಳಿ; ರಂಗಸಾಧನಾ, ಧಾರವಾಡ; ರವಿ ನಾಟ್ಯ ಕಲಾ ಸಂಘ, ಲಕ್ಷ್ಮೇಶ್ವರ; ರಾಮರಾವ ದೇಸಾಯಿ ನಾಟಕ ಕಂಪನಿ; ರೈಲ್ವೆ ಕಲಾವಿದರು, ಹುಬ್ಬಳ್ಳಿ; ಲಯನ್ಸ್ ಕ್ಲಬ್ ನಾಟ್ಯ ಸಂಸ್ಥೆ, ಹುಬ್ಬಳ್ಳಿ; ವಾಣಿವಿಲಾಸ ಸಂಗೀತ ನಾಟಕ ಮಂಡಳಿ, ಗದುಗು; ವೀಕ್ಷಣ ಮಿತ್ರವೃಂದ, ಧಾರವಾಡ; ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿ, ಗದಗ; ವೀರೇಶ್ವರ ನಾಟಕ ಮಂಡಳಿ, ಗದಗ; ವಿಶ್ವಗುಣಾದರ್ಶ ನಾಟಕ ಮಂಡಳಿ; ಶಿಗ್ಗಾಂವಿ ತಂಡ (ಬೀದಿ ನಾಟಕ, ಸೊಲಬಕ್ಕನವರ); ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟ್ಯಸಂಘ, ಗದಗ; ಶ್ರೀ ನಾರದಮುನಿ ಸಾಂಸ್ಕೃತಿಕ ಸಂಘ, ಚಿಗಟೇರಿ; ಶ್ರೀ ಬಸವೇಶ್ವರ ಪ್ರಾಸಾದಿತ ನಾಟ್ಯ ಸಂಘ, ಮುಳಮುತ್ತಲ; ಶ್ರೀಮಾರುತಿ ಭಜನಾ ನಾಟ್ಯ ಸಂಘ, ಹುಬ್ಬಳ್ಳಿ; ಶ್ರೀ ಮಹಾಲಕ್ಷ್ಮಿ ಪ್ರಾಸಾದಿತ ಸಂಗೀತ ನಾಟಕ ಸಭಾ, ಶಿರಹಟ್ಟಿ; ಶ್ರೀ ಹೊಸಬನಶಂಕರಿ ಗುಡಿಮೇಳ ಗದಗ - ಬೆಟಗೇರಿ; ಸಮುದಾಯ, ಧಾರವಾಡ; ಸರಸ್ವತೀ ನಿಕೇತನ ಕಲಾ ವಿಭಾಗ, ಧಾರವಾಡ; ಸಾರಸ್ವತ ಕಲಾವಿದರ ಸಂಘ (ಕೊಂಕಣಿ), ಧಾರವಾಡ; ಸುಳ್ಳದ ದೇಸಾಯಿ ನಾಟಕ ಕಂಪನಿ (ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ); ಸೃಷ್ಟಿ (ಮಕ್ಕಳ ತಂಡ), ಧಾರವಾಡ; ಸ್ನೇಹ ಕಲಾ ಕುಂಜ, ಹುಬ್ಬಳ್ಳಿ; ಸ್ನೇಹ ಕಲಾ ವೃಂದ, ಹಾವೇರಿ; ಸ್ತ್ರೀ ಸಂಗೀತ ನಾಟಕ ಮಂಡಳಿ,

ಲಕ್ಷ್ಮೇಶ್ವರ, (ಬಟ್ಟಾಸಾನಿ); ಹಲಸಂಗಿ ಕಂಪನಿ; ಹಾಲ ಸಿದ್ದೇಶ್ವರ ಪ್ರಾಸಾದಿತ ಸಂಗೀತ ನಾಟಕ ಸಭಾ, ಹಲಗೇರಿ (ಚೆಟ್ಟೆಪ್ಪ); ಹಾಗೂ ಭರಮಪ್ಪ ಎರೇಸೀಮೆ ಅವರ ವಾಣೀವಿಲಾಸ ಕಂಪನಿ.

ಮೇಲಿನ ಹೆಸರಿನ ನಾಟಕ ಕಂಪನಿಗಳಲ್ಲದೆ ಪ್ರತಿ ಊರಿನಲ್ಲಿಯೂ ಆ ಊರಿನ ಪ್ರಸಿದ್ಧ ದೇವತೆಯ ಹೆಸರಿನಲ್ಲಿ ಒಂದು ನಾಟಕ ಮಂಡಳಿ ಇದ್ದು ಊರಿನ ಜಾತ್ರೆ ಸಮಯದಲ್ಲಿ ಅಥವಾ ವಿಶೇಷ ಸಂದರ್ಭಗಳಲ್ಲಿ ಪೌರಾಣಿಕ ನಾಟಕಗಳನ್ನು ಆಡುತ್ತಾರೆ. ಅನೇಕ ಊರುಗಳಲ್ಲಿ ಸಾಮಾಜಿಕ ನಾಟಕಗಳನ್ನು ಆಡುವುದುಂಟು. ಇಲ್ಲಿ ನಟಿಸುವ ನಟರು ರೈತರಾದ್ದರಿಂದ ಸುಗ್ಗಿಯ ಕಾಲದಲ್ಲಿ ಅಥವಾ ಜಾತ್ರೆಯ ಕಾಲದಲ್ಲಿ ಮಾತ್ರ ಇವು ಜಾಗೃತವಾಗಿರುತ್ತವೆ.

ನಾಟಕ ಕ್ಷೇತ್ರಕ್ಕೆ ಮೀಸಲಾದ ರಂಗತೋರಣ ಎಂಬ ಮಾಸಪತ್ರಿಕೆ 1985ರಿಂದ ಧಾರವಾಡದಿಂದ ಪ್ರಕಟವಾಗುತ್ತಿದೆ. ವಿರೂಪಾಕ್ಷ ನಾಯಕರು ಇದರ ಸಂಪಾದಕರು.

### ಪತ್ರಿಕೋದ್ಯಮ

ಪತ್ರಿಕೋದ್ಯಮವು ಸಮಾಜದ ಮೇಲೆ ಅಪಾರ ಪ್ರಭಾವ ಬೀರಿದ ಮಾಧ್ಯಮ. ಇಂದಿಗೂ ಕೂಡ ರೇಡಿಯೋ, ಟಿ.ವಿ. ಮುಂತಾದ ಮಾಧ್ಯಮಗಳಿಗಿಂತ ಪ್ರಭಾವಶಾಲಿಯಾದದ್ದು ಪತ್ರಿಕೆಯೇ. ಇಂತಹ ಮಾಧ್ಯಮವು ಧಾರವಾಡ ಜಿಲ್ಲೆಗೆ ಕಾಲಿರಿಸಿದ್ದು 19ನೇಯ ಶತಮಾನದ ಉತ್ತರಾರ್ಧದಲ್ಲಿ, ಧಾರವಾಡ ಮತ್ತು ಹುಬ್ಬಳ್ಳಿ ಪಟ್ಟಣಗಳು ಹತ್ತಿರ ಹತ್ತಿರವಿದ್ದು ಎರಡೂ ವಿಭಿನ್ನ ರೀತಿಯಲ್ಲಿ ಬೆಳೆದವಾಗಿವೆ. ಹುಬ್ಬಳ್ಳಿ ವಾಣಿಜ್ಯ ಕೇಂದ್ರವಾದರೆ, ಧಾರವಾಡವು ವಿದ್ಯಾ, ಕಲಾ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದೆ. ಹಾಗಿಯೇ ಕೆಲವು ಪ್ರಮುಖ ಸ್ಥಳಗಳಾದ ಹಾವೇರಿ, ಗದಗಗಳಿಂದಲೂ ಅನೇಕ ವೃತ್ತಪತ್ರಿಕೆಗಳು ಪ್ರಕಟವಾಗಿವೆ. ಗದಗವು ವಾಣಿಜ್ಯ ಮತ್ತು ಸಾಂಸ್ಕೃತಿಕ ಕೇಂದ್ರಗಳೆರಡರ ಕೇಂದ್ರವೂ ಆಗಿದ್ದು ಧಾರವಾಡ ಮತ್ತು ಹುಬ್ಬಳ್ಳಿಯ ನಂತರದ ಸ್ಥಾನವನ್ನು ಪಡೆದಿದೆ. ಆರಂಭದ ಪತ್ರಿಕೆಗಳು ಆ ಕಾಲದಲ್ಲಿ ಸ್ಥಳೀಯವಾಗಿ ಲಭ್ಯವಿದ್ದ ಮುದ್ರಣದ ಸೌಲಭ್ಯ ಅಥವಾ ಕಲ್ಲಚ್ಚಿನ ಸೌಲಭ್ಯವನ್ನು ಹೊಂದಿ ಪ್ರಕಟಗೊಂಡಿರುತ್ತವೆ.

ಜಿಲ್ಲೆಯಲ್ಲಿ ಪ್ರಕಟವಾದ ಪ್ರಕಟವಾಗುತ್ತಿರುವ ಪತ್ರಿಕೆಗಳ ಪಟ್ಟಿಯನ್ನು ಗಮನಿಸಿದಾಗ ಬಹಳಷ್ಟು ಪತ್ರಿಕೆಗಳು ಅಲ್ಪಾಯುಗಳು. ಕೆಲವು ಪತ್ರಿಕೆಗಳು ಹುಟ್ಟಿದ ವರ್ಷವೇ ಸತ್ತರೆ, ಕೆಲವು ದೀರ್ಘಕಾಲ ನಿಯತಕಾಲದಲ್ಲಿ ಪ್ರಕಟವಾಗಿವೆ. ಕೆಲವು ಪತ್ರಿಕೆಗಳು ರಾಜಕೀಯ ಪ್ರೇರಿತವಾಗಿದ್ದರೆ, ಕೆಲವು ಸಾಹಿತ್ಯ ಸಾಂಸ್ಕೃತಿಕ ಅಂಶಗಳಿಗೆ ಒತ್ತು ಕೊಟ್ಟಿವೆ. ಇವೇ ಅಂಶಗಳಲ್ಲದೆ ಒಕ್ಕಲುತನ, ಶಿಕ್ಷಣ, ವೈದ್ಯ, ಸಹಕಾರ, ಖಾದಿ, ಧರ್ಮ, ಸಂಗೀತ, ಟ್ಯಾಕ್ಸ್, ಕೌಟುಂಬಿಕ ಸಮಸ್ಯೆಗಳು, ಚಲನಚಿತ್ರ ಮುಂತಾದ ವಿಭಿನ್ನ ವಿಷಯಗಳ ಮೇಲೂ ಪತ್ರಿಕೆಗಳು ಬಂದಿವೆ. ಇತ್ತೀಚೆಗೆ ಹಿಂದುಳಿದ ವರ್ಗಗಳ ಆಯೋಗಗಳು ನೇಮಕವಾದ ಮೇಲೆ ಕೆಲವು ಜಾತಿಗಳವರು ತಮ್ಮ ಜಾತಿಯ ಹೆಸರಿನಲ್ಲಿ ಪತ್ರಿಕೆ ತಂದಿರುವುದು ಕಾಣಬರುತ್ತದೆ.

ಜಿಲ್ಲೆಯಲ್ಲಿ ಆರಂಭವಾದ ಮೊದಲು ಪತ್ರಿಕೆ 'ಜ್ಞಾನಬೋಧಕ' (1861) ವೆಂಬ ಕನ್ನಡ ಮಾಸಿಕ, 1862ರಲ್ಲಿ ಇದು ನಿಂತುಹೋಯಿತು. ಮುಂದೆ ಇದೇ ಪತ್ರಿಕೆಯನ್ನು 'ವಿಚಿತ್ರವರ್ತಮಾನ ಸಂಗ್ರಹ'ವೆಂದು ಹೆಸರು ಬದಲಿಸಿ ವಾರ್ಷಿಕವಾಗಿ ತಂದು ಬೆಂಗಳೂರಿನಲ್ಲಿ ಅಚ್ಚುಹಾಕಿಸಿ ಧಾರವಾಡದಲ್ಲಿ ಪ್ರಕಟಿಸುತ್ತಿದ್ದರು. 1863ರಲ್ಲಿ ಈ ಪತ್ರಿಕೆಯೂ ನಿಂತುಹೋಯಿತು. ಮೇಲಿನ ಎರಡೂ ಪತ್ರಿಕೆಗಳ ಸಂಪಾದಕರು ವೆಂಕಟ ರಂಗೋ ಕಟ್ಟಿಯವರಾಗಿದ್ದರು. ಮುಂದೆ 1865ರಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು 'ಮಠಪತ್ರಿಕೆ' ಯೆಂಬ ಹೆಸರಿನಲ್ಲಿ ಬೆಳಗಾವಿಯಲ್ಲಿ ಮಾಸಪತ್ರಿಕೆಯೊಂದನ್ನು ಆರಂಭಿಸಿದರು. ಇದರ ಆರಂಭದ ಸಂಪಾದಕರಾಗಿ ಡೆಪ್ಯೂಟಿ ಚೆನ್ನಬಸಪ್ಪನವರೂ, ಸಹ ಸಂಪಾದಕರಾಗಿ ಗಂಗಾಧರ ಮಾಡಿವಾಳೇಶ್ವರ ತುರಮರಿಯವರೂ ಇದ್ದರು. ಮುಂದೆ 1866 ರಿಂದ 1871ರವರೆಗೆ ಈ ಪತ್ರಿಕೆ 'ಶಾಲಾ ಪತ್ರಿಕೆ'ಯೆಂದು ಹೆಸರು ಪಡೆದು ಧಾರವಾಡ ಮತ್ತು ಬೆಳಗಾವಿಗಳಿಂದ ಹೊರಬರುತ್ತಿತ್ತು. 1875ರಲ್ಲಿ ಧಾರವಾಡಕ್ಕೇ ಸ್ಥಳಾಂತರವಾಯಿತು. ಇಂದಿಗೂ ಈ ಪತ್ರಿಕೆ ಬರುತ್ತಿದೆಯೆಂಬುದು ಹೆಮ್ಮೆಯ ಸಂಗತಿ. ಇದರ ಹೆಸರು ಮಾತ್ರ ಬದಲಾಗಿದೆ. ಇವೆಲ್ಲ ಟ್ರೈನಿಂಗ್ ಕಾಲೇಜಿನ ಪ್ರಯತ್ನದಿಂದ ಇಲ್ಲವೇ ಶೈಕ್ಷಣಿಕ ಉದ್ದೇಶದಿಂದ ಬಂದ ಪತ್ರಿಕೆಗಳು.

1871ರಲ್ಲಿ ಧಾರವಾಡದಿಂದ 'ಕನ್ನಡ ಶಿಕ್ಷಕ'ವೆಂಬ ಮಾಸಪತ್ರಿಕೆ ಪ್ರಕಟವಾಯಿತು. 1873ರಲ್ಲಿ ಮರಾಠಿಭಾಷೆಯ 'ಧಾರವಾಡ ವೃತ್ತ' ಮತ್ತು 'ಭಾವಾ'ಯೆಂಬ ಪತ್ರಿಕೆಗಳೂ 1875ರಲ್ಲಿ ವೆಂಕಟರಂಗೋಕಟ್ಟಿಯವರ ಸಂಪಾದಕತ್ವದಲ್ಲಿ 'ಶೋಧಕ' ಎಂಬ ಕನ್ನಡ ಮಾಸಪತ್ರಿಕೆ ಹೊರಬಂದವು. ಹುಚ್ಚಯ್ಯ ವಿಭೂತಿಯವರ ಸಂಪಾದಕತ್ವದಲ್ಲಿ 1876ರಲ್ಲಿ 'ಚಂದ್ರೋದಯ'ಯೆಂಬ ಕನ್ನಡ ಮಾಸಪತ್ರಿಕೆ ಶುರುವಾಯಿತು. 1878ರಲ್ಲಿ ವೆಂಕಟರಂಗೋಕಟ್ಟಿಯವರು 'ಲೋಕಶಿಕ್ಷಣ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಅವರೇ 1880ರಲ್ಲಿ 'ಕರ್ನಾಟಕ ಪತ್ರ'ಯೆಂಬ ಇನ್ನೊಂದು ಪತ್ರಿಕೆಯನ್ನು ಹೊರ ತಂದರು. ಅದೇ ವರ್ಷ ಹುಚ್ಚಯ್ಯ ವಿಭೂತಿಯವರು 'ಪುಷ್ಪಮಾಲಿಕೆ'ಯೆಂಬ ಮಾಸಿಕವೊಂದನ್ನು ಆರಂಭಿಸಿದರು. 1885ರಲ್ಲಿ 'ಧನಂಜಯ'ಯೆಂಬ ದಿನ ಪತ್ರಿಕೆಯೊಂದು ಧಾರವಾಡದಿಂದ ರಾಷ್ಟ್ರೀಯ ವಾದಿಗಳಾದ ಅಣ್ಣಾಚಾರ್ಯ ಹೊಸಕೇರಿ ಸಂಪಾದಕತ್ವದಲ್ಲಿ ಪ್ರಕಟವಾಯಿತು. 1890ರಲ್ಲಿ ಫಕೀರಪ್ಪ ಅನಾಡ ಅವರು 'ಕರ್ನಾಟಕ ವೃತ್ತ'ವನ್ನು ಹೊರತಂದರು. ಮುಂದೆ ಇದಕ್ಕೆ ಮುದವೀಡು ಕೃಷ್ಣರಾಯರು ಸಂಪಾದಕರಾದರು. ಜಠಾರ ಮನತನದ 'ರಾಜಹಂಸ' (1891), 'ಧನಂಜಯ' (1895), 'ವಾಗ್ಭೂಷಣ' (1896) ಆರಂಭದ ಕಾಲದ ಗಣ್ಯ ಪತ್ರಿಕೆಗಳು, ಗದಗಿನಿಂದ ಸತ್ಯವೃತ್ತ (1888) ಪ್ರಕಟವಾಗುತ್ತಿತ್ತು.

ರಾಷ್ಟ್ರೀಯ ಜಾಗೃತಿಗೆ ಈ ಪತ್ರಿಕೆಗಳು ತಮ್ಮದೇ ಕೊಡುಗೆ ನೀಡಿದವು. ಕೆಲವು ಟಿಳಕರ 'ಕೇಸರಿ' ಪತ್ರಿಕೆಯಿಂದ ಪ್ರಭಾವಿತವಾಗಿದ್ದವು. 1898ರಲ್ಲಿ 'ರಾಜಹಂಸ' ಕಛೇರಿಯನ್ನು ದೇಶದ್ರೋಹದ ಅಪಾದನೆಗಾಗಿ ಝಡ್ತಿ ಮಾಡಿದ್ದರು. ಹರ್ಡೇಕರ ಮಂಜಪ್ಪನವರ 'ಧನುರ್ಧಾರಿ'ಯು ಹುಬ್ಬಳ್ಳಿಯಿಂದ (1904) ಹೊರಟು ಕೆಲಕಾಲ ನಡೆದ ರಾಷ್ಟ್ರೀಯ ವಾದಿ ಪತ್ರಿಕೆ. 'ಸದ್ಬೋಧ ಚಂದ್ರಿಕೆ'ಯು (1907) ಧಾರ್ಮಿಕ, ಅಧ್ಯಾತ್ಮಿಕ, ರಾಷ್ಟ್ರೀಯ ವಿಚಾರಗಳಿಗಾಗಿ ದುಡಿದು ಇಂದೂ ನಡೆಯುತ್ತಿರುವ ಅಗಡಿಯ ಮಾಸಿಕ. 'ವಾಗ್ಭೂಷಣ'ವು ಏಕೀಕರಣಕ್ಕಾಗಿ ಶ್ರಮಿಸಿದ ನಿಯತಕಾಲಿಕ. 'ಜಯ ಕರ್ನಾಟಕ' 'ಜಯಂತಿ' (1938) ಬೆಟಗೇರಿ ಕೃಷ್ಣಶರ್ಮರದು. 'ಜೀವನ' (ಗೆಳೆಯರ ಗುಂಪು ಆರಂಭಿಸಿದ್ದು) ಸಾಹಿತ್ಯ ಸೇವೆಯನ್ನು ದೀರ್ಘಕಾಲಿಕವಾಗಿ ಮಾಡಿದವು.

'ಜಯಕರ್ನಾಟಕ'ಕ್ಕೆ ಮುಂದೆ ಬಸವನಾಳರು ದೀರ್ಘಕಾಲ ಸಂಪಾದಕರಾಗಿದ್ದರು. ಗ.ಶಿ. ಹುರುಳಿರವರ 'ಅಂಕುಶ' ಕಿರಿಯ ಸಾಪ್ತಾಹಿಕವಾದರೂ 'ಕರಿಘನ ಅಂಕುಶ ಕಿರಿದೆನ್ನಬಹುದೆ?' ಎಂಬ ಧ್ಯೇಯವಾಕ್ಯದೊಂದಿಗೆ ನಿರ್ಭೀತ ಟೀಕೆಗಳಿಗೆ ಪ್ರಸಿದ್ಧವಾಗಿತ್ತು. ವಿನೀತ ರಾಮಚಂದ್ರರಾಯರು ಪ್ರಕಟಿಸುತ್ತಿದ್ದ ಸಾಹಿತ್ಯಿಕ, ಆಧ್ಯಾತ್ಮಿಕ ಮಾಸಿಕ 'ಪ್ರದೀಪ' ಒಂದು ಉಲ್ಲೇಖನೀಯ ಪ್ರಯೋಗ.

ಸ್ವಾತಂತ್ರ್ಯ ಪೂರ್ವದಲ್ಲಿ ಹಾವೇರಿಯ 'ಬಸವರಾಜ' (1928), ಹುಬ್ಬಳ್ಳಿಯ 'ತರುಣಕರ್ನಾಟ' (1929) ಹಾಗೂ 'ಲೋಕಮತ' (1924) ಧಾರವಾಡದ 'ವಿಜಯ' (1921) 'ಶುಭೋದಯ' (1918) (ಕೆರೂರು ವಾಸುದೇವಾಚಾರ್ಯ), 'ಕರ್ಮವೀರ' (1921) ಚಳುವಳಿಯ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸಿದ ಪತ್ರಿಕೆಗಳು. 1921ರ ಗೋಳಿಬಾರ್ ಪ್ರಕರಣದಲ್ಲಿ ಪತ್ರಿಕೋದ್ಯಮಿಗಳಿಗಾದ ಹಿಂಸೆ, ಅವರ ಬಂಧನಗಳ ವಿಚಾರ ಅಧ್ಯಾಯ 2 ರಲ್ಲಿ ಚರ್ಚಿಸಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಧಾರವಾಡದಿಂದ ಹೊರಟ 'ಬೆಳಕು' (1945) ಗೌರೀಶ ಕಾಯ್ಕಿಣಿ ಮುಂತಾದವರ ಯತ್ನದಿಂದ ಹೊರಬರುತ್ತಿದ್ದು ಉತ್ತಮ ಸಾಹಿತ್ಯಕ ಪತ್ರಿಕೆಯಾಗಿತ್ತು. ಇದೇ ರೀತಿ 'ಜಾಗೃತಿ' (1947) ಶಾದ್ರಿ ಶಾಮಣ್ಣ ಅವರ ಸಂಪಾದಕತ್ವದಲ್ಲಿ ಹೊರಡ ಸಮಾಜವಾದೀ ವಿಚಾರಗಳ ಸಾಪ್ತಾಹಿಕ, ಇವು ದೀರ್ಘಕಾಲ ನಡೆಯಲಿಲ್ಲ. ಎಂ. ಗೋಪಾಲಕೃಷ್ಣರಾಯರ 'ಕಲಿಯುಗ' ಒಂದು ವಿಶಿಷ್ಟ ವೈಜ್ಞಾನಿಕ ಮಾಸಿಕವು (ಧಾರವಾಡ) ಹಲವು ವರ್ಷ ನಡೆಯಿತು.

1947ರಲ್ಲಿ ಕೆ.ಎಫ್. ಪಾಟೀಲರು, ಶಂ.ವಾ. ಜಠಾರರು ಆರಂಭಿಸಿದ್ದ (1938) 'ವಿಶಾಲ ಕರ್ನಾಟಕ'ವನ್ನು ಖರೀದಿಸಿ ದಿನಪತ್ರಿಕೆಯಾಗಿ ಹುಬ್ಬಳ್ಳಿಯಿಂದ ಪ್ರಕಟಿಸಿದರು. ಪಾಟೀಲಪುಟ್ಟಪ್ಪ ಅದರ ಸಂಪಾದಕ ಮಂಡಲಿಯಲ್ಲಿ ಇದ್ದರು. ಮುಂದೆ ಆ ಪತ್ರಿಕೆ ನಿಂತಾಗ ಕೆ.ಎಚ್. ಪಾಟೀಲರು ಅದನ್ನು ಆರಂಭಿಸಿದರು. ಖ್ಯಾತ ಪತ್ರಕರ್ತ ಪಿ.ಎಲ್. ಬಂಕಾಪುರ ಹಲವುಕಾಲ ಅವರಲ್ಲಿ ದುಡಿದರು. ಈ ಪತ್ರಿಕೆ ಕೆಲವು ವರ್ಷ ಬೆಂಗಳೂರಿನಿಂದಲೂ ಹೊರಬರುತ್ತಿತ್ತು.

1947ರಲ್ಲೇ ಸ್ವಾತಂತ್ರ್ಯಯೋಧ ತಿ.ರು.ನೇಸ್ವಿಯವರು ಹುಬ್ಬಳ್ಳಿಯಿಂದ 'ನವಯುಗ' ದೈನಿಕ ಆರಂಭಿಸಿದರು. ಅದು ದೀಕಾಲ ನಡೆಯದೆ 1955ರಲ್ಲಿ ಮುಚ್ಚಿತು.

ಜಿಲ್ಲೆಯ ಹಾಗೂ ಉತ್ತರ ಕರ್ನಾಟಕದ ಪ್ರಭಾವಿ ಪತ್ರಿಕೆಯಾದ ಸಂಯುಕ್ತ ಕರ್ನಾಟಕವು 1929ರಲ್ಲಿ ಬೆಳಗಾವಿಯಲ್ಲಿ ವಾರಪತ್ರಿಕೆಯಾಗಿ ಪ್ರಾರಂಭವಾಯಿತು. ಮುಂದೆ 1933ರಲ್ಲಿ ಅದನ್ನು ದಿನಪತ್ರಿಕೆಯಾಗಿ ಪರಿವರ್ತಿಸಲಾಯಿತು. 1935ರಲ್ಲಿ ರಂಗನಾಥ ದಿವಾಕರರ ವಶಕ್ಕೆ ಈ ಪತ್ರಿಕೆ ಬಂದಿತು. ರಾಷ್ಟ್ರೀಯ ವಾಙ್ಮಯ ಟ್ರಸ್ಟ್ ಎಂಬ ಸಾರ್ವಜನಿಕ ಟ್ರಸ್ಟ್ ರಚಿಸಿ ಅವರ ವಶಕ್ಕೆ ಪತ್ರಿಕೆಯನ್ನು ಒಪ್ಪಿಸಿದರು. 1937ರಲ್ಲಿ ಈ ದಿನ ಪತ್ರಿಕೆ ಹುಬ್ಬಳ್ಳಿಗೆ ಬಂತು. ಮುಂದೆ ಲೋಕ ಶಿಕ್ಷಣ ಟ್ರಸ್ಟ್ ಎಂಬ ಸಂಸ್ಥೆಯಿಂದ ಈ ಪತ್ರಿಕೆ ನಡೆದು 'ಕರ್ಮವೀರ' ವಾರಪತ್ರಿಕೆಯನ್ನು ಪುನರುಜ್ಜೀವಿಸಿ ಇದೇ ಸಂಸ್ಥೆಗೆ ಒಪ್ಪಿಸಿದರು. ಎರಡನೇಯ ಮಹಾಯುದ್ಧ ಕಾಲದಲ್ಲಿ ಈ ಪತ್ರಿಕೆ ಟೆಲಿಪ್ರಿಂಟರ್ ವ್ಯವಸ್ಥೆ ಹೊಂದಿದ್ದು 1947ರಲ್ಲಿ ರೋಟರಿಯಂತ್ರ ಅಳವಡಿಸಿತು. ಹಣಮಂತರಾವ್‌ಮೊಹರೆ, ಹ.ರಾ. ಪುರೋಹಿತ, ಕಲ್ಲೆ ನಾರಯಣರಾವ್, ಆರ್.ಕೆ.ಜೋಶಿ, ದ.ಲ.ಕೆರೂರು, ಕೆ.ಶಾಮರಾವ್, ಸುರೇಂದ್ರದಾನಿ, ಎಂ. ನಾಗರಾಜರಾವ್, ಪಾ.ವೆಂ.ಆಚಾರ್ಯ. ಎಸ್.ವಿ.ಪಾಟೀಲ, ಬಿ.ಜಿ. ಕುಲಕರ್ಣೀ, ರಾವಬಹೂದ್ದೂರ್, ವಿ.ಬಿ. ನಾಯಕ, ಆರ್.ಎಂ. ಉಪಾಧ್ಯ, ಶಿವಾನಂದ ಜೋಶಿ, ಎಂ.ಆರ್. ಸಿದ್ಧಾಪುರ, ಜಿ.ವಿ. ಮುತಾಲಿಕ ದೇಸಾಯಿ, ಮಾಧವ ಮಹಿಷಿ, ಇವರೆಲ್ಲ ಈ ಪತ್ರಿಕೆಯಲ್ಲಿ ದುಡಿದು ಪಳಗಿದ ಪತ್ರಕರ್ತರು. 'ಕಸ್ತೂರಿ' ಈ ಗುಂಪಿನ ಜನಪ್ರಿಯ 'ಡೈಜೆಸ್ಟ್' ಮಾಸಿಕ. ಇಂಥದೇ 'ಪಂಚಾಮೃತ' ಎಂಬ ಮಾಸಿಕ ಕೆಲವು ವರ್ಷ ಪಂಡರಿನಾಥಾಚಾರ್ಯ ಗಲಗಲಿ ಅವರಿಂದ ಸಂಪಾದಿಕವಾಗಿ ಗದಗಿನಿಂದ ಹೊರಬರುತ್ತಿತ್ತು. ಇದೇ ವಿದ್ವಾಂಸರು 'ಮಧುರವಾಣಿ' ಎಂಬ ಸಂಸ್ಕೃತ ನಿಯತಕಾಲಿಕವನ್ನೂ ಹೊರತರುತ್ತಿದ್ದರು.

ಪಾಟೀಲ ಪುಟ್ಟಪ್ಪನವರು ವಿದೇಶದಲ್ಲಿ ಪತ್ರಿಕೋದ್ಯಮದಲ್ಲಿ ತರಬೇತಿ ಪಡೆದು ಬಂದವರಾಗಿ 1953ರ 'ಪ್ರಪಂಚ' ಸಾಪ್ತಾಹಿಕವನ್ನು ಆರಂಭಿಸಿದರು. ಅವರೇ 'ವಿಶ್ವವಾಣಿ' ದಿನಪತ್ರಿಕೆಯನ್ನು 1958ರಲ್ಲಿ ಆರಂಭಿಸಿದರು. 'ಸ್ತ್ರೀ' ಎಂಬ ಮಹಿಳೆಯರಿಗಾಗಿ ಮೀಸಲಾದ ನಿಯತಕಾಲಿಕವನ್ನೂ ಕೆಲಕಾಲ ಅವರು ಪ್ರಕಟಿಸಿದರು. ಎಂ.ಕೆ. ಜಾಗಿದ್ದಾರ್, ಮೈಸೂರ್‌ಮಠ, ಜೆ.ಎಸ್. ಉಮದಿ. ಎಂ.ಬಿ. ಬೂದಿಹಾಳಮಠ. ಐ.ಜಿ. ಸನದಿ ಇವರೆಲ್ಲ ಪ್ರಪಂಚ ಪತ್ರಿಕಾಲಯದಲ್ಲಿ ದುಡಿದು ಅನುಭವ ಪಡೆದವರು. ಇತ್ತೀಚೆಗೆ ಪ್ರಜಾವಾಣಿ ದಿನಪತ್ರಿಕೆ ತನ್ನ ಹುಬ್ಬಳ್ಳಿ (1988) ಆವೃತ್ತಿಯನ್ನು ಆರಂಭಿಸಿದೆ. ಇದಲ್ಲದೆ ಎಂ.ವಿ. ಮೆಳ್ಳಿಗಟ್ಟಿ, ಶಂ.ಪಾ. ಜಠಾರ, ಆರ್.ಎಸ್. ಚಕ್ರವರ್ತಿ, ಮತ್ತಿಹಳ್ಳಿ ಮದನಮೋಹನ, ಅಶೋಕಜಠಾರ, ಹುಚ್ಚೇಶ್ವರ ಮೇಧಿ ಇವರೆಲ್ಲ ಜಿಲ್ಲೆಯ ಕ್ರಿಯಾಶೀಲ ಪತ್ರಕರ್ತರು. ವಿಚಾರಗಳಿಗೆ ಮೀಸಲಾದ 'ನರಸಿಂಹ' ಎಂಬ ಪತ್ರಿಕೆಯನ್ನು ರಾಮಚಂದ್ರ ದಿಕ್ಷಿತ್ ಪ್ರಕಟಿಸುತ್ತಿದ್ದರು. ಈಗ ಅದು 'ಕ್ಷೇಮ' ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿದೆ. ಸುರೇಂದ್ರದಾನಿಯವರು 'ಪರಿವಾರ' ಎಂಬ ತ್ರೈಮಾಸಿಕವನ್ನು (1980) ಕೌಟುಂಬಿಕ ವಿಚಾರಗಳಿಗೇ ಮೀಸಲಾದ ವಿಷಯಗಳ ಚರ್ಚೆಗಾಗಿ ಪ್ರಕಟಿಸುತ್ತಿದ್ದಾರೆ.

ಮೊದಲೇ ಹೇಳಿದಂತೆ ಸಮಾಜ ಸುಧಾರಣೆ, ಸ್ವಾತಂತ್ರ್ಯ ಚಳವಳಿ, ಕಲೆಗಳ ಬಗ್ಗೆ ಪ್ರಚಾರ, ಸಾಹಿತ್ಯ, ಚಿತ್ರಕಲೆ, ಫೋಟೋಗ್ರಫಿಗಳಿಗೆ ಬೆಂಬಲ ನೀಡುತ್ತ ಬಂದ ಪತ್ರಿಕೆಗಳು ಜಿಲ್ಲೆಯಲ್ಲಿ ಜನನಾಡಿಯ ಮಿಡಿತಕ್ಕೆ ಪ್ರತಿಧ್ವನಿಸಿ ಸೇವೆ ಸಲ್ಲಿಸಿವೆ. ಅವುಗಳ ಅಕ್ಷರಾನುಕ್ರಮಣಿಕೆಯ ಯಾದಿಯಲ್ಲಿ ನೀಡಿದೆ. ಸಾಧ್ಯವಿದ್ದಷ್ಟು ಐತಿಹಾಸಿಕ ಮಾಹಿತಿಯನ್ನು ಸಂಗ್ರಹಿಸಲು ಇಲ್ಲಿ ಪ್ರಯತ್ನಿಸಿದೆ.

ಈಗ ಜಿಲ್ಲೆಯಲ್ಲಿ ಸುಮಾರು 15 ದೈನಿಕಗಳೂ 25 ಮಾಸಪತ್ರಿಕೆಗಳೂ 15 ಪಾಕ್ಷಿಕಗಳೂ 30ಕ್ಕೂ ಮೇಲ್ಪಟ್ಟು ಇತರ ಪತ್ರಿಕೆಗಳೂ ಹೀಗೆ 85 (1994ರಂತೆ) ನಿಯತಕಾಲಿಕಗಳು ಪ್ರಕಟವಾಗುತ್ತಿವೆ. ಇವುಗಳಲ್ಲಿ ಅರ್ಧಕ್ಕೂ ಹೆಚ್ಚು ಹುಬ್ಬಳ್ಳಿಯಿಂದ ಬರುತ್ತಿವೆ. ಎರಡನೇಯ ಸ್ಥಾನ ಧಾರವಾಡಕ್ಕೆ (ಸುಮಾರು 17) ಗದಗಿನಿಂದ ಆರು ಪತ್ರಿಕೆಗಳು ಬರುತ್ತಿವೆ. 'ಚಿತ್ರಲತಾ' 'ನಟರಾಜ' ಚಲನಚಿತ್ರ ಪತ್ರಿಕೆಗಳು 'ಸಿದ್ಧಾರೂಢ ತತ್ವಾಮೃತ' ಧಾರ್ಮಿಕ ಆಧ್ಯಾತ್ಮಿಕ ಮೀಸಲಾದ ಮಾಸಿಕ. 'ಎಸ್.ಎಸ್.ಕೆ. ವಾರ್ತೆ'ಯಂಥ ಒಂದು ಜಾತಿಗೆ ಮೀಸಲಾದ ಪತ್ರಿಕೆಗಳೂ ಇವೆ. 'ಹೊಟೇಲ್ ಸಂದೇಶ'ದಂಥ ವಾಣಿಜ್ಯ ಸಂಬಂಧಿ ನಿಯತಕಾಲಿಕಗಳೂ ಇವೆ.

## ಧಾರವಾಡ ಜಿಲ್ಲೆಯಿಂದ ಪ್ರಕಟವಾದ ಪತ್ರಿಕೆಗಳು ಯಾದಿ

| ಹೆಸರು | ಅವಧಿ* | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಅಂಕುಶ | ವಾ | ಧಾರವಾಡ | | ಗ.ಶ.ಹುರಳಿ |
| ಅಚ್ಯುತಪ್ರಭಾ | ತ್ರೈ | ಗದಗ | — | ನಾಡಗೌಡ |
| ಅರ್ಥವಿಕಾಸ | ವಾ | ಹುಬ್ಬಳ್ಳಿ | 1974 | ಕೃಪ.ಜೋಶಿ |
| ಅಪೇಕ್ಷಾವಾಣಿ | ದಿ | ಹಾವೇರಿ | — | ದೇವೇಂದ್ರಪ್ಪ ಮಾಳಗಾವಿ |
| ಅರೆಮಲೆನಾಡವಾರ್ತೆ | ವಾ | ಚಿಕ್ಕೇರೂರು | 1993 | ಶಾಂತೇಶ ಹುಲಿಕಾರ |
| ಅಲೆಮಾರಿವಾಣಿ * | ಪಾ | ಹುಬ್ಬಳ್ಳಿ | 1992 | ಬಾಬಾಜಾನ್ ಅತ್ತಾರ |
| ಆರ್ಟ್‌ಗಿಲ್ಡ್ (ಕಲಾ) | ಮಾ | ಧಾರವಾಡ | — | ಹಾಲಭಾವಿ ಡಿ.ವಿ |
| ಆಧುನಿಕ ಭಾರತ | ಪಾ | ರಾಣೆಬೆನ್ನೂರು | 1938 | — |
| ಆನಂದ | ಮಾ | ಗದಗ | 1933 | ಶೇಷಗಿರಿ ಸರಾಫ್ |
| ಆಯುರ್ವೇದ ವಿದ್ಯಾ | ಮಾ | ಹುಬ್ಬಳ್ಳಿ | — | — |
| ಆಯುರ್ವಿದ್ಯಾ | ಮಾ | ಹುಬ್ಬಳ್ಳಿ | 1938-54 | ದಾಮೋದರ ಅ.ಹಲಸೀಕರ್ |
| ಆರೋಗ್ಯಮಂದಿರ | ಮಾ | ,, | 1939-42 | ಭಾಸ್ಕರ ಎಸ್.ಗೋರೆ |
| ಆರೋಗ್ಯ ಆಹಾರ | ಮಾ | ,, | 1973 | ಗಂಗಾಧರ ಸ್ವಾಮಿ |
| ಆಶಾಲತಾ * | ವಾ | ಧಾರವಾಡ | 1975 | ಮಲ್ಲಿಕಾರ್ಜುನ ಬಸರಕೋಡ್ |
| ಆರ್ಷಸಂದೇಶ | ಮಾ | ಮಲಗುಂದ (ಹಾನಗಲ್ಲು) | 1984 | ಪಿ.ಡಿ. ಕುಲಕರ್ಣಿ |
| ಎಸ್.ಎಸ್.ಕೆ.ವಾರ್ತೆ | ಪಾ | ಹುಬ್ಬಳ್ಳಿ | 1976 | ವಿಠಲ ಪವಾರ |
| ಎಲ್ಲರಿಗೂ ಆರೋಗ್ಯ | ಪಾ | ಹುಬ್ಬಳ್ಳಿ | 1992 | ವೀರೇಶ ಹಿರೇಮಠ |
| ಐಕ್ಯಮತ * | ವಾ | ಶಿರಹಟ್ಟಿ | 1978 | ಬಿ.ಆರ್. ಹೆಸರೂರ |
| ಒಕ್ಕಲಿಗರೂ ಒಕ್ಕಲುತನವೂ | ಮ | ಧಾರವಾಡ | 1911 | ದೇಸಾಯಿ, ಹೊಸ್ನಾಪುರಮಠ |
| ಓಂಕಾರ ಮತ್ತು ವೇದಾಮೃತ | — | ಗದಗ | — | ಜೋಶಿ |
| ಕಥಾಂಜಲಿ | ಮಾ | ಹುಬ್ಬಳ್ಳಿ | 1938-39 | ಪಟ್ಟಾಭಿರಾಮ |
| ಕಥಾಕುಸುಮಾವಲಿ | ಮಾ | ,, | 1938 | ಜಿ.ಎಸ್. ಕುಲಕರ್ಣಿ |
| ಕನ್ನಡಬಂದ | ಮ | ಧಾರವಾಡ | 1937 | ಕರವೀರ ಮಮ್ಮಿಗಟ್ಟಿ ಮತ್ತು ಮೇವುಂಡಿ |
| ಕನ್ನಡಕೇಸರಿ | ವಾ | ಹುಬ್ಬಳ್ಳಿ | 1908-9 | ಬಿಂದೂರಾವ್ ಮುತಾಲಿಕ ದೇಸಾಯಿ |
| ಕನ್ನಡ ಕೋಗಿಲೆ | ಪ.ಮಾ. | ನರೇಗಲ್ | 1938- | ಗುರುಪಾದಮಠ |
| ಕನ್ನಡ ಜ್ಞಾನಬೋಧಕ | ವಾ.ಮಾ | ಧಾರವಾಡ.ಬೆಳಗಾವಿ | 1862-63 | ವೆಂಕಟ ರಂಗೋ ಕಟ್ಟಿ |
| ಕನ್ನಡ ಧ್ವಜ | ಮಾ | ಹುಬ್ಬಳ್ಳಿ | 1991 | ನಾಗರಾಜ ಎಂ.ಗೋವಿ |
| ಕನ್ನಡ ಪ್ರಾಥಮಿಕ ಶಿಕ್ಷಣ | ಮಾ | ಧಾರವಾಡ | 1929-55 | ಆರ್.ವಿ. ದೇಸಾಯಿ |
| ಕನ್ನಡ ಶಾಲಾ ಪತ್ರ | ಮಾ | ಬೆಳಗಾವಿ.ಧಾರವಾಡ | 1867-71 | ಡೆಪ್ಯೂಟಿ ಚೆನ್ನಬಸಪ್ಪ, ವೆಂಕಟ ರಂಗೋ ಕಟ್ಟಿ |
| ಕನ್ನಡ ಶಿಕ್ಷಕ | ಮಾ | ಧಾರವಾಡ | 1871 | ಪ್ರಕಾಶಕ : ಶ್ರೀಮತಿ ಕೆ. ಲ್ಯಾಕ್ಸ್ ಟನ್ |

*ತ್ರೈ-ತ್ರೈಮಾಸಿಕ, ಮಾ-ಮಾಸಿಕ, ಪ-ಪಾಕ್ಷಿಕ, ವಾ-ವಾರಪತ್ರಿಕೆ, ದಿ-ದಿನಪತ್ರಿಕೆ

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಕನ್ನಡಿಗ | ಮಾ | ಧಾರವಾಡ | 1923 | ಶ್ರೀನಿವಾಸರಾವ್ ಮಂಗಳವೇಡೆ |
| ಕನ್ನಡಿಗ ● | ವಾ | ಹುಬ್ಬಳ್ಳಿ | 1951 | ಹುಚ್ಚೀಶ್ವರ ಮೇಧಿ |
| ಕರ್ನಾಟಕ ಟೈಮ್ಸ್ | ವಾ | ಧಾರವಾಡ | 1939-35 | ಎಚ್.ಎನ್. ಶಿವಲಿಂಗಶಾಸ್ತ್ರಿ |
| ಕರ್ನಾಟಕ ಪತ್ರ | ವಾ | ಬೆಳಗಾವಿ\ಧಾರವಾಡ | 1883-1906 | ವೆಂಕಟ ರಂಗೋ ಕಟ್ಟಿ |
| ಕರ್ನಾಟಕ ಭಾರತಿ | ತ್ರೈ | ಧಾರವಾಡ | — | ಕ.ವಿ.ವಿ. |
| ಕರ್ನಾಟಕ ಬಂಧು | ಮಾ\ವಾ | ಗದಗ | 1931-69 | ಸಿ.ಬಿ. ಸ್ವಾಮಿ ಹಿರೇಮಠ |
| ಕರ್ನಾಟಕ ಮುನ್ನಡೆ ● | ಪಾ. | ಹುಬ್ಬಳ್ಳಿ | 1984 | ಎಂ.ಸಿ. ಭದ್ರಾಪುರ |
| ಕರ್ನಾಟಕ ವಾರ್ತಿಕ (ಮರಾಠಿ) | — | ಧಾರವಾಡ | 1889 | — |
| ಕರ್ನಾಟಕ ವೃತ್ತ | ವಾ. | ಧಾರವಾಡ | 1890-1910 | ಅನಾಡ |
| ಕರ್ನಾಟಕ ವೀರ | — | ಹೊಳೀಆಲೂರು | 1984 | ಶ್ರೀಶೈಲಪ್ಪಾ ಕಲ್ಯಾಣ |
| ಕರ್ನಾಟಕ ಶಿಕ್ಷಣ | ಮಾ:ತ್ರೈಮಾ, | ಧಾರವಾಡ | 1918-19 | — |
| ಕರ್ನಾಟಕ ಸತ್ಯಾಗ್ರಹ | — | ಹುಬ್ಬಳ್ಳಿ | 1924 | ಚಂದೂರು ಮೂರ್ತಿ |
| ಕರ್ನಾಟಕ ಸಹಕಾರಿಮಿತ್ರ | ಮಾ | ಧಾರವಾಡ | 1922-24 | ಎಂ.ಎಂ. ಬಸರೂರು |
| ಕರ್ನಾಟಕ ಸಿಂಹ | ಮಾ | ಧಾರವಾಡ | 1922 | ಶಾಂತಪ್ಪ ನೇಮೊಣಪ್ಪ ಬಲಗುಂದಿ |
| ಕರ್ನಾಟಕ ಸುಂದರಿ | ಮಾ | ಹಾವೇರಿ | 1922-23 | ದೇಸಾಯಿ ಪಾಯಪ್ಪ |
| ಕರ್ನಾಟಕ ಸ್ಕೌಟ್ | — | ಧಾರವಾಡ | 1927 | ಬಿ.ಟಿ. ಚಾರಿ |
| ಕಮರ್ಷಿಯಲ್ ಟೈಂಸ್ ● | ವಾ | ಹುಬ್ಬಳ್ಳಿ | 1992 | ರಾಜಶೇಖರ ಉಳ್ಳಾಗಡ್ಡಿಮಠ |
| ಕರ್ಮವೀರ | ವಾ | ” | 1921 | ಆರ್. ದಿವಾಕರ |
| ಕಲಾಪ್ರಪಂಚ | ಮಾ | ಗದಗ | 1981 | ಅಶೋಕ್ ಅಕ್ಕಿ |
| ಕಲ್ಪನಾ | ವಾ | ಧಾರವಾಡ | 1951-70 | — |
| ಕಲ್ಪನಾ ಚಲನಚಿತ್ರ | ಮಾ | ಗದಗ | 1950 | ಪಾಟೀಲ್ |
| ಕಲ್ಯಾಣ | ದ್ವೈ.ಮಾ | ” | 1975 | — |
| ಕಲಿಯುಗ | ತ್ರೈ.ಮಾ | ಧಾರವಾಡ\ಮಂಗಳೂರು | 1936-56 | ಎಂ. ಗೋಪಾಲಕೃಷ್ಣ ರಾವ್ |
| ಕಲ್ಕಿ | ವಾ | ಗದಗ | 1949 | ಅಂದಾನಪ್ಪ ದೊಡ್ಡಮೇಟಿ |
| ಕವಿತಾ | ಮಾ | ಧಾರವಾಡ | 1918 | — |
| ಕವಿರಶ್ಮಿ ● | ವಾ | ಹುಬ್ಬಳ್ಳಿ | 1987 | ಎಸ್.ಬಿ. ಮುತಾಲಿಕ |
| ಕಸ್ತೂರಿ | ಮಾ | ” | 1956 | ಮೊಹರೆ ಹನುಮಂತರಾಯ |
| ಕಾಮಧೇನು | ಮಾ | ಹುಬ್ಬಳ್ಳಿ | 1952-56 | ಆರ್.ಆರ್. ದಿವಾಕರ |
| ಕಾಲಗರ್ಭ ● | ಪಾ | ” | 1993 | ಎಸ್.ಜಿ. ಶೆಟ್ಟರ |
| ಕ್ರಾಂತಿ | ವಾ:ಪ | ಗದಗ:ಗುಲ್ಬರ್ಗಾ | — | ಎಂ. ಸಿದ್ದರಾಮೇಶ್ವರ |
| ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ | ಮಾ | ಗದಗ-ಬೆಟಗೇರಿ | 1986 | ಎಸ್.ಎಸ್. ಹರಿಹರ |
| ಕ್ಯಾರಿಯರ್ ರಿವ್ಯೂ (ಇಂ) | ಪಾ | ಧಾರವಾಡ | 1975 | ಚಟಣಿ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಕ್ರಿಯಾಶಕ್ತಿ | ವಾ | ಹುಬ್ಬಳ್ಳಿ | — | ಗೋಪಿನಾಥ ಸಾಂಡ್ರ |
| ಕುರುಕ್ಷೇತ್ರ | ವಾ | ಧಾರವಾಡ\ಜಮಖಂಡಿ\ ಬಿಜಾಪುರ | 1947-75 | ಬಾಬುರೆಡ್ಡಿ ತುಂಗಳ |
| ಕೃತಪುರ (ಕಲ್ಲಚ್ಚು) | | ಗದಗ | 1920-30 | ಸಂದಿಗೌಡ |
| ಕೃಷಿಪೇಟೆ ● | ಮಾ | ಹುಬ್ಬಳ್ಳಿ | 1960 | ಕ.ರೆ.ಅಡ್ಡಯ್ಯರಿಬೋರ್ಡ್ |
| ಕ್ಷೇಮ | ಮಾ | ಧಾರವಾಡ | 1967-75 | ವಿದ್ಯಾಕಣವೀಕರ |
| ಕ್ಷೇಮಸಮಾಚಾರ | ವಾ | ಧಾರವಾಡ | 1912 | ಕಾವ್ಯಾನಂದ ಪುಣೇಕರ್ |
| ಖಾದಿಕಾರ್ಮಿಕವಾಣಿ ● | ಮಾ | ಹುಬ್ಬಳ್ಳಿ | 1986 | ವೈ.ಬಿ.ಗೌಡರ |
| ಖಾದಿ ಜಗತ್ತು ● | ಮಾ | ಹುಬ್ಬಳ್ಳಿ | 1978 | ಸುರೇಂದ್ರ ದಾನಿ |
| ಖಾದಿವಿಜಯ | ಮಾ | ಹುಬ್ಬಳ್ಳಿ | 1928 | ಮಂಜಪ್ಪ ಹರ್ಡೇಕರ್ |
| ಗಂಗಾಕಾವೇರಿ ● | ವಾ | ಹುಬ್ಬಳ್ಳಿ | 1993 | ಶಿವಾನಂದ ಜೋಶಿ |
| ಗಂಗಾತರಂಗ | ಮಾ | ಧಾರವಾಡ | — | ವೈ.ಬಿ. ಸುಣಗಾರ |
| ಗರ್ಜನೆ | ಮಾ | ಗದಗ | 1950-51 | ಪ.ಲೋ. ಬಂಕಾಪುರ |
| ಗಜೇಂದ್ರಪ್ರಭಾ ● | ವಾ | ಗಜೇಂದ್ರಗಡರೋಣ | 1986 | ಕೆ. ರಾಘವೇಂದ್ರ |
| ಗದಗಪತ್ರಿಕೆ | ವಾ | ಗದಗ | 1985 | ಚಳ್ಳಮರದ್ |
| ಗುಪ್ತವರದಿ ● | ಪಾ | ಹುಬ್ಬಳ್ಳಿ | 1992 | ಆರ್.ಆರ್. ಸಿಕಂದರ್ |
| ಗುಪ್ತಚಾರ ● | ವಾ | ಹುಬ್ಬಳ್ಳಿ | 1987 | ಅಹಲ್ಯಾಬಾಯಿ ಪಿ. ಸುಗತೆ |
| ಗೃಹವೈದ್ಯ | ಮಾ | ” | 1938 | ಎಂ.ಎಂ.ಹಲಸೀಕರ |
| ಗೆಳೆಯ | — | ಕೋಳಿವಾಡ | 1929 | ವಿ.ಕೃ. ಕೋಳಿವಾಡ |
| ಜ್ಞಾನಬೋಧಕ | ಮಾ | ಧಾರವಾಡ | 1861 | ವೆಂಕಟ ರಾಮಕಟ್ಟಿ |
| ಜ್ಞಾನಲತಾ | ಮಾ | ಗದಗ | — | ನರಸಿಂಹಗುಡಿ |
| ಚಂದ್ರೋದಯ (ಕಲ್ಲಚ್ಚು) | ಪಾಮಾ | ಧಾರವಾಡ | 1877 | ಹುಚ್ಚಯ್ಯ |
| ಚಿತ್ರಪ್ರಕಾಶನ್ | ವಾ | ಹುಬ್ಬಳ್ಳಿ | 1977-78 | ಎಚ್.ವಿ. ಪಾಟೀಲ |
| ಚಿತ್ರಾ | ಮಾ | ಗದಗ | 1952 | ಪ.ಲೋ. ಬಂಕಾಪುರ |
| ಚಿತ್ರಲತಾ ● | ಮಾ | ಹುಬ್ಬಳ್ಳಿ | 1967 | ಎಸ್.ಎನ್. ಜೋಶಿ |
| ಜನಪ್ರಕಾಶ | ದಿ | ಗದಗ | 1978 | ಎನ್.ಎನ್. ಹುಂಬರವಾಡಿ, ವಿ.ಕೆ. ಕವುತಾಳ |
| ಜನಸಂಘ | ವಾ | ಗದಗ | 1977 | ಬಿ.ಎಚ್. ಹೊಂಬಾಳಿ |
| ಜಯ | ಮಾ | ಹುಬ್ಬಳ್ಳಿ (ಧಾರವಾಡ) | 1928 | ಎಸ್. ಭೀಮಾಚಾರ್ |
| ಜಯಕರ್ನಾಟಕ | ಮಾ:ವಾ | ಧಾರವಾಡ | 1947-70 | ಆಲೂರು ವೆಂಕಟರಾವ್, ದ.ರಾ.ಬೇಂದ್ರೆ, ಬಸವನಾಳ |
| ಜಯಂತಿ | ಮಾ:ವಾ | | 1938 | ಬೆಟಗೇರಿ ಕೃಷ್ಣ ಶರ್ಮ |
| ಜಯ್‌ಹಿಂದ್ | ಮಾ:ವಾ | | 1939-47 | ಎಸ್.ಬಿ. ಮನಗೋಳಿ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಜಾಗ್ರತನಾಗರಿಕ ● | ಮಾ | | 1982 | ಆನಂತ ವಿ. ಹುಯಿಲಗೋಳ |
| ಜಾಗೃತ ಭಾರತ* | ಮಾ | ಧಾರವಾಡ | — | ವೆಂಕಟೇಶ ಕುಲಕರ್ಣಿ |
| ಜಾಗೃತಿ | ವಾ | ಧಾರವಾಡ | 1947-49 | ಖಾದ್ರಿ ಶಾಮಣ್ಣ |
| ಜಾಬ್‌ನ್ಯೂಸ್ | ಪಾ | ಗದಗ | 1979 | ಎಚ್.ಎಸ್.ಹರಿದಾಸ್ |
| ಜಿಲ್ಲಾ ಜ್ಯೋತಿ ● | ಪಾ | ಧಾರವಾಡ | 1993 | ಎಂ.ಎನ್. ಪ್ರಭುಸ್ವಾಮಿ |
| ಜೀವನ | ಮಾ | ಧಾರವಾಡ | 1938 | ಬೇಂದ್ರೆ, ಗೋಗಿ - ಮುರಳಿ |
| ಜೀವನ ಶಿಕ್ಷಣ (ಶಾಲಾಪತ್ರಿಕೆ) ● | ಮಾ | ” | 1956 | ಬಿ.ಡಿ. ಮಾಣಿ, ಎಸ್. ಹಿರೇಮಠ |
| ಜೀವನ ಬುಗ್ಗೆ | ಮಾ | ಗದಗ | 1981 | ಸ್ಟೀವನ್‌ವಾಯ್ ಬನ್ನಾ |
| ಟ್ಯಾಕ್ಸ್ ಮಿತ್ರ | ಮಾ | ಗದಗ | 1983 | ಎಚ್.ಆರ್. ಕೊಪ್ಪರ್ |
| ಟ್ವಿನ್ ಸಿಟಿ ಗೈಡ್ ● | ಪಾ | ಧಾರವಾಡ | 1983 | ಸಕುಮಾರ ಬಸ್ತಿ |
| ಡಿ.ಬಿ.ಬಿ.ಇ.ಎ. ಧ್ವನಿ ● | ವಾ | ಹುಬ್ಬಳ್ಳಿ | 1983 | ಎಂ. ರಾಮರಾವ್ |
| ಡಿ.ಬಿ.ಎನ್. ವಾರ್ತೆ ● | ಪಾ | ” | 1992 | ದಯಮಾರ ಎ.ಆರ್ |
| ಡೆಕ್ಕನ್ ಹೆರಾಲ್ಡ್ ● | ದಿ | ” | 1982 | ಹರಿಕುಮಾರ್ |
| ತತ್ವವಾದ | ಮಾ | ಗದಗ | 1954 | ಜಯರಾಮಾಚಾರ್ಯ ಮಳಗಿ |
| ತರಂಗ | ಮಾ | ” | 1951 | ಎಂ. ಜೀವನ |
| ತರುಣ ಕರ್ನಾಟಕ | ವಾ\ದಿ | ಹುಬ್ಬಳ್ಳಿ | 1929-53 | ಎಲ್.ಎಸ್. ಪಾಟೀಲ್ |
| ತಾಯಿಯ ಆಶೀರ್ವಾದ ● | ವಾ. | ಶಿಗ್ಗಾಂವಿ | 1993 | ಕೆ.ಎಚ್. ಮೀರಾಸಾಬನವರ |
| ತೀರನಿಶಾನ ● | ದಿ. | ಹುಬ್ಬಳ್ಳಿ | 1985 | ಆನಂದ ಹಬೀಬ್ |
| ತೋಗಟವೀರಧರ್ಮಚಂದ್ರಿಕೆ ● | ಮಾ. | ರಾಣೇಬೆನ್ನೂರು | 1985 | ಸಂಜೀವಪ್ಪ ತೊಗಟವೀರ |
| ದಿ ಗದಗ್ ಚೇಂಬರ್ ನ್ಯೂಸ್ | ಮಾ. | ಗದಗ | 1976 | ಎಲ್.ಎ.ಪೊತ್ನೀಸ್ |
| ದಿ ಜನರಲ್ ಆಫ್ ಕರ್ನಾಟಕ (ವಿಜ್ಞಾನ (ಇಂ) | ವಿ.ವಿ. ತ್ರೈಮಾ. | — | | ಕ.ವಿ.ವಿ. |
| -”- ಹ್ಯೂಮಾನಿಟಿಕ್ಸ್ | ” | — | — | ” |
| -”- ಸೋಷಿಯಲ್‌ಸೈನ್ಸ್ | ” | — | — | ” |
| ದಿ ಜನರಲ್ ಆಫ್ ಇನ್ಸಿಟಿಟ್ಯೂಟ್ ಆಫ್ ಎಕನಾಮಿಕ್ ರಿಸರ್ಚ್ | | ಧಾರವಾಡ | — | ಜನತಾ ಶಿಕ್ಷಣ ಸಮಿತಿ |
| ದಿ ಜನರಲ್ ಆಫ್ ಕಾಲೇಜ್ ಎಜುಕೇಶನ್ | ಷಾಣ್ಮಾಸಿಕ | ” | | ಕ.ವಿ.ವಿ |
| ದಿ ಜನರಲ್ ಆಫ್ ಎಜುಕೇಷನ್ (ಕ\ಇ) | — | ” | 1934 | ಎಸ್.ಎಸ್. ನೆಗಳೂರು |
| ದೃಷ್ಟಿ ● | ವಾ | ಹುಬ್ಬಳ್ಳಿ | 1993 | ಎಂ.ಎ. ಖಾಜಿ |
| ದೇವಭೋಗ | ಮಾ | ರೋಣ | 1927-29 | ಎಸ್.ಸಿ. ಸಾಲಿಮಠ |
| ದೇಶಬಂಧು | ದಿ\ಪ | ” | 1930 | ಬಿ.ಎಸ್. ಪಾವಟೆ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ದ್ವೈತ ದುಂದುಭಿ | ಮಾ | ಹುಬ್ಬಳ್ಳಿ, ಬಾಗಲಕೋಟೆ | 1923-39 | ರಾಮಾಚಾರ್ಯ ಕಟಗೇರಿ |
| ಧನಂಜಯ | ದಿ | ಧಾರವಾಡ | 1885-90 | ಅಣ್ಣಾಚಾರ್ಯ ಹೊಸಕೇರಿ |
| ಧನಂಜಯ | ದಿವಾಮಾ | ಧಾರವಾಡ | 1910-36 | ಗುರುರಾವ್ ವಾಳ್ವೇಕರ, ಮುದವೀಡು ಕೃಷ್ಣರಾವ್ |
| ಧನುರ್ಧಾರಿ | ವಾ: | ಹುಬ್ಬಳ್ಳಿ ದಾವಣಗೆರೆ | 1904-13 | ಮಂಜಪ್ಪ ಹರ್ಡೇಕರ |
| ಧರ್ಮತರಂಗಿಣಿ | ಮಾ. | ಧಾರವಾಡ | 1911 | ಎಚ್.ಎಸ್. ಶಿವಲಿಂಗಶಾಸ್ತ್ರಿ |
| ಧಾರವಾಡ ಅಬ್ಸರ್ವರ್ ● | ಪಾ. | ” | 1987 | ಇ.ಜೆ. ಸಾಮ್ಯುಯಲ್ |
| ಧಾರವಾಡ ನಾಗರಿಕ ಧ್ವನಿ ● | ಮಾ. | ” | 1991 | ಎಚ್.ಸಿ. ಮೊಗಲಿ ಮತ್ತು ಬಿ.ಎಂ. ಹನುಮನಾಳ |
| ಧಾರವಾಡ ವೃತ್ತ (ಕ) | ವಾ | ” | 1890-1929 | ಅನಾದ |
| ಧಾರವಾಡ ವೃತ್ತ (ಮರಾಠಿ) (ಕಲ್ಲಚ್ಚು) | | ” | 1873 | ಅಂತಾಜಿ ರಾಮಚಂದ್ರ ಜೋಗಳೇಕರ |
| ನಗುವನಂದ | ತ್ರೈ\ಮಾ | ಬೆಂಗಳೂರು, ಹುಬ್ಬಳ್ಳಿ | 1933-64 | ಬಿ.ರಂಗನಾಥರಾವ್ |
| ನಟರಾಜ ● | ಮಾ | ಹುಬ್ಬಳ್ಳಿ | 1971 | ಪ.ಲೋ. ಬಂಕಾಪುರ |
| ನವಜೀವನ | ಮಾ | ಹುಬ್ಬಳ್ಳಿ | 1954 | ಕಲ್ಲೆ ಶಿವೋತ್ತಮ |
| ನರಸಿಂಹ (ಕ್ಷೇಮ) | ಮಾ | ಧಾರವಾಡ | 1940-61 | ರಾಮಚಂದ್ರ ದೀಕ್ಷಿತ |
| ನವನಾಗರಿಕ | ದಿ | ಗದಗ | 1957 | ಎನ್.ಎಚ್. ಗೋಡಬೋಳೆ |
| ನವನಾಡು ● | ದಿ | ಹುಬ್ಬಳ್ಳಿ | 1984 | ಪಾಂಡುರಂಗ ಪಾಟೀಲ |
| ನವನೀತ | ಮಾ | ಧಾರವಾಡ | 1926 | ಪಂಡಿತ ಕವಲಿ |
| ನವನೀತ | ಮಾ | ಬ್ಯಾಡಗಿ | 126-28 | ಕೆ. ರಾಮಚಂದ್ರ |
| ನವಯುಗ | ದಿ | ಹುಬ್ಬಳ್ಳಿ | 1948-55 | ತಿರುನೇಸ್ಟಿ |
| ನವಶಕ್ತಿ (ಇಂ) | ವಾ | ಧಾರವಾಡ | 1923 | ರಂ.ರಾ. ದಿವಾಕರ |
| ನವೋದಯ ● | ದಿ | ಗದಗ | 1975 | ಕಿದಿಯೂರ್ |
| ನಾಗರಿಕ ● | ದಿ | ”<br>ಬಾಗಲಕೋಟೆ<br>ಹೊಸಪೇಟೆ | 1953<br>1978<br>1980-82 | ಶಾಂತಗಿರಿ ಕೆ.ಎನ್. ಬದರೀನಾಥ ಹೊಂಬಾಳೆ |
| ನಿರೀಕ್ಷಕ | ವಾ | ಧಾರವಾಡ | 1949 | ಎಂ. ಗೋವರ್ಧನರಾವ್ |
| ನಿಸರ್ಗ ಚಿಕಿತ್ಸೆ | ತ್ರೈ | ಲಕ್ಷ್ಮೇಶ್ವರ | — | ಶಾಮರಾವ್ ಚಿತ್ರಗಾರ |
| ನೂತನ | ಮಾ | ಧಾರವಾಡ | 1952 | ಎಚ್.ಆರ್.ಕಿದಿಯೂರು |
| ನೃತ್ಯಭಾರತಿ | ತ್ರೈ | ಹಂಸಭಾವಿ | 1954 | ಮಲ್ಹಾರಿ ಎಂ. ಕುಲಕರ್ಣಿ |
| ನೇಕಾರ | ವಾ | ಹುಬ್ಬಳ್ಳಿ | 1957 | ಪಿ.ಎಲ್. ಬಂಕಾಪುರ |
| ನೇಗಿಲಯೋಗಿ ● | ವಾ | ಗದಗ | 1970 | ಎಂ.ಜಿ. ದೇಶಪಾಂಡೆ ಎ.ಕೆ. ಕವುತಾಳ |
| ನೇತಾಜಿ | ದಿ | ಹುಬ್ಬಳ್ಳಿ | 1948 | ಇಟಗಿ ವೇದಮೂರ್ತಿ |
| ನ್ಯಾಯವಾದಿ ● | ವಾ | ” | 1973 | ವೀರೇಶ ಲಕ್ಷ್ಮೇಶ್ವರಮಠ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಪಂಚಾಮೃತ | ಮಾ | ಗದಗ | 1958 | ಪಂಡರಿನಾಥಾಚಾರ್ಯ ಗಲಗಲಿ |
| ಪಥಿಕ | ಮಾ | ಹುಬ್ಬಳ್ಳಿ | 1956 | ಎಸ್.ಆರ್.ಗೋಪೀನಾಥ |
| ಪರಂಜ್ಯೋತಿ ● | ಮಾ | ” | 1968 | ರುದ್ರಮುನಿದೇವರು |
| ಪ್ರಗತಿ ಮತ್ತು ಜನವಿಜಯ ● | ವಾ | ” | 1978 | ಬಿ.ಎ. ಪಾಟೀಲ |
| ಪ್ರದೀಪ | ಮಾ | ” | 1955-76 | ವಿನೀತ ರಾಮಚಂದ್ರರಾವ್ |
| ಪ್ರಜಾಜ್ಯೋತಿ ● | ವಾ | ಹುಬ್ಬಳ್ಳಿ | 1970 | ಜಿ.ಎಸ್. ಉಮದಿ |
| ಪ್ರಜಾಮತ | ವಾ | ” | 1924 | ಕೆ. ರಾಘವೇಂದ್ರರಾವ್ |
| ಪ್ರಜಾವಾಣಿ ● | ದಿ | ಬೆ/ಹುಬ್ಬಳ್ಳಿ | 1988 | ಕೆ.ಎನ್. ಹರಿಕುಮಾರ್ |
| ಪ್ರಜ್ಞೆ | ದ್ವೈ.ಮಾ | ಗದಗ | 1968-69 | ಮಾಧವಕುಲಕರ್ಣಿ |
| ಪ್ರತಿಭಾ | ಮಾ | ಧಾರವಾಡ | 1940 | ಬಾಲಚಂದ್ರ ಘಾಣೇಕರ |
| ಪ್ರವೀಣಸಿಂಧು | ವಾ | ಗದಗ | 1984-85 | ವಿ.ಎಂ.ಬಂಕಾಪುರ |
| ಪುಷ್ಪಮಾಲೆ | — | ಧಾರವಾಡ | 1880 | ಶೆಟ್ಟಿಕಲ್ಯಾಣಪ್ಪ ಹುಚ್ಚಯ್ಯಾ ವಿಭೂತಿ |
| ಪಂಚಾಕ್ಷರಿ | ಮಾ | ಗದಗ | 1968 | ಪಂಚಾಕ್ಷರಿ ಗವಾಯಿ |
| ಪರಿವಾರ | ದ್ವೈ.ಮಾ | ಹುಬ್ಬಳ್ಳಿ | 1980 | ಸುರೇಂದ್ರ ಬಿ.ದಾನಿ |
| ಪ್ರವರ್ತಕ | ವಾ | ಹುಬ್ಬಳ್ಳಿ | 1980 | ಗೋಪಿನಾಥಸಾಂಡ್ರಾ |
| ಪ್ರಪಂಚ ● | ವಾ | ” | 1953 | ಪಾಟೀಲ ಪುಟ್ಟಪ್ಪ |
| ಪ್ರಭಾತ | ಮಾ | ಧಾರವಾಡ | 1918 | ವೈ.ಬಿ. ಜಠಾರ |
| ಪ್ರಸಾದ | ಮಾ | ಗದಗ | 1939 | ತಟ್ಟಿ ಕೃಷ್ಣರಾವ್ |
| ಪ್ರಾರಬ್ಧ | ದಿ | ಹುಬ್ಬಳ್ಳಿ | 1959 | ಪಿ.ಎಲ್. ಬಂಕಾಪುರ |
| ಬಸವರಾಜ | ಮಾ:ವಾ | ಹಾವೇರಿ | 1928 | ಚನ್ನಬಸಪ್ಪ ಎಂ. ಹಾಲಣ್ಣನವರ |
| ಬಂಡಾಯದ ಕಹಳೆ ● | ವಾ | ನರಗುಂದ | 1992 | ಸುರೇಶ ಎಸ್. ಗುಡಾರದ |
| ಬಾಲಮಿತ್ರ | ಮಾ | ಧಾರವಾಡ | 1921 | ವಲ್ಲಭ ಮಹಲಿಂಗ ತಟ್ಟಿ |
| ಬಿಡುಗಡೆ ● | ವಾ | ಹುಬ್ಬಳ್ಳಿ | 1972 | ಪಿ.ಎಲ್. ದೇಕಣೆ |
| ಬಿಹ್ಮೇಶ ಪತ್ರಿಕೆ ● | ಮಾ | ” | 1988 | ಪೀತಾಂಬರ ದಿವಟೆ |
| ಬೆಳಕಿನ ಹೆಜ್ಜೆಗಳು ● | ಪಾ | ಗದಗ | 1992 | ಎನ್.ಜಿ. ಹುಲಗಿ |
| ಬೆಳಕು | ವಾ | ಹುಬ್ಬಳ್ಳಿ | 1945 | ಗೌರೀಶ ಕಾಯ್ಕಿಣಿ |
| ಬೋಧಾಮೃತ | ಮಾ | ” | 1926 | ಶಿವಪುತ್ರಸ್ವಾಮಿ |
| ಭಕ್ತಿಸಂಜೀವನ | ಮಾ | ಗದಗ | 1942-73 | ರೆವರೆಂಡ್‌ರಾಯ್ ಇ.ಡೇವಿಸ್ |
| ಭಾರತವಾಣಿ (ಹಿಂದಿ) ● | ಮಾ | ಧಾರವಾಡ | 1987 | ಕೆ.ಸಿ. ಸಾರಂಗಮಠ |
| ಭಾರತಿ | ವಾ | ” | 1980 | ಎಸ್.ಎಂ. ಹೊರಡಿ |
| ಭಾಷಾಲೋಕ | ದ್ವೈ.ಮಾ | ಧಾರವಾಡ | 1986 | ಮುರಿಗೆಪ್ಪ ಮತ್ತು ಮಹೇಶ್ವರಯ್ಯ |
| ಭಾರತಿ | ಮಾ | ಗದಗಮುಂಬೈ | 1950-53 | ಕೆ. ಸಾವಿತ್ರಿ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಭೂಲೋಕಗರ್ಜನೆ ● | ವಾ | ಹುಬ್ಬಳ್ಳಿ | 1992 | ಎಂ.ಆರ್. ಸದಾನಂದ |
| ಮಂಗಳೂರು ಮಾರ್ಕೆಟ್ ರಿಪೋರ್ಟ್ಸ್ ● | ದಿ | ಹುಬ್ಬಳ್ಳಿ | 1984 | ವೀರಪ್ಪ ಪಿ. ಮಡ್ಲೂರ |
| ಮಕ್ಕಳ ಮಂದಿರ ● | ಮಾ | ಧಾರವಾಡ | 1993 | ಈಶ್ವರ ಕಮ್ಮಾರ |
| ಮಧು | ಮಾ | ಗದಗ | ” | ಎಚ್.ಸಿ. ಕೌಜಗೇರಿ |
| ಮಧುರವಾಣಿ (ಕನ್ನಡ) | ದಿ | ” | 1991 | ಎಚ್.ಆರ್. ಕಿದಿಯೂರ್ |
| ಮಧುರವಾಣಿ (ಸಂಸ್ಕೃತ) | ತ್ರೈ | ಗದಗ\ಬೆಳಗಾವಿ | 1958 | ರಾಮಾಚಾರ್ಯ ಗಲಗಲಿ<br>ಪಂಡರೀನಾಥಾಚಾರ್ಯಗಲಗಲಿ |
| ಮಲಪ್ರಭಾನಾಡು | ವಾ | ನವಿಲುಗುಂದ | — | — |
| ಮಹಾಧ್ವನಿ | ಮಾ | ಧಾರವಾಡ | 1940 | ಎ.ಎ. ಕವಾಲ |
| ಮಹಾವೀರ | ಮಾ | ಧಾರವಾಡ | 1950-54 | ನೆಗಳೂರು ರಂಗನಾಥ |
| ಮಹಿಳಾ | ಮಾ | ” | 1927 | ಸಿ.ಆರ್. ಚಿಂಡೂರಮಠ |
| ಮಿಡಿದನಾಡಿ ● | ವಾ | ” | 1992 | ಎಸ್.ಎಂ.ಕಂಠಿ |
| ಮಹಿಳಾ ಜ್ಞಾನೋತ್ಕರ್ಷ ಮಾಲಾ | ತ್ರೈ | ಗದಗ | 1917-27 | ಸಿ.ಆರ್. ಚಿಂಡೂರಮಠ |
| ಮಾನವಿಕ ಭಾರತಿ | ತ್ರೈ | ಧಾರವಾಡ | — | ಕ.ವಿ.ವಿ. |
| ಮುತ್ತು | ಮಾ | ಶಿರಹಟ್ಟಿಗದಗ | — | ಹಾಲೇಶ್ ಮೇಟಿ |
| ಮುಸ್ಲಿಂಸಂದೇಶ | ಮಾ | ಧಾರವಾಡ | 1935 | ಇಮಾಮುದ್ದೀನ ಕಿಲ್ಲೇದಾರ್ |
| ಮೂಡಣ ● | ದಿ | ಹಾವೇರಿ | 1982 | ವಿ.ಎಸ್. ಕಾಶೆಟ್ಟಿ |
| ಯುನೈಟೆಡ್ ಕರ್ನಾಟಕ (ಇಂ) | ವಾ | ಹುಬ್ಬಳ್ಳಿ | 1937 | ಹುಕ್ಕೇರಿಕರ ಆರ್.ಎಸ್ |
| ಯುನೈಟೆಡ್ ಫ್ರಂಟ್ (ಇಂ) | ವಾ | ಧಾರವಾಡ | 1938 | ರಘುನಾಥರಾವ್ ಜಠಾರ |
| ರಸರಂಗ | ವಾ | ಹುಬ್ಬಳ್ಳಿ | — | ಚಳ್ಳಮರದ್ |
| ರಸವಂತಿ ● | ಮಾ | ” | 1993 | ಟಿ.ಎಂ. ಜಾಧವ |
| ರಸಿಕರಂಜಿನಿ ಮುದ್ರಣ | ವಾ | ಗದಗ | — | ತಾರಾಬಾಯಿವಾಜಪೇಯಿ |
| ರಸಿಕ ರಂಜನಿ (ಕಲ್ಲಚ್ಚು) | ವಾ | ಗದಗ | 1884 | ಗೌರಿ ಶಂಕರ ಮಿಸರ, ಎಮಬಗಿ ಶೀನಪ್ಪ. |
| ರಂಗತೋರಣ ● | ಮಾ | ಧಾರವಾಡ | 1984 | ವಿರೂಪಾಕ್ಷ ನಾಯಕ |
| ರಂಜನೆ | ವಾ | ಗದಗ | 1951 | ಪ.ಲೋ. ಬಂಕಾಪುರ |
| ರಾಜಹಂಸ , | ಮಾ:ವಾ:ದಿ | ಧಾರವಾಡ | 1891-1935 | ಆರ್.ವಿ.ಜಠಾರ |
| ರಾಷ್ಟ್ರವೀರ | ವಾ | ಗದಗ:ಬೆಳಗಾವಿ | — | ಕುಲಕರ್ಣಿ |
| ರೇಷ್ಮೆ ಕೃಷಿವಾಣಿ ● | ಮಾ | ಧಾರವಾಡ | 1992 | ಎಂ. ಪರಮೇಶ್ |
| ಲಿಂಗನುಡಿ | ಮಾ | ಗದಗ:ಬೆಂಗಳುರು | — | ಶಾರದಾ ಅವಟಿ |
| ಲೋಕಬಂಧು | ವಾ | ಧಾರವಾಡ | 1880-1924 | ಗುರುರಾವ್ ಆರ್. ಮಮದಾಪುರ |
| ಲೋಕಮತ | ದಿ | ಹುಬ್ಬಳ್ಳಿ | 1924 | ವಿ.ಬಿ. ಪುರಾಣಿಕ್ |
| ಲೋಕಮಿತ್ರ | ವಾ | ಹಾವೇರಿ | 1900-51 | ದೇವನಗೌಡ ಪಾಟೀಲ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಲೋಕವಾರ್ತಿಕ (ಕ.ಮ) | ಮಾ | ಹುಬ್ಬಳ್ಳಿ | 1960 | ಎಸ್.ಜಿ. ಬಂಕಾಪುರ |
| ಲೋಕಶಿಲ್ಪ ● | ದಿ | ಹಾವೇರಿ | 1989 | ಯಲ್ಲಪ್ಪಣ್ಣ ವಳದ |
| ಲೋಕಶಿಕ್ಷಣ | ಮಾ | ಧಾರವಾಡ | 1888-1916 | ವೆಂಕಟರಂಗೋಕಟ್ಟಿ |
| ವಸಂತ | ಮಾ | ಗದಗ\ಧಾರವಾಡ | 1938-50 | ಎನ್.ಕೆ. ಕುಲಕರ್ಣಿ |
| ವೃತ್ತಾಂತಮಂಜರೀ | ವಾ | ಧಾರವಾಡ | 1885 | — |
| ವಾಗ್ದೇವಿ | — | " | 1907 | ಹೊನ್ನಾಪುರಮಠ |
| ವಾಗ್ಭೂಷಣ | ವಾ | " | 1896-1976 | ಬಿ. ರಾಮರಾವ್ ಆಲೂರು ವೆಂಕಟರಾವ್ |
| ವಾರ್ತಾ ಪತ್ರಿಕೆ | ದಿ | ಧಾರವಾಡ | 1924 | — |
| ವಾಲಂಟಿಯರ್ (ಇಂ) | ಮಾ | ಹುಬ್ಬಳ್ಳಿ | 1924-28 | ಎನ್.ಎಸ್. ಹರ್ಡೀಕರ |
| ವಾಲ್ಮೀಕಿ ಸಂದೇಶ | ಮಾ | ಗದಗ-ಬೆಟಗೇರಿ | 1983 | ಎಚ್.ಎನ್. ಕೋಲಕಾರ್ |
| ವಾಸವಿ | ಮಾ | ಗದಗ | 1972 | ಎಚ್.ಎಸ್. ಶಿರಹಟ್ಟಿ |
| ವಿಕಾಸ | ಮಾ | ಹುಬ್ಬಳ್ಳಿ-ಧಾರವಾಡ | 1951 | ಎನ್.ಕೆ. ದೇಶಪಾಂಡೆ |
| ವಿಜಯ | ದಿ | ಧಾರವಾಡ | 1920-39 | ಅಣ್ಣಾಚಾರ್ಯ ಹೊಸಕೇರಿ |
| ವಿಜಯ | ದಿ | ಗದಗ | 1954 | ಎಂ.ಜೀವನ, ಕೆ.ಎಲ್. ಅಣ್ಣಿಗೇರಿ |
| ವಿಜಯಜಗತ್ತು ● | ಪಾ | ಹುಬ್ಬಳ್ಳಿ | 1992 | ವಿಜಯಕುಮಾರ ಸಾಲಿಮಠ |
| ವಿದ್ಯಾರ್ಥಿ ಭಾರತಿ | ತ್ರೈ | ಧಾರವಾಡ | | ಕ.ವಿ.ವಿ. |
| ವಿದ್ಯಾರಣ್ಯ | ಮಾ | ನವಲಗುಂದ | 1934 | — |
| ವಿದ್ಯಾವರ್ಧಕ | ಮಾ | ಧಾರವಾಡ | 1989 | ಜಿ.ಬಿ.ಮನ್ನಾಚಾರ್ |
| ವಿದ್ಯಾಸಮಾಚಾರ ● | ಪಾ | ಧಾರವಾಡ | 1983 | ಎ.ಎಸ್.ಬಾಲಸುಬ್ರಹ್ಮಣ್ಯಂ |
| ವಿನ್‌ಸಮ ● | ವಾ | ಧಾರವಾಡ | 1986 | ಲಕ್ಷ್ಮಣರಾವ್ ಶೀಳಕೆ |
| ವಿಶಾಲಕರ್ನಾಟಕ | ಪಾವಾ | ಧಾರವಾಡ | 1938 | ಆರ್.ವೈ. ಜತಾರ |
| ವಿಶಾಲ ಕರ್ನಾಟಕ | ದಿ | ಹುಬ್ಬಳ್ಳಿ | 1947 | ಕೆ.ಎಸ್. ಪಾಟೀಲ |
| ವಿಶಾಲ ಕರ್ನಾಟಕ ● | ದಿ | " | 1964 | ಕೆ.ಎಚ್. ಪಾಟೀಲ |
| ವಿಶಾಲ ಹುಬ್ಬಳ್ಳಿ ● | ವಾ | ಹುಬ್ಬಳ್ಳಿ | 1993 | ಎಂ.ಆರ್. ಹಿರಿಯಾಳ ಮಠ |
| ವಿಶ್ವಬಂಧು | ಮಾ | ಗದಗ | 1921 | ಗುರುಮೂರ್ತಿಶಾಸ್ತ್ರಿ |
| ವಿಶ್ವವಾಣಿ ● | ದಿ | ಹುಬ್ಬಳ್ಳಿ | 1958 | ಪಾಟೀಲ ಪುಟ್ಟಪ್ಪ |
| ವಿಶ್ವನವನಿರ್ಮಾಣ ● | ಮಾ | ಹುಬ್ಬಳ್ಳಿ | 1974 | ಬ್ರ.ಕು. ಬಸವರಾಜ ರಾಜರ್ಷಿ |
| ವೀರಮಾತೆ | ಮಾ | ಧಾರವಾಡ | 1953-62 | ಸರೋಜಿನಿ ಮಹಿಷಿ, ಶಂಕರನಾರಾಯಣ |
| ವೀರವಾಣಿ | ಮಾ | ಹುಬ್ಬಳ್ಳಿ | 1937 | ಜಿ.ಎಸ್.ಹೊಸೂರ್ |
| ವೀರಶೈವ ಚಂದ್ರಿಕೆ | ಮಾ | ಶಿರಹಟ್ಟಿಗದಗ | 1934-35 | ಆಲೂರ ಮುರಗೆಂಪ್ಪ ಶೆಟ್ಟಿ |
| ವೀರಶೈವಧರ್ಮ ತರಂಗಿಣಿ | ಮಾ | ಧಾರವಾಡ | 1911 | ಎಚ್.ಎಸ್. ಶಿವಲಿಂಗಸ್ವಾಮಿ |
| ವೀರಶೈವ ವಿಜಯ | ಮಾ | ಹುಬ್ಬಳ್ಳಿ | 1910-46 | ಎಸ್. ಮಂಜಪ್ಪ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ವೀಕ್ಷಕ ● | ದಿ | ರಾಣೆಬೆನ್ನೂರು | 1992 | ಪುಟ್ಟು ಕುಲಕರ್ಣಿ |
| ವೇಗ ಎಕ್ಸ್‌ಪ್ರೆಸ್ ● | ಪಾ | ಹುಬ್ಬಳ್ಳಿ | 1992 | ಬಿ.ಎಂ.ಎಚ್.ಬೇಗ |
| ಶರಣ ● | ತ್ರೈ | ಧಾರವಾಡ | 1993 | ಬಿ.ಎಸ್. ಕಲ್ಯಾಣಿ |
| ಶರಣಮಾರ್ಗ | ತ್ರೈ | ಗದಗ | — | ಎ.ಎಂ.ಪಾಟೀಲ |
| ಶಾಂತಿಸಂದೇಶ | ಮಾ | ಗದಗ | 1956 | ಎಂ.ಬಿ.ಬರದೂರ |
| ಶಾಂತಿಸಂದೇಶ (ಕ:ಇ) | ಮಾ | ಹುಬ್ಬಳ್ಳಿ | 1949 | — |
| ಶಾರದೆ | ಮಾ | ಧಾರವಾಡ | — | ಡಿ.ಜಿ. ಹುಲಕವಿ |
| ಶಾಲಾಪತ್ರಿಕೆ | ಮಾ | ಧಾರವಾಡ | 1867 | ವೆಂಕಟ ರಂಗೋ ಕಟ್ಟಿ |
| ಶಿಗ್ಗಾಂವ ಕನ್ನಡ ಶೈಲಿ ● | ಮಾ | ಶಿಗ್ಗಾಂವ್ | 1993 | ಎಸ್.ಎಸ್. ತಳವಾರ |
| ಶಿಡ್ಲು | ದಿ | ರಾಣೆಬೆನ್ನೂರು | 1970 | ಆರ್.ಜಿ. ಮಹಾನುಭಾವಿಮಠ |
| ಶಿವಪ್ರತಾಪ | ವಾ | ಹಾವೇರಿ | 1929 | ಗುರುಮೂರ್ತಿಶಾಸ್ತ್ರಿ ಕಜ್ಜರಿ |
| ಶಿಕ್ಷಕಬಂಧು | ತ್ರೈಮಾ. | ಹುಬ್ಬಳ್ಳಿ | 1934-35 | ಎಸ್.ಆರ್. ನಾಡಕರ್ಣಿ |
| ಶ್ರೀ | ಮಾ | ಧಾರವಾಡ | 1947 | ಪಿ.ಕೆ. ಶಹಾಪುರ |
| ಶ್ರೀ ಸರಸ್ವತಿ | — | ಗದಗ | 1901 | — |
| ಶ್ರೀ ಸಿದ್ಧಾರೂಢ ತತ್ವಾಮೃತ ● | ಮಾ | ಹುಬ್ಬಳ್ಳಿ | 1977 | ಆರ್.ಪಿ. ಚಟ್ನಿ |
| ಶ್ರೀ ಸುಧಾ ● | ಮಾ | ಧಾರವಾಡ | 1952 | ಜಯತೀರ್ಥಾಚಾರ್ಯ ಮಳಗಿ |
| ಶುಭೋದಯ | ವಾ\ಮಾ | ಧಾರವಾಡ | 1918-21 | ಕೆ. ವಾಸುದೇವಾಚಾರ್ಯ |
| ಶೋಧಕ | ಮಾ | ಧಾರವಾಡ | 1875-78 | ವೆಂಕಟ ರಂಗೋ ಕಟ್ಟಿ |
| ಸಂಕ್ರಮಣ ● | ಮಾ | ಧಾರವಾಡ | 1967 | ನೀಲಾಪಾಟೀಲ್ |
| ಸಂಜೆವಾಣಿ ● | ದಿ | ಬೆಂಗಳೂರು:ಹುಬ್ಬಳ್ಳಿ | 1989 | ಡಿ.ವೆಂಕಟೇಶ್ವರನ್ |
| ಸಂಯುಕ್ತ ಕರ್ನಾಟಕ ● | ವಾ:ದಿ | ಬೆಳಗಾವಿ:ಹುಬ್ಬಳ್ಳಿ | 1927 | ಬಿ.ದಾತಾರ, ಮೊಹರೆ |
| ಸಚಿತ್ರ ಭಾರತ | ಮಾ | ಹುಬ್ಬಳ್ಳಿ | 1910 | ಕೆರೂರು ವಾಸುದೇವಾಚಾರ್ಯ |
| ಸಚಿತ್ರ ಲೋಕಬಂಧು | ವಾ | ಧಾರವಾಡ | — | ಎಲ್.ಆರ್.ಐರಣಿ |
| ಸತ್ಯವೃತ್ತ | ವಾ | ಗದಗ | 1888-92 | ಶ್ರೀನಿವಾಸ ಭೀಮಾಜಿ |
| ಸತ್‌ಶಿಕ್ಷಣ | ಮಾ | ಗದಗ | 1922 | ಬಿ. ಹಿರೇಮಠ |
| ಸದಾನಂದ | ಮಾ | ಧಾರವಾಡ | 1935 | ಎನ್.ಪಿ.ಜಠಾರ ಹಾಗೂ ಆರ್.ಪಿ.ಜಠಾರ |
| ಸದಾನಂದ ವೈಭವ ● | ಮಾ | ಹುಬ್ಬಳ್ಳಿ | 1990 | ಪಿ.ಎಸ್. ದೇಸಾಯಿಗೌಡರ |
| ಸದ್ಗುರು | ಮಾ | ಹಾವೇರಿ | 1919-42 | ವೆಂ.ತಿ.ಕುಲಕರ್ಣಿ |
| ಸದ್ಬೋಧ ಚಂದ್ರಿಕೆ | ಮಾ | ಆಗಡಿ (ಹಾವೇರಿ) | 1907 | ವೆಂ.ತಿ. ಕುಲಕರ್ಣಿ ಮತ್ತು ಚಿದಂಬರಮೂರ್ತಿ ಚಕ್ರವರ್ತಿ |
| ಸಮರಸ ● | ಮಾ | ಗದಗ | 1990 | ಎಸ್.ಎಂ. ಶಿರಹಟ್ಟಿ |
| ಸಮಾಜ | ಮಾ\ಪಾ | ಧಾರವಾಡ | 1936-49 | ಬಾಲಚಂದ್ರ ಘಾಣೇಕರ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಸರಸ್ವತಿ ಪ್ರಭಾ (ಕೊಂಕಣಿ) ● | ಮಾ | ಹುಬ್ಬಳ್ಳಿ | 1988 | ಸುರೇಶ ಶೆಣೈ |
| ಸರ್ವಜ್ಞ | ಪಾ | ” | 1967-63 | ಪಿ.ಎಲ್.ಬಂಕಾಪುರ |
| ಸರ್ವೋದಯ | ಮಾ | ” | 1951-53 | ಸೈಯದ್, ಎಚ್.ಕೊರ್ಲಹಳ್ಳಿ |
| ಸಪಿಗಾರ | ವಾ | ಆಗಡಿ(ಧಾರವಾಡ) | 1910 | — |
| ಸಹಕಾರ | ಮಾ | ಧಾರವಾಡ | 1947-57 | ಹಳ್ಳಿಕೇರಿ, ಕಂಠಿ |
| ಸ್ವಕುಳ ಪರಿಚಯ | ಮಾ | ಗದಗ | 1965 | ಟಿ.ಟಿ. ದೀವಟೆ |
| ಸ್ವಧರ್ಮ | ಮಾ | ಧಾರವಾಡ | 1924-30 | ಹೊಸಕೆರೆ ಚಿದಂಬರಯ್ಯ |
| ಸ್ವಯಂಸೇವಕ | ಮಾ | ಹುಬ್ಬಳ್ಳಿ | 1925 | ನಾ.ಸು.ಹರ್ಡೀಕರ್ |
| ಸ್ವರಾಜ್ಯ | ಮಾ\ದಿ | ” | 1931 | ಎಂ.ಎಸ್.ಕೇಸರಿ |
| ಸ್ವರಾಜ್ಯ | ವಾ | ” | 1958-59 | ಕಲ್ಲೆಶಿವೋತ್ತಮರಾವ್ |
| ಸಾವಧಾನ | ಪಾ | ಧಾರವಾಡ:ಗದಗ | 1948 | ನಾಗಭೂಷಣಶಾಸ್ತ್ರಿ |
| ಸಾಹಿತ್ಯ | ವಾ | ಹುಬ್ಬಳ್ಳಿ | — | — |
| ಸಾಹಿತ್ಯ ಸಮಿತಿ ಪತ್ರಿಕೆ | ತ್ರೈ | ಧಾರವಾಡ | 1941-42 | ಶಿ.ಶಿ.ಬಸವನಾಳ |
| ಸ್ಥಾನಿಕ ಸ್ವರಾಜ್ಯ ವೃತ್ತ | ” | ” | 1934-36 | ಆರ್.ಪಿ.ಜತಾರ |
| ಸಿಡ್ಲು ● | ದಿ | ಗದಗ | 1950 | ಪಿ.ಎಲ್.ಬಂಕಾಪುರ |
| ಸಿನಿಮಾ | ಮಾ | ” | 1939 | ಸಿ.ಬಿ.ಹಿರೇಮಠ |
| ಸುಜ್ಞಾನ | ಮಾ | ” | — | ತಲವಾಯಿ |
| ಸುದರ್ಶನ | ಮಾ | ಧಾರವಾಡ | 1937-41 | ಆರ್.ಪಿ.ಜತಾರ |
| ಸುಧಾಕರ | ತ್ರೈ | ಹುಬ್ಬಳ್ಳಿ | 1921-50 | ಕೆ.ಗುರುರಾವ್ |
| ಸುರಾಜ್ಯಪಥ | ಪಾ | ” | 1993 | ಸುರೇಂದ್ರ ಬಿ.ದಾನಿ |
| ಸುವಾರ್ತಾ ದೂತನು | ಮಾ | “ | 1946 | ಪಿ.ಜೆ.ಅಬ್ರಹಾಂ |
| ಸುಶೀಲ ● | ಮಾ | ” | 1970 | ಎಂ.ಎಂ.ಕನಕೇರಿ |
| ಸ್ಟೂಡೆಂಟ್ ಜನರಲ್ (ಇಂ) | ವಾ | ಗದಗ | 1972 | ಕಿದಿಯೂರು, ಎಚ್.ಆರ್ |
| ಸ್ಫೂರ್ತಿ ● | ಮಾ | ” | 1968 | ಕೆ.ಎಲ್.ಅಣ್ಣಿಗೇರಿ |
| ಹರಿಜನಾಭ್ಯುದಯ | ಮಾ | ಧಾರವಾಡ | 1954 | — |
| ಹಳ್ಳಿಯಿಂದ ದಿಲ್ಲಿ ● | ವಾ | ಹುಬ್ಬಳ್ಳಿ | 1973 | ಚಂದ್ರಸ್ವಾಮಿಭದ್ರಗೌಡ |
| ಹಿಂದೂಸ್ಥಾನ ಸಮಾಚಾರ | ವಾ | ” | 1907-08 | ನಾರಾಯಣರಾಯ ಗಿರಿಧರರಾವ್ |
| ಹುಬ್ಬಳ್ಳಿ ಗೆಝೆಟ್ | ವ | ಹುಬ್ಬಳ್ಳಿ | 1939-47 | ಎನ್.ಎಸ್.ಹರ್ಡೀಕರ |
| ಹುಬ್ಬಳ್ಳಿಪತ್ರ | ವಾ | ” | 1893 | — |
| ಹೇಮರಡ್ಡಿ ಮಲ್ಲಮ್ಮವಾಣಿ | ಮಾ | ” | 1993 | ಮಲ್ಲಿಕಾರ್ಜುನಷರೆಡ್ಡಿ |
| ಹೊಸಹಾದಿ | ಮಾ | ” | 1956-57 | ಎಲ್.ಬಿ.ಮುದ್ದಣ್ಣನವರ |

| ಹೆಸರು | ಅವಧಿ | ಸ್ಥಳ | ಆರಂಭವರ್ಷ | ಸಂಪಾದಕರು |
|---|---|---|---|---|
| ಹೊನ್ನಗುಡಿ | ವಾ | ಗದಗ | 1986 | ಹೊನ್ನಗುಡಿ |
| ಹುಬ್ಬಳ್ಳಿ ವೈಭವ (ಮರಾಠಿ) | — | ಧಾರವಾಡ | 1883 | |
| ಹೊಸ ಪ್ರಪಂಚ ● | ವಾ | ಹುಬ್ಬಳ್ಳಿ | 1991 | ಬಿ.ಎಚ್.ಗೋವಿಂದನವರ |
| ಹೋಟೆಲಸಂದೇಶ ● | ಮಾ | ” | 1990 | ಸುರೇಶ ಅರಗೋಡು |

● ಈ ಪತ್ರಿಕೆಗಳು ಈಗ ನಡೆಯುತ್ತಿವೆ

(ಇಲ್ಲಿ ಕೊಟ್ಟ ಮಾಹಿತಿ ವಿವಿಧ ಮೂಲಗಳಿಂದ ಸಂಗ್ರಹಿಸಿದ್ದು. ಸಾಧ್ಯವಿದ್ದಷ್ಟು ಯತ್ನಿಸಿ ಸರಿಯಾದ ಮಾಹಿತಿ ಕೊಡಲು ಗಮನಹಿಸಿದ್ದೇನೆ. ಕೆಲವೊಮ್ಮೆ ಮಾಹಿತಿ ಸಂಗ್ರಹ ಅಸಾಧ್ಯವಾಗಿ ಅದು ಅಸಮರ್ಪಕವಿರಬಹುದು.)

## ಸಂಗೀತ

ಇಂದು ಧಾರವಾಡ ಜಿಲ್ಲೆಯಲ್ಲಿ ಹಿಂದುಸ್ಥಾನಿ ಸಂಗೀತ ಪ್ರಮುಖವಾಗಿದೆಯಾದರೂ, ಈ ಶತಮಾನದ ಆರಂಭದಲ್ಲೂ ಕರ್ನಾಟಕ ಸಂಗೀತವೇ ಇಲ್ಲಿ ಬಳಕೆಯಲ್ಲಿತ್ತು. ಅಬ್ದುಲ್ ಕರೀಂಖಾನ್, ಪಂಚಾಕ್ಷರಿ ಗವಾಯಿ, ಗಂಗೂಬಾಯಿ ಹಾನಗಲ್ ಹಾಗೂ ಅವರ ತಾಯಿ ಅಂಬಾಬಾಯಿ ಮೊದಲಿಗೆ ಅಭ್ಯಸಿಸಿದ್ದು ಕರ್ನಾಟಕಿಯನ್ನು. ಬಸವರಾಜ ರಾಜಗುರುಗಳ ತಂದೆ ಮಹಾಂತಸ್ವಾಮಿ ತಂಜಾವೂರಿನಲ್ಲಿ ಕರ್ನಾಟಕ ಸಂಗೀತವನ್ನು ಕಲಿತಿದ್ದರು. ಆದರೆ ಉತ್ತರಾದಿ ಸಂಗೀತ ಈ ಪ್ರದೇಶಕ್ಕೆ ಹೊಸದೇನಲ್ಲ. ಬಿಜಾಪುರದ ಮುಸ್ಲಿಂ ಅರಸು ಎರಡನೇ ಇಬ್ರಾಹಿಂ (1580-1627)ನ ಕಾಲದಿಂದಲೇ ಈ ಪ್ರದೇಶದಲ್ಲಿ ಉತ್ತರಾದಿ ಸಂಗೀತದ ಪರಿಚಯ ಶ್ರೀಮಂತ ವರ್ಗದಲ್ಲಿ ಇದ್ದಿರಬಹುದು. ಸ್ವತಃ ಇಬ್ರಾಹಿಂನೇ 'ಕಿತಾಬ್-ಇ-ನೌರಸ್' ಎಂಬ ಸಂಗೀತದ ಪುಸ್ತಕವನ್ನು ರಚಿಸಿದ್ದ. ದಖ್ಖನಿ ಅರಸರಿಗೆ ದೆಹಲಿಯ ಸುಲ್ತಾನರೊಂದಿಗೆ ವೈವಾಹಿಕ ಸಂಪರ್ಕವಿದ್ದು ಲಲಿತ ಕಲೆಗಳಲ್ಲೂ ಕೊಂಡು - ಕೊಡುಗೆಗಳು ನಡೆದಿತ್ತು.

ಕಳೆದ ಶತಮಾನದ ಅಂತ್ಯದಲ್ಲಿ ಪುಣೆ, ಗ್ವಾಲಿಯರ್ ಇತ್ಯಾದಿ ಕಡೆಗಳಿಂದ ಸಂಗೀತಗಾರರು ಮೈಸೂರಿಗೆ ಅರಸರ ಆಹ್ವಾನದ ಮೇಲೆ ಬರುತ್ತಿದ್ದು ಮರಳಿ ಊರಿಗೆ ಹೋಗುವಾಗ ಧಾರವಾಡ, ಕುಂದಗೋಳ, ಗದಗ ಇತ್ಯಾದಿ ಕಡೆಗಳಲ್ಲೂ ಸಂಗೀತ ಕಚೇರಿ ನೀಡುತ್ತಿದ್ದರು. ಹೀಗೆ ಬರುತ್ತಿದ್ದ ಕಲಾವಿದರಲ್ಲಿ ಕರೀಂಖಾನ್, ಅಲ್ಲಾದಿಯಾಖಾನ್, ವಿಷ್ಣುದಿಗಂಬರ ಪಲುಸ್ಕರ್, ರಹಮತ್‌ಖಾನ್ ಮುಂತಾದವರು ಜಿಲ್ಲೆಯಲ್ಲಿ ಕೆಲಕಾಲ ತಂಗಿದ್ದು ಆಸಕ್ತರಿಗೆ ಸಂಗೀತ ಬೋಧನೆಯನ್ನು ಮಾಡುತ್ತಿದ್ದರು. ಇದರಿಂದಾಗಿ ಜನಸಾಮಾನ್ಯರಲ್ಲಿಯೂ ಉತ್ತರಾದಿಯ ಬಗ್ಗೆ ಆಸಕ್ತಿ ಮೂಡುವಂತಾಯಿತು.

1880ರಲ್ಲಿ ಧಾರವಾಡದಲ್ಲಿ ಗುರುನಾಥರಾವ್ ಪಾಠಕ್ ಅವರಿಂದ 'ಕರ್ನಾಟಕ ಸಂಗೀತ ಶಾಲೆ' ಸ್ಥಾಪಿತವಾಯಿತು. ಅಲ್ಲಿ ತಂಜಾವೂರಿನಲ್ಲಿ ಕಲಿತ ಶ್ರೀನಿವಾಸರಾವ್ ಚಿಮ್ಮಲಗಿ ಕರ್ನಾಟಕ ಸಂಗೀತವನ್ನು ಬೋಧಿಸುತ್ತಿದ್ದರು. 1908ರಲ್ಲಿ ಧಾರವಾಡದ ಸರ್ಕಾರಿ ತರಬೇತಿ ಕಾಲೇಜಿಗೆ ಸಂಗೀತ ಶಿಕ್ಷಕರಾಗಿ ಭಾಸ್ಕರಬುವಾ ಬಖಲೆ ಅವರು ಬಂದ ಮೇಲೆ ಜಿಲ್ಲೆಯ ಸಂಗೀತ ವಾತಾವರಣ ಸಂಪೂರ್ಣವಾಗಿ ಬದಲಾಯಿತು. ಬಖಲೆ ಅವರು ಉತ್ತರಾದಿಯ ಹಲವಾರು ಘರಾಣೆಗಳಲ್ಲಿ ಪರಿಣಿತರಿದ್ದು ಪಿತ್ರೆ ವಕೀಲರು ಮುಂತಾದ ಹಲವಾರು ಕಲಾವಿದರನ್ನು ರೂಪಿಸಿದರು. ಭಾವನಗರ, ಇಂದೂರುಗಳಲ್ಲಿ ನಾಲ್ಕಾರು ತಲೆಮಾರುಗಳಿಂದ ಆಸ್ಥಾನ ಗಾಯಕರಾಗಿದ್ದವರ ವಂಶದಲ್ಲಿ ಜನಿಸಿದ ರಹಮತ್ ಖಾನರು 1912ರಲ್ಲಿ ಧಾರವಾಡದಲ್ಲಿಯೇ ನೆಲೆ ನಿಂತರು. ಮುಂದೆ 'ಭಾರತೀಯ ಸಂಗೀತ ವಿದ್ಯಾಲಯ' ಆರಂಭಿಸಿದರು. ಇಂದು ಇವರ ಮಗ ಪ್ರೊ. ಕರೀಂಖಾನ್, ಅವರ ಮಕ್ಕಳು ಬಾಲೇಖಾನ್, ಹಮೀದ್ ಖಾನ್, ಛೋಟಾ ರಹಮತ್ ಖಾನ್ ಅವರುಗಳು ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಮೊದಲಿಗೆ ಕರ್ನಾಟಕ ಸಂಗೀತದಲ್ಲಿ ದಾಸರ ಪದ ಹಾಡುತ್ತಿದ್ದ ಗುರುರಾವ ದೇಶಪಾಂಡೆ ಅವರು ಪಿತ್ರೆ ವಕೀಲರಲ್ಲಿ ಹಾಗೂ ಬೆಳಗಾವಿಯಲ್ಲಿ ಉತ್ತರಾದಿ ಕಲಿತು, ರಂಗನಟರಾಗಿ ನಂತರ ಧಾರವಾಡದ ಆಕಾಶವಾಣಿಗೆ ಬಂದರು.

ಧಾರವಾಡದ ಕಲಾಸಕ್ತರಾದ ಜಠಾರ ಭಾಸ್ಕರರಾಯರು, ಗಣಪತರಾಯರು, ಬಳವಂತರಾಯರು, ಸಂಗೀತ ಕಲಾವಿದರಾಗಿದ್ದ ಸುಬ್ಬರಾವ್ ಕುಲಕರ್ಣಿ ಮೊರಬ, ಸಂಗೀತ ಶಿಕ್ಷಕ ಹನುಮಂತರಾವ್ ವಾಳವೇಕರ, ಅನಂತರಾವ ಕುಲಕರ್ಣಿ, ಅಲ್ಲಾದಿಯಾ ಖಾನರ ಖಾಸಾ ಶಿಷ್ಯ ಭಾಸ್ಕರ ಬುವಾ ಬಖಲೆ, ಪಿತ್ರೆವಕೀಲರು, ಶ್ಯಾಮರಾವ್ ಗುರ್ಟು ಮೊದಲಾದವರೆಲ್ಲ ಸೇರಿ 1910ರಲ್ಲಿಯೇ 'ಧಾರವಾಡ

ಆರ್ಟ್ ಸರ್ಕಲ್' ಎಂಬ ಸಂಗೀತ ಸಂಸ್ಥೆಯೊಂದನ್ನು ಆರಂಭ ಮಾಡಿದರು. ಹೊರರಾಜ್ಯದ ಅನೇಕ ಕಲಾವಿದರನ್ನು ಆಹ್ವಾನಿಸಿ ಕಚೇರಿಗಳನ್ನು ಏರ್ಪಡಿಸಿದಲ್ಲದೆ, ಸ್ಥಳೀಯ ಯುವ ಪೀಳಿಗೆಗೂ ಪ್ರೋತ್ಸಾಹ ನೀಡಿ ಬೆಳೆಯಿಸಿದರು. ಇದರಿಂದಾಗಿ ಜಿಲ್ಲೆಯಲ್ಲಿ ಉತ್ತರಾದಿ ಸಂಗೀತ ಆಳವಾಗಿ ಬೇರೂರತೊಡಗಿತು.

ಧಾರವಾಡದಿಂದ ಮೊದಲು ಬಂದ ಪ್ರತಿಭೆಯೆಂದರೆ ಸವಾಯ್ ಗಂಧರ್ವರು. ಕುಂದಗೋಳದ ರಾಮಚಂದ್ರ ರಾಮಭಾವು ಕುಂದಗೋಳಕರ್ (1886-1952) ಮೊದಲಿಗೆ ಕರೀಂಖಾನ್ ಹಾಗೂ ಇನ್ನಿತರಿಂದ ಸಂಗೀತ ಕಲಿತು "ಸವಾಯ್ ಗಂಧರ್ವ" ಎನ್ನಿಸಿಕೊಂಡರು. ಆದರೆ ಸಂಗೀತ ಕಚೇರಿಗಳಿಗಿಂತ ನಾಟಕ ಕ್ಷೇತ್ರ ಅವರಿಗೆ ಹೆಚ್ಚು ಒಲಿದಿದ್ದರಿಂದ ಅಲ್ಲಿಯೇ 1931ರವರಗೆ ನೆಲೆನಿಂತರು. 1938ರಲ್ಲಿ ಕುಂದಗೋಳಕ್ಕೆ ಮರಳಿ ಬಂದು ಸಂಗೀತ ಕಲಿಸತೊಡಗಿದರು. ಫಿರೋಜ ದಸ್ತುರ, ಗಂಗೂಬಾಯಿ ಹಾನಗಲ್ಲ, ಭೀಮಸೇನಜೋಷಿ, ಕೃಷ್ಣಾಬಾಯಿ ರಾಮದುರ್ಗ, ವೆಂಕಟರಾವ್ ರಾಮದುರ್ಗ, ನೀಲಕಂಠ ಬುವಾ ಗಾಡಗೋಳಿ, ಫಕೀರಪ್ಪ ಕುಂದಗೋಳ ಮುಂತಾದವರು ಇವರ ಶಿಷ್ಯರು.

ಪಂಚಾಕ್ಷರಿ ಗವಾಯಿ (1892-1944) ಮಲ್ಲಿಕಾರ್ಜುನ ಮನ್ಸೂರ (1910-92) ಗಂಗೂಬಾಯಿ ಹಾನಗಲ್ (1913), ಬಸವರಾಜ ರಾಜಗುರು (1920-91) ಹಾಗೂ ಭೀಮಸೇನ ಜೋಶಿ (1922) ಅವರುಗಳು ಧಾರವಾಡ ಜಿಲ್ಲೆಯವರಾಗಿದ್ದು ಇವರನ್ನು ಉತ್ತರಾದಿ ಸಂಗೀತದ ಪಂಚರತ್ನಗಳೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಪಂಚಾಕ್ಷರಿಯವರು ಹಾನಗಲ್ಲಿನ ಕಾಡಸೆಟ್ಟಿಹಳ್ಳಿಯವರಾಗಿದ್ದು ಶಿರಾಳಕೊಪ್ಪ, ಮೈಸೂರುಗಳಲ್ಲಿ ಕರ್ನಾಟಕಿ ಕಲಿತು ಹುಬ್ಬಳ್ಳಿಯಲ್ಲಿ ವಹೀದ ಖಾನ, ನೀಲಕಂಠ ಬುವಾ ಅವರಲ್ಲಿ ಹಿಂದೂಸ್ಥಾನಿಯಲ್ಲಿಯೂ ಪಾಂಡಿತ್ಯ ಪಡೆದರು. ಹಾಡುಗಾರಿಕೆಯಲ್ಲದೆ ತಬಲಾ, ಹಾರ್ಮೋನಿಯಂ, ಪಿಟೀಲು, ದಿಲ್‌ರುಬಾ, ಕೊಳಲು ಇತ್ಯಾದಿ ವಾದ್ಯಗಳಲ್ಲೂ ಪರಿಶ್ರಮವಿತ್ತು. ಗಂಗೂಬಾಯಿಯವರು ಮೊದಲು ತಾಯಿಯಿಂದ ಕರ್ನಾಟಕಿ ಹಾಗೂ ಕಿನ್ನರಿ ವಿದ್ವಾನ್ ಹುಲಗೂರ ಕೃಷ್ಣಾಚಾರ್ ಅವರಲ್ಲೂ ನಂತರ ಸವಾಯ್ ಗಂಧರ್ವರಲ್ಲೂ ಹಿಂದೂಸ್ಥಾನಿ ಕಲಿತರು. ಬಸವರಾಜರಿಗೆ ಪಂಚಾಕ್ಷರಿ ಗವಾಯಿಯವರೇ ಪ್ರಥಮ ಗುರು. ಮುಂದೆ ಇವರುಗಳು ಹೊರ ರಾಜ್ಯದ ಕಲಾವಿದರಲ್ಲೂ ಅಭ್ಯಸಿಸಿ ಬಂದರು. ಇವರುಗಳಿಗೆಲ್ಲಾ ಅನೇಕ ಬಿರುದು ಬಾವಲಿಗಳು ಪಾರಿತೋಷಕಗಳು ಲಭ್ಯವಾಗಿವೆ. ಗೌರವ ಡಾಕ್ಟರೇಟ್‌ಗಳು, ಪದಶ್ರೀ, ಪದ್ಮಭೂಷಣ, ಕಾಳಿದಾಸ ಸಮ್ಮಾನ್, ತಾನಸೇನ ಸಮ್ಮಾನ್, ಕನಕ-ಪುರಂದರ ಪ್ರಶಸ್ತಿ ಇತ್ಯಾದಿ ಒಂದಲ್ಲ ಒಂದು ಗೌರವ-ಪ್ರಶಸ್ತಿಗಳು ಇವರೆಲ್ಲರಿಗೆ ಸಂದಿವೆ. ದೇಶ ವಿದೇಶಗಳನ್ನು ಸುತ್ತಿ ಹೆಸರುಗಳಿಸಿದ್ದಾರೆ. ಇಂದಿಗೆ ಜೋಶಿ ಅವರು ಪುಣೆಯಲ್ಲೂ ಗಂಗೂಬಾಯಿ ಅವರು ಹುಬ್ಬಳ್ಳಿಯಲ್ಲೂ ನೆಲೆಸಿದ್ದಾರೆ. ಉಳಿದ ಮೂವರು ಇಂದು ಕಣ್ಮರೆಯಾಗಿದ್ದು ಅವರ ಪುಣ್ಯತಿಥಿಯಂದು ಸಂಗೀತೋತ್ಸವಗಳು ನೆರವೇರುತ್ತವೆ.

**ಶಿಷ್ಯ ಪರಂಪರೆ:** ಪಂಚಾಕ್ಷರಿ ಗವಾಯಿಗಳ ಶಿಷ್ಯರಲ್ಲಿ ಪುಟ್ಟರಾಜ ಗವಾಯಿ, ಬಸವರಾಜ ರಾಜಗುರು, ಪಂಚಾಕ್ಷರಿ ಮತಿಗಟ್ಟಿ, ಸಿದ್ದರಾಮ ಜಂಬಲದಿನ್ನಿ, ಶೇಷಾದ್ರಿ ಗವಾಯಿ, ಮೃತ್ಯುಂಜಯ, ಚಂದ್ರಶೇಖರ್, ಬಸವರಾಜ (ಪುರಾಣಿಕ ತ್ರಯರು), ಅರ್ಜುನ - ಸಾ ನಾಕೋಡ, ಶಂಕರದೀಕ್ಷತ ಜಂತಲಿ, ಎಂ. ವೆಂಕಟೇಶ ಕುಮಾರ, ಡಿ. ಕುಮಾರ ದಾಸ, ಕೃಷ್ಣ ಬುವಾ ಶಿಂದೆ, ರಾಜೀವ ಪುರಂಧರೆ, ಕಮಲ ರಾಜೀವ, ರುದ್ರಮುನಿಸ್ವಾಮಿ ಹಿರೇಮಠ, ವೈ.ಎಫ್.ಬಂಗ್ಲೇದ, ನಾಗಯ್ಯ ಗವಾಯಿ, ದೇವೇಂದ್ರ ಕುಮಾರ ಪತ್ತಾರ, ಸದಾಶಿವ ಪಾಟೀಲ, ಗುರುಬಸವಾರ್ಯ ಹಿರೇಮಠ ಮುಂತಾದವರನ್ನು ಉದಾಹರಿಸಬಹುದು ಇವರಲ್ಲಿ ಕೆಲವರು ವಾದ್ಯಗಾರರು ಹಾಗೂ ಕೀರ್ತನೆಕಾರರು ಆಗಿದ್ದಾರೆ. ಮನ್ಸೂರರ ಶಿಷ್ಯರಲ್ಲಿ ಪಂಚಾಕ್ಷರಿ ಮತಿಗಟ್ಟಿ, ಸಿದ್ದರಾಮ ಜಂಬಲದಿನ್ನಿ, ಎ.ವಿ.ಪಾಟೀಲ, ಮೀರಾಗುಂಡಿ, ರಾಜಶೇಖರ ಮನ್ಸೂರ್ ಮುಂತಾದವರನ್ನೂ ಗಂಗೂಬಾಯಿ ಅವರ ಶಿಷ್ಯ ವರ್ಗದಲ್ಲಿ ಅವರ ಮಗಳು ಕೃಷ್ಣಾ ಹಾನಗಲ್, ನಾಗನಾಥ ಒಡೆಯರ್, ಸುಲಭಾ ದಂಬಳ, ನಂದಾಪಾಟೀಲ, ಸೀತಾ ಹಿರೇಬೆಟ್ಟ ಇವರನ್ನೂ ರಾಜಗುರು ಅವರ ಶಿಷ್ಯರುಗಳಲ್ಲಿ ಸೋಮನಾಥ ಮರಡೂರ, ಷಣ್ಮುಖ ಗೋಜನೂರ, ಗಣಪತಿ ಭಟ್ಟ, ಸೋಮಶೇಖರ್ ಮರಡೀಮಠ, ಶ್ರೀಪಾದ ಹೆಗಡೆ, ಶಾಂತಾರಾಮ ಹೆಗಡೆ, ಪರಮೇಶ್ವರ ಹೆಗಡೆ, ಎಂ.ಎಸ್.ಕಾಮತ್, ಸಂಗೀತಾ ಕಟ್ಟಿ, ಪೂರ್ಣಿಮಾ ಭಟ್ಟ ಮುಂತಾದ ಅನೇಕರನ್ನೂ; ಭೀಮಸೇನ ಜೋಶಿ ಅವರ ಶಿಷ್ಯ ಪರಂಪರೆಯಲ್ಲಿ ಶ್ರೀಪತಿ ಪಾಡಿಗಾರ್, ಮಾಧವಗುಡಿ, ನಾರಾಯಣ ದೇಶಪಾಂಡೆ, ಶ್ರೀಕಾಂತ ದೇಶಪಾಂಡೆ, ರಾಮಕೃಷ್ಣ ಪಟವರ್ಧನ, ಅರವಿಂದ ಹುಯಿಲಗೋಳ, ಅನಂತ ತೇರದಾಳ ಮುಂತಾದವರನ್ನು ಹೆಸರಿಸಬಹುದು. ಗದಗಿನ ಪುಟ್ಟರಾಜ ಗವಾಯಿಗಳ ಶಿಷ್ಯರಲ್ಲಿ ಅನಿತಾ ಪುರಾಣಿಕ, ಆಶಾ ಪ್ರಳಯಕಾಲ ಮಠ, ಆಶಾ ಕೆ. ನಾವಲಗಿಮಠ, ಸಿದ್ದರಾಮಸ್ವಾಮಿ ಕೋರವಾರ, ಚಂದ್ರಶೇಖರ ಪುರಾಣಿಕ ಮಠ, ಹನುಮಂತಸಿಂಗ್ ಹಾನಗಲ್, ಅರ್ಜುನಸಾ ನಾಕೋಡ್ ಹಾಗೂ ಇವರ ಮಕ್ಕಳಾದ ರಘುನಾಥ, ಬಾಲಚಂದ್ರ

ವಿಶ್ವನಾಥ ಮುಂತಾದವರಿದ್ದಾರೆ. ಮಾಧವಗುಡಿ ಅವರಿಗೆ ನಾಗೇಶ್ವರ ದೇಶಪಾಂಡೆ ಅವರು ಮೊದಲ ಗುರುಗಳು. ಗುಡಿಯವರ ಶಿಷ್ಯರಲ್ಲಿ ನಾಗರಾಜ ಹವಲ್ದಾರ್, ಅನುಪಮಾ ಗುಡಿ ಮುಖ್ಯರು. ನರಗುಂದದ ಬುವಾ ಮನೆತನದ ವಿನಾಯಕ, ಮಾಧವ, ಶ್ರೀನಿವಾಸ, ದತ್ತುಬುವಾ ಹಾಗೂ ಇವರ ಮಕ್ಕಳು ಮೂರು ತಲೆಮಾರುಗಳ ಕಲಾವಿದರು.

ಇವರಲ್ಲದೆ ಜಿಲ್ಲೆಯಾದ್ಯಂತ ಹಿರಿಯ, ಕಿರಿಯ ಕಲಾವಿದರಿಂದ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಅಭ್ಯಸಿಸಿದ, ನಿಯಮಿತವಾಗಿ ಕಚೇರಿ ಮಾಡುವ ಇಲ್ಲವೇ ಸ್ವಸಂತೋಷಕ್ಕಾಗಿ ಕಲಿತಿರುವ ಅನೇಕ ಕಲಾವಿದರಿದ್ದಾರೆ. ಇವರದೊಂದು ಪಟ್ಟಿಯನ್ನು ಮುಂದೆ ನೀಡಿದೆ. ಇವರಲ್ಲಿ ಕೆಲವರು ಜಿಲ್ಲೆಯ ಹೊರಗಿನವರಾದರೆ ಕೆಲವರು ಮೂಲತಃ ಜಿಲ್ಲೆಯವರಾಗಿದ್ದು ಇಂದು ಬೇರೆ ಕಡೆಗಳಲ್ಲಿ ನೆಲೆಸಿದವರು. (ಈ ಪಟ್ಟಿ ಪ್ರಖ್ಯಾತಿ, ವಯೋಮಾನ, ಅಕಾರಾದಿ ಇತ್ಯಾದಿ ಯಾವುದೇ ನಿಯಮವನ್ನು ಅನುಸರಿಸಿದ್ದಲ್ಲ).

ಇಂಥ ಕಲಾವಿದರಾದರಲ್ಲಿ ಎಂ.ಎಸ್.ಜೋಶೀ, ರಂಗನಾಥ ಜೋಶಿ, ಪಾರ್ವತಿಬಾಯಿ ಹೊಂಬಳ, ತಾರಾಬಾಯಿ ತೇರದಾಳ, ಕಮಲಾಬಾಯಿ ಸವಣೂರ, ಎಂ.ವಿ.ಮಿಣಜಗಿ, ವಸಂತ ಕನಕಾಪುರ, ರಾಘವೇಂದ್ರ ಚವಟಿ, ಗುರುರಾವ ದೇಶಪಾಂಡೆ, ಮಾಲಾದೀಕ್ಷಿತ್, ನಾರಾಯಣ ಮಜುಂದಾರ್, ಎಂ.ಜಿ.ಪಟವರ್ಧನ್, ಎನ್.ಜಿ.ಮೋದಕ್, ವಿನಾಯಕ ತೊರ್ವಿ, ಗಾಯಿತ್ರಿ ಎನ್.ಜೋಶಿ, ಪಾರ್ವತಿಬಾಯಿ, ಹುಸೇನ ಬಾಬು ನದಾಫ, ಬಸವರಾಜ ಬೆಂಡಿಗೇರಿ, ನಾಗರತ್ನ ನವಲಗುಂದ, ಶಿವರಾಜ ಗವಾಯಿ, ಆರ್.ಎಸ್. ಜಂತಲಿ ಮತ್ತು ಅವರ ಪತ್ನಿ ಹಾಗೂ ಉತ್ತರಾದಿ, ದಕ್ಷಿಣಾದಿ ಎರಡರಲ್ಲೂ ಪರಿಣಿತರಾದ ವಸಂತಾದೇವಿ, ಅನುರಾಧಾ ಧಾರೇಶ್ವರ, ಇಂದುಮತಿ ತಾಮಣಕರ, ಸುಮನಾ ನಾಗರಕಟ್ಟಿ, ವೀಣಾಶಿರಾಲಿ, ಕುಸುಮ್ ಕುಲಕರ್ಣಿ, ಸರೋಜಿನಿ ಚಂದಾವರ್ಕರ್, ಯಮುನಾ ಟೇಂಬೆ, ರಾಧಿಕಾ ಭಟ್, ಶ್ಯಾಮಲಾ ಕುಲಕರ್ಣಿ, ರಾಘವೇಂದ್ರ ಗುಡಿ, ಶೇಷಗಿರಿಗುಡಿ, ಶ್ರೀಪಾದಗಡ್ಡಿ, ವಿದ್ಯಾಮಂತಗಿ, ಸದಾಶಿವ ಐಹೊಳೆ, ಹನುಮಂತಪ್ಪ ಕಾಮನಹಳ್ಳಿ, ಜಯಲಕ್ಷ್ಮಿ ಉಗ್ರಾಣಿ, ಬಸವರಾಜ ಗೋನಾಳು, ಪರಮೇಶ್ವರ ಹೆಗಡೆ, ಗಜಾನನ ಬುವಾ ಜೋಶಿ, ಅಕ್ಕಮಹಾದೇವಿ ಹಿರೇಮಠ, ಜೈಶ್ರೀ ಸಂಗಮೇಶ್ವರ ಗುರವ್, ವೆಂಕಟೇಶ ಬುರ್ಲಿ, ಹನುಮಂತಬುರ್ಲಿ, ರಾಮರಾವ್ ಗುಂಡೋಪಂತ ದೇಸಾಯಿ, ಫಕೀರಪ್ಪ ಕುಂದಗೋಳ, ಡಿ.ಆರ್. ವಾರಂಗ, ಆರ್.ಎಸ್.ಯಾಳಗಿ, ರಾಮರಾವ್ ದೇಸಾಯಿ, ಮಹಾವೀರಪ್ಪ ಕಸ್ತೂರಿ, ಎಸ್.ಜಿ.ಮೋಡಕ್, ನಾಗೋಸಾ ಕಲಬುರ್ಗಿ, ಅರ್ಜುನ್ ಮಗದುಮ್, ನಾರಾಯಣ ಢಗೆ, ಜೀವುಬಾಯಿ ನಾಗರಕಟ್ಟಿ, ವಿಠಲ ಸಾ ಕಬಾಡಿ, ಶಾರದಾ ಹಾನಗಲ್, ಕಮಲಾ ಪಾಗೆ, ಎ.ಯು.ಪಾಟೀಲ, ಕೃಪಾ ವಿಡನ್, ಯಲ್ಲಪ್ಪ ಅಮರಗೋಳ, ಕರವೀರಪ್ಪ ಹಡಪದ, ತುಕರಾಮ್‌ಸಾ ಕಬಾಡಿ, ಚೂಡಾಮಣಿ ನಂದಗೋಪಾಲ್, ಚಕ್ರಕೋಡಿ ನಾರಾಯಣ ಶಾಸ್ತ್ರಿ, ಕೇಶವಗುರಂ, ಲಿಂಗರಾಜ ಬುವಾ, ಯರಗುಪ್ಪಿ ಪಿ.ಆರ್.ಹೂಗಾರ್, ಶಾರದ ಬಾಲಚಂದ್ರ ಸಿರೂರ್, ವೀರಣ್ಣ ನಿಂಗಪ್ಪ ಕಾಮಕರ, ಪಿ.ಎ. ಸಾಲಿಮಠ, ಅಜ್ಜಣ್ಣ ಯು. ಪಾಟೀಲ, ಶಾರದಾ ಎ ಛಾಫೇಕರ, ಕೃಷ್ಣರಾವ್ ಇನಾಂದಾರ, ಶ್ರೀಪತಿ ಪಾಡಿಗಾರ, ಶೇಷಗಿರಿ ದಂಡಾಪುರ, ನಾರಾಯಣಾಚಾರ್ಯ ದಂಡಾಪುರೆ, ವಸಂತರಾವ್ ಇನಾಮದಾರ, ಲತಾ ನಾಡಿಗೇರ್, ಶಾಮಲ ಕೆ. ಕುಲಕರ್ಣಿ, ಗೀತಾ ಸದಾನಂದ ಜಾವಡೇಕರ, ಧನಲಕ್ಷ್ಮಿ ಡಿ.ಮೊಮಾಯ, ಸುಶೀಲಾ ಮೆಹತಾ, ಶ್ರೀನಿವಾಸ ಇನಾಂದಾರ್, ನಂದ ಎಂ. ಪಾಟೀಲ್ ಮುಂತಾದವರನ್ನು ಹೆಸರಿಸಬಹುದು.

ಜಿಲ್ಲೆಯಲ್ಲಿ ಕೆಲವು ಪ್ರತಿಭಾವಂತ ಬಾಲ ಕಲಾವಿದರೂ ಇದ್ದಾರೆ. ಅವರುಗಳಲ್ಲಿ ತಬಲಾ ವಾದಕರಾದ ಬಸವರಾಜ ಮರಡೂರ, ಅಲ್ಲಮ ಪ್ರಭು ಹಿರೇಮಠ, ವಯೋಲಿನ್ ವಾದಕರಾದ ಅಶ್ವಿನ್ ಮತ್ತು ಚೇತನ್, ಹಾರ್ಮೋನಿಯಂ ವಾದಕ ಶರಣ ಬಸಪ್ಪ ಬೇವೂರ, ಅವರುಗಳಲ್ಲದೆ ಸಂಗೀತಗಾರರಾದ ಅನುಪಮಾ ಗುಡಿ, ರೋಹಿಣಿ ದೇಶಪಾಂಡೆ, ವೀಣಾ, ವಾಣಿ ಮರಡೂರ, ವಾಣಿ ಹರ್ಡೇಕರ ಮುಂತಾದವರನ್ನು ಉದಾಹರಿಸಬಹುದು.

**ವಾದ್ಯ ಕಲಾವಿದರು** : ಉತ್ತರಾದಿ ಸಂಗೀತದಲ್ಲಿ ಸಾಮಾನ್ಯವಾಗಿ ಹಾಡುಗಾರರು ಒಂದೆರಡು ವಾದ್ಯಗಳಲ್ಲೂ ಪರಿಣತಿ ಹೊಂದಿರುವುದುಂಟು. ಆದರೂ ವಾದ್ಯವನ್ನೇ ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿರಿಸಿಕೊಂಡ ಅನೇಕ ಕಲಾವಿದರು ಜಿಲ್ಲೆಯಲ್ಲಿದ್ದಾರೆ. ಮೊದಲಿಗೆ ಸಂಗೀತದ ಅಭಿರುಚಿ ಹುಟ್ಟಿಸಿದ ರಹಮತ್ ಖಾನರು ಸ್ವತಃ ಸಿತಾರ್ ವಾದನದಲ್ಲಿ ಅದ್ವಿತೀಯರಿದ್ದರು. ಇವರು ಮೊದಲಿಗೆ ಬೀನ್ ವಾದ್ಯದಲ್ಲಿ ಹಲವಾರು ಸುಧಾರಣೆಗಳನ್ನು ಮಾಡಿ ಅದನ್ನೇ ಪ್ರಧಾನವಾಗಿ ಬಳಸುತ್ತಿದ್ದರೂ ಕಾರಣಾಂತರದಿಂದ ಸಿತಾರ್‌ಗೆ ಬದಲಾಯಿಸಿಕೊಂಡರು. ಇವರ ಮಗ ಕರೀಂಖಾನ್ ಹಾಗೂ ವಂಶಜರಾದ ಬಾಲೇಖಾನ್, ಹಾಸ್ನಾನ್ ಖಾನ್ ಅವರುಗಳು ಸಿತಾರ ನುಡಿಸುತ್ತಾರೆ. ಇವರಲ್ಲದೆ ಸಿತಾರನ್ನು ಬಿ.ಡಿ. ಪಾಠಕ್, ರಾಮಚಂದ್ರ ಹೆಗಡೆ, ರಾಮಚಂದ್ರ ಗುಡಿಹಾಳ, ಶಿವಪ್ಪ ಎಚ್ ತರಲಘಟ್ಟಿ, ಜ್ಯೋತಿ ದೇವಗುಡಿ, ಎಚ್ಚರಪ್ಪಯ್ಯ ಸ್ವಾಮಿ ಅವರುಗಳೂ, ಗುರುದೇವ್ ಅವರು ಸಿತಾರದೊಂದಿಗೆ ತಬಲಾವನ್ನೂ ಶ್ರೀನಿವಾಸ ಜೋಶಿ

ಬುಲ್ ಬುಲ್ ತರಂಗವನ್ನೂ ನುಡಿಸುತ್ತಾರೆ. ಹಿರಿಯ ಕಲಾವಿದ ದತ್ತೋಪಂತ ದೇಸಾಯಿಯವರು ಸಿತಾರವನ್ನು ಆಳವಾಗಿ ಅಭ್ಯಸಿಸಿದ್ದರೂ ಕಚೇರಿ ನೀಡಿರುವುದಿಲ್ಲ, ಉತ್ತರಾದಿಯ ಇನ್ನೊಂದು ಮುಖ್ಯ ವಾದನವಾದ 'ಬೀನ್' ಅನ್ನು ಬಿಂದು ಮಾಧವ ಪಾಠಕ್, ಮುರಳೀಧರರಾವ್, ದತ್ತೋಪಂಥ ಪಾಠಕ್ ಅವರುಗಳು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಂಡಿದ್ದಾರೆ.

ವಿಷ್ಣುಪಂತ ಅವರು 'ರುದ್ರವೀಣೆ'ಯನ್ನು ಮಾಧವ ನಿಂಬರಗಿ ಗಿಟಾರ್, ಕಿರಣ್, ಪ್ರವೀಣ್ ಗೋಡಖಿಂಡಿ, ರಾಜನ್ ಕುಲಕರ್ಣಿ ಅವರುಗಳು ಬಾನ್ಸುರಿ, ಹುಸೇನ್ ಬಾಬು ಸದಾಫ್, ಶಿವಪ್ಪ ಭಜಂತ್ರಿ ಕ್ಲಾರಿಯೋನೆಟ್, ಟಿ.ವಿ. ಕಬಾಡಿ, ಜಿ.ಆರ್.ನಿಂಬರಗಿ, ವಾದಿರಾಜ ನಿಂಬರಗಿ, ಬಸಲಿಂಗಯ್ಯ ಎಸ್.ಮಠ, ಅವರುಗಳು ಪಿಟೀಲು, ಯಲ್ಲಪ್ಪ ಅಮರಗೋಳ, ಬೆಳ್ಳಟ್ಟಿಯ ಫಕೀರಪ್ಪ ಹೂಗಾರ ತಂಗೋಡ, ಹನುಮಂತಪ್ಪ (ಭಜಂತ್ರಿ) ಅಗಡಿ, ಬಸವರಾಜ ಹೆಡಿಗ್ಗೊಂಡ ಅವರುಗಳು ಶಹನಾಯ್, ವೆಂಕಟೇಶ ಗೋಡಖಿಂಡಿ, ತಿಮ್ಮಣ್ಣಸಾವೆಂಕೂಸಾ ಚವಾಣ ಅವರುಗಳು ಕೊಳಲು ವಾದ್ಯಗಳಲ್ಲಿ ಪರಿಣತರಿದ್ದಾರೆ. ತಬಲ ಮತ್ತು ಹಾರ್ಮೋನಿಯಂ ಸಾಮಾನ್ಯವಾಗಿ ಪಕ್ಕವಾದ್ಯ (ಸಾಥಿ)ಗಳಾಗಿ ಬಳಕೆಯಾಗುತ್ತದೆ. ಈ ವಾದ್ಯಗಳಲ್ಲಿ ನುರಿತ ಸಾಕಷ್ಟು ಕಲಾವಿದರಿದ್ದಾರೆ. ತಬಲಾ ವಾದನದಲ್ಲಿ ವೆಂಕಟರಾವ್ ಚಿಮ್ಮಲಗಿ ಟಿಲಕವಾಡರು ಹಳೆಯ ತಲೆಮಾರಿನವರು. ನಂತರದವರಲ್ಲಿ ಶೇಷಗಿರಿ ಹಾನಗಲ್ ಹಾಗೂ ಅವರ ಶಿಷ್ಯರಾದ ಸದಾಶಿವ ಪಾಟೀಲ, ರವೀಂದ್ರ ಯಾದಗಲ್, ಸೂರಜ್ ಪುರಂಧರೆ, ರಘುನಾಥಸಾ ನಾಕೋಡ, ರಾಜಗೋಪಾಲ ಕಲ್ಲೂರಕರ, ಶ್ರೀಕಾಂತ ಉಪಾಧ್ಯೆ, ಭೀಮಸೇನ ಮರೋಳ, ಶಶಿಕಾಂತ ಕುಲಕರ್ಣಿ, ರವಿ ಕೂಡ್ಲಗಿ, ಪಂಚಾಕ್ಷರಿ ಶೀಲವಂತರ, ಜಿ.ಎಸ್. ಪರ್ವತೀಕರ, ಸದಾಶಿವ ಯು ಪೋತದಾರ, ರತ್ನಾಕರ ಎಸ್ ಗರುಡ, ಎಸ್.ಎನ್.ಮಜುಂದಾರ, ಜಿ.ಆರ್. ನಿಂಬರಗಿ, ಕೈವಲ್ಯಗುರವ್, ವಿಶ್ವನಾಥಸಾ ನಾಕೋಡ, ಚಂದ್ರಶೇಖರ ಮೂರ್ಗುಮಟ್ಟಿ, ಕಲ್ಲಪ್ಪ ಹೂಗಾರ, ರಾಘವೇಂದ್ರ ಚವಟಿ, ಬಸವರಾಜ ಬಂಡಿಗೇರ, ಸತೀಶ್ ಹಂಪಿಹೊಳಿ ಮುಂತಾದವರನ್ನು ಉದಾಹರಿಸಬಹುದು. ಧಾರವಾಡದ ಹನುಮಂತಪ್ಪ ಬಗರೀಕರ್ ಅವರು ಸುಮಾರು 50 ವರ್ಷಗಳಿಂದ ತಬಲಾ ವಾದ್ಯ ತಯಾರಿಸುತ್ತಿದ್ದು ವಾದ್ಯದ ಬಗ್ಗೆ ಆಳವಾದ ತಿಳುವಳಿಕೆಯುಳ್ಳವರಾಗಿದ್ದಾರೆ. ತಬಲಾ ವಾದಕ ರಾಜಗೋಪಾಲ ಕಲ್ಲೂರಕರ ಅವರು ಧಾರವಾಡದಲ್ಲಿ ಕಳೆದ ಹತ್ತು ವರ್ಷಗಳಿಂದ ತಬಲಾ ವಿದ್ಯಾಲಯ ನಡೆಸುತ್ತಿದ್ದಾರೆ.

ಹಾರ್ಮೋನಿಯಂ ವಾದಕರಲ್ಲಿ ಗಜಾನನ ಜೋಶೀ, ವಾಳವೇಕರ ಹನುಮಂತರಾವ್, ಬಸವ ಪ್ರಭು ಹಂಚಿನಾಳ, ಅರ್ಜುನ್‌ಸಾ ನಾಕೋಡ, ವಸಂತ ಕನಕಾಪುರ, ವಿಠಲಸಾ ಕಬಾಡಿ, ಏಣಗಿ ಬಾಳಪ್ಪ, ಸೋನುಬಾಯಿ ದೊಡ್ಡಮನಿ, ಶ್ರೀಪಾದರಾವ್ ಗರುಡ, ಮೋಹನ ಮೂಡಣಗೇರಿ, ರವಿ ಸೊರಗಾವಿ, ರಾಮಚಂದ್ರ ಗುಂಡೋ ದೇಸಾಯಿ, ಸಿ.ಎನ್. ಬಂಕಾಪುರ, ಸುರೇಂದ್ರ ಸಾ ವೆಂಕೂಸಾ ನಾಕೋಡ್, ತುಕರಾಂಸಾ ಕಬಾಡಿ ಮೊದಲಾದವರಿದ್ದಾರೆ.

ವಾದ್ಯಗಳಲ್ಲಿ ಪರಿಣತಿ ಹೊಂದಿದ ಈ ಕಲಾವಿದರಲ್ಲಿ ಅನೇಕರು ಹಾಡುಗಾರಿಕೆಯಲ್ಲಿಯೂ ಪರಿಶ್ರಮ ಹೊಂದಿದ್ದಾರೆ. ಅನೇಕರು ದೇಶ ವಿದೇಶಗಳಲ್ಲಿ ಹೆಸರು ಮಾಡಿ ಹಲವಾರು ಪಾರಿತೋಷಕ ಬಿರುದುಗಳನ್ನು ಸಂಪಾದಿಸಿದ್ದಾರೆ. ರಾಷ್ಟ್ರದ ಹೆಸರಾಂತ ಕಲಾವಿದರಿಗೆ 'ಸಾಥಿ'ಯಾಗಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಸಂಗೀತ ಶಾಲೆಗಳು**

ಉತ್ತರಾದಿ ಸಂಗೀತ ಶಾಸ್ತ್ರೀಯ ಚೌಕಟ್ಟಿನಲ್ಲೇ ಇದ್ದು ಸಾಂಪ್ರಾದಾಯಿಕ ಗುರು ಶಿಷ್ಯ ಸಂಬಂಧದಲ್ಲಿಯೇ ಮುಂದುವರಿಯುತ್ತಿದೆ. ಸಾಮಾನ್ಯವಾಗಿ ಹಿರಿಯ ಕಲಾವಿದರು ಕಿರಿಯರಿಗೆ ಕಲಿಸುವುದುಂಟು. 'ಸಂಗೀತ ಶಾಲೆ' ಎಂದು ಪ್ರತ್ಯೇಕವಾಗಿ ಶಾಲೆಗಳನ್ನು ನಡೆಸುವ ಪರಿಪಾಠ ಸಾಂಪ್ರದಾಯಿಕ ಕಲೆಯಲ್ಲಿ ಹೆಚ್ಚಾಗಿ ಕಂಡು ಬರುವುದಿಲ್ಲ. ಇತ್ತೀಚಿಗೆ ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳು ಕ್ರಮಬದ್ಧ ಸಂಗೀತ ಶಾಲೆಗಳನ್ನು ಆರಂಭಿಸಿ, ಪಠ್ಯವನ್ನು ಇರಿಸಿ ಪದವಿಗಳನ್ನೂ ನೀಡುತ್ತದೆ. ಹಿಂದಿನ ಗುರು ಶಿಷ್ಯ ಸಂಬಂಧದಲ್ಲಿ ಉತ್ತರಾದಿಯಂತಹ ಸಾಂಪ್ರದಾಯಿಕ ಸಂಗೀತ ಶುದ್ಧರೂಪದಲ್ಲಿ ಉಳಿಯಲು ಸಾಧ್ಯವಿತ್ತು. ಸಾಮಾನ್ಯವಾಗಿ ಗುರುವಿನ 'ಘರಾಣೆ'ಯನ್ನೇ ಶಿಷ್ಯ ಮುಂದುವರಿಸುತ್ತಿದ್ದ. ('ಘರಾಣೆ'ಯೆಂದರೆ ಒಂದು 'ಸಂಗೀತ ಪದ್ಧತಿ' ಎಂದು ಹೇಳಬಹುದು. ಬಹ್ವಾತನಿಂದ ಇಲ್ಲವೇ ಒಂದು ಊರಿನಲ್ಲಿ ಪ್ರಚಲಿತವಿದ್ದ ಸಂಗೀತ ಪದ್ಧತಿ. ಇದರಲ್ಲಿ ಕಿರಾಣ, ಗ್ವಾಲಿಯರ್, ಆಗ್ರಾ ಇತ್ಯಾದಿಯಾಗಿ ಸುಮಾರು 12 ಪದ್ಧತಿಗಳಿವೆ). ಅಬ್ದುಲ್ ಕರೀಂಖಾನ್ ಕಿರಾಣ ಘರಾಣೆಯ ಆದ್ಯ ಪ್ರವರ್ತಕರಿದ್ದು ಅವರ ಶಿಷ್ಯ ಸವಾಯ್ ಗಂಧರ್ವ ಹಾಗೂ ಅವರ ಶಿಷ್ಯೆ ಗಂಗೂಬಾಯಿ ಅವರು ಮುಂದುವರಿಸಿದರು. ಅಂತೆಯೇ ಮನ್ಸೂರವರದು ಮುಖ್ಯವಾಗಿ ಜೈಪುರ ಘರಾಣೆಯಾದರೆ, ಬಸವರಾಜ

ರಾಜಗುರುಗಳಲ್ಲಿ ಕಿರಾಣ, ಗ್ವಾಲಿಯರ್ ಹಾಗೂ ಪಟಿಯಾಳಾಗಳ ತ್ರಿವೇಣಿ ಸಂಗಮ ಕಾಣಬಹುದು. ಹಲವಾರು ಗುರುಗಳಲ್ಲಿ ಅಭ್ಯಸಿಸಿದವರು ಹಲವಾರು ಪದ್ಧತಿಗಳನ್ನು ಅನುಸರಿಸುವುದುಂಟು.

ಜಿಲ್ಲೆಯಲ್ಲಿ ಕಳೆದ ಶತಮಾನದ ಅಂತ್ಯದಲ್ಲಿಯೇ ಉಪಾಧ್ಯಾಯರ ತರಬೇತಿ ಕಾಲೇಜಿನಲ್ಲಿ ಸಂಗೀತದ ತರಗತಿಗಳು ಆರಂಭವಾಗಿರಬಹುದು. 1908ರಲ್ಲಿ ಭಾಸ್ಕರ ಬುವಾ ಬಖಲೆ ಅವರು ಸಂಗೀತ ಶಿಕ್ಷಕರಾಗಿ ಬಂದಿದ್ದು ಶಾಲೆಯಿಂದ ಹೊರಗೂ ಕೆಲವು ಶಿಷ್ಯರನ್ನು ಪಡೆದಂತಿದೆ. ರಹಮತ್‌ಖಾನರು 1912ರಲ್ಲೆ ಧಾರವಾಡದಲ್ಲಿ ನೆಲೆ ನಿಂತು ಶಿಷ್ಯರನ್ನು ಪಡೆದಿದ್ದರೂ ಅವರ ಭಾರತೀಯ ಸಂಗೀತ ವಿದ್ಯಾಲಯ ಆರಂಭವಾದುದು 1931ರಲ್ಲಿ, ಇಂದು ಪ್ರೊ|| ಕರೀಂಖಾನ್, ಹಮೀದ್ ಖಾನ್ ಅವರು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಸಾಂಪ್ರದಾಯಿಕವಾಗಿ ಶಾರದಾ ಪೂಜೆಯಿಂದ ಹಾಗೂ ರಹಮತ್ ಖಾನರ 'ಬೀನ್' ವಾದ್ಯದ ಪೂಜೆಯಿಂದ ಕಲಿಕೆ ಆರಂಭವಾಗುತ್ತದೆ. ಸವಾಯ್ ಗಂಧರ್ವರು 1938ರಲ್ಲಿ ಕುಂದಗೋಳದಲ್ಲಿ ನೆಲೆ ನಿಂತ ಮೇಲೆ ಕ್ರಮಬದ್ಧವಾಗಿ ಶಿಷ್ಯರನ್ನು ಪಡೆದು ಕಲಿಸತೊಡಗಿದರು. ಪಂಚಾಕ್ಷರಿ ಗವಾಯಿಗಳು ಗದಗ್‌ನಲ್ಲಿ 1940ರಲ್ಲಿ ಸಂಗೀತ ಶಾಲೆ ಆರಂಭಿಸಿದರು. ಧಾರವಾಡ, ಗಜೇಂದ್ರಗಡ, ರಾಮಸಾಗರ, ಬಂಕಾಪುರ, ಇಟಗಿ, ಗುಳೇದಗುಡ್ಡ ಇತ್ಯಾದಿ ಕಡೆಗಳಲ್ಲಿ ನಿಯಮಿತವಾಗಿ ಸಂಚಾರ ಮಾಡುತ್ತಿದ್ದು ಅಲ್ಲಿಯೂ ಸಂಗೀತ ಶಾಲೆಗಳನ್ನು ನಡೆಸುತ್ತಿದ್ದರು. ಇದಕ್ಕೆ 'ಪ್ರವಾಸ ಶಾಲೆ' ಎಂದೂ ಗದಗಿನ ಶಾಲೆಗೆ 'ಸ್ಥಾನಿಕ ಶಾಲೆ' ಎಂದೂ ಹೆಸರಿಟ್ಟಿದ್ದರು. ಪ್ರಸ್ತುತ 'ಪಂಚಾಕ್ಷರಿ ಗವಾಯಿಗಳ ಸಂಗೀತ ಮಹಾ ವಿದ್ಯಾಲಯ' ಹಾಗೂ 'ಕಲಾ ಸಂಗೀತ ಪಾಠಶಾಲೆ'ಯನ್ನು ಪುಟ್ಟರಾಜ ಗವಾಯಿಗಳು ಯಶಸ್ವಿಯಾಗಿ ಮುಂದುವರಿಸುತ್ತಿದ್ದಾರೆ. ಅದೇ ಗದಗ್‌ನಲ್ಲಿ ಟಿ.ಪಿ.ಅಕ್ಕಿ ಅವರು 1947ರಲ್ಲಿ ಕಲಾಮಂದಿರ ಸ್ಥಾಪಿಸಿ ಚಿತ್ರ, ಶಿಲ್ಪಗಳೊಂದಿಗೆ ಸಂಗೀತ, ನೃತ್ಯಗಳಿಗೂ ಅವಕಾಶ ಕಲ್ಪಿಸಿದ್ದು ಇಂದಿಗೂ ಮುಂದುವರಿದಿದೆ. ವಿಠಲಸಾಕಬಾಡಿ, ಟಿ.ವಿ. ಕಬಾಡಿ, ಕುಮಾರದಾಸ, ಎಂ. ವೆಂಕಟೇಶಕುಮಾರ್, ಕರಿಯಪ್ಪ ಹಡಪದ, ಎಂ.ನಾಗಭೂಷಣ, ವಿರೂಪಾಕ್ಷ ಗವಾಯಿ ಅವರುಗಳು ಉಪನ್ಯಾಸಕ ವರ್ಗದಲ್ಲಿದ್ದಾರೆ.

ಹುಬ್ಬಳ್ಳಿಯಲ್ಲಿ ಶಂಕರ ದೀಕ್ಷಿತ ಜಂತಲಿ ಅವರು ಸಂಗೀತ ವರ್ಗಗಳನ್ನು ನಡೆಸುತ್ತಿದ್ದು ಅವರ ಮಗ ಆರ್.ಎಸ್.ಜಂತಲಿ ಅವರು ಮುಂದುವರಿಸಿದರು. ಧಾರವಾಡದ 'ಧರ್ಮಾರ್ಥ ಸಂಗೀತ ಪಾಠಶಾಲೆ' 1942ರಲ್ಲಿ ಆರಂಭವಾಗಿ 92ರಲ್ಲಿ ಸುವರ್ಣ ಮಹೋತ್ಸವ ಆಚರಿಸಿತು. ಶಾಲೆಯನ್ನು ನಿಂಗಪ್ಪಣ್ಣ ಸಾಂಬ್ರಾಣಿ ಅವರು ಆರಂಭಿಸಿದ್ದು, 12 ವರ್ಷ ಒಳಗಿನ ಮಕ್ಕಳಿಗೆ ಧರ್ಮಾರ್ಥವಾಗಿ ಶಾಸ್ತ್ರೀಯ ಸಂಗೀತ ಹಾಗೂ ವಾದ್ಯಗಳನ್ನು ಕಲಿಸಿಕೊಡಲಾಗುತ್ತದೆ. ಸದ್ಯ 60 ವಿದ್ಯಾರ್ಥಿಗಳಿದ್ದಾರೆ. ವಾರ್ಷಿಕ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗುತ್ತದೆ. ಧಾರವಾಡದ 'ಕಲ್ಲೂರು ಮಹಾಲಕ್ಷ್ಮಿ ತಬಲಾ ವಿದ್ಯಾಲಯ' 1983ರಲ್ಲಿ ರಾಜಗೋಪಾಲ ಕಲ್ಲೂರಕರ ಅವರಿಂದ ಆರಂಭವಾಯಿತು. ವೀರಣ್ಣ ನಿಂಗಪ್ಪ ಕಾಮತರ ಅವರು 1963ರಲ್ಲಿ ಹುಬ್ಬಳ್ಳಿಯಲ್ಲಿ 'ಗಾಯಿತ್ರಿ ಗಾಯನ ಶಾಲೆ' ಆರಂಭಿಸಿದರು. ಶಾಲೆಯ ಅಭ್ಯಾಸದೊಂದಿಗೆ ಹೊರಗಿನ ಕಲಾವಿದರನ್ನು ಆಹ್ವಾನಿಸುವುದು, ಧ್ವನಿಸುರಳಿ ಸಂಗ್ರಹಣೆ, ಖ್ಯಾತನಾಮರಿಗೆ ಸ್ವರಾಂಜಲಿ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಹಲವು ರಿಯಾಯತಿಗಳನ್ನು ನೀಡಲಾಗುತ್ತದೆ. ಹುಬ್ಬಳ್ಳಿಯಲ್ಲಿಯೂ ಒಂದು ಶಾಖೆಯಲ್ಲದೆ, 'ನಾದ ಸುದಿನ' ಎಂಬ ಸಂಸ್ಥೆಯನ್ನು ಆರಂಭಿಸಿದೆ. ಸದ್ಯ ಧಾರವಾಡದಲ್ಲಿ 56 ಹುಬ್ಬಳ್ಳಿಯಲ್ಲಿ 22 ಜನ ವಿದ್ಯಾರ್ಥಿಗಳಿದ್ದಾರೆ. ಹುಬ್ಬಳ್ಳಿಯಲ್ಲಿ 'ವೀರಭಾರತ ಸಂಗೀತ ವಿದ್ಯಾಲಯ'ವಿದೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸುಸಜ್ಜಿತವಾದ ಸಂಗೀತ ವಿಭಾಗ 1976ರಲ್ಲಿ ಆರಂಭವಾಯಿತು. ಗಾಯನ ವಾದನಗಳಲ್ಲಿ ಎರಡು ವರ್ಷಗಳ ಸ್ನಾತಕೋತ್ತರ ಪದವಿಯನ್ನೂ, ಆರು ವರ್ಷಗಳ ಸರ್ಟಿಫಿಕೇಟ್ ಕೋರ್ಸ್‌ನ್ನು ನೀಡಲಾಗುತ್ತಿದೆ. ಬಿಂದು ಮಾಧವ ಪಾಠಕ್ ಅವರು ವಿಭಾಗದ ಮುಖ್ಯಸ್ಥರಾಗಿದ್ದಾರೆ. ಈ ವಿಭಾಗದಲ್ಲಿ ಶಾರದ ಹಾನಗಲ್ ಅವರೂ ಸೇವೆ ಸಲ್ಲಿಸಿದ್ದಾರೆ. ಮೀರಗುಂಡಿ ಮುಂತಾದವರು ಪ್ರಾಧ್ಯಾಪಕ ವರ್ಗದಲ್ಲಿದ್ದಾರೆ. ವಿಭಾಗದಿಂದ ಹಲವಾರು ಕಲಾವಿದರು ಪಿಎಚ್.ಡಿ ಪದವಿಯನ್ನು ಗಳಿಸಿದ್ದಾರೆ. ಇದಲ್ಲದೆ ಹುಬ್ಬಳ್ಳಿಯ ಮೂರುಸಾವಿರಮಠ ಹಾಗೂ ರಾಂಭಾವು ಪುರಂಧರೆ, ವೆಂಕಟೇಶ ಬುರ್ಲಿ, ಗಂಗೂಬಾಯಿ ಹಾನಗಲ್, ಮಾಧವಗುಡಿ ಮುಂತಾದ ಅನೇಕ ಹಿರಿಯ ಕಲಾವಿದರು ಆಸಕ್ತ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ. ಧಾರವಾಡದವರೇ ಆದ ಗೋವಿಂದ ರೊಟ್ಟಿ ಅವರು ಬೆಂಗಳೂರಿನಲ್ಲಿ ಉತ್ತರಾದಿಯ ಸಂಗೀತ ಶಾಲೆಯನ್ನೂ, ಗೌರಾಂಗ ಕೋಡಿಕಲ್ ಅವರು 'ಸುರಸಾಗರ್' ಎಂಬ ಸಂಗೀತ ಸಂಸ್ಥೆಯನ್ನೂ ನಡೆಸುತ್ತಿದ್ದಾರೆ.

**ಗಂಡಾಬಂದ ಶಾಗೀರ್ದ್:** ಗುರು ಶಿಷ್ಯರ ಸಾಂಪ್ರದಾಯಿಕ ಸಂಬಂಧದಲ್ಲಿ ಹತ್ತಾರು ಜನರ ಸಮ್ಮುಖದಲ್ಲಿ ಅವರು ಮುಟ್ಟಿ ಹರಿಸಿದ ಪವಿತ್ರ ದಾರವನ್ನು ಗುರು ತನ್ನ ಶಿಷ್ಯನ ಮುಂಗೈಗೆ ಕಟ್ಟುವುದರಿಂದ ಆತ ತನ್ನ ಶಿಷ್ಯನೆಂದು ಸ್ವೀಕರಿಸಿ ಸಂಗೀತ ಪಾಠ ಆರಂಭಿಸಲಾಗುತ್ತದೆ. ಈ ಕಾರ್ಯಕ್ರಮಕ್ಕೆ 'ಗಂಡಾ ಬಂದ' (ಸಂಗೀತ ದೀಕ್ಷೆ) ಎಂದು ಕರೆಯುತ್ತಾರೆ. ಈ ಕಾರ್ಯಕ್ರಮವನ್ನು ಕೆಲವರು ಅದ್ದೂರಿಯಾಗಿ ನಡೆಸುವವರಲ್ಲದೆ ಸಂಗೀತ ಕಾರ್ಯಕ್ರಮಗಳೂ ಏರ್ಪಡುತ್ತದೆ. 1932ರಲ್ಲಿ ಗಂಗುಬಾಯಿ ಅವರಿಗೆ ಸವಾಯಿ ಗಂಧರ್ವರಿಂದ 'ಗಂಡಬಂದ' ಕಾರ್ಯಕ್ರಮ ನಡೆದಿತು. ಭೀಮಸೇನ ಜೋಶಿ ಅವರು ಅರವಿಂದ ಹುಯಲಗೋಳ ಅವರಿಗೂ ಬಾಲೆಖಾನ್ ಅವರು ಶ್ರೀನಿವಾಸ ಜೋಶಿ ಅವರಿಗೂ ಈಚಿನ ವರ್ಷಗಳಲ್ಲಿ 'ಗಂಡಬಂದ' ಮಾಡಿ 'ಶಾಗೀರ್ದ್' (ಶಿಷ್ಯ) ಆಗಿ ಪಡೆದ ಉದಾಹರಣೆಗಳಾಗಿವೆ. ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಪ್ರದಾಯ ಸಂಗೀತಗಾರರು ಇದ್ದು ಶಿಷ್ಯ ಸ್ವೀಕಾರದ ಈ ಕಾರ್ಯಕ್ರಮ ಹೆಚ್ಚು ಉತ್ಸಾಹದಿಂದ ನಡೆಯುತ್ತದೆ. ಸಂಗೀತದಲ್ಲಿ ಸಾಕಷ್ಟು ಪರಿಶ್ರಮವಿದ್ದರೂ ಬೇರೆ ಒಬ್ಬ ಹೊಸಗುರುವಿನಲ್ಲಿ ಕಲಿಕೆ ಆರಂಭಿಸಿದಾಗ ಮತ್ತೆ 'ಗಂಡಾ' ಸಮಾರಂಭ ನಡೆಯುವುದು ಪದ್ಧತಿ.

**ಪುಣ್ಯಸ್ಮೃತಿಗಳು (ಸ್ವರಾಂಜಲಿ) :** ಇನ್ನೊಂದು ಪ್ರತಿಷ್ಠಿತ ಕಾರ್ಯಕ್ರಮವೆಂದರೆ ತೀರಿಕೊಂಡ ಖ್ಯಾತ ಕಲಾವಿದರ ಪುಣ್ಯಸ್ಮೃತಿ ಆಚರಣೆ. ತೀರಿಕೊಂಡ ಸಂಗೀತಗಾರರು ಹುಟ್ಟಿದ ಊರಿನಲ್ಲೊ ಅಥವಾ ಶಿಷ್ಯ ಪರಂಪರೆ ಇರುವ ಊರಿನಲ್ಲೊ ಆ ಗುರುವಿಗೆ 'ಸ್ವರಾಂಜಲಿ' ನೀಡುವುದರ ಮೂಲಕ ಗೌರವ ಸೂಚಿಸಲಾಗುತ್ತದೆ. ಹಿರಿಯ ಕಲಾವಿದರ ಶಿಷ್ಯರು ಅಭಿಮಾನಿಗಳು ನಿಗದಿತ ದಿನದಂದು ಒಬ್ಬರ ನಂತರ ಒಬ್ಬರು ಹಗಲಿರುಳೂ ಕಾರ್ಯಕ್ರಮ ನೀಡುತ್ತಾ ಹೋಗುತ್ತಾರೆ. ಕೆಲವೊಮ್ಮೆ 2-3ದಿನಗಳು ನಡೆಯುವುದುಂಟು. ಸಾಮಾನ್ಯವಾಗಿ ಗುರು ಯಾವ ಘರಾಣೆಯಲ್ಲಿ ಪಳಗಿದ್ದರೊ ಅದೇ ಘರಾಣೆಯಲ್ಲಿ ಗಾಯನ ವಾದನಗಳು ನಡೆಯುತ್ತವೆ.

ಅಬ್ದುಲ್ ಕರೀಂಖಾನರಿಗೆ 1988ಕ್ಕೂ ಹಿಂದೆ ಹುಬ್ಬಳ್ಳಿಯಲ್ಲಿ 10-15 ವರ್ಷಗಳು ಸ್ವರಾಂಜಲಿ ಕಾರ್ಯಕ್ರಮ ನಡೆಯುತ್ತಿತ್ತು. ಮೊದಲು ಕೃಷ್ಣಾಬಾಯಿ ರಾಮದುರ್ಗ ನಂತರ ತಾರಾಬಾಯಿ ತೇರದಾಳ, ಕಮಾಲ್ ಸಾಬ್ ಮೊರಬತ್ ನಡೆಸುತ್ತಿದ್ದು ಈಗ ವೆಂಕಣ್ಣ ಮಣ್ಣೂರ್ ಅವರು ಮತ್ತೆ ನಡೆಸುವ ಪ್ರಯತ್ನದಲ್ಲಿದ್ದಾರೆ.

ಸ್ವರಾಂಜಲಿಯ ಪ್ರಸಿದ್ಧ ಕಾರ್ಯಕ್ರಮವೆಂದರೆ ಸವಾಯ್ ಗಂಧರ್ವರದು. ಇದು ಕುಂದಗೋಳದಲ್ಲಿ ರಾಜ್ಯಮಟ್ಟದ್ದಾದರೆ ಪುಣೆಯಲ್ಲಿ ಭೀಮಸೇನ ಜೋಶಿ ಅವರು ರಾಷ್ಟ್ರೀಯಮಟ್ಟದಲ್ಲಿ ಸಂಘಟಿಸುತ್ತಾರೆ. ಮೊದಲಿಗೆ ಕುಂದಗೋಳದಲ್ಲಿ ನಾನಾಸಾಹೇಬರು ನಂತರ ಗಂಗೂಬಾಯಿ ಮತ್ತು ಜೋಶಿ ಅವರು ಆಚರಿಸುತ್ತಿದ್ದು ಈಗ ಸಂಗೀತ ನೃತ್ಯ ಅಕಾಡೆಮಿಯೇ ಕಾರ್ಯಕ್ರಮ ರೂಪಿಸುತ್ತಿದೆ. ಕಳೆದ ವರ್ಷ (ಸೆಪ್ಟಂಬರ್ 94) ಸ್ವರಾಂಜಲಿಯಲ್ಲಿ 30ಕ್ಕೂ ಹೆಚ್ಚು ಗಾಯಕರು ಗಾಯನವಾದನ ಮಾಡಿದರಲ್ಲದೆ ಗಂಗುಬಾಯಿ ಅವರಿಗೆ ಕನಕ - ಪುರಂದರ ಪ್ರಶಸ್ತಿ ನೀಡಲಾಯಿತು.

ಉಳಿದಂತೆ ಸಿತಾರಿಯಾ ರಹಮತ್‌ಖಾನರ ಪುಣ್ಯತಿಥಿಯನ್ನು 'ಭಾರತೀಯ ಸಂಗೀತ ವಿದ್ಯಾಲಯ'ದ ಕರೀಂಖಾನ್ ಅವರೂ (ಅಕ್ಟೋಬರ್ ತಿಂಗಳಲ್ಲಿ) ಬಸವರಾಜ ಗುರುಗಳದ್ದು 'ರಾಜಗುರು ಸಂಗೀತ ಸಭೆ'ಯಿಂದಲೂ (ಜುಲೈ) ಪಂಚಾಕ್ಷರಿ ಗವಾಯಿಗಳದ್ದು ಅವರ ಸಂಗೀತ ವಿದ್ಯಾಲಯಗಳಿಂದಲೂ (ಜೂನ್) ಮಲ್ಲಿಕಾರ್ಜುನ ಮನ್ಸೂರ್ ಅವರದು ಅವರ ಮಗ ರಾಜಶೇಖರ ಮನ್ಸೂರ್ ಮತ್ತಿತರರಿಂದಲೂ (ಸೆಪ್ಟಂಬರ್) ಸ್ವರಾಂಜಲಿ ಕಾರ್ಯಕ್ರಮಗಳು ನಡೆಯುತ್ತಿದೆ. ಇದಲ್ಲದೆ ಧಾರವಾಡ ಜಿಲ್ಲೆಯಲ್ಲಿ ಗದಗಿನ ವಿಠಲಸಾ ಕಬಾಡಿ ಅವರಿಗೆ (ಜನವರಿ) ಹಾನಗಲ್ಲಿನ ವಲ್ಲಭಭಟ್ಟ ಕರಗುದರಿ ಅವರಿಗೆ (ಅಕ್ಟೋಬರ್) ಧಾರವಾಡದ ರಾಜೀವರಾಜ್ (ಹಾರ್ಮೋನಿಯಂ ವಾದಕ), ಧಾರವಾಡದ ವಿ.ಕೆ.ಚಿಮ್ಮಲಗಿ ಇತ್ಯಾದಿ ದಿವಂಗತ ಕಲಾವಿದರಿಗೆ 'ಸ್ವರಾಂಜಲಿ' ಕಾರ್ಯಕ್ರಮ ಕಳೆದ ವರ್ಷ (94) ಸಾರ್ವಜನಿಕವಾಗಿ ನಡೆಯಿತು. ಸಾಮಾನ್ಯವಾಗಿ ಪ್ರತಿಯೊಬ್ಬ ಶಿಷ್ಯನೂ ತನ್ನ ದಿವಂಗತ ಗುರುಗಳಿಗೆ ಪ್ರತೀವರ್ಷ ತನ್ನ ಮಿತಿಯಲ್ಲಿಯೇ 'ಸ್ವರಾಂಜಲಿ'ಯನ್ನು ಅರ್ಪಿಸಿಕೊಳ್ಳುವುದು ಪದ್ಧತಿಯಾದರೂ ಈಚೆಗೆ ಸಾರ್ವಜನಿಕ ಕಾರ್ಯಕ್ರಮವಾಗಿ ರೂಪಿಸಲು ಕೆಲವು ಸಂಸ್ಥೆಗಳು ಉತ್ಸಾಹ ತೋರುತ್ತಿದೆ. ಇದೊಂದು ಅನಿರ್ಬಂಧಿತ ಕಾರ್ಯಕ್ರಮವಾದುದರಿಂದ ಕಿರಿಯ ಕಲಾವಿದರಿಗೆ 'ರಂಗ ಪ್ರವೇಶ'ದಂತಿದ್ದು ಹಿರಿಯ ಕಲಾವಿದರಿಂದ ಗುರುತಿಸಲ್ಪಡುವ ಅವಕಾಶವಿದೆ.

**ಆಕಾಶವಾಣಿ :** ಧಾರವಾಡದ ಆಕಾಶವಾಣಿ ಕೇಂದ್ರ 8.1.1950 ರಂದು ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ್, ಗುರುರಾವ್ ದೇಶಪಾಂಡೆ, ಭೀಮಸೇನ ಜೋಶಿ, ಬಸವರಾಜ ರಾಜಗುರು, ವಿ.ಎ. ಕಾಗಲಕರ ಅವರ ಸಾಮೂಹಿಕ ವಂದೇ ಮಾತರಂ ಗೀತೆಯೊಂದಿಗೆ ಆರಂಭವಾಯಿತು. ಅಂದು ರಾತ್ರಿ ಈ ಕಲಾವಿದರೂ ಸೇರಿದಂತೆ ಜಿಲ್ಲೆಯ ಉಳಿದ ಹಲವು

ಕಲಾವಿದರ ಕಾರ್ಯಕ್ರಮ ಸಹ ಬಿತ್ತರಗೊಂಡಿದ್ದು ಮುಂದೆಯೂ, ಇಂದಿಗೂ ಜಿಲ್ಲೆಯ ಕಲಾವಿದರಿಗೆ ಆಕಾಶವಾಣಿ ಪ್ರೋತ್ಸಾಹ ನೀಡುತ್ತಿದೆ. ಕಲಾವಿದರು ನೇರವಾಗಿಯೇ ಹಾಡುತ್ತಿದ್ದರಲ್ಲದೆ ಖ್ಯಾತ ಕಲಾವಿದರ ಧ್ವನಿ ಮುದ್ರಿಕೆಗಳೂ ಸಂಗ್ರಹಿತವಾಗಿದ್ದು, ಆಕಾಶವಾಣಿಯು ನಿಲಯದ ಹೊರಗೂ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅವುಗಳಲ್ಲಿ ಈಚೆಗೆ (ಮೇ 94) 'ಐಕ್ಯಗಾನ' ಕಾರ್ಯಕ್ರಮ ಧಾರವಾಡದಲ್ಲಿ ನಡೆದು ರಘುನಾಥ ನಾಕೋಡ, ಸೂರಜ್ ಪುರಂಧರೆ, ಬಾಲೇಖಾನ್, ಕಬಾಡಿ, ವಾದಿರಾಜ ನಿಂಬರಗಿ ವಸಂತ ಕನಕಾಪುರ ಇತ್ಯಾದಿ ಜಿಲ್ಲೆಯ ಹಲವಾರು ಪ್ರಸಿದ್ಧ ಕಲಾವಿದರು ಪಾಲುಗೊಂಡಿದ್ದರು.

ಸಾಮಾನ್ಯವಾಗಿ ಆಕಾಶವಾಣಿಯ ಕರೆಯ ಮೇರೆಗೆ ಕಾರ್ಯಕ್ರಮ ನೀಡಿದವರು ತಾವು ಆಕಾಶವಾಣಿ ಕಲಾವಿದರೆಂದು ಗುರುತಿಸಿಕೊಳ್ಳುತ್ತಾರಾದರೂ ನಿಲಯದವರೇ ಕೆಲವು ನಿಯಮಗಳನ್ನು ವಿಧಿಸಿದ್ದು ಅದರಂತೆ ಆಯ್ಕೆ ಮಾಡಿರುವ ಧಾರವಾಡ ಜಿಲ್ಲೆಯ ಪ್ರಖ್ಯಾತ (ಎಮಿನೆಂಟ್) ಕಲಾವಿದರನ್ನು ಈ ಕೆಳಗೆ ಹೆಸರಿಸಲಾಗಿದೆ.

**ಹಾಡುಗಾರಿಕೆ :** ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್, ಕೃಷ್ಣಾ ಹಾನಗಲ್, ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಎಂ.ವೆಂಕಟೇಶ ಕುಮಾರ್, ರಾಜಶೇಖರ ಮನ್ಸೂರ್, ಅರ್ಜುನ್‌ಸಾ ನಾಕೋಡ್

**ವಾದ್ಯ :** ವೆಂಕಟೇಶ ಗೋಡಖಿಂಡಿ (ಕೊಳಲು), ಬಾಲೇಖಾನ್ (ಸಿತಾರ್), ರಘನಾಥಸಾ ನಾಕೋಡ್, ಬಿ.ಎನ್. ಪರ್ವತೀಕರ್, ಶೇಷಗಿರಿ ಹಾನಗಲ್, ಬಿ.ಎಸ್. ಬೆಂಡಿಗೇರಿ (ತಬಲ), ಬಿಂದು ಮಾಧವ ಪಾಠಕ್ (ಬೀನ್).

**ಸುಗಮ ಸಂಗೀತ :** ಶಾರದಾ ಹಾನಗಲ್, ಸುಧಾ ಪಿ ಕುಲಕರ್ಣಿ, ರೇವತಿ ಬಾಗಲ್, ಶೋಬಾ ಹುಯಿಲಗೋಳ, ಕೃಷ್ಣಾ ಹಾನಗಲ್.

**ಗಮಕ :** ಕೆ.ಜಿ. ಹಲಸಗಿ, ಜಯಲಕ್ಷ್ಮಿ ಇನಾಂದಾರ್,

**ರಂಗಗೀತೆಗಳು :** ಬಸವರಾಜ ಮನ್ಸೂರ್, ಜುಬೇದಬಾಯಿ ಸವಣೂರ್

(ಆಧಾರ : ನಿಲಯ ನಿರ್ದೇಶಕರ ಪತ್ರ ತಾ 21.11.1994)

1990ರಲ್ಲಿ ನಿಲಯದ ಬಳಗದಲ್ಲಿ 152 ಶಾಸ್ತ್ರೀಯ ಸಂಗೀತಗಾರರೂ 272 ಲಘು ಶಾಸ್ತ್ರೀಯ ಸಂಗೀತಗಾರರೂ 200 ನಾಟಕ ಕಲಾವಿದರೂ ಇದ್ದರು. ಪ್ರಸ್ತುತ ನಿಲಯದ ನಿರ್ದೇಶಕರಾದ ವೆಂಕಟೇಶ ಗೋಡಖಿಂಡಿ ಅವರು ಸ್ವತಃ ಶಾಸ್ತ್ರೀಯ ಸಂಗೀತಗಾರರಾಗಿದ್ದಾರೆ.

**ಪಿಎಚ್.ಡಿಗಳು ಮತ್ತು ಸಂಗೀತ ಗ್ರಂಥಗಳು :**

ಜಿಲ್ಲೆಯಲ್ಲಿ ಹಿಂದೂಸ್ತಾನಿ ಸಂಗೀತದ ಸಮಗ್ರ ಬೆಳವಣಿಗೆಗೆ ಅವಕಾಶವಿದ್ದು ಈ ದಿಸೆಯಲ್ಲಿ ಹಲವಾರು ಪಿಎಚ್.ಡಿ. ನಿಬಂಧಗಳು ಪ್ರಕಟವಾಗಿವೆ. ಹನುಮಂತರಾವ್ ಬಿರ್ಲಿ ಅವರು 'ಕಳೆದ ನೂರು ವರ್ಷಗಳಲ್ಲಿ ಹಿಂದೂಸ್ಥಾನಿ ಸಂಗೀತಕ್ಕೆ ಉತ್ತರಕರ್ನಾಟಕದ ಕೊಡುಗೆ'ಗೆ ಮುಂಬಯಿಯಿಂದಲೂ, ಮೀರಾಗುಂಡಿ ಅವರ 'ಉತ್ತರ ಕರ್ನಾಟಕದಲ್ಲಿ ಬೆಳೆದು ಬಂದ ಹಿಂದೂಸ್ಥಾನಿ ಘರಾಣೆಗಳು - ಒಂದು ಅಧ್ಯಯನ', ವಿ.ಆರ್. ಹುಗಾರ್ ಅವರ 'ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಸಂಗೀತ ಸಾಧನೆ ಮತ್ತು ಕೊಡುಗೆ,' ಮುಕ್ತಾ ನಾಡಗೇರ್ ಅವರ 'ಬೇಗಂ ಅಕ್ತರ್ ಹಾಗೂ ಅವರ ಸಂಗೀತ ಸಾಧನೆ', ಇತ್ಯಾದಿ ಪ್ರಬಂಧಗಳಿಗೆ ಕರ್ನಾಟಕ ವಿಶ್ವವಿದ್ಯಾಲಯದಿಂದಲೂ ಪಿಎಚ್.ಡಿ. ಲಭ್ಯವಾಗಿದೆ. ಇವಲ್ಲದೆ ವಚನ ಸಾಹಿತ್ಯ ಹಾಗೂ ಸಂಗೀತಗಳ ಸಹಸಂಬಂಧಗಳ ಬಗ್ಗೆ ಹಲವಾರು ಸಂಶೋಧನಾ ಪ್ರಬಂಧಗಳು ರಚಿತವಾಗುತ್ತಿವೆ.

ಸಂಗೀತ ಶಾಲೆಗಳು ಹೆಚ್ಚಾದ ಮೇಲೆ ವಿದ್ಯಾರ್ಥಿಗಳ ಬಳಕೆಗಾಗಿ ಹಲವಾರು ಪುಸ್ತಕಗಳು ರಚಿತವಾಯಿತು. ಪುಟ್ಟರಾಜ ಗವಾಯಿಗಳ 'ಗಾನ ಸುಧಾ' ಭಾಗ 1, 2; ಶಿವಪ್ಪ ಎಚ್. ತರಲಘಟ್ಟಿ ಅವರ 'ಸಂಗೀತಶಾಸ್ತ್ರ ಪರಿಚಯ' (2 ಭಾಗಗಳಲ್ಲಿ) ಗುರು ಬಸವಾರ್ಯ ಹಿರೇಮಠ ಅವರ 'ವಚನ ಸಂಗೀತ' (ವಚನಗಳಿಗೆ ಸಂಗೀತದ ಅಳವಡಿಕೆ) ಮತ್ತು ಹಿಂದೂಸ್ಥಾನಿ ಸಂಗೀತ ಬೋಧಿನಿ, ಅಜ್ಜಣ್ಣ ಯು. ಪಾಟೀಲರ 'ಹಿಂದೂಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು', 'ಸಂಗೀತ ಶಾಸ್ತ್ರ ಪರಿಚಯ' ಮತ್ತು ಸಂಗೀತ ಪಠ್ಯ ಪುಸ್ತಕ - ಬಿ.ಎ. ತರಗತಿಗಳಿಗೆ, ಕಮಲಾ ಪುರಂಧರೆ ಅವರ 'ಸಂಗೀತ ಕಲಾ ಕುಸುಮ'ಗಳನ್ನು ಉದಾಹರಿಸಬಹುದು. ಸಂಗೀತ

ವಿದ್ವಾನ್ ಹಾವೇರಿ ಎ. ಪ್ರಹ್ಲಾದಾಚಾರ್ ಅವರು ಸಂಗೀತದ ಬಗ್ಗೆ ಹಲವಾರು ಕೃತಿಗಳನ್ನೂ ಆರ್.ಪಿ. ಹೂಗಾರ್ ಅವರು ಕೆಲವು ಸಂಗೀತ ಪುಸ್ತಕ ರಚಿಸಿದ್ದಾರೆ.

ವಸಂತ ಕವಲಿಯವರು ತಮ್ಮ 'ನಾದಯಾತ್ರೆ'ಯಲ್ಲಿ ಈ ಪ್ರದೇಶದಲ್ಲಿ ಹಿಂದೂಸ್ಥಾನಿ ಸಂಗೀತದ ಉಗಮ ಹಾಗೂ ಬೆಳವಣಿಗೆಯನ್ನು ಸಂಶೋಧನಾತ್ಮಕವಾಗಿ ನಿರೂಪಿಸಿದ್ದಾರೆ. ಬಿಂದು ಮಾಧವ ಪಾಠಕ್ ಅವರು 'ಭಾರತೀಯ ಸಂಗೀತ ಚರಿತ್ರೆ' 'ಹಿಂದೂಸ್ಥಾನಿ ಸಂಗೀತಕ್ಕೆ ಕರ್ನಾಟಕದ ಕೊಡುಗೆ' (ಲೇಖನ) ಮೃತ್ಯುಂಜಯ ಪುರಾಣಿಕ ಮಠ ಅವರ 'ಹಿಂದೂಸ್ಥಾನಿ ಸಂಗೀತ' ; ಇತ್ಯಾದಿ ಹಲವಾರು ಪುಸ್ತಕಗಳನ್ನು ಉದಾಹರಿಸಬಹುದು. ಈ ಪ್ರದೇಶದ ಮೂರು ತಲೆಮಾರುಗಳ ಸಂಗೀತ ಕಲಾವಿದರೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡು ಅನೇಕ ಲೇಖನಗಳನ್ನು ಪುಸ್ತಕಗಳನ್ನು ರಚಿಸಿರುವವರೆಂದರೆ ಸದಾನಂದ ಕನವಳ್ಳಿಯವರು. ಶ್ರೀಯುತರು ಮಲ್ಲಿಕಾರ್ಜುನ ಮನ್ಸೂರ್ ಅವರ ಬಗ್ಗೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ, 'ಕರ್ನಾಟಕಾಸ್ ಹಿಂದೂಸ್ಥಾನಿ ಮ್ಯೂಜಿಶಿಯನ್ಸ್' ಇಂಗ್ಲಿಷ್‌ನಲ್ಲಿ ರಚಿಸಿದ್ದಾರೆ. ಮೋಹನ ನಾಡಕರ್ಣಿ ಅವರ ಇಂಗ್ಲಿಷ್ ಪುಸ್ತಕ 'ಭೀಮಸೇನ ಜೋಶಿ ವ್ಯಕ್ತಿ ಮತ್ತು ಅವರ ಸಂಗೀತ'ವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಹಿಂದೂಸ್ಥಾನಿ ಸಂಗೀತಕ್ಕೆ ಕೊಡುಗೆ' ('ಹಚ್ಚೇವು ಕನ್ನಡದ ದೀಪ') ಒಂದು ಅಭ್ಯಾಸ ಪೂರ್ಣ ಲೇಖನವಾಗಿದೆ. ಕನವಳ್ಳಿಯವರು 'ಸಿತಾರ ರತ್ನ ರಹಮತ್‌ಖಾನ್ ಸಂಗೀತ ಸಮಿತಿಯ' ಅಧ್ಯಕ್ಷರೂ ಆಗಿದ್ದಾರೆ. ಎಸ್.ಕೆ. ಕುಲಕರ್ಣಿ (ಎಸ್ಕೆ) ಅವರು 'ಸಂಗೀತ ರತ್ನ ಖಾನ್ ಸಾಹೇಬ್ ಅಬ್ದುಲ್ ಕರೀಮ್‌ಖಾನ್' ಪುಸ್ತಿಕೆಯಲ್ಲದೆ 'ಧಾರವಾಡ ನೆಲೆಯಲ್ಲಿ ಇಂಗಿದ ಸಂಗೀತ ನೆಲೆಗಳು' 'ಗಾನನಟ ಗಂಭೀರ ಗುರುರಾವ್ ದೇಶಪಾಂಡೆ,' 'ನೀಲಕಂಠ ಬುವಾ ಗಾಡಗೋಳಿ' ಮುಂತಾದ ಹಲವಾರು ಲೇಖನಗಳನ್ನು (ಕರ್ಮವೀರದ ಎಸ್ಕೇನ ಪ್ರಕಾರೇಣ ವಿಭಾಗದಲ್ಲಿ) ಬರೆದಿದ್ದಾರೆ, ಸ್ವತಃ ಮಲ್ಲಿಕಾರ್ಜುನ ಮನ್ಸೂರ್ ಅವರು ತಮ್ಮ ಆತ್ಮಕಥೆಯನ್ನು 'ನನ್ನ ರಸಯಾತ್ರೆ'ಯಲ್ಲಿ ನಿರೂಪಿಸಿದ್ದಾರೆ.

## ಶಾಸ್ತ್ರೀಯ ನೃತ್ಯ

ಜಿಲ್ಲೆಯ ಉಳಿದ ಕಲೆಗಳನ್ನು ಗಮನಿಸಿದಾಗ ನೃತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಈ ಹಿಂದೆ ಇರಲಿಲ್ಲವೆಂಬುದು ಗೋಚರಿಸುತ್ತದೆ. ಕಥಕ್ ಶೈಲಿಯ ನೃತ್ಯ ಇದ್ದ ಕೆಲವು ಉದಾಹರಣೆಗಳಿವೆ. ದಕ್ಷಿಣಾದಿ ಅವಲಂಬಿತ ಭರತ ನಾಟ್ಯಕ್ಕೆ ಈಚೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿದೆ. ಗದಗಿನ ವಿಜಯ ಕಲಾಮಂದಿರದ ವಿಜಯ ನಾಟ್ಯ ಸಂಸ್ಥೆ 1947ರಿಂದಲೇ ನೃತ್ಯದಲ್ಲಿ ತರಬೇತಿ ನೀಡುತ್ತಿದೆ. ಕೃಪಾ ಏಡನ್, ಬಸಮ್ಮ ಹುಯಿಲಗೋಳ, ಎಂ. ಚೂಡಾಮಣಿ ನಂದಗೋಪಾಲ್ ಇಲ್ಲಿಯ ನೃತ್ಯ ವಿಭಾಗದಲ್ಲಿದ್ದವರು. ನೂರ್‌ಜಹಾನ್, ವಿದ್ಯಾ ಮೊರಬದ ನೃತ್ಯ ನಿರ್ದೇಶಕಿಯಾಗಿದ್ದಾರೆ. ಧಾರವಾಡದ ನಟರಾಜ ನಾಟ್ಯ ಕಲಾ ಸಂಘವು, ಧರ್ಮಾರ್ಥ ಸಂಗೀತ ಶಾಲೆಯ ಅಂಗ ಸಂಸ್ಥೆಯಾಗಿದ್ದು ನೃತ್ಯ ಶಿಕ್ಷಣವನ್ನು ಧರ್ಮಾರ್ಥವಾಗಿ ನೀಡುತ್ತಿದೆ. ಕುಮುದಿನಿ ರಾವ್ ಅವರು ಇಲ್ಲಿ ಉಪಾಧ್ಯಾಯರಾಗಿದ್ದಾರೆ.

ಧಾರವಾಡದ ಲತಾ ರಾಣಿ ಮಲ್ಹಾರ್ ಅವರು ಕೃಷ್ಣಕುಮಾರ್ ಅವರ ಬಳಿ ಕಥಕ್ ಹಾಗೂ ಉಮೇಶ್ ಹರಂಚಾಳ್ ಅವರಲ್ಲಿ ಭರತನಾಟ್ಯ ಅಭ್ಯಸಿಸಿ ಎರಡೂ ಪದ್ಧತಿಯಲ್ಲಿ ಪರಿಣತರಿದ್ದು ರಾಜ್ಯಾದ್ಯಂತ ಪ್ರದರ್ಶನ ನೀಡಿದ್ದಾರೆ ಹಾಗೂ ಜರ್ಮನಿಯಲ್ಲೂ ನೃತ್ಯ (1990ರಲ್ಲಿ) ಪ್ರದರ್ಶನ ನೀಡಿದ್ದಾರೆ. ಪೌರಾಣಿಕ ಕಥೆಗಳಿಗೆ 'ಬ್ಯಾಲೆ'ಯ (ಸಂಗೀತ ನೃತ್ಯ) ರೂಪ ನೀಡಿ ಹಲವಾರು ಪ್ರಯೋಗಗಳನ್ನು ಮಾಡಿದ್ದಾರೆ. ಸ್ವತಃ ವಾದ್ಯಮೇಳ ಹೊಂದಿರುವ ಲತಾರಾಣಿಯವರು 'ನವ್ಯ ನೃತ್ಯ ನಿಕೇತನ' ಎಂಬ ನಾಟ್ಯ ಸಂಸ್ಥೆ ನಡೆಸುತ್ತಿದ್ದು 1993 ರಲ್ಲಿ 30 ಮಂದಿ ವಿದ್ಯಾರ್ಥಿಗಳಿದ್ದರು. ಇವರ ಪತಿ ವಿಜಯಕುಮಾರ್ ಅವರೂ ಕಲಾವಿದರಾಗಿದ್ದು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ವೆಂಕಟರಮಣ ಉಪಾಧ್ಯಾಯ ಅವರ 'ನೃತ್ಯ ನಿಕೇತನ', ಶರದ್ ಯಾದವಾಡ ಅವರ 'ಶರದ್ ನೃತ್ಯ ಕಲಾ ನಿಕೇತನ', ರತ್ನಾ ರಘುನಾಥನ್ ಅವರ 'ವಿಜಯ ಕಲಾನಿಧಿ' ಆರ್.ಬಿ. ಕೊರಕೊಪ್ಪನವರ್ ಅವರ 'ಭಾರತೀಯ ನೃತ್ಯ ಕಲಾ ನಿಕೇತನ'ಗಳು ನೃತ್ಯ ಶಿಕ್ಷಣ ನೀಡುತ್ತಿವೆ. ಗೀತಾ ದಾತಾರ್ ಮತ್ತು ರಾಜ ದಾತಾರ್ ಅವರುಗಳು ಹಾಗೂ ಸಂಧ್ಯಾ ಕುಲಕರ್ಣಿ ಅವರು ನೃತ್ಯ ಕಲಿಸುವ ಉಪಾಧ್ಯಾಯರುಗಳಾಗಿದ್ದಾರೆ. ಇದಲ್ಲದೆ ಧಾರವಾಡದ 'ಉಜ್ವಲ ನೃತ್ಯಾಲಯ', 'ಶಾರದಾ ನೃತ್ಯ ನಿಕೇತನ'ಗಳು ನೃತ್ಯ ತರಗತಿಗಳನ್ನು ನಡೆಸುತ್ತಿವೆ. ಹುಬ್ಬಳ್ಳಿಯ ವಿಜಯ ಮಹಾಂತೇಶ ಕಲಾಶಾಲೆಯಲ್ಲಿಯೂ ಈ ಹಿಂದೆ ನೃತ್ಯ ಕಲಿಸಲಾಗುತ್ತಿತ್ತು.

ಈ ನೃತ್ಯ ಶಾಲೆಗಳಿಂದ ಅಥವಾ ಜಿಲ್ಲೆಯ ಹೊರಗಿನಿಂದ ನೃತ್ಯ ಕಲಿತು ಬಂದ ಹಲವಾರು ಕಲಾವಿದರುಗಳು ಜಿಲ್ಲೆಯಲ್ಲಿದ್ದಾರೆ. ಇವರಲ್ಲಿ ಹೆಚ್ಚಿನವರು ಭರತನಾಟ್ಯ ಕಲಾವಿದರು. ಕೆಲವರು ಕಥಕ್ ಸಹ ಅಭ್ಯಸಿಸಿದ್ದಾರೆ ಹಾಗೂ ಈ ಕಲಾವಿದರೆಲ್ಲರೂ ಇನ್ನೂ

ಶಾಲಾ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವವರು. ಕೆಲವರು ಕ್ರಮಬದ್ಧವಾಗಿ 'ರಂಗಪ್ರವೇಶ' ಮಾಡಿರುವುದಲ್ಲದೆ ರಾಜ್ಯ, ಹೊರ ರಾಜ್ಯಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಉಳಿದಂತೆ ಅನೇಕರು ಶಾಲಾ ಕಾಲೇಜುಗಳ ಇಲ್ಲವೇ ಸಂಘ ಸಂಸ್ಥೆಗಳ ವಾರ್ಷಿಕೋತ್ಸವ ಇತ್ಯಾದಿಗಳಲ್ಲಿ ಹವ್ಯಾಸಕ್ಕಾಗಿ ನೃತ್ಯ ಪ್ರದರ್ಶನ ನೀಡಿದವರು. ಅವರುಗಳೆಂದರೆ : ಶೃತಿಭಟ್ಟ, ಶೈಲಜ ಕೆರೂರ್, ರಾಜೇಶ್ವರಿ ಪಾಟೀಲ್, ಶೈಲಾ, ಶಿಲ್ಪಾ ಮತ್ತು ಸೀಮಾ ಮುಂಡಗನೂರ, ವಿನುತಾ ಪಾಟೀಲ್, ಮಂಗಳಾ ಖಾಸನೀಸ, ಶ್ವೇತಾ ನಾಯಕ, ಶ್ರೀಧರ ನಾಸಿಕ್, ಕೃಷ್ಣ ಲಿಂಗೇರಿ, ಸುವರ್ಣಾ ಕುಲಕರ್ಣಿ, ಗಾಯಿತ್ರಿ ಪಾಟೀಲ, ಶೃತಿ ಯಜುರ್ವೇದಿ, ಹೇಮಾಶಲವಡಿ, ಚೈತ್ರಾ ಅಧ್ಯಾಪಕ, ಮಾಧುರಿ ಜೋಶಿ, ಮಾಧುರಿ ಚೌಧರಿ, ಮೀರಾಬೆನ್ನೂರ್, ಮಮತಾಕುಲಕರ್ಣಿ, ಪೂಜಾಪಾಟೀಲ್, ಶ್ರೀದೇವಿ ಇಂಗಳಹಳ್ಳಿ, ರೂಪ ಚಿಕ್ಕಮಠ, ತ್ರಿವೇಣಿ ಜೋಶಿ, ಸಾವಿತ್ರಿ ಪಾಟೀಲ, ಪ್ರೀತಿ ಮಾಳವಗೆ (ಬ್ರೇಕ್‌ಡ್ಯಾನ್ಸ್), ಮುಂತಾದ ಹಲವಾರು ಕಲಾವಿದರನ್ನು ಉದಾಹರಿಸಬಹುದು.

**ಗಮಕ, ಹರಿಕಥೆ, ಕೀರ್ತನೆ**

ಲಕ್ಕುಂಡಿಯ ಕೇಶವನಾಥ ದೇವಾಲಯದಲ್ಲಿರುವ 3 ನೇ ತ್ರಿಭುವನ ತೈಲನ 1152 ರ ಶಾಸನವೊಂದರಲ್ಲಿ 'ವೈಷ್ಣವ ಗೀತಿ ಮನೋಹರರಪ್ಪ ಲೊಕ್ಕಿಗುಂಡಿ ಊರೊಡೆಯ ಪ್ರಮುಖ ಮಹಾಜನಂ'ಗಳ ಬಗ್ಗೆ ಉಲ್ಲೇಖವಿದೆ. ಇಲ್ಲಿಯ 'ವೈಷ್ಣವಗೀತಿ' ಎಂಬುದು ಹರಿಕಥೆ ಅಥವಾ ಆ ಬಗೆಯ ವಿಷ್ಣುಪರವಾದ ಹಾಡುಗಳಿರಬಹುದು. ಕನಕದಾಸರ ರಚನೆಗಳಲ್ಲಿ 'ಹರಿಕಥೆ ಪ್ರಸಂಗದವರು' ಹಾಡಿ ಕುಣಿಯುತ್ತಿದ್ದ ಬಗ್ಗೆ ವಿವರವಿದೆ. ಸುಮಾರು 1450-1500 ರ ವರೆಗೆ ವಿಷ್ಣುವಿನ ಕಥೆಯನ್ನು ಒಳಗೊಂಡಿದ್ದ ಹರಿಕಥೆ ಕಲೆಯು ಕ್ರಿ.ಶ. 1650ರ ವೇಳೆಗೆ ಶಿವನ, ಶಿವಭಕ್ತರ ಕಥೆಗಳನ್ನೂ ವಸ್ತುವಾಗಿ ಒಳಗೊಳ್ಳುವಷ್ಟು ಬೆಳೆಯಿತೆಂದು ಎಂ. ಚಿದಾನಂದ ಮೂರ್ತಿಗಳು ಅಭಿಪ್ರಾಯ ಪಡುತ್ತಾರೆ. ಶಾಂತವೀರ ದೇಶಿಕ (1650) ನ ತಂದೆ ಚನ್ನವೀರಾರ್ಯನು ಭಕ್ತರ ಮನೆಗಳು ಹಾಗೂ ರಾಜಾಸ್ಥಾನಗಳಲ್ಲಿ ಕೀರ್ತನೆ ಮಾಡುತ್ತಿದ್ದನೆಂದೂ, ಮುತ್ತಾತ ಶಿವಲಿಂಗಾರ್ಯನು 'ಪುರಾಣ ಬಸವ' ಎಂದೇ ಪ್ರಸಿದ್ಧರಾಗಿದ್ದರೆಂದೂ ಮೂರ್ತಿಯವರು ತಿಳಿಸುತ್ತಾರೆ.

ಪಂಪನಲ್ಲಿ 'ಕವಿ, ಗಮಕಿ, ವಾದಿ, ವಾಗ್ಮಿ' ಎಂದೂ, ಹೊಸೂರಿನ (ಗದಗ ತಾ||) 2 ನೇ ಜಗದೇಕನ 1148 ರ ಶಾಸನದಲ್ಲಿ 'ಅಕ್ಕರಿಗ, ಆಲೇಖ್ಯ, ನಟ, ಗಾಯಕ, ನುಡಿಕಾರ, ಕವಿ'ಗಳಿಗೆ ಅನ್ನದಾನ ನೀಡುತ್ತಿದ್ದ ಬಗ್ಗೆಯೂ ಉಲ್ಲೇಖಗಳಿವೆ. ಪೊನ್ನ ಒಳ್ಳೆಯ ಗಮಕಿಯೂ ಆಗಿದ್ದ. ಅತ್ತಿಮಬ್ಬೆ 'ಕವಿ, ಕಥಕ, ಗಾಯಕ, ವಾದಕ, ನಟ, ಭಟರಿಗೆ' ಅಭಿಲಷಿತಾರ್ಥ ದಾನವಿನೋದಿಯಾಗಿದ್ದಳು. ಕುಮಾರವ್ಯಾಸನಲ್ಲೂ 'ಕವಿ, ಗಮಕಿ, ವಾದಿ'ಗಳ ಪ್ರಸ್ತಾಪವಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಹರಿಕಥೆ ಗಮಕ ಕಲೆಗಳು ತೀರ ಮೊದಲಿನಿಂದಲೇ ಬೆಳೆದು ಬಂದಿತ್ತೆಂದು ಹೇಳಬಹುದು. ಹರಿಕಥೆಗೆ 'ಹರಿಕೀರ್ತನೆ' ಎಂದೂ ಹರಿಕಥೆ ಮಾಡುತ್ತಿದ್ದವರನ್ನು 'ಕೀರ್ತನೆ'ಕಾರರು ಎಂದು ಕಾವ್ಯಗಳಲ್ಲಿ ಕರೆದಿದೆ.

ಮಹಾರಾಷ್ಟ್ರದಿಂದಲೂ ವಿಠಲಭಕ್ತ ಪರಂಪರೆಯ ಕೀರ್ತನಕಾರರು ಧಾರವಾಡಕ್ಕೆ ಬರುತ್ತಿದ್ದರು. ಟಿಳಕರಂತೆ ಪೇಟಾ ಧರಿಸುವ ಇವರು 'ತಾಂಡವ ನೃತ್ಯ ಕರೀ ಗಜಾನನ' ಮತ್ತು 'ದೇ ಮಜ ದಿವ್ಯಮತೀ ಸರಸ್ವತಿ' ಮುಂತಾದ ಮರಾಠಿ ಹಾಡುಗಳಿಂದ ಕೀರ್ತನೆ ಆರಂಭಿಸುತ್ತಿದ್ದರು.

ಸಂದರ್ಭಕ್ಕೆ ಅನುಸಾರವಾಗಿ ಒಂದೇ ವ್ಯಕ್ತಿ ಹರಿಕಥೆ, ಗಮಕ ವಾಚನ, ಕೀರ್ತನೆಗಳನ್ನು ಬೇರೆ ಬೇರೆಯಾಗಿ ಮಾಡುತ್ತಿದ್ದಿರಬಹುದು. ಈ ಶತಮಾನದ ಆರಂಭದಲ್ಲಿ ಮುಳಗುಂದದ ರಾಮಶಾಸ್ತ್ರಿ ಬಾಳಾಶಾಸ್ತ್ರಿ, ನರಗುಂದದ ಚಿದಂಬರ ಶಾಸ್ತ್ರಿ ಹರಿಸರ್ವೋತ್ತಮಾಚಾರ್ಯರು ಪ್ರಸಿದ್ಧ ಕೀರ್ತನಕಾರರಾಗಿದ್ದರು. ಇದೇ ವೇಳೆಯಲ್ಲಿ ಶಾಂತಕವಿಗಳು (ಬಾಳಾಚಾರ್ಯ ಸಕ್ಕರಿ) ಹಿಂದೆ ಬಳಕೆಯಲ್ಲಿದ್ದ ಹಳೆಯ ಕಥೆಗಳ ಬದಲಿಗೆ ಹೊಸ ಪ್ರಕಾರದ ಕೀರ್ತನೆಗಳನ್ನು ರಚಿಸಿ ಪ್ರಚಾರಪಡಿಸಿದರು. ಅವರ 'ವಿದ್ಯಾರಣ್ಯ ಕೀರ್ತನೆ' ಮಹತ್ವದ ಕೃತಿ. ಶಾಂತಕವಿಗಳು 1918ರ ಸಾಹಿತ್ಯ ಸಮ್ಮೇಳನಕ್ಕೆ ಹರಿಕಥೆ ಮಾಡಿ ಹಣ ಸಂಗ್ರಹಿಸಿದುದಾಗಿ ತಿಳಿದು ಬರುತ್ತದೆ. ರಾಷ್ಟ್ರೀಯ ಜಾಗೃತಿಗೂ ಕೀರ್ತನೆಯನ್ನು ಬಳಸಿದ ಇವರ ಇತರ ಅನುಕರಣಕಾರರೆಂದರೆ ಮುದವೀಡು ಕೃಷ್ಣರಾಯರು, ಜಯರಾಮಾಚಾರ್ಯ ಕೊಪ್ಪಳ (ಇವರು ಹೈದರಾಬಾದ್ ಕರ್ನಾಟಕದವರು), ರಾ.ವೆ. ಕರಗುದರಿ ಹಾಗೂ ಬೆಟಗೇರಿಯ ಕಳ್ಳಿ ತಿಪ್ಪಣ್ಣ ಶಾಸ್ತ್ರಿ. ಗದಗಿನ ವೀರನಾರಾಯಣ ಸ್ತುತಿ ರಚಿಸಿರುವ ಶೇಷಾಚಾರ್ ಗುಡಿ, ಹೊಂಬಾಳೆ ಶೇಷಾಚಾರ್ಯರು, ಭಾರತದ ಬಿಂದುರಾಯರು, ಮುಂಡರಗಿ ಹರಿಸರ್ವೋತ್ತಮದಾಸರು, ಕುರ್ತಕೋಟಿಯ ಕೃಷ್ಣಾಶಾಸ್ತ್ರಿ, ಶ್ರೀಪಾದ ಶಾಸ್ತ್ರಿ, ಶಿರಹಟ್ಟಿ ಬಳಿಯ ತಂಗೋಳದ ದಾಸಾಚಾರ್ಯರು, ರೋಣದ ಕಟ್ಟೆ ಹನುಮಂತಾಚಾರ್ಯ, ಧಾರವಾಡದ ಗುರುರಾಜಾಚಾರ್ಯ ಗುಡಿ, ಗಮಕಿ ಪೂಜಾ ಕೃಷ್ಣಾಚಾರ್, ಕಾರಡಗಿ ಗಚ್ಚಿನಮಠದ ನಾಗಭೂಷಣ

ಸ್ವಾಮಿಗಳು, ಲಕ್ಕುಂಡಿಯ ಮಹಂತೇಶ ಶಾಸ್ತ್ರಿಗಳು, ಮುದಗಲ್ ಹಿರೇಮಠ ಪ್ರಥಮನಾಥ ಶಾಸ್ತ್ರಿ, ವಿಜಯಲಕ್ಷ್ಮಿ ಲೂತೀಮಠ, ಮಲ್ಲಿಗಟ್ಟಿ ಗಿರಿಮಲ್ಲಯ್ಯಶಾಸ್ತ್ರಿ, ಹೊಸರಿತ್ತಿ ನಿಜಲಿಂಗ ಶಾಸ್ತ್ರಿ, ಕುರುಬಗೊಂಡ ಪಂಚಾಕ್ಷರಿ ಶಾಸ್ತ್ರಿ ಮತ್ತು ವೀರಭದ್ರಯ್ಯ ಶಾಸ್ತ್ರಿ, ಹಾವೇರಿಯ ಮೃತ್ಯುಂಜಯ ಲಕಮಾಪುರ, ಕಾರಿಶೆಟ್ಟಿ ಹಳ್ಳಿಯ ಮಲ್ಲಿಕಾರ್ಜುನಶಾಸ್ತ್ರಿ ಮತ್ತು ಗದಿಗಯ್ಯ ಶಾಸ್ತ್ರಿ, ಮಳಲಿ ಫಕೀರಯ್ಯ ಶಾಸ್ತ್ರಿ, ಲಖಮಾಪುರದ ಟಿ.ಎಂ. ಚಂದ್ರಶೇಖರ ಶಾಸ್ತ್ರಿ, ಆಲಕಟ್ಟಿ ಬಸಯ್ಯಶಾಸ್ತ್ರಿ, ಸಾಸಿವೆಹಳ್ಳಿ ಮಲ್ಲಯ್ಯ ಶಾಸ್ತ್ರಿ, ಹನುಮೇಶವಿಠಲ, ಹುಸೇನ್‌ದಾಸರು, ಸಿದ್ದೇಶ್ವರ ಶಾಸ್ತ್ರಿ, ಭೀಮಾಚಾರ್ಯರು, ಸದಾಶಿವ ಸ್ವಾಮಿಗಳು, ಆರ್.ಎಸ್. ಕುಲಕರ್ಣಿ ಮುಂತಾದವರು ಕೀರ್ತನೆ, ಹರಿಕಥೆಯ ಕಲಾವಿದರುಗಳು.

ಅಂತೆಯೇ ಹಳೆಯ ತಲೆಮಾರಿನವರಲ್ಲಿ ವಿಡಂಬನಾತ್ಮಕ ರಸನಿರೂಪಣೆಯ ತೊರವಿ ಮಲ್ಲಾರಿರಾವ್, ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಕೀರ್ತನೆ ಮಾಡುತ್ತಿದ್ದ ಭೀಮದಾಸ್ ಎಸ್. ಮುತ್ತಗೀಕರ್ ಹಾಗೂ ಸುಬ್ಬಣ್ಣಾಚಾರ್ಯ ಅಕ್ಕಿವಳ್ಳಿ, ಆಕಾಶವಾಣಿ ದೂರದರ್ಶನಗಳ ಕಲಾವಿದ ಹನುಮಂತಾಚಾರ್ಯಕಟ್ಟಿ, ಹೊರರಾಜ್ಯಗಳಲ್ಲೂ ಪ್ರವಾಸ ಮಾಡಿ ಪ್ರಸಿದ್ಧರಾದ ಸವಣೂರು ಗುರುರಾಜಾಚಾರ್ಯ, 'ಸ್ತ್ರೀನೀತಿ ಪದ್ಯಮಾಲೆ' ರಚಿಸಿದ ದೇವಗಿರಿಯ ಶಿವಯೋಗಿ ಶಾಸ್ತ್ರಿಗಳು, ಹಲವಾರು ದೇವರನಾಮಗಳ ಕರ್ತೃ ಪಂಡಿತ ಮಧ್ವೇಶ ಗಲಗಲಿ, ಹರಿಕಥೆಯೊಂದಿಗೆ ಭಕ್ತಿಭಾವದಿಂದ ನರ್ತಿಸುತ್ತಿದ್ದ ಭೀಮದಾಸರು ಮತ್ತು ಅವರ ಪತ್ನಿ ಭಾರತೀಬಾಯಿ ಮುತ್ತಗೀಕರ, ದೇಶಪ್ರೇಮ, ರಾಷ್ಟ್ರಭಕ್ತಿ, ಸಮಾಜ ಸುಧಾರಣೆಗಳನ್ನು ಕೀರ್ತನೆಗಳ ಮೂಲಕ ಕನ್ನಡ, ಮರಾಠಿಗಳಲ್ಲಿ ಪ್ರಸರಿಸುತ್ತಿದ್ದ ಹಳೇಹುಬ್ಬಳ್ಳಿಯ ಇಂದ್ರಾಣಿ ಗುರ್ಲಹೊಸೂರು ಮತ್ತು ಸರ್ವಮಂಗಳ ಗುರ್ಲಹೊಸೂರು, ಬಾಲಕಲಾವಿದ ಉಡುಪಿ ಕೃಷ್ಣ, ಕಾವ್ಯಾಲಂಕಾರ ಬಿರುದಾಂಕಿತ ಸೋಮಶೇಖರ ಶಾಸ್ತ್ರಿಗಳು, ಸ್ವಾತಂತ್ರ್ಯ ಯೋಧ ಶಿರಹಟ್ಟಿಯ ನಾರಾಯಣಾಚಾರ್ಯರು, ಗಮಕಿ ಗದುಗಿನ ದ.ಕೃ. ಹಬಸೂರ, ಜಿ.ಡಿ. ಸಾಲಿಮಠ, ಆರ್.ವಿ. ಕರಿಗುದರಿ ಶಂಕರಪ್ಪ ನೀಲಕಂಠಪ್ಪ ಮನು ಇತ್ಯಾದಿ ಅನೇಕ ಕಲಾವಿದರನ್ನು ಗುರುತಿಸಬಹುದು.

ಗದಗಿನ ವೀರೇಶ್ವರ ಪುಣ್ಯಾಶ್ರಮದಿಂದ ಹಲವಾರು ಕೀರ್ತನಕಾರರು ಹೊರಬಂದಿದ್ದು ಅವರಲ್ಲಿ ಕೀರ್ತನ ಕಲಾ ಕೇಸರಿ ಕಲ್ಲಿನಾಥ ಶಾಸ್ತ್ರಿ ಅವರು ಒಬ್ಬ ಪ್ರಮುಖರು. ಇವರ ಕೆಲವು ಕೀರ್ತನೆಗಳು ಕ್ಯಾಸೆಟ್ (ಧ್ವನಿಸುರಳಿ) ರೂಪದಲ್ಲಿ ಬಂದಿವೆ. ಹುಬ್ಬಳ್ಳಿಯಲ್ಲಿ 'ಸ್ವರ ಭಾರತಿ ಗಮಕ ಸಂಗೀತ ವಿದ್ಯಾಲಯ'ವನ್ನು ಜಯಲಕ್ಷ್ಮಿ ಇನಾಂದಾರ್ ಅವರು 1983 ರಲ್ಲಿ ಸ್ಥಾಪಿಸಿದ್ದು ಗಮಕ ಕಲೆಯಲ್ಲಿ ತರಬೇತಿ ನೀಡಲಾಗುತ್ತಿದೆ. ಜಿಲ್ಲೆಯ ಇನ್ನೂ ಕೆಲವು ಸಂಗೀತ ಶಾಲೆಗಳಲ್ಲಿ ಗಮಕ, ಕೀರ್ತನೆಗಳನ್ನು ಕಲಿಸಿಕೊಡಲಾಗುತ್ತಿದೆ.

## ಸುಗಮ ಸಂಗೀತ

ಶಾಸ್ತ್ರೀಯ ಸಂಗೀತದಿಂದ ಹೊರತಾದ, ಭಾವಗೀತೆ, ಭಕ್ತಿಗೀತೆ, ದಾಸವಾಣಿ, ವಚನ, ಭಜನೆ, ಜನಪದ ಗೀತೆ, ರಂಗಗೀತೆ, ಸಿನಿಮಾ ಹಾಡು ಇತ್ಯಾದಿಗಳನ್ನು ಸುಗಮಸಂಗೀತ ಅಥವಾ ಲಘು ಸಂಗೀತ ಎಂದು ಕರೆಯಬಹುದಾಗಿದ್ದು ಈ ಪ್ರಕಾರದ ಕಾರ್ಯಕ್ರಮಗಳು ಜಿಲ್ಲೆಯಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ಶಾಲಾ ಕಾಲೇಜುಗಳ ಇಲ್ಲವೆ ಸಂಘ ಸಂಸ್ಥೆಗಳ ಹಾಗೂ ನಾಡಹಬ್ಬಗಳ ಸಂದರ್ಭದಲ್ಲಿ ರೂಪಿಸುವ ಕಾರ್ಯಕ್ರಮಗಳಲ್ಲಿ ಲಘು ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದ್ದು, ಕೆಲವು ಹಿರಿಯ ಶಾಸ್ತ್ರೀಯ ಸಂಗೀತಗಾರರೂ ಭಾವಗೀತೆ ಇತ್ಯಾದಿಗಳನ್ನು ಹಾಡುವುದುಂಟು. ಉಷಾದಾತಾರ್, ಜಾನಕಿ ಅಯ್ಯರ್, ಕಮಲ ಪುರಂಧರೆ, ಶಾಮಲ ಕೆ. ಕುಲಕರ್ಣಿ, ಕುಮಾರದಾಸ್, ರೋಹಿಣಿ ದೇಶಪಾಂಡೆ ಮುಂತಾದ ಹಿರಿಯ ಕಿರಿಯ ಶಾಸ್ತ್ರೀಯ ಸಂಗೀತಗಾರರು ಸುಗಮ ಸಂಗೀತದ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಉಳಿದಂತೆ ಶಶಿಕಲಾ ಮಹಾಂತ, ರಾಜು ನದಾಫ್, ಜಯಶ್ರೀ ಹಳಕೊಪ್ಪ, ಹೂಗಾರ ಕುಮಾರಿ, ಸಿ.ಎಸ್. ರಾಯ್ಕರ್, ವೀರೇಶ ಹಿರೇಮಠ, ದಾಕ್ಷಾಯಣಿ ಲಂಬಿ, ಗಾಯಿತ್ರಿ ಎನ್. ಜೋಶಿ, ಸುಮಿತ್ರದೀಕ್ಷಿತ್, ಅನಿತಾ ಕುಲಕರ್ಣಿ, ಉಷಾ ದೀಕ್ಷಿತ್, ಮಾಧುರಿ ವೈದ್ಯ, ಸುಕನ್ಯಾ ಶೇಟ್, ರಾಜಶ್ರೀ ವೈದ್ಯ, ಶ್ರೀನಿವಾಸ ದೇಶಪಾಂಡೆ, ಯಶವಂತ ಹಳಬಂಡಿ, ಭೈರವಿ ಪ್ರಭು, ಆಶಾ ಪಿಸೆ, ಕಲ್ಪನಾ ಕವಳೇಕರ, ಸುಮನ್ ಕವಳೇಕರ, ಜಯಲಕ್ಷ್ಮಿ ಬಳ್ಳಾರಿ, ಪ್ರದೀಪ ಪ್ರಭು, ರವಿ ಕುಶಾಲ್ ಕುಲಕರ್ಣಿ, ವಿಕಿ ಜಾಲಿಹಾಳ, ಸಂಜಯ ಕುಲಕರ್ಣಿ, ಶ್ರೀಪಾದಗಡ್ಡಿ, ಶ್ರೀಪಾದ ಹೆಗಡೆ, ಜಯಲಕ್ಷ್ಮಿ ಉಗ್ರಾಣಿ, ಬಿ. ಶಂಕರರಾವ್ ಜೋಶಿ, ಮಂಜುಳಾ, ರಮೇಶ್, ರೂಪ, ಜಯದೇವಿ ಜಂಗಮ ಶೆಟ್ಟಿ, ಸುಮಂಗಲ ಜಂಗಮ ಶೆಟ್ಟಿ, ವಿಜಯಲಕ್ಷ್ಮಿ ಕಲ್ಲೂರಕರ, ಆಶಾ ಪ್ರಳಯಕಾಲಮಠ, ಗೋಪಾಲ ರಾಯಚೂರ್‌ಕರ್, ಚಂದ್ರಿಕಾ ಬಂಡಿವಾಡ, ವಾಣಿ ಮುಧೋಳ, ಜ್ಯೋತಿ ದೇಸಾಯಿ, ಸುಜಾತ ಪಾಠಕ್, ನಾಗರತ್ನ ಪಾಠಕ್, ಹೇಮ

ನವರತ್ನ, ಮುಂತಾದ ಅನೇಕರನ್ನು ಉದಾಹರಿಸಬಹುದು. ಸುಗಮ ಸಂಗೀತದಲ್ಲಿ ಹುಬ್ಬಳ್ಳಿಯ ಸಂಗೀತಾ ಕಟ್ಟಿ ಹೆಸರು ಗಳಿಸಿದ್ದಾರೆ. ಇವರ ಅನೇಕ ಕ್ಯಾಸೆಟ್‌ಗಳೂ ಬಂದಿವೆ.

ವಾದ್ಯ ಕಲಾವಿದರಲ್ಲಿ ಕುಮಾರ ಹಳಕೊಪ್ಪ, ಅಲ್ಲಮ ಪ್ರಭು ಹಿರೇಮಠ, ಎಂ. ಮಲ್ಲೇಶ್, ವಿಜಯ ಕುಲಕರ್ಣಿ, ವಿಷ್ಣು ಕಡೆಣ್ಣವರ, ವಿನಾಯಕ ಕಾಂಬಳಿ, ರಮೇಶ ಹಳಗದ್ದೆ, ವಸಂತ ಕನಕಾಪುರ, ಅಲ್ಲಮ ಪ್ರಭು ಕಡಕೋಳ, ಷಡಕ್ಷರಿ ಶೀಲವಂತರ, ಶಾಂತೇಶ ಕರಗುದರಿ, ಎಸ್.ಬಿ. ಮಹಾಪುರುಷ, ಮುರಳೀಧರ ರಾವ್, ರಾಜಕುಮಾರ, ಶ್ರೀಕಾಂತ ಉಪಾಧ್ಯ ಇತ್ಯಾದಿ ಹಲವಾರು ಪ್ರತಿಭಾವಂತರಿದ್ದಾರೆ. ಹಾಡುಗಾರಿಕೆ ಹಾಗೂ ವಾದ್ಯ ಸಂಗೀತಕಾರರಾದ ಈ ಕಲಾವಿದರಲ್ಲಿ ಅನೇಕರು ಶಾಸ್ತ್ರೀಯ ಸಂಗೀತವನ್ನು ಕ್ರಮಬದ್ಧವಾಗಿ ಅಭ್ಯಸಿಸಿದ್ದಾರಲ್ಲದೆ ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಈಚೆಗೆ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಹಾಗೂ ಕುಟುಂಬ ಕಲ್ಯಾಣ ಪ್ರಚಾರಕ್ಕೆ ಕಲಾತಂಡಗಳ ಸುಗಮ ಸಂಗೀತವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ.

## ಧ್ವನಿ ಮುದ್ರಿಕೆ

ಉತ್ತರಾದಿ ಸಂಗೀತ ಈ ಪ್ರದೇಶದಲ್ಲಿ ಹೆಚ್ಚು ಜನಪ್ರಿಯವಾದುದಕ್ಕೆ ಕಾರಣ ನಾಟಕಗಳು ಮತ್ತು ಧ್ವನಿಮುದ್ರಿಕೆಗಳು. ಅಂದಿನ ನಾಟಕಗಳಲ್ಲಿ ಕೆಲವೊಮ್ಮೆ ಹಿಂದುಸ್ಥಾನಿ ಸಂಗೀತದ ಪೂರ್ಣ ಪ್ರಮಾಣದ 'ಬೈಠಕ್' ಸಹ ಸೇರಿಸುತ್ತಿದ್ದುದುಂಟು. ಅಂತೆಯೇ ಶತಮಾನದ ಆರಂಭದಿಂದಲೇ ಧ್ವನಿಮುದ್ರಿಕೆ ('ಗ್ರಾಮೊಫೋನ್')ಯ ಅಂಗಡಿಗಳು ಹುಬ್ಬಳ್ಳಿ, ಧಾರವಾಡ, ಗದಗ್‌ಗಳಲ್ಲಿದ್ದು ಈ ಸಲಕರಣೆಯನ್ನು ಕಾರ್ಯಕ್ರಮಗಳಿಗೆ ಬಾಡಿಗೆಗೆ ವಿತರಿಸುತ್ತಿದ್ದರು. ಪುಣೆ, ಮುಂಬಯಿ ಹಾಗೂ ಉತ್ತರ ಭಾರತದ ಅನೇಕ ಗಣ್ಯರ ಸಂಗೀತದ 'ರೆಕಾರ್ಡ್'ಗಳು ಇಲ್ಲಿ (ಜಿಲ್ಲೆಯಲ್ಲಿ) ಸುಲಭವಾಗಿ ಕೇಳಲು ದೊರೆಯುತ್ತಿದ್ದು, ಜನಸಾಮಾನ್ಯರಲ್ಲದೆ ಸಂಗೀತ ವಿದ್ಯಾರ್ಥಿಗಳೂ ಇವುಗಳ ಪ್ರಯೋಜನ ಪಡೆದುಕೊಳ್ಳುವಂತಾಯಿತು. ಧಾರವಾಡದ ಶ್ರೀಪಾದರಾವ್ ತಾಮಣಕರ್, ಹಾಗೂ ಗದಗಿನ ಭೂಸದ ಅವರುಗಳ ಗ್ರಾಮಾಫೋನ್ ಅಂಗಡಿಗಳಲ್ಲಿ ಪ್ರದರ್ಶನಕ್ಕೆಂದು ಹಾಕುತ್ತಿದ್ದ ಹಾಡುಗಳು ಗಂಗೂಬಾಯಿ ಹಾನಗಲ್ ಮತ್ತು ಭೀಮಸೇನ ಜೋಶಿ ಅವರಿಗೆ ಸಂಗೀತ ಕಲಿಯಲು ಇನ್ನಷ್ಟು ಸ್ಫೂರ್ತಿ ನೀಡಿದ್ದು ಪ್ರಸಿದ್ಧ ವಿಷಯ. ಅಂತೆಯೇ ಜಿಲ್ಲೆಯ ಕಲಾವಿದರ ಧ್ವನಿಮುದ್ರಿಕೆಗಳು ಪುಣೆ ಮುಂಬಯಿಗಳಲ್ಲೆಲ್ಲಾ ದೊರೆಯುವಂತಾಗಿದ್ದು ಇಲ್ಲಿಯ ಕಲಾವಿದರು ಅಲ್ಲಿ ಪ್ರಸಿದ್ಧಿ ಪಡೆಯಲೂ ಕಾರಣವಾಯಿತು.

ಈ ಶತಮಾನದ ಆರಂಭದಲ್ಲೇ ಅಬ್ದುಲ್ ಕರೀಂಖಾನರ ಉತ್ತರಾದಿಯಲ್ಲದೆ ತ್ಯಾಗರಾಜರ ಕೀರ್ತನೆಗಳನ್ನು ಧ್ವನಿಮುದ್ರಿಸಲಾಗಿತ್ತು. ನಂತರ ರಹಮತ್ ಖಾನ್ ಅವರ ಐದು ಧ್ವನಿಮುದ್ರಿಕೆಗಳು ಹೊರಬಂದವು. 1933-34 ರಲ್ಲಿ ಹೆಸರಾಂತ ಸಂಗೀತಗಾರರ ಧ್ವನಿಮುದ್ರಿಕೆಗಳಾದವು. ಈ ವರ್ಷಗಳಲ್ಲಿ ಪಂಚಾಕ್ಷರಿ ಗವಾಯಿಗಳು ದಕ್ಷಿಣಾದಿಯಲ್ಲಿ ಹಾಡಿದ ತ್ಯಾಗರಾಜರ ಕೀರ್ತನೆಗಳಲ್ಲದೆ, ನಿಜಗುಣ ಶಿವಯೋಗಿಗಳ ವಚನವನ್ನು ಹಿಂದೂಸ್ಥಾನೀ ಶೈಲಿಯಲ್ಲಿ ಹಾಡಿದರು. ಇವುಗಳನ್ನು ಮುದ್ರಿಸಿ ಮಾರಾಟಕ್ಕೆ ತಂದ ಎಚ್.ಎಂ.ವಿ. ಹೌಸ್ (ಹಿಸ್ ಮಾಸ್ಟರ್ ವಾಯಸ್) ಅವರು ಕನ್ನಡ ಸಂಗೀತವನ್ನು ವಿರೋಧಿಸಿದರೂ ಗವಾಯಿಗಳ ಒತ್ತಡಕ್ಕೆ ಮಣಿಯಬೇಕಾಯಿತು. ಮುಂದೆ ಕನ್ನಡ ಹಾಡಿನ ಪರಂಪರೆ ಮುಂದುವರಿಯಿತು. ಅದೇ ವರ್ಷ ಮಲ್ಲಿಕಾರ್ಜುನ ಮನ್ಸೂರರು ಹಾಡಿದ ಶಿಶುನಾಳರ 'ತೇರನೆಳೆಯುತ್ತಾರೆ ತಂಗಿ' ಮುದ್ರಿಕೆಯಾಗಿ ಜನಪ್ರಿಯವಾಯಿತು. 33-34 ರಲ್ಲಿ ಗಂಗೂಬಾಯಿ ಹಾನಗಲ್ ಅವರ 12 ಧ್ವನಿ ಮುದ್ರಿಕೆಗಳಾದವು. 39-41 ರ ಅವಧಿಯಲ್ಲಿ ಬಸವರಾಜ ರಾಜಗುರುಗಳ ಹಲವಾರು ಧ್ವನಿ ಮುದ್ರಿಕೆಗಳಾದವು. 1935 ರಲ್ಲಿ ಬಸವರಾಜ ಮನ್ಸೂರ್ ಅವರ ಪೌರಾಣಿಕ ನಾಟಕಗಳ ಆರು ಹಾಡುಗಳು ಎಚ್.ಎಂ.ವಿ.ಯಿಂದಲೂ ಕನ್ನಡ ಜನಪ್ರಿಯ ನಾಟಕಗಳ ಹಾಡುಗಳು ಓಡಿಯನ್ ರೆಕಾರ್ಡಿಂಗ್ ಕಂಪನಿಯಿಂದಲೂ ಹೊರಬಿದ್ದವು. ಮುಂದೆಯೂ ಎಚ್.ಎಂ.ವಿ. ಅವರು ಹನುಮಂತಸಿಂಗ್ ಹಾನಗಲ್, ಕಮಲ ಪುರಂದರೆ ಅವರುಗಳ ಕನ್ನಡ ಹಾಡುಗಳು ಮತ್ತು ವಿಠಲಸಾ ಕಬಾಡಿ ಅವರ ಮರಾಠಿ ಅಭಂಗ, ದಾಸವಾಣಿ ಇತ್ಯಾದಿಗಳ ಧ್ವನಿಮುದ್ರಿಕೆ (ರೆಕಾರ್ಡ್ ಪ್ಲೇಯರ್) ಹೊರತಂದರು. ಮೊದಲಿಗೆ ಮೂರು ನಿಮಿಷಗಳ ಚಿಕ್ಕ ಅಳತೆಯ ರೆಕಾರ್ಡ್‌ಗಳು ನಂತರ ದೊಡ್ಡ ಅಳತೆಗೆ (ಲಾಂಗ್ ಪ್ಲೆ - ಎಲ್.ಪಿ.) ಬದಲುಗೊಂಡಿತು. ಭೀಮಸೇನ ಜೋಷಿ ಅವರ ಸಂಗೀತದ ಎಲ್.ಪಿ.ರೆಕಾರ್ಡ್‌ಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಆಗಿರುವುದಾಗಿ ತಿಳಿದು ಬರುತ್ತದೆ.

ಧ್ವನಿಸುರುಳಿಗಳು ('ಟೇಪ್ ರೆಕಾರ್ಡ್') ಬಳಕೆಗೆ ಬಂದ ಮೇಲೆ ಜಿಲ್ಲೆಯಲ್ಲಿ ಕ್ಯಾಸೆಟ್ ಸಂಸ್ಕೃತಿ ಆರಂಭವಾಯಿತು. ಸ್ವತಃ ಆಕಾಶವಾಣಿ ನಿಲಯದವರು ನೂರಾರು ದೊಡ್ಡ ಅಳತೆಯ ಸುರಳಿಯಲ್ಲಿ ('ಸ್ಪೂಲ್') ಪ್ರಸಿದ್ಧ ಕಲಾವಿದರ ಸಂಗೀತವನ್ನು ಮುದ್ರಿಸಿ ಇರಿಸಿದ್ದಾರೆ. ಇವಲ್ಲದೆ ಶಿವರಾಜ ಗವಾಯಿಗಳ ವಚನಗಳು, ಹುಸೇನ್‌ದಾಸರ ದಾಸರಪದಗಳು ಧ್ವನಿಸುರಳಿಗಳಾಗಿ ಬಂದಿವೆ. ಗದಗದ

ಕೀರ್ತನಕಾರ ಸಿದ್ದೇಶ್ವರಶಾಸ್ತ್ರಿ ಅವರ ಕೀರ್ತನೆಗಳ 25ಕ್ಕೂ ಹೆಚ್ಚು ಧ್ವನಿ ಸುರುಳಿಗಳು ಬಂದಿವೆ. ಶಿರಹಟ್ಟಿಮಠ, ಗದಗಿನ ಸಿದ್ಧಾರೂಢಮಠ ಕೆಲವು ಕ್ಯಾಸೆಟ್‌ಗಳನ್ನೂ, ಹುಬ್ಬಳ್ಳಿಯ ಮೂರು ಸಾವಿರಮಠದವರು ಅಶ್ವಿನಿ ಕ್ಯಾಸೆಟ್ ಅವರ ಮೂಲಕ ಎರಡು ಕ್ಯಾಸೆಟ್‌ಗಳನ್ನೂ ಹೊರತಂದಿದ್ದಾರೆ.

ಹುಬ್ಬಳ್ಳಿಯ ರವಿ ಕುಶಾಲ್ ಕುಲಕರ್ಣಿ ಅವರ ಹಿನ್ನಲೆಗಾಯನದ 90 ಕ್ಕೂ ಹೆಚ್ಚು ಕ್ಯಾಸೆಟ್ ಬಂದಿದೆ. ಹನುಮಂತರಾವ್ ಬುರ್ಲಿ ಅವರ ಸಂಗೀತ ಹಾಗೂ ಭೀಮಸೇನ ಮರೋಳರ ತಬಲಾ, ಶಿವಪ್ಪ ತರಲಘಟ್ಟಿ ಅವರ ಸಿತಾರ್‌ಗಳು ಕ್ಯಾಸೆಟ್‌ಗಳಾಗಿವೆ. ದೇವೇಂದ್ರಕುಮಾರ ಪತ್ತಾರರು ನೂರೈವತ್ತಕ್ಕೂ ಹೆಚ್ಚು ಭಾವಗೀತೆ, ಭಕ್ತಿಗೀತೆಗಳಿಗೆ ರಾಗ ಸಂಯೋಜಿಸಿ ಹಾಡಿದ್ದಾರೆ. ಇವರು ಖ್ಯಾತ ನಟ ಡಾ।। ರಾಜಕುಮಾರ್ ಅವರೊಂದಿಗೆ ಹಾಡಿರುವುದೂ ಧ್ವನಿ ಸುರಳಿಯ ರೂಪದಲ್ಲಿ ಬಂದಿವೆ. ಹುಬ್ಬಳ್ಳಿಯ ವೈಭವಾನಿ ಕ್ಯಾಸೆಟ್ ಹಾಗೂ ಮಾರುತಿ ಕ್ಯಾಸೆಟ್ ಕಂಪನಿಗಳು ಕೆಲವು ಕ್ಯಾಸೆಟ್ ತಂದಿದ್ದು ಇಂದು ಈ ಕಂಪನಿಗಳು ಸ್ಥಗಿತವಾಗಿದೆ. ಹುಬ್ಬಳ್ಳಿಯ ವಿಜಯ ಕ್ಯಾಸೆಟ್ ಅವರ 'ವಿಜಯ ರೆಕಾರ್ಡಿಗ್ ಸರ್ವೀಸಸ್' 1984ರಲ್ಲಿ ಆರಂಭವಾಗಿದ್ದು ಬಸವರಾಜ ರಾಜಗುರುಗಳ ಸಂಗೀತ, ನಾಕೋಡರ ತಬಲಾ, ರಾಜೇಂದ್ರ ಕುಲಕರ್ಣಿ ಅವರ ಕೊಳಲು ಇತ್ಯಾದಿಗಳಲ್ಲದೆ ನಾಟಕ, ಭಕ್ತಿಗೀತೆಗಳು ಕುರಿತು ಧ್ವನಿ ಸುರಳಿ ಹೊರತಂದಿದೆ. ಜನಪದ ಗೀತೆಗಳ ಸಂಗ್ರಹಗಳೇ ಅಧಿಕವಾಗಿ ಇವರಿಂದ ಕ್ಯಾಸೆಟ್ ರೂಪದಲ್ಲಿ ಹೊರಬಂದಿದೆ. ಇವರು ಎಚ್.ಎಂ.ವಿ., ಸಂಗೀತ, ಇತ್ಯಾದಿ ಬೇರೆ ಬೇರೆ ಕಂಪನಿಗಳ ಕ್ಯಾಸೆಟ್ ಸಹ ಮಾರುತ್ತಿದ್ದು ತಿಂಗಳಿಗೆ 2000 ಕ್ಯಾಸೆಟ್‌ಗಳ ಮಾರಾಟವಾಗುತ್ತಿವೆ.

## ಚಿತ್ರಕಲೆ

ಕರ್ನಾಟಕದ ಚಿತ್ರಕಲಾ ಕ್ಷೇತ್ರಕ್ಕೆ ಧಾರವಾಡ ಜಿಲ್ಲೆಯೂ ತನ್ನ ಪಾಲಿನ ಕಾಣಿಕೆಯನ್ನು ಸಲ್ಲಿಸಿದೆ. ಆದರೆ ಜಿಲ್ಲೆಯ ಈಶಾನ್ಯ ದಿಕ್ಕಿನಲ್ಲಿ ಜಿಲ್ಲೆಗೆ ಹೊಂದಿಕೊಂಡಂತೇ ಇರುವ ರಾಯಚೂರು ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡು ಬರುವ ಆದಿಮಾನವನ, ಇತಿಹಾಸ ಪೂರ್ವಕಾಲದ ಗುಹಾಚಿತ್ರಗಳು ಧಾರವಾಡ ಜಿಲ್ಲೆಯಲ್ಲಿ ಕಂಡುಬರದೆ ಇರುವುದು ಸೋಜಿಗವಾಗಿದೆ. ಐತಿಹಾಸಿಕ ಕಾಲದಲ್ಲಿ ರಾಷ್ಟ್ರಕೂಟ, ಕಲ್ಯಾಣಿ ಚಾಳುಕ್ಯರ ನೂರಾರು ಶಿಲ್ಪಗಳು, ದೇವಾಲಯಗಳು ಕಂಡು ಬಂದರೂ, ಈ ದೇವಾಲಯಗಳ ರಚನೆಯ ವೈಶಿಷ್ಟ್ಯದಿಂದಾಗಿ ಅವುಗಳಲ್ಲಿ ಚಿತ್ರಕಲೆ ಕಂಡುಬರುವುದಿಲ್ಲ. ಆದರೂ ಈ ಕಾಲದಲ್ಲಿ ಬಿಡಿ ಚಿತ್ರ ರಚಿಸುವ ಕಲಾವಿದರು ಇದ್ದಿರಬಹುದು. ಗದಗ ತಾಲೂಕಿನ ಕುರ್ತಕೋಟಿಯ ಕ್ರಿ.ಶ. 1082 ರ ಶಾಸನವೊಂದು ಬಮ್ಮನ ಮಗ ಐಯ್ಯಣ ಎಂಬಾತ ಮರ, ಇಟ್ಟಿಗೆ, ದಂತ ಹಾಗೂ ಚಿತ್ರಕಲೆಗಳಲ್ಲಿ ಶಾಸ್ತ್ರೋಕ್ತವಾಗಿ ಕೃತಿ ರಚನೆಯನ್ನು ಮಾಡುತ್ತಿದ್ದು, ಕಮ್ಮಾರ ವಿದ್ಯೆಯಲ್ಲಿ ವಿಶ್ವಕರ್ಮನಿಗಿಂತಲೂ ಮಿಗಿಲು ಎಂದೆನಿಸಿದ್ದನೆಂದು ವರ್ಣಿಸುತ್ತದೆ. ಅಂತೆಯೇ ಧಾರವಾಡ ಜಿಲ್ಲೆಯ ಹಲವಾರು ಪ್ರಸಿದ್ಧ ಕವಿಗಳು ತಮ್ಮ ಕಾವ್ಯಗಳಲ್ಲಿ ಚಿತ್ರಕಲೆಯನ್ನು ಕುರಿತು ಕೆಲವು ಸಂಗತಿಗಳನ್ನು ತಿಳಿಸುತ್ತಾರೆ. ಪಂಪನ 'ಆದಿ ಪುರಾಣದ', ಭವಾವಳಿಯ ಕಥೆಯೊಂದರಲ್ಲಿ ಪತಿ-ಪತ್ನಿಯರು ತಮ್ಮ ಹಿಂದಣ ಜನ್ಮದ ಕಥೆಯನ್ನು ಚಿತ್ರರೂಪದಲ್ಲಿ ಬರೆದು ಆ ಮೂಲಕ ಮರುಜನ್ಮದಲ್ಲೂ ಒಂದುಗೂಡಿದ ಕಥೆಯಲ್ಲಿ ಚಿತ್ರ ಪಟ ಹಾಗೂ ಅದರಲ್ಲಿದ್ದ ವಸ್ತು ವಿಷಯ, ನಿರ್ವಹಣಾ ಕೌಶಲ್ಯ ಇತ್ಯಾದಿಗಳ ಬಗ್ಗೆ ವಿಸ್ತಾರವಾದ ಸಂಗತಿಗಳು ತಿಳಿದು ಬರುತ್ತವೆ. ಅಲ್ಲದೆ ಪಂಪ ತನ್ನೆರಡೂ ಕಾವ್ಯಗಳಲ್ಲಿ ಚಿತ್ರ, ಬಣ್ಣ ಇತ್ಯಾದಿ ಕುರಿತು ಹಲವಾರು ಉಪಮೆಗಳನ್ನು ವರ್ಣನೆಗಳನ್ನು ತಂದಿದ್ದಾನೆ. ಅಂತೆಯೇ ಕನಕದಾಸರ 'ಶೃಂಗಾರ ತರಂಗಿಣಿ'ಯಲ್ಲಿಯೂ ಅರಮನೆ ಹಾಗೂ ಮನೆಗಳ ಭಿತ್ತಿಗಳಲ್ಲಿ, ಮೇಲೆ ಕಟ್ಟಿದ ಧ್ವಜಗಳಲ್ಲಿ ಬರೆದಿದ್ದ ಚಿತ್ರಗಳ ಬಗ್ಗೆ ವಿವರಿಸಿರುವುದು ಅಂದಿನ ಸಮಕಾಲೀನ ಚಿತ್ರ ಕಲೆಯನ್ನು ಕುರಿತು ಹೇಳಿದಂತಿದೆ. ಅಲ್ಲದೆ ಒಂದು ಅಧ್ಯಾಯದ ತುಂಬ ನಾಯಕಿಯ ಸ್ನೇಹಿತೆ ರಚಿಸಿದ ನೂರಾರು ಭಾವಚಿತ್ರಗಳ ರಚನೆಯ ವರ್ಣನೆಯ ಸಂದರ್ಭದಲ್ಲಿ ಚಿತ್ರಕಲೆಯ ಹಲವಾರು ಪಾರಿಭಾಷಿಕ ಪದಗಳು ದೊರೆಯುತ್ತವೆ. ಧಾರವಾಡ ಜಿಲ್ಲೆಯ ವಚನಕಾರರೂ ಸಂದರ್ಭಾನುಸಾರವಾಗಿ ಚಿತ್ರಕಲೆಯನ್ನು ಬಳಸಿಕೊಂಡಿದ್ದು ಅಂಬಿಗರ ಚೌಡಯ್ಯನ ವಚನವೊಂದರಲ್ಲಿ ಕುಂಚದ ಪರೀಕ್ಷೆಯನ್ನು ಮಾನವನ ಏಕಾಗ್ರತೆಗೆ ಹೋಲಿಸಿರುವುದು ಕುತೂಹಲಕಾರಿಯಾಗಿದೆ.

ಹಳೆಯ ತಾಳೆಯೋಲೆ ಗ್ರಂಥಗಳಲ್ಲಿ ಹಾಗೂ ಅವುಗಳ ಕಟ್ಟಿನ ಮರದ ಹಲಗೆಯ ಮೇಲೆ ಮತ್ತು ಕಾಗದದ ಹಸ್ತ ಪ್ರತಿಗಳಲ್ಲಿ ಕೆಲವು ಪೂರಕ ಚಿತ್ರಗಳಿರುವುದುಂಟು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿಯ ವಚನ ಭಂಡಾರದ ಕಾಗದದ ಹಸ್ತ ಪ್ರತಿಯೊಂದರಲ್ಲಿ ರಾಘವಾಂಕ, ಹರಿಹರ, ಪ್ರಭುದೇವ, ವಿರೂಪಾಕ್ಷ ಪಂಡಿತ, ಕೆರೆಯ ಪದ್ಮರಸ ಮೊದಲಾದ ಹಲವಾರು ಗಣ್ಯರ ಸುಂದರವಾದ ವರ್ಣ ಚಿತ್ರಗಳಿವೆ. ಈ ಅಧ್ಯಯನ ಪೀಠವೂ ಸೇರಿದಂತೆ, ಹುಬ್ಬಳ್ಳಿ, ಗದಗ ಇತ್ಯಾದಿ ಕಡೆಗಳಲ್ಲಿಯ ಮಠಗಳಲ್ಲಿ

ದೊರೆಯುವ ಓಲೆಗರಿಯ ಕಟ್ಟುಗಳ ಮೇಲಿನ ಮರದ ಹಲಗೆಯಲ್ಲಿ ಹಲವಾರು ಚಿತ್ರಗಳನ್ನು ನಕ್ಷೆಗಳನ್ನು ಕಾಣಬಹುದು. ರಾಣೆಬೆನ್ನೂರು ಬಳಿಯ ಮೆಡಲೇರಿಯ ಮಠದಲ್ಲಿರುವ ಹಸ್ತ ಪ್ರತಿಯ ಹೊರಕವಚದಲ್ಲಿ ವಿಸ್ತಾರವಾದ ಚಿತ್ರಬಂಧವೊಂದು ಇದೆಯೆಂಬುದಾಗಿ ತಿಳಿದು ಬರುತ್ತದೆ. ಅಧ್ಯಯನ ಪೀಠ ಹಾಗೂ ಜಿಲ್ಲೆಯ ಹಲವಾರು ಶೈವ ಮಠಗಳಲ್ಲಿ 'ಉದ್ದರಣೆ ವಚನ'ದ ಕಟ್ಟುಗಳಿದ್ದು, ಇವು ಹಲವಾರು ಧಾರ್ಮಿಕ ಚಿತ್ರಗಳಿಂದ ತುಂಬಿದ ಸುರಳಿಯಾಕಾರದ ಚಿತ್ರ ಪಟಗಳಂತಿರುತ್ತವೆ. ಅಧ್ಯಯನ ಪೀಠದಲ್ಲಿರುವ ಸುಮಾರು ಎರಡು ಶತಮಾನ ಹಳೆಯದಾದ ಉದ್ದರಣೆ ವಚನದ ಕಟ್ಟಿನಲ್ಲಿರುವ ಚಿತ್ರಗಳು ಚಿತ್ರಗಾರಿಕೆಯ ದೃಷ್ಟಿಯಿಂದ ಉತ್ತಮ ಉದಾಹರಣೆಯದಾಗಿದೆ.

ದೇವಾಲಯ, ಅರಮನೆ ಹಾಗೂ ವಾಸದ ಮನೆಗಳಲ್ಲಿ ಗೋಡೆಗಳ ಮೇಲೆ ಚಿತ್ರ ರಚಿಸುವ ಸಂಪ್ರದಾಯ ಹಿಂದಿನ ಕಾಲದಲ್ಲಿದ್ದು ಧಾರವಾಡ ಜಿಲ್ಲೆಯಲ್ಲೂ ಕೆಲವು ಗುರುತುಗಳು ದೊರೆಯುತ್ತವೆ. ಧಾರವಾಡದ ಬಳಿಯ ಅಮ್ಮಿನಭಾವಿಯಲ್ಲಿರುವ ಹಿರೇಮಠದಲ್ಲಿ ಮರ ಹಾಗೂ ತಗಡಿನ ಮೇಲೆ ರಚಿಸಿರುವ ಚಿತ್ರಗಳಲ್ಲದೆ ಭಿತ್ತಿಯಲ್ಲೂ ಚಿತ್ರಗಳಿವೆ. ಶೈವ ಧಾರ್ಮಿಕ ಪರವಾದ ಚಿತ್ರಗಳಲ್ಲದೆ ಹಲವಾರು ಪ್ರಾಣಿಗಳನ್ನು ಕೂಡಿಸಿ ಸಂಯುಕ್ತಗೊಳಿಸಿದ 'ವಿಚಿತ್ರ ಪ್ರಾಣಿ' (ಇದು ಕೃಷ್ಣನ ಗೀತೋಪದೇಶದ ಕಲ್ಪನೆ)ಯ ಚಿತ್ರಣವೂ ಇದೆ. ನರಗುಂದ ಬಾಬಾಸಾಹೇಬ, ಸಂಗೊಳ್ಳಿ ರಾಯಣ್ಣ ಇತ್ಯಾದಿ ಐತಿಹಾಸಿಕ ವ್ಯಕ್ತಿಗಳ ಚಿತ್ರಣವೂ ಕಾಣಬಹುದು. ಈ ಚಿತ್ರಗಳು ಮೂಲತಃ ಕಿತ್ತೂರಿನ ಅರಮನೆಯಲ್ಲಿ ಇತ್ತೆಂದೂ ಅದು ನಾಶವಾದ ಬಳಿಕ ಇಲ್ಲಿಗೆ ತರಲಾಯಿತೆಂದೂ ಹೇಳಿಕೆಗಳಿವೆ. ಅಂತೆಯೇ ಪೌರಾಣಿಕ ದೇವಾನುದೇವತೆಗಳು, ದಶಾವತಾರಗಳು ಇತ್ಯಾದಿಗಳೊಂದಿಗೆ ಐತಿಹಾಸಿಕ ಯುದ್ಧವೊಂದರ ವಿಸ್ತಾರವಾದ ಭಿತ್ತಿಚಿತ್ರವನ್ನು ನರಗುಂದದ ಬಾಬಾಸಾಹೇಬನ ಅರಮನೆಯಲ್ಲಿ (ಇಂದಿನ ಪುರಸಭಾ ಕಚೇರಿ) ನೋಡಬಹುದು. ನರಗುಂದ ಊರಿನಲ್ಲಿಯೇ ಶ್ರೀಗುಂಡಪ್ಪ ಹಸಬಿ ಎಂಬುವವರ ಮನೆಯಲ್ಲಿಯೂ ಕೆಲವು ಸಾಂಸಾರಿಕ ದೃಶ್ಯಗಳ ಚಿತ್ರಣ ಇರುವುದಾಗಿ ಶಿವರಾಮ ಕಾರಂತರು ತಿಳಿಸುತ್ತಾರೆ. ಊರಿನ ವೆಂಕಟರಮಣ ದೇವಾಲಯದಲ್ಲೂ ಹಿಂದೆ ಬರೆಯಿಸಿದ ಚಿತ್ರಗಳ ಕುರುಹು ಮಸುಕಾಗಿ ಉಳಿದಿದೆ. ಜಿಲ್ಲೆಯ ಧಾರವಾಡ ತಾಲೂಕಿನ ಉಪ್ಪಿನ ಬೆಟಗೇರಿಯ ಎಲ್ಲಮ್ಮ ದೇವಾಲಯದಲ್ಲೂ ಭಿತ್ತಿಯಲ್ಲಿ ಚಿತ್ರಗಳು ಇರುವುದು ಇತ್ತೀಚೆಗೆ ಪತ್ತೆಯಾಗಿದ್ದು ಇಡೀ ದೇವಾಲಯವೇ ಶಿಥಿಲಾವಸ್ಥೆಯಲ್ಲಿದೆ. ಆದರೂ ಪ್ರಾಣಿ ಪಕ್ಷಿಗಳ ಆಕೃತಿಗಳು ಕೆಲವು ಡಿಸೈನ್‌ಗಳನ್ನೂ ಗುರುತಿಸಬಹುದು. ಇದಲ್ಲದೆ ಸವಣೂರು ಅರಮನೆಯಲ್ಲಿಯೂ ಸುಂದರ ಪುಷ್ಪ, ಜ್ಯಾಮಿತಿ ವಿನ್ಯಾಸದ ಚಿತ್ರಗಳು ಇವೆ.

ಇಂದು ಧಾರವಾಡ ಜಿಲ್ಲೆಯಲ್ಲಿ ಕಂಡು ಬರುವ ಭಿತ್ತಿ ಚಿತ್ರಗಳು ಕಳೆದ ಶತಮಾನದ ಮಧ್ಯಭಾಗದವು. ಸಾಂಪ್ರದಾಯಿಕ ಶೈಲಿಯ ಬಿಡಿಚಿತ್ರಗಳು ಜಿಲ್ಲೆಯಾದ್ಯಂತ ಮಠ, ಮಂದಿರಗಳಲ್ಲಿ ಕಾಣಸಿಗುತ್ತವೆ. ಚಿತ್ರಪಟಗಳನ್ನು ಇರಿಸಿಕೊಂಡು ಕಥೆ ಹೇಳುವ ಚಿತ್ರಕಥೆಗಳ ಪ್ರಸ್ತಾಪ ಕಾವ್ಯಗಳಲ್ಲಿದ್ದು ಧಾರವಾಡ ಭಾಗದಲ್ಲೂ ಈ ರೀತಿಯ 'ಚಿತ್ರಕಥೆ'ಗಳ ಪ್ರಸ್ತಾಪ ಎರಡು ಶತಮಾನಗಳ ಹಿಂದೆ ದಾಖಲೆಯಾಗಿದೆ. ಇ. ಮೂರ್ ಎಂಬಾತ ಧಾರವಾಡದಿಂದ (1791 ರಲ್ಲಿ) 'ಮಿಲಿಟರಿ ಆಪರೇಶನ್ಸ್ ಇನ್ ಬ್ರಿಟಿಷ್ ಕರ್ನಾಟಕ' ಎಂಬ ವಿಷಯ ಕುರಿತು ಬರೆದ ಪುಸ್ತಕದಲ್ಲಿ ಚಿತ್ರಪಟ ಸುರಳಿಗಳ ಬಗ್ಗೆ ಅವುಗಳನ್ನು ಇರಿಸಿ ಹಾಡುತ್ತಿದ್ದ ಬಗ್ಗೆ ಹೇಳಿದ್ದಾನೆ.

ಈ ಶತಮಾನದ ಎರಡನೇ ದಶಕದಿಂದ ಧಾರವಾಡದ ಕಲಾವಿದರು ಮುಂಬಯಿಯ ಜೆ.ಜೆ. ಕಲಾಶಾಲೆಯೊಂದಿಗೆ ನೇರ ಸಂಪರ್ಕವನ್ನು ಹೊಂದಿ ಜಿಲ್ಲೆಯ ಹಲವಾರು ಕಲಾವಿದರು ಅಲ್ಲಿಗೆ ಹೋಗಿ ಕಲಿತು ಬಂದರು. ಇನ್ನು ಕೆಲವು ನೆರೆಯ ಜಿಲ್ಲೆಯ ಕಲಾವಿದರು ಮುಂಬಯಿಯಲ್ಲಿ ಕಲಿತು ಧಾರವಾಡ ಜಿಲ್ಲೆಯ ಹಲವು ಸ್ಥಗಳಲ್ಲಿ ನೆಲೆಯನ್ನು ಕಂಡುಕೊಂಡರು. ಇವರಲ್ಲಿ ಪ್ರಮುಖರಾದವರು ಎ.ಎಸ್. ಕಮಡೊಳ್ಳಿ, ದಂಡಾವತಿಮಠ್, ಎಂ.ವಿ. ಮಿಣಜಗಿ, ಡಿ.ಜಿ. ಬಡಿಗೇರ, ಟಿ.ಪಿ. ಅಕ್ಕಿ, ಎಂ.ಎ. ಚಟ್ಟಿ, ಡಿ.ವಿ. ಹಾಲಭಾವಿ ಮುಂತಾದವರು.

ಧಾರವಾಡ ಜಿಲ್ಲೆಗೆ ಮುಂಬಯಿಯ ಕಲಾ ಶಿಕ್ಷಣ ಪದ್ಧತಿ ಬರುವ ಮೊದಲೇ ಜಿಲ್ಲೆಯಲ್ಲಿ ಕಲಾ ಶಿಕ್ಷಣ ಪ್ರಾಥಮಿಕ ಶಾಲೆಗಳಲ್ಲಿ ಇದ್ದು ಕಲಾ ಶಿಕ್ಷಕರೂ ಇದ್ದರು. ಬಂಡಾಚಾರ್ಯ ಅಪ್ಪಪುತ್ರೆ ಹಾಗೂ ಅವರ ಸಹೋದರ ಪ್ರಹ್ಲಾದಚಾರ್ಯರು 1920 ರಲ್ಲಿ ನ್ಯಾಷನಲ್ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದರು. ಪ್ರಹ್ಲಾದಾಚಾರ್ಯರು ಭುವನೇಶ್ವರಿ, ವಿದ್ಯಾರಣ್ಯ, ಗಾಂಧಿ, ಅರವಿಂದಘೋಷ್, ತಿಲಕ್ ಮುಂತಾದವರ ಭಾವಚಿತ್ರಗಳನ್ನು ವಿದ್ಯಾರಣ್ಯ ಪ್ರೌಢಶಾಲೆಗಾಗಿ 1921 ರಲ್ಲಿ ರಚಿಸಿಕೊಟ್ಟರು. ಗಳಗನಾಥರ ಅಳಿಯಂದಿರಾದ ಮಲ್ಲಾರಿ ದೀಕ್ಷಿತರು ಕಲಾವಿದರಿದ್ದು ಮಹಾಭಾರತದ ಆದಿಪರ್ವದ ಹಲವಾರು ಚಿತ್ರಗಳನ್ನು ಗಳಗನಾಥರ ಪುಸ್ತಕಕ್ಕೆ ರಚಿಸಿ ಕೊಟ್ಟುದಾಗಿ ತಿಳಿದು ಬರುತ್ತದೆ. ಎನ್.ಎಂ. ನೇರ್ಲೆಕರ, ಮಣಿಯಾರ, ಎನ್.ಎ. ಕುಲಕರ್ಣಿ ಅವರುಗಳೂ ಈ ಶತಮಾನದ ಆರಂಭದಲ್ಲಿ ಕಲಾಶಿಕ್ಷಕರಾಗಿದ್ದು ಇವರು ಕ್ರಮವಾಗಿ ದಂಡಾವತಿಮಠ್, ಡಿ.ಜಿ. ಬಡಿಗೇರ ಹಾಗೂ ಮಿಣಜಗಿ ಅವರುಗಳಿಗೆ ಪ್ರೋತ್ಸಾಹ ನೀಡಿ

ಮುಂಬೈಯಲ್ಲಿ ಹೆಚ್ಚಿನ ಅಭ್ಯಾಸಕ್ಕಾಗಿ ಹೋಗಲು ಪ್ರೇರೇಪಿಸಿದವರು. ನಿರಂಜನಪ್ಪ ಬಡಿಗೇರ ಹಾಗೂ ವಾಗಳೆ ಎಂಬುವವರೂ ಸಹ ಆಗ ಧಾರವಾಡದಲ್ಲಿ ಡ್ರಾಯಿಂಗ್ ಮಾಸ್ತರರಾಗಿದ್ದರು.

ಲಕ್ಷ್ಮೇಶ್ವರದ ಅಮೀನ ಸಾಹೇಬ ಕಮಡೊಳ್ಳಿ ಅವರು (1900-56) 1918 ರಲ್ಲಿ ಮುಂಬಯಿಯ ಜೆ.ಜೆ. ಶಾಲೆಯಲ್ಲಿ ಕಲಿತು ಅಲ್ಲಿಯೇ ಫೆಲೋ ಆಗಿದ್ದು ನಂತರ ಹುಬ್ಬಳ್ಳಿಯ ಆಂಗ್ಲೋ-ಉರ್ದು ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಗಂಗಾಧರಯ್ಯ ದಂಡಾವತಿಮಠ್ ಅವರು (1900-78) ಬೈಲಹೊಂಗಲದವರಾದರೂ ಮುಂಬಯಿಯಲ್ಲಿ ನೂತನ ಕಲಾ ಮಂದಿರದಿಂದ ನಿವೃತ್ತರಾಗಿ ಬಂದು ಧಾರವಾಡದಲ್ಲಿ ಬುದ್ಧಿಮಾಂದ್ಯ ಮಕ್ಕಳಿಗೆ ಕಲಾಶಿಕ್ಷಣಕ್ಕಾಗಿ ಶಾಲೆಯೊಂದನ್ನು ತೆರೆದರು. ಕೆಲ ಮಕ್ಕಳು ಮಾನಸಿಕವಾಗಿ ಚೇತನಗೊಳ್ಳುವಂತೆ ಮಾಡಿದರು. ಬೀಜಾಪುರದ ಎಂ.ವಿ. ಮಿಣಜಗಿ ಅವರು (1901-82) ಜೆ.ಜೆ.ಯಲ್ಲಿ ಮತ್ತು ಲಂಡನ್ಸ್ ರಾಯಲ್ ಕಾಲೇಜಿನಲ್ಲಿ ಕಲಿತು ಹುಬ್ಬಳ್ಳಿಯಲ್ಲಿ ಕಲಾ ಸಂಸ್ಥೆಯೊಂದನ್ನು ಆರಂಭಿಸಿದರು. 'ಕುಂಚಬ್ರಹ್ಮ' ಇತ್ಯಾದಿ ಗೌರವಗಳನ್ನು ಪಡೆದ ಅವರಿಗೆ ಗೌರವ ಡಾಕ್ಟರೇಟ್ ಸಹ ಬಂದಿತ್ತು. ಮಿಶ್ರಿಕೋಟೆಯಲ್ಲಿ ಜನಿಸಿದ ದೇವಪ್ಪ ಗೂಳಪ್ಪ ಬಡಿಗೇರ ಅವರು ಜೆ.ಜೆ. ಮತ್ತು ಲಂಡನ್ನಿನ ರಾಯಲ್ ಕಾಲೇಜಿನಲ್ಲಿ ಕಲಿತು, ಮುಂಬಯಿಯಲ್ಲಿ ನೂತನ ಕಲಾ ಮಂದಿರ ಸ್ಥಾಪಿಸಿ ಮುಂದೆ ಇಡೀ ಮುಂಬಯಿ ಪ್ರಾಂತ್ಯದ ಕಲಾಶಾಲೆಗಳ ಇನ್ಸ್‌ಪೆಕ್ಟರ್ ಆದರು. ಇವುಗಳು ಒಬ್ಬ ಭಾರತೀಯನಿಗೆ ಸಂದ ಮೊದಲ ಗೌರವವಾಗಿತ್ತು. (ಆವರೆಗೂ ಈ ಹುದ್ದೆಗಳಿಗೆ ಬ್ರಿಟಿಷರೇ ಇದ್ದರು) ಲಕ್ಷ್ಮೇಶ್ವರದ ಟಿ.ಪಿ. ಅಕ್ಕಿ (1905-94) ಅವರು ಜೆ.ಜೆ.ಯಲ್ಲಿ ಕಲಿತು 1947 ರಲ್ಲಿ ಗದಗದಲ್ಲಿ ಕಲಾ ಶಾಲೆ ಆರಂಭಿಸಿದರು. ಇವರ ಸಹೋದರ ಶಿವಾನಂದ ಅಕ್ಕಿ (1900-81) ಅವರೂ ಜೆ.ಜೆ.ಯಲ್ಲಿ ಅಭ್ಯಸಿಸಿದ್ದರು, ಡಿ.ವಿ. ಹಾಲಭಾವಿ (1907) ಅವರು ಜೆ.ಜೆ.ಯಲ್ಲಿ ಕಲಿತು ಧಾರವಾಡದಲ್ಲಿ 1935 ರಲ್ಲಿ ಪ್ರಥಮವಾಗಿ ಕಲಾಶಾಲೆಯನ್ನು ತೆರೆದರು. ಇವರ ಕೃತಿಗಳು ದೆಹಲಿಯ ಪಾರ್ಲಿಮೆಂಟ್ ಭವನದಲ್ಲೂ ಇವೆ. ಎಂ.ಎ. ಚೆಟ್ಟಿ (1907) ಅವರು ಜೆ.ಜೆ.ಯಲ್ಲಿ ಅಭ್ಯಸಿಸಿದ ನಂತರ ಗದಗ್ ಶಾಲೆಯಲ್ಲಿ ಪ್ರಾಧ್ಯಾಪಕರಾದರು. ಶಿವಶರಣರ ಹಾಗೂ ಐತಿಹಾಸಿಕ ವ್ಯಕ್ತಿಗಳ ಸಾವಿರಾರು ಚಿತ್ರ ರಚಿಸಿರುವರು.

ರಾಣೆಬೆನ್ನೂರಿನ ಎಫ್.ಬಿ. ಯಲವತ್ತಿ, ಶಿರಹಟ್ಟಿಯ ಸಿ.ಎನ್. ಪಾಟೀಲ್, ಲಕ್ಷ್ಮೇಶ್ವರದ ವಾಚೀದಮಠ್, ಹುಬ್ಬಳ್ಳಿಯ ಜಿ.ವೈ. ಹುಬ್ಳಿಕರ್ ಮತ್ತು ಎಚ್.ಎನ್. ಕುಲಕರ್ಣಿ, ಧಾರವಾಡದ ಬಾಲಚಂದ್ರ ಬಡಿಗೇರ, ಅದರಗುಂಚಿಯ ಎಂ.ಕೆ. ಸುಂಕದ್, ಸವಣೂರಿನ ಆರ್.ಬಿ. ಕುಂಬಾರ್ ಅವರುಗಳು ಜೆ.ಜೆ.ಯಲ್ಲಿಯೂ, ಮಿಶ್ರಿಕೋಟೆಯ ಎಸ್.ಜಿ.ಬಡಿಗೇರ ಮತ್ತು ಧಾರವಾಡದ ನಾರಾಯಣ ಸಂಗಮ ಅವರು ಶಾಂತಿನಿಕೇತನದಲ್ಲಿ ಚಿತ್ರಕಲೆಯನ್ನು, ಹುಬ್ಬಳ್ಳಿಯ ಕೃಷ್ಣಕ್ಷತ್ರಿ ಅವರು ಅಹಮದಾಬಾದಿನಲ್ಲಿ ಚಿತ್ರ ಮತ್ತು ಛಾಯಾಚಿತ್ರ ಕಲಿತು ಬಂದು ಜಿಲ್ಲೆಯಲ್ಲಿ ಸಕ್ರಿಯವಾಗಿ ಕಲೆಗೆ ತೊಡಗಿಸಿಕೊಂಡವರು. ಮುಂದಿನ ಪೀಳಿಗೆಯವರಲ್ಲಿ ಗದಗಿನ ಅಶೋಕ್ ಅಕ್ಕಿ, ವಸಂತ ಅಕ್ಕಿ, ಸಿ.ವೈ. ಕಾಮೋಜಿ, ಆರ್.ಎಸ್. ಮಡಿವಾಳರ, ಶಂಕರ ಪಾಟೀಲ, ಪ್ರೇಮಾವತಿ ಹಿರೇಮಠ್, ವಿಜಯಕುಮಾರ್, ವಿಶ್ವನಾಥ ಗುಗ್ಗರಿ, ರಾಮಚಂದ್ರ ಹೆಗ್ಗಡೆ, ಜಿ.ಎಂ. ಹುಂಚಿನಾಳ, ಜಿ.ಎನ್. ಜಡಗೌಡರ್, ಕೆ.ವಿ. ಕುಂದಗೋಳ, ಶೇಖರ ವೈ. ಕದಡಿ, ಹತ್ತಿಕೇರಿಯ ಎಂ.ಆರ್. ಬಾಳೇಕಾಯಿ, ಗುಡಿಗೇರಿಯ ವಿ.ಬಿ ಹಿರೇಗೌಡರ್, ಕಡಕೋಳದ ಸುಮಂತ್ ಅಕ್ಕಸಾಲಿ, ಹುಬ್ಬಳ್ಳಿಯ ಮಲ್ಲಿಕಾರ್ಜುನ ಚೆಟ್ಟಿ, ಎಸ್.ಜಿ. ಗೂಳಣ್ಣವರ, ಸುಭಾಷ್ ಕ್ಷತ್ರಿ, ಧಾರವಾಡದ ತಾರಾ ಪವಾರ್, ಮಕಾಳಿ ಕಲ್ಲಪ್ಪ, ಫಿರೋಜ್ ಮುಲ್ಲ, ವಿಜಯ ಕುರುವತ್ತಿ, ಜಿ.ಎಸ್. ಭೀಮಪ್ಪ, ಎಂ.ಡಿ. ಕಡಲಿಕೊಪ್ಪ, ಕೆ. ವ್ಯಾಸಮೂರ್ತಿ, ಭರತ್‌ಕುಮಾರ್, ರೇಣುಕಾ ಮಾರ್ಕಂಡೆ, ಮಧು ದೇಸಾಯಿ, ಗಾಯಿತ್ರಿ ಗೌಡರ್, ಬಸವನಾಳದ ಚೌಧರಿ ಮಲಕಾಜಪ್ಪ, ಹಾನಗಲ್ಲಿನ ಚಿದಾನಂದ ಗಣೇಶಗುಡಿ, ಟಿ.ವಿ. ಗಣೇಶಗುಡಿ, ಶಿಗ್ಗಾಂವಿಯ ಎಸ್.ಎಂ. ಮೋಹರೇಕರ, ರಾಣೆಬೆನ್ನೂರಿನ ಸರೋಜಿನಿ ಶಿಂದೆ, ತೊತ್ತೆನಹಳ್ಳಿಯ ಕೆ.ಟಿ. ಶಿವಾನಂದ, ಕೊಣ್ಣೂರಿನ ಬಿ.ಜಿ.ವಾರಿ, ಲಕ್ಷ್ಮೇಶ್ವರದ ಎನ್.ಸಿ. ಕಮತದ್, ಆರ್.ಬಿ. ಶಿವನಗೌಡ ಇತ್ಯಾದಿ ಅನೇಕರನ್ನು ಹೆಸರಿಸಬಹುದು.

ಜಿಲ್ಲೆಯಲ್ಲಿ ಕಲಾಶಾಲೆಗಳು ಬೆಳೆದ ಮೇಲೆ ಅಕ್ಕಪಕ್ಕದ ಜಿಲ್ಲೆಗಳಿಂದಲೂ ಕಲಾವಿದರು ಬಂದರು. ಅವರುಗಳಲ್ಲಿ ಮುಖ್ಯವಾದವರು ಬಾದಾಮಿಯ ಆರ್.ಎಂ. ಹಡಪದ್, ಬಾಗಲಕೋಟೆಯ ಸೋಮಶೇಖರ ಎಂ.ಸಾಲಿ, ಬೈಲ ಹೊಂಗಲದ ಬಸವರಾಜ ಹಳಿಜೋಳ, ಹುನಗುಂದದ ವಿ.ಟಿ. ಕಾಳೆ ಅವರುಗಳಲ್ಲದೆ ಪಾಟೀಲ ಕಲನಗೌಡ, ಮುರಗೋಡು ಸಹೋದರರು (ಈಶ್ವರ, ಶಾಂತವೀರಪ್ಪ, ಭೀಮರಾಯಪ್ಪ) ಎಂ.ಬಿ. ಪಾಟೀಲ್, ವೈ.ಎಚ್. ಸೂಗೂರ್, ಎಸ್.ಕೆ. ಹೂಗಾರ, ಬಿ.ಕೆ. ಹಿರೇಮಠ್, ಎಸ್.ಜಿ. ಮುತ್ತೇಕರ ಮುಂತಾದವರು. ಇವರು ಜಿಲ್ಲೆಯಲ್ಲಿ ಕಲಾಭ್ಯಾಸ ಮಾಡಿ, ಇಲ್ಲಿಯ ಶಾಲೆಗಳಲ್ಲಿ ಪ್ರಾಧ್ಯಾಪಕರಾಗಿ ಸಂಘಟನೆಗಳನ್ನು ಮಾಡಿ ಜಿಲ್ಲೆಯಲ್ಲಿ ಕಲಾ ಪ್ರಗತಿಗೆ ಕಾರಣರಾದವರು. ಇವರಲ್ಲಿ ಕೆಲವರು ಜಿಲ್ಲೆಯಲ್ಲಿಯೇ ಉಳಿದುಕೊಂಡರು.

ಕಲಾವಿದರಲ್ಲಿ ಕೆಲವರು ಕಲಾಶಾಲೆಗಳಲ್ಲಿ ಪ್ರಾಧ್ಯಾಪಕ, ಉಪನ್ಯಾಸಕರುಗಳಾಗಿದ್ದಾರೆ. ಇವರುಗಳಲ್ಲಿ ಮುಖ್ಯವಾಗಿ ಪಿ.ಎಸ್. ಹಿರೇಮಠ, ಸುರೇಶ್ ಹಾಲಭಾವಿ, ಜೆ.ವಿ. ಕಮ್ಮಾರ, ವಿ.ಆರ್. ಸುತಾರ್ ಅವರುಗಳು ಪ್ರಾಧ್ಯಾಪಕರಾಗಿಯೂ, ಎಂ.ಜೆ. ಬಂಗ್ಲೆವಾಲೆ, ವಿ.ಎಂ. ಕಾನಪೇಟೆ, ಸಿ.ಡಿ. ಜೆಟ್ಟೆಣ್ಣವರ, ಬಿ.ವಿ. ನಾಗನಗೌಡರ, ಟಿ.ಜಿ. ಹನ್ನೆರಡು ಮಠ, ಎಫ್.ಎಂ. ಕಾಂಬಳೆ, ಎಂ.ಎಸ್. ಹೊನ್ನಳ್ಳಿಮಠ, ಸಿ.ಜಿ. ಕಮ್ಮಾರ, ಲತಾರಾಣಿ ಮಲ್ಹಾರ, ಆರ್.ಎಫ್. ಹಿರೇಗೌಡರ್, ಕೆ. ಬನಶಂಕರಿ, ಎಸ್.ವಿ. ಗುಂಜಾಳೆ, ಸಿ.ವಿ. ಬಡಿಗೇರ, ಬಿ.ಎಂ. ಸುಂಕದ, ಚಂದ್ರಶೇಖರ, ಚಿಕ್ಕಪ್ಪಳ್ಳಿ, ಪಿ. ಯಾದವ, ಆರ್.ವಿ. ಹೆಗಡೆ, ಕೆ.ವಿ. ಕುಂದಗೋಳ, ವಿಷ್ಣು. ಬಡಿಗೇರ, ಆರ್.ಡಿ. ಕಡ್ಲಿಕೊಪ್ಪ, ವಿಲ್‌ಸನ್ ಸೋನಾಗಾರ, ಎನ್.ಕೆ. ಹಾಲಕೇರಿ, ಸಿ.ಜಿ. ಪಾಟೀಲ್, ಬಿ.ಎಂ. ಪಾಟೀಲ್, ಎಸ್.ಎಂ. ಲೋಹಾರ್, ಎನ್.ಎನ್. ಚಿನ್ನಣ್ಣವರ್, ಇ.ಎ. ಮದನಬಾವಿ ಸಿ.ಎ. ಕೋಲಕಾರ, ಡಿ.ಎಂ. ಬಡಿಗೇರ, ಎನ್.ಎಂ. ದಾಟ್ನಾಳ, ವಿ.ಜಿ. ಪತ್ತಾರ, ಕೆಂಚನಗೌಡ, ಎನ್.ಎಸ್. ನಾಯ್ಕ, ಯು.ಎಸ್. ಹಿರೇಮಠ, ಜೆ.ಸಿ. ಕೋಟೂರ, ಎಂ.ಡಿ. ಕಠಾರೆ, ಎನ್.ವಿ. ಸೋಮನಗೌಡರ, ಬಿ.ಪಿ. ಬಡಿಗೇರ, ಎಂ.ಪಿ. ಕಿತ್ತೂರ್, ಎಸ್.ಎಸ್. ಮಲ್ಲಾಪುರ್, ಎಸ್.ಎ. ಜಾಧವ್, ಆರ್.ಎಂ. ಬಾಳೆಕಾಯಿ, ಬಿ.ಎಲ್. ಲಮಾಣಿ, ಜಯದೇವ ಗಂಜೀಹಾಳ, ಎ.ಆರ್. ಚಂದ್ರೋದಯ ಸಿಂಧ್ಯಾ, ಬಿ. ಮಾರುತಿ, ಕೀರ್ತಿರಾಜ್ ಮುಂತಾದ ಅನೇಕ ಉಪನ್ಯಾಸಕರನ್ನು ಹೆಸರಿಸಬಹುದು. ಚಿತ್ರಕಲೆಯ ಅಭಿವ್ಯಕ್ತಿಯಲ್ಲಿ ಕೆಲವರು ಹೊಸ ಮಾಧ್ಯಮಗಳನ್ನು ಹುಡುಕುವುದುಂಟು. ಗದಗಿನ ಅನಂತನಾಯಕ ಬಂಡೆಪ್ಪನಾಯಕ ಭೋಜಪ್ಪನವರ ಅವರು ಕಾಗದದ ಮೇಲೆ ಉಗುರಿನಿಂದ ಚಿತ್ರ ಬಿಡಿಸುತ್ತಿದ್ದರು. ಈಗ ರೋಣದ ನಾಗಲಿಂಗೇಶ್ವರ ಕೃಷ್ಣಪ್ಪ ಅವರು ಉಗುರು ಹಾಗೂ ದಾರಗಳಿಂದ ಚಿತ್ರ ರಚಿಸುತ್ತಾರೆ. ಹುಬ್ಬಳ್ಳಿಯ ಸಿದ್ದಣ್ಣ ಸವದತ್ತಿ ಅವರು ಟೈಪರೈಟರ್‌ನಲ್ಲಿ, ಟಿ.ವಿ. ಹತ್ತಿ (ಶಿಗ್ಗಾಂವಿ) ಅವರು ರಂಗೋಲೆ ಪುಡಿಯಲ್ಲಿ, ಬಸವರಾಜ ಬಡಿಗೇರ ಅವರು ಕಾಳಿನಲ್ಲಿ ಚಿತ್ರಗಳನ್ನು ಬಿಡಿಸುತ್ತಾರೆ. ಕಲ್ಲಿಗನೂರ ಪುಂಡಲೀಕ ಅವರು ವ್ಯಂಗ್ಯಚಿತ್ರಕಾರರು. ಶಶಿಸಾಲಿ ಅವರು ಚಿತ್ರಕಲೆಯಲ್ಲದೆ ಛಾಯಾಚಿತ್ರದಲ್ಲೂ ಪರಿಣತರಿದ್ದು ವಿದೇಶಗಳಲ್ಲೂ ಕೃತಿಗಳನ್ನೂ ಪ್ರದರ್ಶಿಸಿದ್ದಾರೆ.

### ಕಲಾಶಾಲೆಗಳು

ಶಿವಾನಂದ ಪಿ. ಅಕ್ಕಿ ಅವರು ಗಾಂಧರ್ವ ಮಹಾವಿದ್ಯಾಲಯವನ್ನು 1924 ರಲ್ಲಿಯೂ, ಡಿ.ಜಿ. ಬಡಿಗೇರ ಅವರು ನೂತನ ಕಲಾಮಂದಿರವನ್ನು 1932 ರಲ್ಲಿಯೂ ಮುಂಬಯಿಯಲ್ಲಿ ಸ್ಥಾಪಿಸಿದ್ದು ಜಿಲ್ಲೆಯ ಹಲವಾರು ಕಲಾವಿದರು ಅಲ್ಲಿ ಅಭ್ಯಸಿಸಿದರು. ಧಾರವಾಡದಲ್ಲಿಯೇ 1935 ರಲ್ಲಿ ಡಿ.ವಿ. ಹಾಲಭಾವಿ ಅವರು ಕಲಾಶಾಲೆ ಆರಂಭಿಸಿದ್ದು ಜಿಲ್ಲೆಯ ಕಲಾವಿದರು ಇದರ ಮೂಲಕ ಜೆ.ಜೆ.ಕಲಾಶಾಲೆಯಲ್ಲಿ ಅಭ್ಯಾಸ ಮಾಡಲು ಅನುಕೂಲವಾಯಿತು. ಈ ದೃಷ್ಟಿಯಿಂದ ಇದು ಕರ್ನಾಟಕದ ಮೊದಲ ಕಲಾಶಾಲೆ, ನಂತರ ಟಿ.ಪಿ. ಅಕ್ಕಿ ಅವರು 1947 ರಲ್ಲಿ ಗದಗದಲ್ಲಿ ವಿಜಯ ಕಲಾಮಂದಿರವನ್ನೂ, ಎಂ.ವಿ. ಮಿಣಜಗಿ ಅವರು 1955 ರಲ್ಲಿ ಹುಬ್ಬಳ್ಳಿಯಲ್ಲಿ 'ಕರ್ನಾಟಕ ಆರ್ಟ್ ಎಜುಕೇಷನ್' ಸಂಸ್ಥೆಯನ್ನು ತೆರೆದರು. ಅದು ಮುಂದೆ 1966 ರಲ್ಲಿ ವಿಜಯ ಮಹಾಂತೇಶ ಕಲಾ ಮಹಾವಿದ್ಯಾಲಯ ಎಂದು ಪುನರ್ ನಾಮಕರಣಗೊಂಡಿತು. ಇವರೇ ಬೆಂಗಳೂರಿನಲ್ಲಿ 1961 ರಲ್ಲಿ ಡ್ರಾಯಿಂಗ್ ಟೀಚರ್ಸ್ ಟ್ರೈನಿಂಗ್ ಇನ್ಸ್‌ಟ್ಯೂಟ್ ತೆರೆದು ಅಲ್ಲಿಂದ ಆರ್.ಎಂ. ಹಡಪದ್ ಮತ್ತು ಎಂ.ಕೆ. ಸುಂಕದ್ ಅವರುಗಳು ಪ್ರಾಧ್ಯಾಪಕರಾಗಿ ಬಂದರು. ಹುಬ್ಬಳ್ಳಿಯಲ್ಲಿ ಎನ್.ಜಿ. ಬಡಿಗೇರ ಅವರು 1970 ರಲ್ಲಿ ಆರಂಭಿಸಿದ ಭಾರತೀಯ ಕಲಾ ಕೇಂದ್ರ, ಗದಗ ಬೆಟಗೇರಿಯಲ್ಲಿ 1982 ರಲ್ಲಿ ಎಂ.ಆರ್. ಬಾಗವಾನ್ ಅವರ ಜೆ.ಎನ್. ಕಲಾಶಾಲೆ, ಹಾವೇರಿಯಲ್ಲಿ 1991 ರಲ್ಲಿ ಆರಂಭವಾದ ಕೆ.ಎನ್. ನೆಗಳೂರುಮಠ ಅವರ ಕುಮಾರೇಶ್ವರ ಲಲಿತಕಲಾ ಮಹಾವಿದ್ಯಾಲಯ, ಧಾರವಾಡದಲ್ಲಿ 1993 ರಲ್ಲಿ ವಿ.ಆರ್. ಸುತಾರ್ ಅವರ ಗಂಗಾಂಬಿಕಾ ಸ್ಮಾರಕ ಕಲಾಶಾಲೆ, ಗದಗ ಬೆಟಗೇರಿಯ ನೀಲಕಂಠ ಮಠದಲ್ಲಿರುವ ಕಲಾಶಾಲೆ, ಇತ್ಯಾದಿಗಳಲ್ಲದೆ ರೋಣ, ಹಿರೇಕೆರೂರು, ರಟ್ಟಿಹಳ್ಳಿ (ಹಿರೇಕೆರೂರು ತಾ॥) ಮುಂಡರಗಿ, ಲಕ್ಷ್ಮೇಶ್ವರಗಳಲ್ಲಿ ಈಚೆಗೆ ಕಲಾಶಾಲೆಗಳು ಆರಂಭವಾಗಿವೆ. ಧಾರವಾಡದ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯ ಅಂಗವಾಗಿ ಪ್ರತ್ಯೇಕವಾದ ಚಿತ್ರಕಲಾಶಾಲೆ 1974 ರಲ್ಲಿ ಆರಂಭವಾಗಿದ್ದು ರಾಜ್ಯ ಸರ್ಕಾರ ನಡೆಸುತ್ತಿರುವ ಏಕೈಕ ಕಲಾಶಾಲೆ ಇದಾಗಿದೆ. ಈ ಎಲ್ಲಾ ಕಲಾಶಾಲೆಗಳೂ ಪ್ರೌಢಶಿಕ್ಷಣ ಮಂಡಳಿ ನೀಡುವ ಐದು ವರ್ಷ ಅವಧಿಯ 'ಕಲಾ ನಿಪುಣ' ('ಡಿಪ್ಲೊಮಾ') ಮತ್ತು ಮೂರು ವರ್ಷ ಅವಧಿಯ ಕಲಾ ಶಿಕ್ಷಣ (ಡಿ.ಟಿ.ಸಿ.) ಪದವಿಯನ್ನು ನೀಡುತ್ತದೆ. ಕೆಲವು ಕಲಾಶಾಲೆಯಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಕಲಾಶಿಕ್ಷಣ (ಆರ್ಟ್‌ಮಾಸ್ಟರ್) ಪದವಿ ಸಹ ಇದೆ.

ಧಾರವಾಡ ವಿಶ್ವವಿದ್ಯಾಲಯದವರು ಗದಗಿನ ವಿಜಯ ಕಲಾ ಮಂದಿರಕ್ಕೆ 1985 ರಲ್ಲೂ ಧಾರವಾಡದ ಸೃಜನ ಕಲಾ ನಿಕೇತನಕ್ಕೆ 1991 ರಲ್ಲೂ ಮಾನ್ಯತೆ ನೀಡಿದ್ದು ಚಿತ್ರ, ಶಿಲ್ಪ, ವಾಣಿಜ್ಯ ಕಲೆಗಳು, ಕಲಾ ಇತಿಹಾಸ, ಗ್ರಾಫಿಕ್ ಮುದ್ರಣ ಕಲೆಗಳು ಪಠ್ಯ ವಿಷಯವಾಗಿವೆ. ಇಲ್ಲಿ ಐದು ವರ್ಷಗಳ ಸ್ನಾತಕ ಪದವಿ (ಬಿ.ಎಫ್.ಎ.) ನೀಡಲಾಗುತ್ತದೆ. ಗುಲ್ಬರ್ಗದ ಕಲಾಶಾಲೆಯಲ್ಲಿ ಎರಡು ವರ್ಷದ ಸ್ನಾತಕೋತ್ತರ ಪದವಿ (ಎಂ.ಎಫ್.ಎ.)ಗೆ ಅವಕಾಶವಿದ್ದು ಜಿಲ್ಲೆಯ ಕೆಲವರು ಅದರ ಪ್ರಯೋಜನವನ್ನು ಪಡೆದಿದ್ದಾರೆ.

ಇದಲ್ಲದೆ ದಂಡಾವತಿಮಠ್ ಅವರು ಧಾರವಾಡದಲ್ಲಿ 1966 ರಲ್ಲಿ ಮಂದಬುದ್ಧಿಯ ಮಕ್ಕಳಿಗಾಗಿ ಕಲಾಶಿಕ್ಷಣ ಶಾಲೆಯೊಂದನ್ನು ತೆರೆದಿದ್ದರು. ಹುಬ್ಬಳ್ಳಿಯ ಫೈನ್ ಆರ್ಟ್ ಸೊಸೈಟಿ ಮತ್ತು ಧಾರವಾಡದ ರೈನ್ ಬೋ ಕಲಾವೃಂದದ ವತಿಯಿಂದಲೂ ಕಲಾ ಶಾಲೆಗಳು ನಡೆಯುತ್ತಿದ್ದವು. ಕಲಾ ಶಿಕ್ಷಣ ಕ್ಷೇತ್ರದಲ್ಲಿ ಧಾರವಾಡದ ಕೆಲವು ಕಲಾವಿದರು ಸೇವೆ ಸಲ್ಲಿಸಿದ್ದಾರೆ. ಡಿ.ಜಿ. ಬಡಿಗೇರ ಅವರು ಹಳೆಯ ಮುಂಬಯಿ ಪ್ರಾಂತದ ಎಲ್ಲಾ ಕಲಾಶಾಲೆಗಳ ಇನ್ಸ್‌ಪೆಕ್ಟರ್ ಆಗಿದ್ದರು. ಧಾರವಾಡ ಜಿಲ್ಲೆಯೂ ಮುಂಬಯಿ ಪ್ರಾಂತದಲ್ಲಿದ್ದುದರಿಂದ ಜಿಲ್ಲೆಯ ಕಲಾ ಶಾಲೆಗಳಿಗೆ ಕಲಾ ವಿದ್ಯಾರ್ಥಿಗಳಿಗೆ ಹೆಚ್ಚಿನ ನೆರವು ನೀಡಲು ಅವರಿಗೆ ಸಾಧ್ಯವಾಯಿತು. ಎಸ್.ಜಿ. ಗೂಳಣ್ಣವರ್ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ಕಲಾ ವಿಭಾಗದ ಇನ್ಸ್‌ಪೆಕ್ಟರ್ ಆಗಿದ್ದರು. ಎಸ್.ಸಿ. ಕಮತದ್ ಅವರು ಡಿ.ಎಸ್.ಇ.ಆರ್.ಟಿ.ಯಲ್ಲಿ ಕಲಾವಿದರಾಗಿದ್ದಲ್ಲದೆ ಶಿಕ್ಷಣ ಇಲಾಖೆ ನಡೆಸುವ ಕಲಾ ಪರೀಕ್ಷೆಗಳ ಮೇಲ್ವಿಚಾರಕರೂ ಆಗಿದ್ದಾರೆ. ತಾರಾ ಪವಾರ್ ಅವರು ಕೆಲಕಾಲ ಚಿತ್ರಕಲಾ ಶಿಕ್ಷಣವನ್ನು ಆಕಾಶವಾಣಿಯ ಮೂಲಕ ಕಲಿಸುತ್ತಿದ್ದರು.

ಟಿ.ಪಿ. ಅಕ್ಕಿಯವರು ಮುಂಬಯಿ ಹಾಗೂ ಕರ್ನಾಟಕದ ಚಿತ್ರಕಲಾ ಸಲಹಾ ಸಮಿತಿಗೆ ಸದಸ್ಯರಾಗಿ ಕಲಾ ಪರೀಕ್ಷೆಗಳ ಪರೀಕ್ಷಕರು, ನಿಯಂತ್ರಕರು ಇತ್ಯಾದಿಗಳಾಗಿದ್ದು ಶಿಕ್ಷಣ ಸುಧಾರಣೆಗೆ ಶ್ರಮಿಸಿದ್ದರು. ದಂಡಾವತಿ ಮಠ್ ಅವರು ಬನಾರಸ್ ಹಿಂದು ವಿಶ್ವವಿದ್ಯಾಲಯದ ಲಲಿತ ಕಲಾ ಕಾಲೇಜಿನ ಸದಸ್ಯರಾಗಿದ್ದರು.

**ಕಲಾ ಸಂಸ್ಥೆಗಳು :** ಡಿ.ಜಿ. ಬಡಿಗೇರ ಅವರು 1933 ರಲ್ಲಿಯೇ 'ಕರ್ನಾಟಕ ಆರ್ಟ್ ಸೊಸೈಟಿ'ಯನ್ನು ಆರಂಭಿಸಿದ್ದು 1940 ರ ವೇಳೆಗೆ ಬೆಳಗಾವಿ, ಕಲ್ಕತ್ತ, ದೆಹಲಿ ಹಾಗೂ ಮುಂಬಯಿಗಳಲ್ಲಿ ಮೂರು ಪ್ರದರ್ಶನಗಳನ್ನು ನೀಡಿದ್ದರು. ಸಾಹಿತಿಗಳಿಂದ ಕಲೆಯ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಧಾರವಾಡದಲ್ಲಿ ಡಿ.ವಿ. ಹಾಲಭಾವಿ ಅವರು ಪೋಸ್ಟ್ ಡಿಪ್ಲೊಮಾ ಆರ್ಟ್ ಕ್ಲಬ್ ಆರಂಭಿಸಿದ್ದರು. ಹುಬ್ಬಳ್ಳಿಯಲ್ಲಿ ಎಂ.ಬಿ. ಪಾಟೀಲ್, ಕೃಷ್ಣಕ್ಷತ್ರಿ ಮತ್ತು ಕೆ.ಆರ್. ಸುಬ್ಬಣ್ಣ ಅವರುಗಳು ಸೇರಿ 'ತ್ರಿವಳಿ'ಗಳು ಎಂಬ ಹೆಸರಿನ ಸಂಘಟನೆಯಿಂದ ಹಲವಾರು 'ರಸ್ತೆ ಬದಿಯ ಕಲಾ ಪ್ರದರ್ಶನ'ಗಳನ್ನು ಮಾಡಿದರು. ದಾರವಾಡದಲ್ಲಿ 1982 ರಲ್ಲಿ ಎಂ.ಆರ್. ಬಾಳೀಕಾಯಿ, ಭಾರತ್‌ಕುಮಾರ್, ರೇಣುಕಾಮಾರ್ಕಂಡೆ ಮುಂತಾದವರ 'ರೈನ್ ಬೋ' ಕಲಾತಂಡ, ಹುಬ್ಬಳ್ಳಿಯಲ್ಲಿ 1987 ರಲ್ಲಿ ಎಂ.ಸಿ. ಚಟ್ಟಿ, ಎಂ.ಜೆ. ಬಂಗ್ಲೆವಾಲೆ, ಗಾಯಿತ್ರಿ ಗೌಡರ್ ಅವರುಗಳ 'ಜಾಗೃತಿ ಕಲಾವಿದರು' ಕಲಾತಂಡ ಹಾಗೂ ಅಲ್ಲಿಯೇ 1988 ರಲ್ಲಿ ಕುಂದಣಗಾರ್, ಎನ್.ಸಿ. ದೇಸಾಯಿ, ಚಿಕ್ಕಣ್ಣವರ್ ಅವರುಗಳ 'ಸೃಜನಶೀಲರು' ಕಲಾತಂಡ, ಇತ್ಯಾದಿ ಹಲವಾರು ಕಲಾತಂಡಗಳನ್ನು ಉದಾಹರಿಸಬಹುದು. ಇವರುಗಳು ಗುಂಪು ಪ್ರದರ್ಶನ, ಹಾಗೂ ಇನ್ನಿತರ ಕಲಾ ಚಟುವಟಿಕೆಗಳನ್ನು ಆಗಾಗ್ಗೆ ನಡೆಸುತ್ತಾರೆ. ಧಾರವಾಡದಲ್ಲಿ 1992 ರಲ್ಲಿ ಆರಂಭವಾದ 'ಧಾರವಾಡ ನಗರ ಚಿತ್ರಕಲಾವಿದರ' ತಂಡದಲ್ಲಿ ಸುರೇಶ್ ಹಾಲಭಾವಿ, ಎಸ್.ಸಿ. ಪಾಟೀಲ ಮುಂತಾದವರಿದ್ದು ಪ್ರತೀ ವರ್ಷ 'ವರ್ಣ ಮೇಳ' ಆಚರಿಸುತ್ತಿದ್ದು ಕಲಾಶಿಬಿರ, ಉಪನ್ಯಾಸ ಇತ್ಯಾದಿಗಳನ್ನು ಏರ್ಪಡಿಸುತ್ತಿದೆ. ಗದಗ್‌ನಲ್ಲಿ 93 ರಲ್ಲಿ ಆರಂಭವಾದ 'ಲಯ ಕಲಾ ಮನೆ' ಎಂಬ ಕಲಾವಿದರ ಸಾಂಸ್ಕೃತಿಕ ಸಂಘಟನೆ ಕಳೆದ ವರ್ಷ ಐತಿಹಾಸಿಕ ಪರಂಪರೆ ಉಳಿಸುವ ಸಲುವಾಗಿ ತಿರುಗಾಟದ ಪ್ರದರ್ಶನ ಏರ್ಪಡಿಸಿತ್ತು. ಇವಲ್ಲದೆ 'ಕಲಾರಶ್ಮಿ', ಕಲಾಸಂಸ್ಥೆ, ಕರ್ನಾಟಕ ಚಿತ್ರಕಲಾವಿದರ ಸಂಘ, ರಾಜ್ಯ ಚಿತ್ರಕಲಾ ಶಿಕ್ಷಕರ ಹಾಗೂ ಚಿತ್ರಗಾರರ ಸಂಘ, ಕರ್ನಾಟಕ ಚಿತ್ರಕಲಾ ಶಾಲೆಗಳ ಸಿಬ್ಬಂದಿಗಳ ಸಂಘ, ಚಿತ್ರಕಲಾವಿದರ ಕಲಾಬಳಗ, ಬ್ಲೂಗ್ರೂಪ್-ಕಲಾವಿದರು, ಕಲಾಮಂಡಲ, ರಂಗತರಂಗ, 'ಅಬಾಂಟೆ ಚೀಸು' ಇತ್ಯಾದಿ ಹಲವಾರು ಕಲಾ ತಂಡಗಳು ಹುಬ್ಬಳ್ಳಿ ಧಾರವಾಡಗಳಲ್ಲಿದ್ದು, ಕೆಲವು ಕ್ರಿಯಾಶೀಲವಾಗಿವೆ. ಟಿ.ಪಿ. ಅಕ್ಕಿ ಅವರು ಕರ್ನಾಟಕ ಆರ್ಟ್ ಸೊಸೈಟಿ, ರಾಜ್ಯ ಕಲಾ ಶಿಕ್ಷಕರ ಸಂಘ, ರಾಜ್ಯ ಕಲಾ ಶಾಲೆಗಳ ಫೆಡರೇಷನ್ ಇತ್ಯಾದಿ ಹಲವಾರು ಉನ್ನತಮಟ್ಟದ ಸಂಘ ಸಂಸ್ಥೆಗಳಿಗೆ ವಿವಿಧ ಅವಧಿಗಳಲ್ಲಿ ಅಧ್ಯಕ್ಷ, ಕಾರ್ಯದರ್ಶಿ ಇತ್ಯಾದಿ ಹುದ್ದೆಗಳಲ್ಲಿದ್ದವರು. ಧಾರವಾಡದಲ್ಲಿ 91 ರಲ್ಲಿ ಜಿ.ಎಸ್. ಮಠಪತಿ ಅವರ ಕಾರ್ಯದರ್ಶಿತ್ವದಲ್ಲಿ ಕರ್ನಾಟಕ ಚಿತ್ರಕಲಾ ನಿರುದ್ಯೋಗಿ ಶಿಕ್ಷಕರ ಸಮಿತಿಯೊಂದು ರಚನೆಯಾಗಿ ನ್ಯಾಯಯುತ ಬೇಡಿಕೆಗೆ ಹೋರಾಟ ನಡೆಸಿದೆ.

**ಅಕಾಡೆಮಿ :** ರಾಜ್ಯ ಹಾಗೂ ಕೇಂದ್ರ ಅಕಾಡೆಮಿಗಳು ಜಿಲ್ಲೆಯ ಹಲವಾರು ಕಲಾವಿದರನ್ನು ಗುರುತಿಸಿ ಗೌರವಿಸಿದೆ. ರಾಜ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಎಂ.ವಿ. ಮಿಣಜಗಿ (1965), ಎಂ.ಎ. ಚೆಟ್ಟಿ (66), ಎಫ್.ಬಿ. ಯೆಲವತ್ತಿ ಮತ್ತು ಡಿ.ವಿ. ಹಾಲಭಾವಿ (67), ಜಿ.ಎಸ್. ದಂಡಾವತಿಮಠ್ (68), ಟಿ.ಪಿ. ಅಕ್ಕಿ (69), ಸಿ.ಎನ್. ಪಾಟೀಲ (81), ಎಸ್. ಶೆಟ್ಟರ್ ಮತ್ತು ಆರ್.ಎಂ. ಹಡಪದ್ (82), ಕೃಷ್ಣಶಾಸ್ತ್ರಿ ಮತ್ತು ವಿ.ಟಿ. ಕಾಳೆ (85), ಎಂ.ಬಿ. ಪಾಟೀಲ್ (86), ಆರ್.ಬಿ. ಕುಂಬಾರ (88), ಸೋಮಶೇಖರ್ ಎಂ. ಸಾಲಿ (90), ಬಸವರಾಜ ಹಳಿಜೋಳ ಮತ್ತು ವಿ.ಬಿ. ಹಿರೇಗೌಡರ್ (91), ಜಿ.ವ್ಹೈ. ಹುಬ್ಳೀಕರ್ (92) ಅವರುಗಳಿಗೆ ದೊರೆತಿವೆ.

ವಿಶಾಲ ಕರ್ನಾಟಕವಾದ ಮೇಲೆ ಏಕರೂಪ ಅಕಾಡೆಮಿ ಇದ್ದಾಗ ಟಿ.ಪಿ. ಅಕ್ಕಿ, ಎಂ.ವಿ. ಮಿಣಜಗಿ, ಡಿ.ವಿ. ಹಾಲಭಾವಿ ಅವರುಗಳು ಸದಸ್ಯರಾಗಿದ್ದರು. 1977 ರಲ್ಲಿ ಪುನರ್‌ರಚನೆಗೊಂಡ ನಂತರ ಲಲಿತಕಲಾ ಅಕಾಡೆಮಿ ಎಂದು ನಾಮಕರಣಗೊಂಡು ಟಿ.ಪಿ. ಅಕ್ಕಿ (81) ಸೋಮಶೇಖರ ಸಾಲಿ (84) ಆರ್.ಎಂ. ಹಡಪದ್ (87) ರಲ್ಲಿ ಅಧ್ಯಕ್ಷ ಪದವಿಯನ್ನು ಪಡೆದರು. ವಿವಿಧ ಕಾಲದಲ್ಲಿ ವಿ.ಬಿ. ಹಿರೇಗೌಡರ್, ಎಸ್. ಶೆಟ್ಟರ್, ಜಿ.ವ್ಹೈ. ಹುಬ್ಳಿಕರ್, ಕಲಬುರ್ಗಿ, ಎಂ.ಸಿ. ಚೆಟ್ಟಿ, ವಿ.ಟಿ. ಕಾಳೆ, ಟಿ.ಕೆ. ರಾವ್, ಶೇಖರ್ ವ್ಹೈ. ಕದಡಿ, ಬಿ.ಕೆ. ಹಿರೇಮಠ್, ಎಸ್.ಜಿ. ಗೂಳಣ್ಣವರ್ ಅವರುಗಳು ಸದಸ್ಯರುಗಳಾಗಿ ಸೇವೆ ಸಲ್ಲಿಸಿರುವರು.

ರಾಜ್ಯ ಅಕಾಡೆಮಿಯವರು ಡಿ.ವಿ. ಹಾಲಭಾವಿ ಅವರ ಬಗ್ಗೆ ಸಾಕ್ಷ್ಯಚಿತ್ರ ಹಾಗೂ ಅಮಿನ್ನಭಾವಿ ಮತ್ತು ನರಗುಂದದ ಭಿತ್ತಿ ಚಿತ್ರಗಳ ನಕಲನ್ನು ಮಾಡಿಸಿದೆ. ನರಗುಂದದ ಭಿತ್ತಿ ಚಿತ್ರಗಳನ್ನು ಎಸ್.ಕೆ. ಹೂಗಾರ್, ಸಿ.ಎನ್. ಪಾಟೀಲ್ ಮುಂತಾದವರು ನಕಲು ಮಾಡಿರುತ್ತಾರೆ. ಧಾರವಾಡದಲ್ಲಿ 81 ರಲ್ಲಿ ರಾಷ್ಟ್ರೀಯಮಟ್ಟದ ಕಲಾಶಿಬಿರ ಹಾಗೂ 94 ರಲ್ಲಿ ರಾಜ್ಯಮಟ್ಟದ ಗ್ರಾಫಿಕ್ ಶಿಬಿರ ಏರ್ಪಡಿಸಲಾಗಿತ್ತು. ಗದಗ್ ಕಲಾ ಶಾಲೆ 91 ರಲ್ಲಿ ಏರ್ಪಡಿಸಿದ್ದ ಅಖಿಲಭಾರತ ಕಲಾ ಪ್ರದರ್ಶನ, 94 ರಲ್ಲಿಯ ರಾಷ್ಟ್ರೀಯ ಕಲಾಮೇಳಗಳಿಗೆ, ಧಾರವಾಡದ ವರ್ಣಮೇಳ, ಹುಬ್ಬಳ್ಳಿಯಲ್ಲಿ 94 ರಲ್ಲಿ ನಡೆದ ರಾಜ್ಯಮಟ್ಟದ ಜಲವರ್ಣ ಕಲೆಗಳ ಪ್ರದರ್ಶನ, ಮಹಿಳಾ ಕಲಾವಿದರ ಕಲಾಶಿಬಿರ ಇತ್ಯಾದಿಗಳಿಗೆ ಅಕಾಡೆಮಿಯಿಂದ ಉದಾರವಾಗಿ ಅನುದಾನ ನೀಡಲಾಗಿತ್ತು.

ಕೇಂದ್ರ ಲಲಿತಕಲಾ ಅಕಾಡಮಿಯ ಮದ್ರಾಸ್ ವಲಯ ಕಚೇರಿಯಿಂದ 79 ರಲ್ಲಿ 'ಪಾಯಿಂಟ್ ಆಫ್ ವ್ಯೂ' ಕಲಾ ಪ್ರದರ್ಶನ ಧಾರವಾಡದಲ್ಲಿ ನಡೆಯಿತು. ಕೇಂದ್ರ ಅಕಾಡೆಮಿಯ ಕಲಾ ಶಿಕ್ಷಣ ಮಂಡಲಿಗೆ 94 ರಲ್ಲಿ ವಿ.ಬಿ. ಹಿರೇಗೌಡರ್ ಅವರನ್ನು ಸದಸ್ಯರನ್ನಾಗಿ ನಾಮಕರಣ ಮಾಡಲಾಯಿತು.

**ಕಲಾ ಪುಸ್ತಕಗಳು :** ಗೆಳೆಯರ ಗುಂಪಿನ 'ರಸಯೋಗಿ'ಯವರು 1930 ರ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ 'ಕನ್ನಡ ಸಾಹಿತ್ಯದಲ್ಲಿ ಕರ್ನಾಟಕ ಚಿತ್ರಕಲೆ'ಯ ಬಗ್ಗೆ ಬರೆದಿರುವ ಲೇಖನವೇ ಚಿತ್ರಕಲೆ ಕುರಿತು ಅಭ್ಯಾಸ ಪೂರ್ಣವಾಗಿ ಬರೆದ ಕನ್ನಡದಲ್ಲಿಯ ಮೊದಲ ಲೇಖನವೆನಿಸಿದೆ. ಇದಕ್ಕೂ ಮೊದಲೇ ಪ್ರಾಚೀನ ಕಲಾವಿದ ಚೀರಘಟ್ಟಿ ಎಂಬಾತನ ಬಗ್ಗೆ ದ.ರಾ. ಬೇಂದ್ರೆ ಅವರು ಲೇಖನವೊಂದನ್ನು ಬರೆದಿದ್ದರು. ಅಮೀನ್‌ಸಾಹೇಬ ಕಮಡೊಳ್ಳಿ ಅವರು 1947 ರಲ್ಲಿ ರಚಿಸಿದ 'ಡ್ರಾಯಿಂಗ್ ಶಿಕ್ಷಕ' ಹಾಗೂ ಕಲಮದಾನಿ ಗುರುರಾಯರು 1950 ರಲ್ಲಿ ಹುಬ್ಬಳ್ಳಿಯಿಂದ ರಚಿಸಿದ 'ಪಾಶ್ಚಾತ್ಯ ಕಲಾವಿದರು' ಈ ಪ್ರದೇಶದಿಂದ ಬಂದ ಪ್ರಥಮ ಕಲಾ ಸಂಬಂಧಿ ಗ್ರಂಥಗಳಾಗಿವೆ. ಉಳಿದಂತೆ ಗದಗಿನ ಎಸ್.ಎಂ. ಶಿರಹಟ್ಟಿಯವರ 'ಚಿತ್ರ ಕಲಾ ಕೈದೀಪ', 'ಭಾರತೀಯ ಚಿತ್ರಕಲೆ' ಧಾರವಾಡದ ಸುರೇಶ ಕುಲಕರ್ಣಿ ಅವರ 'ಪಿಕಾಸೋ' ಮತ್ತು 'ಕಲೋಪಾಸಕ ಎಂ.ಜಿ. ವಾಚೇದ ಮಠ', ಶಂಕರ ಪಾಟೀಲರ 'ಕಲಾತಪಸ್ವಿ ಡಾ|| ಮಿಣಜಗಿ', ಶೋಭಾ ಬಡಿಗೇರ ಅವರ 'ಕಲಾ ತಪಸ್ವಿ ಡಿ.ಜಿ. ಬಡಿಗೇರರು', ವಿ.ಸಿ. ಮಾಲಗತ್ತಿಯವರ 'ಕಲಾಗುರು ಜಿ.ಎಸ್. ದಂಡಾವತಿಮಠ' ಎಸ್.ಸಿ. ಪಾಟೀಲರವರ 'ಬರೋಕ್ ಕಲೆ', ಅಶೋಕ್ ಅಕ್ಕಿ ಅವರ 'ಕಲಾ ಚರಿತ್ರೆ', ವಿ.ಟಿ. ಕಾಳೆ ಅವರ 'ಚಿತ್ರಕಲಾ ಪರಿಚಯ', ಗೋ.ಶ್ರೀ. ಹುದ್ದಾರ ಅವರ 'ಚಿತ್ರಕಲಾ ಪ್ರವೇಶ', ಜಿ.ಜಿ. ಮೆಹಾಲೆ ಅವರ 'ಸ್ಮೃತಿ ಚಿತ್ರಗಳು' ಇತ್ಯಾದಿಗಳನ್ನು ಉದಾಹರಿಸಬಹುದು.

ರಾಜ್ಯ ಲಲಿತಕಲಾ ಅಕಾಡೆಮಿಯಿಂದ ಧಾರವಾಡ ಜಿಲ್ಲೆಯ ಕಲಾವಿದರುಗಳಾದ ಅಮೀನ ಸಾಹೇಬ ಕಮಡೊಳ್ಳಿ ಎಂ.ವಿ. ಮಿಣಜಗಿ, ದಂಡಾವತಿ ಮಠ್, ಡಿ.ವಿ. ಹಾಲಭಾವಿ, ಎಂ.ಎ. ಚೆಟ್ಟಿ, ಶಿವಾನಂದ ಪಿ. ಅಕ್ಕಿ ಟಿ.ಪಿ. ಅಕ್ಕಿ ಡಿ.ಜಿ. ಬಡಿಗೇರ ಇತ್ಯಾದಿ ಕಲಾವಿದರ ಬಗ್ಗೆ ಕೈಪಿಡಿಗಳನ್ನು ಹೊರತಂದಿದೆ. ಟಿ.ಪಿ. ಅಕ್ಕಿ ಅವರಿಗೆ 1969 ರಲ್ಲೂ, ಎಂ.ಎ. ಚೆಟ್ಟಿ ಅವರಿಗೆ 1991 ರಲ್ಲೂ

ಸಂಭಾವನಾ ಗ್ರಂಥಗಳನ್ನು ಅರ್ಪಿಸಿದ್ದು ಅವುಗಳಲ್ಲೂ ಕಲೆ ಕಲಾವಿದರನ್ನು ಕುರಿತು ಹಲವಾರು ಲೇಖನಗಳಿವೆ. ಡಿ.ವಿ. ಹಾಲಭಾವಿಯವರು 1974-75 ರಲ್ಲಿ 'ಆರ್ಟ್ ಗಿಲ್ಡ್' ಎಂಬ ಹೆಸರಿನಲ್ಲಿ ಇಂಗ್ಲಿಷ್‌ನಲ್ಲಿ ಪತ್ರಿಕೆಯನ್ನು ಹೊರ ತರುತ್ತಿದ್ದರಲ್ಲದೆ ತಮ್ಮ ಸಮಕಾಲೀನ ಕಲಾವಿದರನ್ನು ಕುರಿತು 'ಮೈ ಕಂಟೇಪರರಿ ಆರ್ಟಿಸ್ಟ್' ಎಂಬ ಪುಸ್ತಕ ರಚಿಸಿದ್ದಾರೆ. ಅವರ 'ಧಾರವಾಡ ಕಲಾ ಶಾಲೆ'ಗೆ 50 ವರ್ಷಗಳಾದಾಗ (1935-85) ಸ್ಮರಣ ಸಂಚಿಕೆಯೊಂದನ್ನು ಹೊರತಂದರು.

ಭಾರತೀಯ ಕಲಾ ಕೇಂದ್ರದವರು 'ಕಲಾ ಭಾರತಿ' ಎಂಬ ಹೆಸರಿನಲ್ಲಿ ಹಲವಾರು ವಾರ್ಷಿಕ ಸಂಚಿಕೆಗಳನ್ನು ಪ್ರಕಟಿಸಿದ್ದಾರೆ. ಗದಗಿನ ವಿಜಯ ಕಲಾ ಮಂದಿರದಿಂದ ಅಶೋಕ್ ಅಕ್ಕಿ ಅವರ ಸಂಪಾದಕತ್ವದಲ್ಲಿ 80-83 ರ ಅವಧಿಯಲ್ಲಿ 'ಕಲಾ ಪ್ರಪಂಚ' ಎಂಬ ಹೆಸರಿನಲ್ಲಿ ನಿಯತಕಾಲಿಕೆಯೊಂದು ಪ್ರಕಟವಾಗುತ್ತಿತ್ತು.

ಕರ್ನಾಟಕ ವಿಶ್ವವಿದ್ಯಾಲಯದವರು ಶಿವರಾಮ ಕಾರಂತರ 'ಕಲಾ ಪ್ರಪಂಚ' ಮತ್ತು 'ಚಿತ್ರ, ಶಿಲ್ಪ ಮತ್ತು ವಾಸ್ತು'ಗಳನ್ನು ಹೊರತಂದಿದೆ. ಸಮಾಜ ಪುಸ್ತಕಾಲಯದವರು ಬಿ.ಪಿ. ಬಾಯಿರಿ ಅವರು ಚಿತ್ರಕಲೆಯ ಬಗ್ಗೆ ಬರೆದ ಆರು ಪುಸ್ತಕಗಳನ್ನು ಪ್ರಕಟಪಡಿಸಿದೆ. ಟಿ.ಪಿ. ಅಕ್ಕಿ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ 'ಚಿತ್ರಕಲಾ ಇತಿಹಾಸ'ವೆಂಬ ಗ್ರಂಥವೊಂದನ್ನು ಸಂಪಾದಿಸಿ ಕೊಟ್ಟಿದ್ದಾರೆ (ಅಪ್ರಕಟಿತ). ಸಿಂದಗಿ ರಾಜಶೇಖರ್ ಅವರು 'ಹೊಳಲಗುಂದಿ ಪೈಯಿಂಗ್ಸ್' (ಇಂಗ್ಲಿಷ್‌ನಲ್ಲಿ) ಮತ್ತು 'ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ' ಪುಸ್ತಕಗಳನ್ನು ರಚಿಸಿದ್ದಾರೆ. ಬಿ.ಕೆ. ಹಿರೇಮಠ ಅವರ 'ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ'ದಲ್ಲಿ ಚಿತ್ರಕಲೆಯನ್ನು ಒಂದು ವಿಷಯವಾಗಿಯೂ, ಎಸ್.ಸಿ. ಪಾಟೀಲರ 'ಜನಪದ ಚಿತ್ರಕಲೆ - ಒಂದು ಅಧ್ಯಯನ'ದಲ್ಲಿ ಚಿತ್ರ ಕಲೆಯನ್ನೇ ವಿಶೇಷವಾಗಿ ಅಭ್ಯಸಿಸಲಾಗಿದೆ.

**ಪ್ರದರ್ಶನಾಲಯ : ಪ್ರದರ್ಶನಗಳು :** ಹುಬ್ಬಳ್ಳಿಯಲ್ಲಿ ನಗರ ಪಾಲಿಕೆಯ ಉದ್ಯಾನವನದ ಗಾಜಿನ ಮನೆಯಲ್ಲಿ ಮಿಣಜಗಿ ಅವರ ಹೆಸರಿನಲ್ಲಿ ಕಲಾ ಪ್ರದರ್ಶನಾಲಯವೊಂದನ್ನು ಕಟ್ಟಿದ್ದು ಲಲಿತ ಕಲಾ ಅಕಾಡೆಮಿಯ ಸಂಗ್ರಹದ ಕೃತಿಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಇವನ್ನು ಆಗಾಗ ಬದಲಿಸಲಾಗುತ್ತದೆ. ಧಾರವಾಡ ಸರ್ಕಾರಿ ಕಲಾಶಾಲೆಗೆ ಹೊಂದಿಕೊಂಡಿರುವ ಕೆಲವು ಕೊಠಡಿಗಳಲ್ಲಿ ಈಚೆಗೆ ಕಲಾ ಪ್ರದರ್ಶನಗಳನ್ನು ಮಾಡಲಾಗುತ್ತಿದೆ. ಗದಗದ ವಿಜಯ ಕಲಾ ಮಂದಿರದಲ್ಲಿ ಪ್ರತ್ಯೇಕ ಪ್ರದರ್ಶನಾಂಗಣವಿದೆ. ಧಾರವಾಡದ ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆಯೂ ಚಿತ್ರಕಲಾ ಪ್ರದರ್ಶನ ನಡೆಯುವುದುಂಟು.

ಏಕವ್ಯಕ್ತಿ ಪ್ರದರ್ಶನಗಳಲ್ಲಿ ಡಿ.ವಿ. ಹಾಲಭಾವಿ ಅವರು ತಮ್ಮ ಶಾಲೆಯಲ್ಲಿ 1938 ರಲ್ಲಿ ಏರ್ಪಡಿಸಿದ ಅವರ ಕೃತಿಗಳ ಪ್ರದರ್ಶನವೇ ಈ ಭಾಗದ ಪ್ರಥಮ ಏಕವ್ಯಕ್ತಿ ಕಲಾಪ್ರದರ್ಶನವೆಂದು ಹೇಳಬಹುದು. ನಂತರ ಕಾಲದಲ್ಲೂ ಹುಬ್ಬಳ್ಳಿ, ಧಾರವಾಡ, ಗದುಗಗಳಲ್ಲಿ ಏಕವ್ಯಕ್ತಿ ಹಾಗೂ ಗುಂಪು ಪ್ರದರ್ಶನಗಳು ಕಲಾಶಿಬಿರಗಳು ಸಾಕಷ್ಟು ಸಂಖ್ಯೆಯಲ್ಲಿ ನಡೆದಿವೆ. ನಾರಾಯಣ ಸಂಗಮರು 1930 ಕ್ಕೂ ಹಿಂದೆಯೇ ಶಾಂತಿನಿಕೇತನದಲ್ಲಿ ಚಿತ್ರಕಲಾಭ್ಯಾಸ ಮಾಡಿದ್ದು ಇದೇ ಸುಮಾರಿಗೆ ಶ್ರೀಲಂಕಾದಲ್ಲಿ ತಮ್ಮ ಏಕವ್ಯಕ್ತಿ ಕಲಾ ಪ್ರದರ್ಶನವನ್ನು ಮಾಡಿದ್ದರು. ಜಿಲ್ಲೆಯಲ್ಲಿ ಈಚೆಗೆ ನಡೆದ ಪ್ರಮುಖ ಪ್ರದರ್ಶನಗಳೆಂದರೆ 1981 ರ ರಾಷ್ಟ್ರೀಯ ಮಟ್ಟದ ಕಲಾಶಿಬಿರ, 1983 ರಲ್ಲಿ 'ಮಂಥನ' ಕಲಾವೃಂದದ ಪ್ರದರ್ಶನ, 1990 ರಿಂದ ಮಿಣಜಗಿ ಅವರ ಹೆಸರಿನಲ್ಲಿ ಕಲಾ ಪ್ರದರ್ಶನ, ದಿನಾಚರಣೆ, ಬಹುಮಾನಗಳು. 1991 ರ ಅಖಿಲ ಭಾರತ ಕಲಾ ಪ್ರದರ್ಶನ, 1993 ರಲ್ಲಿ ಭೂಕಂಪ ಸಂತ್ರಸ್ತರ ನಿಧಿಗಾಗಿ ಪ್ರದರ್ಶನ 1994 ರಲ್ಲಿ ಚಿತ್ರಕಲಾ ಉಪನ್ಯಾಸಕರ ಕಲಾ ಪ್ರದರ್ಶನ, ಸರ್ಕಾರಿ ಕಲಾಶಾಲೆಯವರ 'ಶಿಶಿರ' ಕಲಾ ಪ್ರದರ್ಶನ (ಬೆಂಗಳೂರಿನಲ್ಲಿ), ಮಿಣಜಗಿ ಮತ್ತು ಅಕ್ಕಿ ಅವರ ನೆನಪಿಗಾಗಿ 'ಹುಬ್ಬಳ್ಳಿ ಗದ್ದುಗ ವರ್ಣೈಕ್ಯತೆ' ಪ್ರದರ್ಶನ, ರಾಜ್ಯಮಟ್ಟದ ಜಲವರ್ಣ ಕೃತಿಗಳ ಪ್ರದರ್ಶನ, ವರ್ಣಮೇಳ, ಮಹಿಳಾ ಕಲಾವಿದರ ಶಿಬಿರ ಇತ್ಯಾದಿಗಳನ್ನು ಉದಾಹರಿಸಬಹುದು. ಕರ್ನಾಟಕ ವಿಶ್ವವಿದ್ಯಾಲಯವು 94 ರಲ್ಲಿ 'ಕನ್ನಡನಾಡು - ಕಲೆ ಮತ್ತು ಸಂಸ್ಕೃತಿ' ಕುರಿತು ವಿಚಾರೋಪನ್ಯಾಸ ಏರ್ಪಡಿಸಿತ್ತು. ಧಾರವಾಡದ ಸರೋಜ ಎಸ್. ನಾಯ್ಡು ಅವರು 1981 ರಲ್ಲಿ ದಿ|| ಆರ್.ಎಸ್. ನಾಯ್ಡು ಅವರ ಸ್ಮಾರಕ ಯೋಜನೆ ಸ್ಥಾಪಿಸಿ ಪ್ರತೀವರ್ಷ ಮೂವರು ಕಲಾವಿದರಿಗೆ ಏಕವ್ಯಕ್ತಿ ಕಲಾಪ್ರದರ್ಶನಗಳಿಗೆ ಧನಸಹಾಯವನ್ನು ನೀಡುತ್ತಿದ್ದು ಕೆಲವರ್ಷಗಳು ಇದು ಯಶಸ್ವಿಯಾಗಿ ನಡೆಯಿತು. ಧಾರವಾಡ ಕಲಾ ಶಾಲೆಯವರು ಕಚ್ಚಾ ಸಾಮಗ್ರಿಗಳನ್ನು ಬಳಸಿ 'ಚಿತ್ತಾಕರ್ಷಣ 1993' ಎಂಬ ಹೆಸರಿನಲ್ಲಿ ವಿನೂತನ ರೀತಿಯಲ್ಲಿ ಕಲಾ ಪ್ರದರ್ಶನ ಏರ್ಪಡಿಸಿದ್ದರು.

**ಬಾಲ ಕಲಾವಿದರು :** ಹಲವಾರು ಸಂಘ ಸಂಸ್ಥೆಗಳು ಶಾಲಾ ಮಕ್ಕಳಿಗೆ ಕಲಾಸ್ಪರ್ಧೆಯನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿವೆ. ಹುಬ್ಬಳ್ಳಿಯ ವಿಜಯ ನಗರ ಮಹಿಳಾ ಮಂಡಳಿ, ಅಕಾಡೆಮಿ ಆಫ್ ಪರ್ ಫಾರ್ಮಿಂಗ್ ಆರ್ಟ್, ಜೈಂಟ್ಸ್ ಗ್ರೂಪ್ ಇತ್ಯಾದಿ ಸಂಸ್ಥೆಗಳು ಬಾಲ-ಕಲಾವಿದರ ಪ್ರತಿಭೆ ಹೊರಬರಲು ಕಾರ್ಯಕ್ರಮ ರೂಪಿಸುತ್ತಿವೆ. ಹುಬ್ಬಳ್ಳಿಯ ಭಾರತಿ, ನರಗುಂದದ ಶಿಲ್ಪ ಮುಂತಾದವರು ಹಲವಾರು ಬಹುಮಾನಗಳನ್ನು ಪಡೆದಿದ್ದಾರೆ. ದೀಪಕ ಶರ್ಮ ಎಂಬ ಬಾಲಕ ರಚಿಸಿದ ಚಿತ್ರವೊಂದು (1983 ರಲ್ಲಿ ಆತ 8 ವರ್ಷವಿದ್ದಾಗ) ಮಕ್ಕಳ ದಿನಾಚರಣೆಯ ಅಂಗವಾಗಿ ಅಂಚೆಚೀಟಿಯಲ್ಲಿ ಮುದ್ರಣಗೊಂಡಿತ್ತು.

## ಶಿಲ್ಪ

ಶಿಲ್ಪ, ವಾಸ್ತುಶಿಲ್ಪಗಳ ದೃಷ್ಟಿಯಿಂದ ಧಾರವಾಡ ಜಿಲ್ಲೆ ಶ್ರೀಮಂತವಾದುದು. ಶಾತವಾಹನರ ಕಾಲದಿಂದ ಹಿಡಿದು ವಿಜಯನಗರ ಕಾಲದವರೆಗೆ, ಸ್ಥಳೀಯ ಅರಸುಮನೆತನಗಳೂ ಸೇರಿದಂತೆ ರೂಪಿಸಿರುವ ಅನೇಕ ವಾಸ್ತುಶಿಲ್ಪ, ಶಿಲ್ಪಗಳನ್ನು, ವೀರ-ಮಾಸ್ತಿ ಕಲ್ಲುಗಳನ್ನು, ಗೊಸಾಸ ಇತ್ಯಾದಿ ನೆನಪಿನ ಸ್ಥಂಬಗಳನ್ನು ಕಾಣಬಹುದು. (ಅಧ್ಯಾಯ 17 ನೋಡಿ). ಅಂತೆಯೇ ಶಾಸನಗಳಲ್ಲಿ ಇವುಗಳನ್ನು ಕಂಡರಿಸಿದ ಶಿಲ್ಪಿಗಳ ಹೆಸರು, ಸಂಭಾವನೆ, ಬಿರುದು, ಹೆಗ್ಗಳಿಕೆಗಳು ದಾಖಲಾಗಿವೆ. ಕೊಣ್ಣೂರಿನ ಶಾಸನದಲ್ಲಿ ದೊರೆತ ಶಾತವಾಹನರ ಕಾಲದ ಶಾಸನದಲ್ಲಿ ಶಿಲ್ಪಿಯೊಬ್ಬನ ಉಲ್ಲೇಖವಿದೆ. ನಂತರದ ಕಾಲದಲ್ಲಿ ಸಿಂಗ, ಚಾವೋಜ, ಕೇತೋಜ, ಬಮ್ಮೋಜ, ಸೇವೋಜ, ಸಿಂಗೋಜನ ಮಗ ಗಣಪೋಜ, ಕಾಳೋಜ, ಪೊಲೆಯಣ್ಣ, ದುಗ್ಗದಾಸ, ಗುಲಗೋಜ, ಇತ್ಯಾದಿ ಶಿಲ್ಪಿಗಳ ಹೆಸರು ದೊರೆಯುತ್ತದೆ. ಗದಗದ ರೂವಾರಿ ಭೈರವ ಎಂಬಾತ 'ಭೈರವ ಶಿಳಾಕಂಸ ವಿದ್ಯೆ' ಬಲ್ಲವನಾಗಿದ್ದ (1002); ಕುರ್ತಕೋಟಿಯ ಅಯ್ಯಣ (1082) ಹಾಗೂ ಬೆಳವಣಿಕೆಯ ಶಿಲ್ಪಿಯೊಬ್ಬ (1102) (ಹೆಸರು ಅಳಿಸಿಹೋಗಿದೆ) ತಮ್ಮ ಶಿಲ್ಪ ಚಾತುರ್ಯದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಸಿಡೇನೂರಿನ ಚಾವುಂಡ (1015), ಲಕ್ಷ್ಮೇಶ್ವರದ ಸೂತ್ರಧಾರಿ ರೇವೋಜ (1166), ನಿಡಗುಂದದ ಬಡಗಿ ಕಲ್ಲೋಜ (1233) ಮುಂತಾದವರು ತಮಗೆ ದೊರೆತ ಸಂಭಾವನೆಯ ಬಗ್ಗೆ ಹೇಳಿಕೊಂಡಿದ್ದಾರೆ. ಧಾರವಾಡ ತಾಲೂಕಿನ ವೆಂಕಟಪುರಿಯ ದೇವರಾಸಿ ಆಚಾರ್ಯನು 1136 ರಲ್ಲಿ ದೇರುಮ್ಮ ದೇವಾಲಯವನ್ನು ಕಟ್ಟಿ ಲಿಂಗಪ್ರತಿಷ್ಠಾಗೆ ಮಾಡುತ್ತಾನೆ ಎಂಬಿತ್ಯಾದಿ ಹಲವಾರು ವಿವರಗಳು ದೊರೆಯುತ್ತವೆ.

ಅಂತೆಯೇ ಇಂದಿಗೂ ಜಿಲ್ಲೆಯಲ್ಲಿ ಅಲ್ಲಲ್ಲಿ ಸಾಂಪ್ರದಾಯಿಕ ಶಿಲ್ಪಿಗಳು ಉಳಿದು ಬಂದಿದ್ದಾರೆ. ಕಲ್ಲಿನ ಮೂರ್ತಿಗಳಲ್ಲದೆ ಬಾಗಿಲುವಾಡ ಇತ್ಯಾದಿಗಳನ್ನು ರಚಿಸುವ ಶಿಲ್ಪಿಗಳನ್ನು ಗದಗ ಮುಂತಾದ ಕಡೆಗಳಲ್ಲಿ ಕಾಣಬಹುದು. ಮರದಲ್ಲಿ ಮೂರ್ತಿ ಶಿಲ್ಪಗಳನ್ನು ಇತರ ಗೃಹೋಪಯೋಗಿ ವಸ್ತುಗಳನ್ನು ರಚಿಸುವ ಬಡಗಿಗಳೂ ಜಿಲ್ಲೆಯಲ್ಲಿದ್ದು ಕಲಘಟಗಿ ಇದಕ್ಕೆ ಪ್ರಸಿದ್ಧವಾಗಿದೆ ಮಲ್ಲೇಶಪ್ಪ ದೇವೇಂದ್ರ ಮುಂತಾದವರು ಇಂದಿನ ಕಲಾವಿದರಾಗಿದ್ದಾರೆ. ಮಿಶ್ರಕೋಟೆಯ ಡಿ.ಜಿ. ಬಡಿಗೇರರ ಮನೆತನ ತಲೆತಲಾಂತರದಿಂದ ಕಾಷ್ಠಶಿಲ್ಪ ಕಲೆಯಲ್ಲಿ ಪ್ರಸಿದ್ಧಿಯನ್ನು ಹೊಂದಿತ್ತು. ಈ ಮನೆತನದ ಗೂಳಪ್ಪ ಎಂಬುವವರು ರಚಿಸಿದ ಹಾರೋಬೆಳವಡಿ ಹೊಂಗಲದ ದೇಸಾಯರ ಮನೆಯ ಜಂತಿಯ ಕೆಲಸ ಪ್ರಸಿದ್ಧವಾಗಿದ್ದು ಇಂದಿಗೂ ಉಳಿದುಕೊಂಡು ಬಂದಿದೆ.

ಜಿಲ್ಲೆಯಲ್ಲಿ ಈಚಿನ ವರ್ಷಗಳಲ್ಲಿ ಹೆಚ್ಚು ಪ್ರಸಿದ್ಧವಾದ ಸಾಂಪ್ರದಾಯಿಕ ಶಿಲ್ಪಿಗಳಲ್ಲಿ ರಾಘವೇಂದ್ರ ಚವಟಿ (ಹುಬ್ಬಳ್ಳಿ), ಸೋಮಣ್ಣ ಸಿದ್ದಪ್ಪ ಶಿಲ್ಪಿ (ಗದಗ) ಶಂಕರಪ್ಪಾಚಾರ್ಯ, ನಾಗಲಿಂಗಾಚಾರ್ಯ ಮೊದಲಾದವರನ್ನು ಉಲ್ಲೇಖಿಸಬಹುದು. ರಾಘವೇಂದ್ರ ಬಿ. ಚವಟಿಯವರು (1915) ಮುಂಬಯಿಯ ಜೆ.ಜೆ. ಶಾಲೆಯಲ್ಲಿ ಶಿಲ್ಪಕಲೆಯದೇ ಪದವಿಯನ್ನು ಪಡೆದು ಹುಬ್ಬಳ್ಳಿಯಲ್ಲಿ ನೆಲಸಿ ಅನೇಕ ಶಿಲ್ಪಗಳನ್ನು ರಚಿಸಿದವರು. ಚವಟಿಯವರು 1950 ರಲ್ಲಿ ಹುಬ್ಬಳ್ಳಿಯಲ್ಲಿ ಶಿಲ್ಪಕಲಾ ಶಾಲೆಯೊಂದನ್ನು ಕೆಲಕಾಲ ನಡೆಸಿದರು. ಸೋಮಣ್ಣ ಸಿದ್ದಪ್ಪ ಶಿಲ್ಪಿ (1918-93) ರಚಿಸಿದ ಸಾವಿರಾರು ಶಿಲ್ಪಗಳು ದೇಶ ವಿದೇಶಗಳಲ್ಲಿ ಪ್ರಸರಗೊಂಡು ಹೆಸರು ಗಳಿಸಿವೆ. ಇವರಿಗೆ ಹಲವಾರು ಸನ್ಮಾನಗಳು ಸಂದಿದ್ದು ಕೆಲವು ಪಾರಿತೋಷಕಗಳು ಲಭ್ಯವಾಗಿದೆ. ಗದಗನಲ್ಲಿ ಶಿಲ್ಪ ಕಲಾ ಶಾಲೆಯೊಂದನ್ನು ತೆರೆದಿದ್ದು ಶಿಲ್ಪಿಯವರು ನಿಧನರಾದ ಮೇಲೆ ಈರಣ್ಣ ಎಸ್. ಶಿಲ್ಪಿ ಅವರು 'ಶಿಲಾಶಿಲ್ಪಕಲಾ ಶಾಲೆಯನ್ನು' ನಡೆಸುತ್ತಿದ್ದಾರೆ. ಶಂಕರಪ್ಪಾಚಾರ್ಯರು ಕಾರಣಾಂತರದಿಂದ ಮೈಸೂರಿನಲ್ಲಿದ್ದು ಸಿದ್ದಲಿಂಗಸ್ವಾಮಿಗಳಲ್ಲಿ ಕಲಾಭ್ಯಾಸ ಮಾಡಿ ನಂತರ ಗದಗಿನಲ್ಲಿ ನೆಲೆಸಿದವರು. ಇವರ ಮಗ ನಾಗಲಿಂಗಾಚಾರ್ಯರು ಗದಗಿನಲ್ಲಿ ಜನಿಸಿ ಟಿ.ಪಿ. ಅಕ್ಕಿ ಅವರಲ್ಲಿ ಹಾಗೂ ಜೆ.ಜೆ. ಶಾಲೆಯಲ್ಲಿ ಅಭ್ಯಸಿಸಿ ಗದಗ, ಪುಣೆ ಬೆಂಗಳೂರು ಇತ್ಯಾದಿ ಕಡೆಗಳಲ್ಲಿದ್ದು ಧಾರವಾಡದಲ್ಲಿ ನೆಲೆಸಿದವರು. ದಾದಾಜಿ ಕೊಂಡದೇವ, ನರಗುಂದ ಬಾಬಾಸಾಹೇಬ, ಶಿವಪ್ಪನಾಯಕ ಇತ್ಯಾದಿ ಅನೇಕ ಪ್ರತಿಮೆಗಳು ಇವರಿಂದ ಮೂಡಿಬಂದಿವೆ. ಪುಣೆಯ ಸಾರ್ವಜನಿಕ ಮಂಡಳಿಯೊಂದಕ್ಕೆ ಆಚಾರ್ಯರು 1968 ರಲ್ಲಿ

ರೂಪಿಸಿಕೊಟ್ಟ ಗಣಪತಿಯೊಂದು ಮಂಡಳಿಗೆ ಈವರೆಗೆ ಕೋಟ್ಯಾಂತರ ರೂಪಾಯಿಗಳನ್ನು ಗಳಿಸಿಕೊಟ್ಟಿರುವುದು ಒಂದು ವಿಶ್ವ ದಾಖಲೆಯಾಗಿದೆ.

ಸೋಮಣ್ಣಶಿಲ್ಪಿ ಹಾಗೂ ನಾಗಲಿಂಗಾಚಾರ್ಯ ಅವರುಗಳು ಕೆಲಕಾಲ ಅಕಾಡೆಮಿಯ ಸದಸ್ಯರಾಗಿದ್ದರಲ್ಲದೆ ಆಚಾರ್ಯರಿಗೆ 1992 ರಲ್ಲಿ ಅಕಾಡೆಮಿಯ ಪ್ರಶಸ್ತಿಯೂ ದೊರೆತಿತ್ತು.

ಧಾರವಾಡದ ಮಾಧವರಾವ್ ಕುಲಕರ್ಣಿ, ರಾಣೆಬೆನ್ನೂರಿನ ನಿಂಗಪ್ಪಾಚಾರಿ ಶಿರಹಟ್ಟಿಯ ದೇವೇಂದ್ರಪ್ಪ ಕಡ್ಲಿಕೊಪ್ಪ ಅವರುಗಳು ಸಾಂಪ್ರದಾಯಿಕ ಶಿಲ್ಪ ಕಲೆಯಲ್ಲಿ ಸಾಕಷ್ಟು ಕೃತಿಯನ್ನು ಮಾಡಿದ್ದಾರೆ. ಮಲೆಬೆನ್ನೂರಿನ ಕೇಶವಾಚಾರಿ ಮಣ್ಣಿನಲ್ಲಿ ದೇವತಾ ಮೂರ್ತಿಗಳನ್ನು ಮಾಡುವುದರಲ್ಲಿಯೂ ಧಾರವಾಡದ ವಾಸುದೇವ ವಾಖಲೆ ಅವರು ಉಬ್ಬುಶಿಲ್ಪಗಳ ರಚನೆಯಲ್ಲಿಯೂ, ಪ್ರಕಾಶ ಗಾಯಕವಾಡ, ಗಜೇಂದ್ರಗಡದ ವಿಶ್ವಕರ್ಮ ನಿಲಯದ ಕಂಚಿಗಾರ ಅವರುಗಳು ಸಾಂಪ್ರದಾಯಿಕ ಮೂರ್ತಿಗಳ ರಚನೆಯಲ್ಲಿಯೂ ಸಿದ್ಧಹಸ್ತರು. ಆಧುನಿಕ ಶೈಲಿಯ ಶಿಲ್ಪಕಲೆಯಲ್ಲಿ ಕೆ.ವಿ. ಸೋಮಶೇಖರ್, ಶಿವಾನಂದ ಬಂಟನೂರ ಅವರುಗಳನ್ನು ಹೆಸರಿಸಬಹುದು. ಅನಿಲ ಬೆಟಗೇರಿ ಅವರು ಹಲವಾರು ಶಿಲ್ಪಗಳನ್ನು ಜೋಡಿಸಿ 'ಶಿಲ್ಪಗಳ ಕೋಲಾಜ್' ಕುರಿತು ಪ್ರಯೋಗ ನಡೆಸಿದ್ದಾರೆ.

ಈಚೆಗೆ ಜಿಲ್ಲೆಯಲ್ಲಿ ಕಟ್ಟಿಗೆ, ಥರ್ಮೋಕೋಲ್, ಫೈಬರ್ ಗ್ಲಾಸ್ ಇತ್ಯಾದಿಗಳಿಂದ ಶಿಲ್ಪ ರಚಿಸುವ ಪರಂಪರೆ ಬೆಳೆಯುತ್ತಿದೆ. ಧಾರವಾಡದ ಅಹ್ಮದ್‌ಖಾನ್ ಎಸ್. ಪಠಾಣ, ನವಲೂರಿನ ಧ್ರುವರಾಜ ಗದಗಕರ ಮುಂತಾದವರನ್ನು ಹೆಸರಿಸಬಹುದು. ಧ್ರುವರಾಜರು ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯ, ವಿದ್ಯಾವರ್ಧಕ ಸಂಘ ಇತ್ಯಾದಿ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಕಟ್ಟಡಗಳ ನೂರಾರು ಮಾದರಿಗಳನ್ನು (ಮಾಡಲ್) ರೂಪಿಸಿದ್ದಾರೆ. ಇವಲ್ಲದೆ ಧಾರವಾಡದ ಕಲೆ, ಸಾಹಿತ್ಯ, ಸಂಸ್ಕೃತಿ ಕುರಿತು ನೂರಾರು ಚಿತ್ರಪಟಗಳನ್ನು ರಚಿಸಿದ್ದಾರೆ.

ಗಣೇಶ ಮೂರ್ತಿಗಳ ರಚನೆಗೆ ಜಿಲ್ಲೆಯಲ್ಲಿ ಮೊದಲಿನಿಂದಲೂ ಪ್ರಾಶಸ್ತ್ಯವಿದೆ. ಹುಬ್ಬಳ್ಳಿಯ ಮೂಕ ಕಲಾವಿದ ವರ್ಧಿಯನ್ನು ಇಲ್ಲಿ ಉಲ್ಲೇಖಿಸಬಹುದು. ಈಚೆಗೆ ಸ್ಪರ್ಧಾತ್ಮಕ ಮನೋಭಾವದಲ್ಲಿ ಗಣಪತಿಯ ಉತ್ಸವ ಜಿಲ್ಲೆಯಾದ್ಯಂತ ನಡೆಯುತ್ತಿದ್ದು ವೈವಿಧ್ಯಮಯವಾಗಿ ಗಣಪತಿ ಮೂರ್ತಿ ರಚನೆ ಆಗುತ್ತವೆ. ಸುಮಾರು 25 ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ 8-10 ಕಡೆಗಳಲ್ಲಿ ಗಣಪತಿಯನ್ನು ಕೂಡಿಸುತ್ತಿದ್ದು 1976 ರ ವೇಳೆಗೆ ಈ ಸಂಖ್ಯೆ 65-75 ಮುಟ್ಟಿದ್ದು 76 ರಲ್ಲಿ ಗಣೇಶೋತ್ಸವ ಸಮಿತಿಗಳ ಮಹಾ ಮಂಡಳವೊಂದು ಉದಯಿಸಿತು. ಆಗ 170 ಕಡೆಗಳಲ್ಲಿ ನಡೆಯುತ್ತಿದ್ದ ಉತ್ಸವಗಳು ಕಳೆದ ವರ್ಷ 222 ಸಂಖ್ಯೆಯನ್ನು ಮುಟ್ಟಿತ್ತು. ಉತ್ತಮ ಅಲಂಕೃತ ಮಂಟಪಗಳಿಗೆ ಬಹುಮಾನ ನೀಡುವ ಯೋಜನೆಯಿದ್ದು, ಬೃಹದಾಕಾರದ ಗಣಪತಿ ವಿಗ್ರಹಗಳೊಂದಿಗೆ ಅದಕ್ಕೆ ಹೊಂದುವಂತೆ ನಂದಿ, ಕೋಟೆ, ಶಂಖ, ಡೈನೋಸಾರ್ ಇತ್ಯಾದಿ ಅನೇಕ ಆಕಾರಗಳನ್ನು ದೊಡ್ಡ ಪ್ರಮಾಣದಲ್ಲಿ ರಚಿಸುವುದುಂಟು. ಕಳೆದ ಬಾರಿ ಹಾವೇರಿಯಲ್ಲಿ 48 ಅಡಿ ಎತ್ತರದ ಬಾಹುಬಲಿಯೊಂದಿಗೆ ಚಾವುಂಡರಾಯ ಮತ್ತು ಗಣಪತಿಯ ಮೂರ್ತಿಗಳನ್ನು ರಚಿಸಿದ್ದು ಸಾಕಷ್ಟು ಜನಪ್ರಿಯತೆ ಗಳಿಸಿತ್ತು. ಧಾರವಾಡ ಹುಬ್ಬಳ್ಳಿಗಳೂ ಸೇರಿದಂತೆ ಜಿಲ್ಲೆಯಾದ್ಯಂತ ಅನೇಕ ಸ್ಥಳಗಳಲ್ಲಿ ಗಣಪತಿಯ ಮೂರ್ತಿ ರಚನೆಯಾಗುತ್ತದೆ. ಶಿಗ್ಗಾಂವಿ ತಾಲೂಕಿನ ಕುನ್ನೂರಿನಲ್ಲಿ ಒಂದರಿಂದ ನಾಲ್ಕು ಅಡಿಗಳ ಗಣಪತಿ ಮೂರ್ತಿಗಳು 12 ರಿಂದ 15 ಸಾವಿರದಷ್ಟು ಸಂಖ್ಯೆಯಲ್ಲಿ ನಿರ್ಮಿಸಿ ರಾಜ್ಯಾದ್ಯಂತ ಮಾರಾಟಕ್ಕೆ ಕಳಿಸುವುದಾಗಿ ದಾಖಲೆಯೊಂದು ತಿಳಿಸುತ್ತದೆ.

ಇವರಲ್ಲದೆ ಮಂಟಪಗಳ ತಯಾರಿಕೆಯಲ್ಲಿ ಹಾನಗಲ್ಲಿನ ರಾಮಾಚಾರ್ಯ ಕೃಷ್ಣಾಚಾರ್ಯ ರಾಜಪುರೋಹಿತರೂ, ಮರದ ಉಪಕರಣಗಳ ತಯಾರಿಕೆಯಲ್ಲಿ ಹುಬ್ಬಳ್ಳಿಯ ಭಾರತೀನಗರದ ನಾಗರಾಜು (ನಾಗರಾಜಚಾರಿ) ಅವರನ್ನೂ, ಶಲವಡಿಯ ಮಿನಿಯಂತ್ರಗಳ ಮಾಮನ ಶಿಲ್ಪಿಯಾದ 15 ವರ್ಷದ ವಿದ್ಯಾರ್ಥಿ ಸಂಜೀವ ಮಾನಪ್ಪ ಬಡಿಗೇರ ಇತ್ಯಾದಿಯವರುಗಳನ್ನು ಶಿಲ್ಪ ಕಲೆಯ ದೃಷ್ಟಿಯಿಂದ ಉದಾಹರಿಸಬಹುದು. ಶಿರಹಟ್ಟಿಯ ಬಸವನಪ್ಪ ಕುಂಬಾರ ಟೆರ್ರಕೋಟ (ಸುಡಾವೆ ಮಣ್ಣಿನಲ್ಲಿ) 500 ಕ್ಕೂ ಹೆಚ್ಚು ಕೃತಿಗಳನ್ನು ಸ್ವಸಂತೋಷಕ್ಕಾಗಿ ರಚಿಸಿದ್ದಾರೆ.

ಹೊಳೆ ಆಲೂರಿನ ಪರಿಸರದಲ್ಲಿ ಉತ್ಕೃಷ್ಟ ಕೆತ್ತನೆಯ ಬಾಗಿಲುವಾಡಗಳನ್ನು ರಚಿಸುವ ಕಾಷ್ಠಶಿಲ್ಪಗಳಿದ್ದು ನೆರೆಯ ಜಿಲ್ಲೆಯ ಬನಶಂಕರಿ ಜಾತ್ರೆಯ ಕಾಲಕ್ಕೆ ನೂರಾರು ಬಾಗಿಲುವಾಡಗಳು ಮಾರಾಟಕ್ಕೆ ಪ್ರದರ್ಶಿಸಲ್ಪಡುತ್ತವೆ.

## ಸಿನಿಮಾ

ಜಿಲ್ಲೆಯಲ್ಲಿ ನಾಟಕಗಳು ಶತಮಾನದ ಆರಂಭದಿಂದಲೂ ಜನಪ್ರಿಯವಾಗಿದ್ದರೂ ಸಿನಿಮಾ ಪ್ರವೇಶ ಮಾಡಿದ್ದು ಮೂರನೆಯ ದಶಕದಲ್ಲಿ, ಗದಗಿನ ಮಹಾಲಕ್ಷ್ಮಿ ಟಾಕೀಸ್ 1932 ರಲ್ಲೂ ಚಿತ್ರಾ ಟಾಕೀಸ್ 1934 ರಲ್ಲೂ ಆರಂಭವಾಯಿತು. ಧಾರವಾಡದ ವಿಜಯ (1933), ಹುಬ್ಬಳ್ಳಿಯ ಡೆಕ್ಕನ್ ಮುಂತಾದವು ಜಿಲ್ಲೆಯ ಮೊದಮೊದಲ ಚಿತ್ರಮಂದಿರಗಳು. 1931ರ ನಂತರ ಹಿಂದಿಯಲ್ಲಿ 34 ರಲ್ಲಿ ಕನ್ನಡದಲ್ಲಿ ವಾಕ್ಚಿತ್ರ (ಟಾಕಿ)ಗಳು ಬಂದಿದ್ದು ಜಿಲ್ಲೆಯಲ್ಲಿಯೂ ಪ್ರದರ್ಶನಕ್ಕೆ ಬಂದಿರಬಹುದು. ದಕ್ಷಿಣದಲ್ಲಿ ಬೆಂಗಳೂರು, ಮೈಸೂರು, ಮದ್ರಾಸ್‌ಗಳಲ್ಲಿಯೂ ಉತ್ತರದಲ್ಲಿ ಪುಣೆ, ಕೊಲ್ಲಾಪುರ, ಮುಂಬಯಿಗಳಲ್ಲಿಯೂ ಚಲನಚಿತ್ರಗಳ ತಯಾರಿಕೆ ಆರಂಭವಾಗಿದ್ದರೂ ಜಿಲ್ಲೆಯಲ್ಲಿ ಆರಂಭವಾದುದು ತಡವಾಗಿ. 1933 ರಲ್ಲಿ ಧಾರವಾಡದ ಕರ್ನಾಟಕ ಟಾಕೀಸ್ ಅವರ 'ಕಬೀರ್' ಚಿತ್ರಕ್ಕೆ ತಾರಾನಾಥರು ಚಿತ್ರಕಥೆ ಶ್ರೀರಂಗರು ಸಂಭಾಷಣೆ ಬರೆಯಬೇಕೆಂದಿದ್ದು, ಇದು ಸಾಧ್ಯವಾಗಲಿಲ್ಲ. ನಂತರ 1934 ರಲ್ಲಿ ಧಾರವಾಡದ ಆಗಿನ ವಿಜಯ ಟಾಕೀಸ್ ಮಾಲಿಕರಾಗಿದ್ದ ನಾರಾಯಣರಾವ್ ಮುಧೋಳಕರ ಹಾಗೂ ಅವರ ಸೋದರ ವೆಂಕಟರಾವ್ ಮುಧೋಳಕರ ಅವರು ಫಾರೆಸ್ಟ್ ಕಾಂಟ್ರಾಕ್ಟರ್ ಧೀರೇಂದ್ರ ಕೃಷ್ಣರಾವ್ ಗುಂಜೀಕರ್ ಅವರ ಜೊತೆ ಸೇರಿ 'ಕರ್ನಾಟಕ ಫಿಲಂಸ್ ಚಿತ್ರ ನಿರ್ಮಾಣ ಸಂಸ್ಥೆ' ಆರಂಭಿಸಿ 'ಚಿರಂಜೀವಿ' ಎಂಬ ಪೌರಾಣಿಕ ವಾಕ್ಚಿತ್ರ ತಯಾರಿಸಿದರು. ಇದಕ್ಕೆ ಸಾಹಿತ್ಯ ರಚಿಸಿದ ದೇವುಡು ಅವರೂ ಸೇರಿದಂತೆ [illegible]. ನಾಡಿಗೇರ, ಮುದವೀಡು ಕೃಷ್ಣರಾವ್ ಅಲ್ಲದೆ ಧಾರವಾಡದ ಬಸವರಾಜ (ಬಸವಣ್ಣೆಪ್ಪ) ಮನ್ಸೂರ್, ಅಮೀರಬಾಯಿ ಕರ್ನಾಟಕಿ, ಶಾರದಾ ಹಾನಗಲ್ ಹಾಗೂ ನಾಟಕದ ನಟ ನಟಿಯರು ಭಾಗವಹಿಸಿದ್ದರು. ಚಿತ್ರದ ಒಳಾಂಗಣ ದೃಶ್ಯ ಪುಣೆಯಲ್ಲಿಯೂ ಹೊರಾಂಗಣ ದೃಶ್ಯಗಳು ಧಾರವಾಡದ ಅತ್ತಿಕೊಳ್ಳ ಬಯಲಿನಲ್ಲಿಯೂ ನಡೆಯಿತು. ಚಿತ್ರ ಗದಗಿನ ಚಿತ್ರಾ ಟಾಕೀಸಿನಲ್ಲಿ ನೂರು ದಿನ ನಡೆಯಿತು. ಇದಾದ ನಂತರ ಶಾಂತೇಶ ಪಾಟೀಲರು 1946 ರಲ್ಲಿ ಪಂಪಾ ಪಿಕ್ಚರ್ಸ್ ಲಾಂಛನದಲ್ಲಿ 'ಚಂದ್ರಹಾಸ' ಚಿತ್ರ ತಯಾರಿಸಿದರು. ಇದಕ್ಕೆ 'ಎನ್ಕೆ' ಅವರು ಕಥೆ, ಸಂಭಾಷಣೆ ಬರೆದಿದ್ದು ಬಸವರಾಜ ಮನ್ಸೂರರು ಸಂಗೀತ ನಿರ್ದೇಶನ ಮಾಡಿದರು. ಇದಲ್ಲದೆ ಬಸವರಾಜರು 'ರತ್ನಮಂಜರಿ', 'ರಾಜತರಂಗ', 'ಜಾನೆ ಆಲಮ್'ಗಳಿಗೂ ಸಂಗೀತ ನಿರ್ದೇಶಿಸಿದ್ದಾರೆ. 1955 ರಲ್ಲಿ ಉತ್ತರ ಕರ್ನಾಟಕದಿಂದ ಬಂದ 'ವಿಚಿತ್ರ ಪ್ರಪಂಚ' ಸಿನಿಮಾವಿಗೆ ದ.ರಾ.ಬೇಂದ್ರೆ ಅವರು ಚಿತ್ರಕಥೆ ಬರೆದಿದ್ದರು. ಈ ಎಲ್ಲ ಚಿತ್ರಗಳು ಹಳೆಯ ಮೈಸೂರು ಪ್ರಾಂತದಲ್ಲಿ ಭಾಷಾ ಪ್ರಬೇಧದಿಂದಾಗಿ ಹೆಚ್ಚಿನ ಯಶಸ್ಸು ಕಾಣಲಿಲ್ಲ. ಅರವತ್ತರ ದಶಕದಲ್ಲಿ ಹುಬ್ಬಳ್ಳಿಯ ಸುಖದೇವ ಕುಂಠೆ ಹಾಗೂ ಆರ್.ಪಿ. ಶೇಣ್ವೆ ಅವರುಗಳು 'ನಾಗಾನಂದ' ಎಂಬ ಸಿನಿಮಾ ತಯಾರಿಸಿದರೂ ಕಾರಣಾಂತರದಿಂದ ಅಪೂರ್ಣವಾಗಿ ಉಳಿಯಿತು. 1967 ರಲ್ಲಿ ಅನಂತ ಹಿರೇಗೌಡರು 'ಸಂಗೊಳ್ಳಿ ರಾಯಣ್ಣ' ಚಿತ್ರವನ್ನು ಚಿತ್ರವಾಣಿ ಲಾಂಛನದಲ್ಲಿ ಹೊರತಂದರು. ಕಲಗೇರಿಯ ವಿ.ಎಸ್. ಪಾಟೀಲರು ಸಂಗೊಳ್ಳಿರಾಯಣ್ಣನಾಗಿ ಅಭಿನಯಿಸಿದ್ದರು. ಹಿರೇಕೆರೂರಿನ ಛಾಯಾಗ್ರಾಹಕ ಕೆ.ಜಿ. ಸೋಮಶೇಖರ್ ಅವರು ಕಲಾನಿರ್ದೇಶಕರಾಗಿದ್ದ ಬಸವರಾಜ ಕಟ್ಟೀಮನಿ ಅವರ 'ಮಾಡಿ ಮಡಿದವರು' ಕಾದಂಬರಿ ಆಧಾರಿತ ಅದೇ ಹೆಸರಿನ ಚಿತ್ರದಲ್ಲಿ (1974) ರಾಮಗೋಪಾಲ್, ಏಣಗಿ ಬಾಳಪ್ಪ, ಗೋವಿಂದ ಮಣ್ಣೂರ್ ಅವರುಗಳು ಅಭಿನಯಿಸಿದ್ದು, ಚಿತ್ರಕ್ಕೆ ರಾಜ್ಯ ಪ್ರಶಸ್ತಿ ಬಂದಿತು. ಬಸಂತಕುಮಾರ ಪಾಟೀಲರು ತಪ್[illegible] ಫಿಲಂಮ್ಸ್ ಲಾಂಛನದಲ್ಲಿ ತಯಾರಿಸಿದ 'ಮಾಂಗಲ್ಯ ಬಂಧನ' ಚಿತ್ರದಲ್ಲಿ ಸ್ವತಃ ನಾಯಕರಾಗಿ ನಟಿಸಿದ್ದರು.

ಕಳೆದ ಇಪ್ಪತ್ತು ವರ್ಷಗಳಿಂದ ಚಿತ್ರೋದ್ಯಮದಲ್ಲಿ ತೊಡಗಿರುವವರೆಂದರೆ ಹುಬ್ಬಳ್ಳಿಯ ಶ್ರೀ ಭುವನೇಶ್ವರಿ ಆರ್ಟ್ ಪ್ರೊಡಕ್ಷನ್ ಅವರು. ಹುಬ್ಬಳ್ಳಿಯ ಎಸ್.ಡಿ. ಅಂಕಲಗಿ, ಬಿ.ಎಚ್. ಚಂದಣ್ಣನವರ, ಸುರೇಂದ್ರ ಇಂಗಳೆ, ಮೋಹನ್‌ರಾವ್ ಜಿ ಹುಬ್ಳಿಕರ ಅವರು ಜೊತೆಗೂಡಿ ಆರಂಭಿಸಿದ ಈ ಸಂಸ್ಥೆಯಿಂದ ಬದುಕು ಬಂಗಾರವಾಯಿತು (1976), ಸೊಸೆ ತಂದ ಸೌಭಾಗ್ಯ (1977) (ಇದು ಕನ್ನಡದ ಪ್ರಥಮ ಸಿನಿಮಾಸ್ಕೋಪ್ ಚಿತ್ರ), ಅತ್ತೆಗೆ ತಕ್ಕ ಸೊಸೆ (1979), ಪಟ್ಟಣಕ್ಕೆ ಬಂದ ಪತ್ನಿಯರು (1980) ಗುಣ ನೋಡಿ ಹೆಣ್ಣು ಕೊಡು (1982), ಪ್ರೇಮವೇ ಬಾಳಿನ ಬೆಳಕು (1984), ಪ್ರಾಣಸ್ನೇಹಿತ (1993), ಚಲನಚಿತ್ರಗಳು ತಯಾರಾಗಿದ್ದು, ಇವುಗಳಿಗೆ ಉತ್ತರ ಕನ್ನಡ ಪ್ರದೇಶದ ಜನಪ್ರಿಯ ನಾಟಕಗಳ ಕಥೆಗಳನ್ನೇ ಆಧರಿಸಿಕೊಳ್ಳಲಾಗಿತ್ತು.

ಗುಡಿಗೇರಿ ಸಂಗಮೇಶ್ವರ ನಾಟಕ ಕಂಪನಿಯ ಮಾಲಿಕರಾದ ಎನ್. ಬಸವರಾಜ ಅವರು 1977 ರಲ್ಲಿ 'ವೀರಸಿಂಧೂರ ಲಕ್ಷ್ಮಣ' ಹಾಗೂ 1981 ರಲ್ಲಿ 'ರೈತನ ಮಕ್ಕಳು' ನಿರ್ಮಿಸಿದರಲ್ಲದೆ ಮುಖ್ಯಪಾತ್ರವನ್ನೂ ವಹಿಸಿದ್ದರು. ಕುಂದಗೋಳದ ಎಂ. ಗುರುಪಾದ ಅವರು 1979 ರಲ್ಲಿ ನಿರ್ಮಿಸಿದ 'ನಾನಿರುವುದೇ ನಿನಗಾಗಿ' ಎಂಬ ಕನ್ನಡ ಚಿತ್ರವಲ್ಲದೆ ತೆಲುಗು, ತಮಿಳು, ಹಿಂದಿ ಭಾಷೆಗಳಲ್ಲೂ

ಚಿತ್ರಗಳನ್ನು ನಿರ್ಮಿಸಿದ್ದಾರೆ. ಹುಬ್ಬಳ್ಳಿಯ ಸುಖದೇವ ಕುಂತೆ, ಆರ್.ಪಿ. ಶೇಣ್ವೆ, ಎಂ.ವಿ. ಕೋರಿ ಅವರು 'ಶ್ರೀ ದುರ್ಗ ಕಂಬೈನ್ಸ್' ಲಾಂಛನದಲ್ಲಿ ಹೊರತಂದ 'ಮುದುಡಿದ ತಾವರೆ ಅರಳಿತು' ಚಿತ್ರ ಶತದಿನೋತ್ಸವ ಆಚರಿಸಿತು. ಅಲ್ಲದೆ ಈ ಸಂಸ್ಥೆಯಿಂದ 'ಸಾಂಗ್ಲಿಯಾನ', 'ಊರಿಗಿಟ್ಟ ಕೊಳ್ಳಿ', 'ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್', 'ಟೈಗರ್ ಗಂಗು', 'ಭರತ್', 'ಕಲಿಯುಗದ ಭೀಮ', 'ರಣಚಂಡಿ' ಇತ್ಯಾದಿ ಚಿತ್ರಗಳು ಪೂರ್ಣಗೊಂಡವು.

ಹುಬ್ಬಳ್ಳಿಯ ಸುರೇಶ್ ಹೆಬ್ಳಿಕರ್ ಅವರು ಸ್ವತಃ ನಟರು ಹಾಗೂ ನಿರ್ಮಾಪಕರು ನಿರ್ದೇಶಕರು, 'ಕಾಡಿನ ಬೆಂಕಿ', 'ಪ್ರಥಮ ಉಷಾಕಿರಣ', 'ಚಮತ್ಕಾರ' ಚಿತ್ರಗಳನ್ನು ನಿರ್ದೇಶಿಸಿ ನಿರ್ಮಿಸಿದ್ದಾರೆ. 'ಕಾಡಿನ ಬೆಂಕಿ'ಗೆ ರಾಷ್ಟ್ರಪ್ರಶಸ್ತಿ ಬಂದಿದೆ. ಹುಬ್ಬಳ್ಳಿಯ ಎಫ್.ಡಿ. ಸಾಲಿ ಅವರು 'ಏಳು ಕೋಟಿ ಫಿಲಮ್ಸ್' ಲಾಂಛನದಲ್ಲಿ 'ಏಳು ಕೋಟಿ ಮೈಲಾರ ಲಿಂಗ', ರಾಷ್ಟ್ರಪ್ರಶಸ್ತಿ ಬಂದ 'ಸಂಗ್ಯಾಬಾಳ್ಯಾ' ಹಾಗೂ 'ಪತಿತ ಪಾವನ' ಚಿತ್ರಗಳು ಬಂದಿವೆ. ಹುಬ್ಬಳ್ಳಿಯ ಗುರುರಾಜ ಕಾಟೆ ಅವರು 'ಸಂಚಾರಿ', 'ಮೈಲಾರ ಲಿಂಗ', 'ಬಂಗಾರದ ಗೂಳಿ' ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಈ ಚಿತ್ರಗಳನ್ನು ಜಿಲ್ಲೆಯಲ್ಲಿಯೇ ಸ್ಥಳೀಯ ಕಲಾವಿದರೊಂದಿಗೆ ಚಿತ್ರಿಸಲಾಗಿದೆ. 'ಕಿತಾಪತಿ' ಸಿನಿಮಾಕ್ಕೆ ಕಲಾವಿದ ಆರ್ಯ ಅವರು ನಿರ್ದೇಶನ ನೀಡಿದ್ದು ರಾಜ್ಯ ಪ್ರಶಸ್ತಿ ಗಳಿಸಿತು.

ಇದಲ್ಲದೆ ಮಾತೆ ಮಹಾದೇವಿ ಅವರ 'ಕ್ರಾಂತಿಯೋಗಿ ಬಸವಣ್ಣ' ಮುಂಬಯಿಯ ವಸಂತ ಕುಮಾರ್ ಗೋಣಿ ಅವರ 'ಅಲ್ಲಾ ನೀನೇ, ನೀನೇ ಈಶ್ವರ' ಹಾಗೂ 'ಅಬಲೆ', ಬೈಲಹೊಂಗಲದ ಗಂಗಣ್ಣ ಬೋಳನಗೌಡರ ಅವರ 'ಅಮೃತಸಿಂಧು' ಚಿತ್ರಗಳಲ್ಲಿ ಜಿಲ್ಲೆಯ ಕಲಾವಿದರಿದ್ದು ಸ್ಥಳೀಯವಾಗಿಯೇ ಚಿತ್ರೀಕರಣ ನಡೆಸಲಾಗಿದೆ. ಕೆಂಭಾವಿಮಠ್ ಅವರು ತಮ್ಮ 'ಎರಡು ಹೃದಯ' ಚಲನಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ರಚಿಸಿರುವರಲ್ಲದೆ ಸ್ವತಃ ನಿರ್ಮಾಣ ನಿರ್ದೇಶನ ಹಾಗೂ ಛಾಯಾಗ್ರಹಣ ಮಾಡಿದ್ದಾರೆ.

ಶಂಕರ ಮೊಕಾಶಿ ಪುಣೇಕರ ಅವರ 'ಗಂಗವ್ವ ಗಂಗಾಮಾಯಿ' ಕಾದಂಬರಿ ಆಧಾರಿತ ಅದೇ ಹೆಸರಿನ ಚಿತ್ರವನ್ನು ವಸಂತ ಮೊಕಾಶಿ ಪುಣೇಕರ ಅವರು ನಿರ್ದೇಶಿಸಿದ್ದು ಸುಲಭಾ ದೇಶಪಾಂಡೆ, ಪದ್ಮಾ ಹಾಗೂ ರೋಹಿಣಿ ದೇಶಪಾಂಡೆ ಮುಂತಾದವರು ತಾರಾಗಣದಲ್ಲಿದ್ದಾರೆ. ಈ ಚಿತ್ರದ ನಿರ್ಮಾಪಕರಾದ ಚಂದೂಲಾಲ್ ಜೈನ್ ಅವರು ರಾಣೆಬೆನ್ನೂರಿನವರಾಗಿದ್ದು ಅನೇಕ ಹೆಸರಾಂತ ಚಿತ್ರಗಳ ನಿರ್ಮಾಪಕರೆನಿಸಿದ್ದಾರೆ. 'ಏಳು ಸುತ್ತಿನ ಕೋಟೆ', 'ಆಟ ಬೊಂಬಾಟ'ಗಳಿಗೆ ಸಹನಿರ್ದೇಶನ ಮಾಡಿದ ಧಾರವಾಡದ ಶ್ರೀಕಾಂತ ಕುಲಕರ್ಣಿ ಅವರು ದೂರದರ್ಶನಕ್ಕೆ 'ಎಳೆಯರ ಗೆಲವು', 'ಅಂಕಲ್ ಯೆಲ್ಲಪ್ಪ'ಗಳಲ್ಲದೆ 'ವಿಕ್ರಮ' ಹಾಗೂ 'ಸೂರ್ಯಕಿರಣ' ಚಲನ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಹುಬ್ಬಳ್ಳಿಯ ಕಿರಣ್‌ಕುಮಾರ್ 'ನವಿಲೂರ ನೈದಿಲೆ' ನಿರ್ಮಿಸಿದ್ದಾರೆ.

ಜಿಲ್ಲೆಗೆ ಮುಂಬಯಿ ಹತ್ತಿರವಿದ್ದು ಅಲ್ಲಿಯ ಸಾಂಸ್ಕೃತಿಕ ಪ್ರಭಾವವೂ ಇಲ್ಲಿಗೆ ಗಾಢವಾಗಿಯೇ ಬಂದಿದೆ. ಅದರಗುಂಚಿಯ ಶಾಂತಾ ಹೆಬ್ಳೀಕರ್ ಅವರು ಮೊದಲು ಗದಗ್‌ನಲ್ಲಿದ್ದ ಗುಬ್ಬಿಕಂಪನಿಯಲ್ಲಿದ್ದು ನಂತರ ಮುಂಬಯಿಯ ಸಿನಿಮಾ ಕ್ಷೇತ್ರಕ್ಕೆ ಸೇರಿದರು. ಅವರ ಮೊದಲ ಚಿತ್ರ 'ಮೇರಾ ಲಡಕಾ' ನಂತರ ಶಾಂತಾರಾಂ ಅವರ 'ಆದ್ಮಿ' 'ಮಾಣುಸ್' ಇತ್ಯಾದಿಯಲ್ಲಿ ಅಭಿನಯಿಸಿದರು. 1943 ರಲ್ಲಿ ತಯಾರಾದ ಅನಕ್ಕ ಅವರ 'ಜೀವನ ನಾಟಕ'ದಲ್ಲಿಯೂ ಪಾತ್ರವಹಿಸಿದ್ದರು. ವಿ. ಶಾಂತಾರಾಂ ಅವರು ಮೂಲತಃ ವಿಜಾಪುರ ಜಿಲ್ಲೆಯವರಾಗಿದ್ದು, ಹುಬ್ಬಳ್ಳಿಯ ಡೆಕ್ಕನ್ ಪಿಕ್ಚರ್ಸ್‌ನಲ್ಲಿ ನೌಕರರಾಗಿದ್ದು ನಂತರ ಮುಂಬಯಿಯ ಸಿನಿಮಾ ಪ್ರಪಂಚ ಸೇರಿ ವಿಶ್ವವಿಖ್ಯಾತರಾದರು. ಅಂತೆಯೇ ಗಿರೀಶ್‌ಕಾರ್ನಾಡ್ ಅವರು ಧಾರವಾಡದವರಾಗಿದ್ದು, ದ.ರಾ. ಬೇಂದ್ರೆಯವರ ಬಗ್ಗೆ ಕಿರುಚಿತ್ರವೂ ಸೇರಿದಂತೆ ಹಲವಾರು ಕಿರುಚಿತ್ರಗಳನ್ನೂ, ಪೂರ್ಣಪ್ರಮಾಣದ ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಅವರು ಕನ್ನಡ, ಹಿಂದಿಗಳಲ್ಲಿ ಖ್ಯಾತ ನಟರಾಗಿದ್ದು ಅನೇಕ ಕನ್ನಡ ಹಾಗೂ ಹಿಂದಿ ಚಲನಚಿತ್ರಗಳಲ್ಲಿ, ದೂರದರ್ಶನದ ಧಾರವಾಹಿಗಳಲ್ಲಿ ನಟಿಸಿದ್ದಾರೆ. ಅವರ ಬಹುತೇಕ ಎಲ್ಲ ಚಿತ್ರಗಳಿಗೂ ರಾಜ್ಯ ಇಲ್ಲವೆ ರಾಷ್ಟ್ರಪ್ರಶಸ್ತಿಗಳು ಸಂದಿವೆ. ಧಾರವಾಡದ ಸಯ್ಯದ್ ಖಯೂಮ್ ಕತ್ತಿವರಸೆಯ ಪಟುವೂ ಆಗಿದ್ದು 'ಪುಕಾರ್', 'ಕಾನೂನ್', 'ಶಂಕರಪಾರ್ವತಿ', 'ತಕದೀರ್' ಇತ್ಯಾದಿ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಇವರಲ್ಲದೆ ಜಿಲ್ಲೆಯ ನಟನ ವರ್ಗದವರಲ್ಲಿ ಲೀನಾಚಂದಾವರ್ಕರ್ ಮತ್ತು ಅವರ ತಾಯಿ ಸುಧಾ ಜೋತಾಡಿ ಚಂದಾವರ್ಕರ್, ರಾಮಗೋಪಾಲ್, ಗೋವಿಂದಮಣ್ಣೂರ, ವಸಂತಸಾ ನಾಕೋಡ, ಹಾವೇರಿಬಾಬು, ಸಾವಿತ್ರಿಗುಂಡಿ, ಪುಂಡಲೀಕ ಶೇಟ್, ವಿಕ್ರಮ್, ಹನುಮಂತರಾವ್ ಮುಂತಾದವರನ್ನು ಹೆಸರಿಸಬಹುದು.

ಚಿತ್ರ ಸಾಹಿತ್ಯ ರಚನಕಾರರಲ್ಲಿ ದ.ರಾ.ಬೇಂದ್ರೆ, ಶ್ರೀನಿವಾಸ ಕುಲಕರ್ಣಿ, ಜಡಭರತ (ಜಿ.ವಿ. ಜೋಶಿ), ಸುರೇಶ್ ಹೆಬ್ಳಿಕರ್, ಸುದರ್ಶನ ದೇಸಾಯಿ, ಬುದ್ದಣ್ಣ ಹಿಂಗಮಿರೆ, ಶಂಕರ ಮೊಕಾಶಿ ಪುಣೇಕರ, ಗಿರೀಶ್ ಕಾರ್ನಾಡ್, ಮಲ್ಲಿಕಾರ್ಜುನ ಸಿಂದಗಿ, ಶಿವಾನಂದ

ಕುಲಕರ್ಣಿ, ಗೀತಾಕುಲಕರ್ಣಿ, ಶ್ರೀನಿವಾಸ ಕುಲಕರ್ಣಿ, ವೀಣಾ ಶಾಂತೇಶ್ವರ ಇವರು ಸ್ಮರಣೀಯರು. ತಾಂತ್ರಿಕ ವರ್ಗದವರಲ್ಲಿ ಗುರುರಾಜ ಕಾಟೆ (ನಿರ್ದೇಶಕ), ಕೈಲಾಸ ಅಥಣಿ (ಛಾಯಗ್ರಾಹಕ, ನಿರ್ದೇಶಕ) ವಸಂತಕುಮಾರ ದೇಸಾಯಿ (ನಿರ್ದೇಶಕ, ನಿರ್ಮಾಪಕ) ಸುಧೀಂದ್ರಕಲ್ಲೋಳ (ನಿರ್ದೇಶಕ) ಮುಂತಾದವರನ್ನು ಹೆಸರಿಸಬಹುದು. ಧಾರವಾಡದ ಸುಭಾಷ್ ಕಡಕೋಳ ಅವರು ಥರ್ಮಾಕೋಲ್ ಬಳಸಿ ಸಿನಿಮಾದ ಸೆಟ್ ಹಾಕುವುದರಲ್ಲಿ ಸಾಕಷ್ಟು ಪ್ರಸಿದ್ಧರಾಗಿದ್ದಾರೆ.

**ಚಿತ್ರಮಂದಿರಗಳು** : ಜಿಲ್ಲೆಯಲ್ಲಿ ಒಟ್ಟು 90 ಚಿತ್ರಮಂದಿರಗಳಿದ್ದು ಅವುಗಳಲ್ಲಿ 29 ಸಂಚಾರಿ ಚಿತ್ರಮಂದಿರಗಳು. ಎರಡು ವಿಶಾಲ ತೆರೆಯ (70 ಎಂ.ಎಂ.) ಚಿತ್ರಮಂದಿರಗಳು. ಅಣ್ಣಿಗೇರಿ, ಅಕ್ಕಿ ಆಲೂರು, ಆಡೂರು, ಬಂಕಾಪುರ, ಬಮ್ಮನಹಳ್ಳಿ, ಬೆಳ್ಳಟ್ಟಿ, ಚಿಕ್ಕೆರೂರು, ಚಿಕ್ಕಂಸಿ ಹೊಸೂರು, ಗಜೇಂದ್ರಗಡ, ಗುತ್ತಲ, ಗುಡಿಗೇರಿ, ಹಿರೇಕೆರೂರು, ಹೊಳೆ ಆಲೂರು (2), ಹುಲಗೂರು, ಹೊಸರಿತ್ತಿ, ಕೆರೆಮಲ್ಲಾಪುರ್, ಕೊಣ್ಣೂರ್, ಮೇದೂರು, ಮುಳಗುಂದ, ನರಗುಂದ, ರೋಣ, ರಟ್ಟೀಹಳ್ಳಿ, ಶಿಗ್ಗಾಂವಿ, ಸವಣೂರು, ಅಂಶಿ, ಶಿಗ್ಲಿ, ತಿಳವಳ್ಳಿ ಮತ್ತು ತುಮ್ಮಿನ ಕಟ್ಟೆಗಳಲ್ಲಿ ಸಂಚಾರಿ ಚಿತ್ರಮಂದಿರಗಳಿವೆ. ಅಳ್ನಾವರ, ಬ್ಯಾಡಗಿ (2), ಧಾರವಾಡ (7), ಗದಗ (6), ಗಜೇಂದ್ರಗಡ, ಹುಬ್ಬಳ್ಳಿ (17), ಹಾವೇರಿ (2) ಹಿರೇಕೆರೂರು (2) ಹಾನಗಲ್ (2), ಕಲಘಟಗಿ, ಕುಂದಗೋಳ, ಲಕ್ಷ್ಮೇಶ್ವರ (2), ಮುಂಡರಗಿ (2) ಮಾಸೂರು (2), ನರಗುಂದ, ನವಲಗುಂದ, ನರೇಗಲ್, ರಾಣೆಬೆನ್ನೂರು (4), ರೋಣ, ಶಿರಹಟ್ಟಿ, ಶಿಗ್ಗಾಂವಿ, ಸವಣೂರು, ಶಿರೋಳ, ಕುಮಾರಪಟ್ಟಣಗಳಲ್ಲಿ ಖಾಯಂ ಚಿತ್ರಮಂದಿರಗಳಿವೆ. ಜಿಲ್ಲೆಯಲ್ಲಿ ಮೂವತ್ತ ಎಂಟು ಚಿತ್ರವಿತರಣೆ ಮಾಡುವ ಸಂಸ್ಥೆಗಳಿದ್ದು ಅವುಗಳಲ್ಲಿ ಒಂದು ಗದಗದಲ್ಲಿಯೂ ಉಳಿದವುಗಳೆಲ್ಲ ಹುಬ್ಬಳ್ಳಿಯಲ್ಲಿಯೂ ಕಾರ್ಯ ನಿರ್ವಹಿಸುತ್ತಿವೆ.

**ಚಲನಚಿತ್ರ ಪತ್ರಿಕೆಗಳು** : ಪ.ಲೋ. ಬಂಕಾಪುರ ಅವರ 'ಚಿತ್ರಾ', ಪಾಟೀಲ ಅವರ 'ಕಲ್ಪನಾ', ಎಸ್.ಎಸ್. ಜೋಶಿ ಅವರ 'ಚಿತ್ರಲತಾ', ಎಲ್.ಪಿ. ಬಂಕಾಪುರ ಅವರ 'ನಟರಾಜ', ಪಾಟೀಲ ಪುಟ್ಟಪ್ಪ ಅವರ 'ಮನೋರಮ', ಬಾಬು ಬೆಳ್ಳಮರದ ಅವರ 'ರಸರಂಗ', ರಾಜು ಶ್ರೇಷ್ಠಿ ಅವರ 'ಯೌವನ' ಇತ್ಯಾದಿಗಳು ಜಿಲ್ಲೆಯ ಸಿನಿಮಾ ಪತ್ರಿಕೆಗಳಾಗಿದ್ದು ಈಗ 'ನಟರಾಜ' ಹಾಗೂ 'ಚಿತ್ರಲತಾ' ಹೊರಬರುತ್ತಿವೆ.*

## ಜಾನಪದ

ಧಾರವಾಡ ಜಿಲ್ಲೆಯಲ್ಲಿ ಶಿಷ್ಟ ಕಲೆಗೆ ದೊರೆತಷ್ಟೇ ಪ್ರೋತ್ಸಾಹ ಉತ್ತೇಜನಗಳು ಜಾನಪದ ಕಲೆಗಳಿಗೂ ದೊರೆತಿದ್ದು ಇಂದಿಗೂ ಜೀವಂತವಾಗಿ ಉಳಿಯುವಂತಾಗಿದೆ. ಜನರ ದೈನಂದಿನ ಬದುಕಿನೊಂದಿಗೇ ಕಲಾತ್ಮಕತೆಯನ್ನು ಕಂಡುಕೊಂಡಿರುವುದೇ ಜಾನಪದ ಕಲೆ ವ್ಯಾಪಕವಾಗಿ ಕಂಡು ಬರಲು ಕಾರಣವಾಗಿದೆ. ವಾರದ ಸಂತೆಗಳಲ್ಲಿ, ವಾರ್ಷಿಕ ಜಾತ್ರೆಗಳಲ್ಲಿ ಮಾರಾಟಕ್ಕೆ ಬರುವ ಗೃಹೋಪಯೋಗಿ ವಸ್ತುಗಳಾದ ದನದ ಚಾಟಿಯಿಂದ ಹಿಡಿದು ಅನೇಕ ವಸ್ತುಗಳನ್ನು ವಿಶಿಷ್ಟ ವಿನ್ಯಾಸಗಳೊಂದಿಗೆ ವರ್ಣಮಯವಾಗಿ ರಚಿಸಿರುವುದನ್ನು ಕಾಣಬಹುದು. ಮರದ ಬಾಗಿಲುವಾಡಗಳು, ಕಂಬ, ಜಂತಿಗಳು ಕಲ್ಯಾಣ ಚಾಳುಕ್ಯರ ಶಿಲ್ಪಕಲೆಯನ್ನು ನೆನಪಿಸುವಂತೆ ಕಲಾತ್ಮಕತೆಯಿಂದ ಕೂಡಿದ್ದು ಪರಂಪರೆಯ ಮುಂದುವರಿಕೆಯಂತಿದೆ.

ಹಬ್ಬ ಹರಿದಿನಗಳಲ್ಲಿ ಊರು, ಕೇರಿ ಹಾಗೂ ಮನೆಗಳನ್ನು ಪೈಪೋಟಿಯೆಂಬಂತೆ ಸಿಂಗರಿಸುವಾಗ ಜಾನಪದ ಚಿತ್ರ, ಶಿಲ್ಪ, ರಂಗೋಲಿಗಳಲ್ಲಿ ಹೆಚ್ಚಿನ ಅಂಶಗಳನ್ನು ಕಾಣಬಹುದು. ಮುಖ್ಯವಾಗಿ ಉಗಾದಿಯಲ್ಲಿ ನೀರು ತುಂಬುವ ಪಾತ್ರೆಗಳ ಮೇಲೆ, ಬಸವಜಯಂತಿ ಹಾಗೂ ಕಾರು ಹುಣ್ಣಿಮೆಗಳಲ್ಲಿ ಕೊಟ್ಟಿಗೆ ಹಾಗೂ ಎತ್ತುಗಳಿಗೆ ಸುಳಹು ಹೊಳಹುಗಳಿಂದ ಚಿತ್ರಿಸುತ್ತಾರೆ. ವಟಸಾವಿತ್ರಿ ವ್ರತದಲ್ಲಿ ಸತ್ಯವಾನ್ ಸಾವಿತ್ರಿ ಹಾಗೂ ಯಮಧರ್ಮರಾಯರ, ಮಂಗಳಗೌರಿ ವ್ರತದಲ್ಲಿ ಪಾರ್ವತಿಯ, ನಾಗರ ಪಂಚಮಿಯಲ್ಲಿ ನಾಗನ, ಸಿರಿಯಾಳ ಷಷ್ಠಿಯಲ್ಲಿ ಸಿರಿಯಾಳ, ಚಂಗಳೆಯರ, ಕಾಮನ ಹಬ್ಬದಲ್ಲಿ ರತಿ ಮನ್ಮಥರ ಚಿತ್ರ ಅಥವಾ ಮೂರ್ತಿಗಳನ್ನು ರಚಿಸಿ ಪೂಜಿಸುತ್ತಾರೆ. ಮಣ್ಣೆತ್ತಿನ ಅಮಾವಾಸ್ಯೆಯಂದು ಮಣ್ಣಿನಲ್ಲಿ ಬಸವ, ಗುಳ್ಳವ್ವನ ಹಬ್ಬದಲ್ಲಿ ಕಂಬಗಳೋಪಾದಿಯ ರಚನೆಗಳು, ಗೋಕುಲಾಷ್ಟಮಿಯಲ್ಲಿ ಕೃಷ್ಣ, ಬಲರಾಮರ ಮೂರ್ತಿಗಳು, ನವರಾತ್ರಿಯ ಗೊಂಬೆಗಳು, ಸೀಗೆ ಹುಣ್ಣಿಮೆಯಲ್ಲಿ ಮಣ್ಣಿನ ಇಲ್ಲವೆ ಕಟ್ಟಿಗೆಯ 'ಸೀಗೆ' (ಗೌರಿ), ದೀಪಾವಳಿಯಲ್ಲಿ ಲಕ್ಷ್ಮೀಕಳಸ ಇತ್ಯಾದಿ ಶಿಲ್ಪಾಕೃತಿಗಳನ್ನು, ಬನದ ಹುಣ್ಣಿಮೆಯಲ್ಲಿ ಗೋಮಯ ಮಾಡಿದ

* ಸಿನಿಮಾ ಕುರಿತ ಈ ಉಪ ಅಧ್ಯಾಯಕ್ಕೆ ಮಾಹಿತಿಯನ್ನು ನೀಡಿದವರು ಹುಬ್ಬಳ್ಳಿಯ ದುರ್ಗ ಎಂಟರ್ ಪ್ರೈಸಸ್‌ನ ಡಾ: ಪಿ.ಆರ್. ಶೇಣ್ವಿ ಅವರು.

ಗೋಡೆಗಳ ಮೇಲೆ ಸುಣ್ಣದಿಂದ ರಥ, ನಕ್ಷತ್ರ, ಪಶುಪಕ್ಷಿ ಗಿಡಮರಗಳ ಚಿತ್ರ, ರಥಸಪ್ತಮಿಯಲ್ಲಿ ಹಲಗೆಯ ಮೇಲೆ ರಕ್ತಚಂದನದಿಂದ ಸಪ್ತಾಶ್ವರೂಢ ಸೂರ್ಯನ ಚಿತ್ರ, ಭರತ ಹುಣ್ಣಿಮೆಯಲ್ಲಿ ಚುಕ್ಕಿ ಸುಳಹು ಹೊಳಹು ಹಾಗೂ ತೇರಿನ ಚಿತ್ರ ಇತ್ಯಾದಿಗಳ ರಚನೆಯಲ್ಲಿ ಜಾನಪದ ಚಿತ್ರ ರಚನೆಯ ಅಂಶಗಳನ್ನು ಕಾಣಬಹುದು. ಮಣ್ಣಿನ ಗಣಪತಿ ಮತ್ತು ಜೋಕುಮಾರ ಮೂರ್ತಿಗಳ ಹಾಗೂ ಕಾಮನ ಹಬ್ಬದಲ್ಲಿ ಕಾಮನ ಚಿತ್ರ ರಚನೆಗಳು ಜಿಲ್ಲೆಯ ಜಾನಪದ ಕಲೆಯ ವಿಶಿಷ್ಟ ಕೊಡುಗೆಗಳಾಗಿವೆ. ಜೋಕುಮಾರ, ಹೋಳಿ, ಹಗರಣ (ಪಗರಣ) ಇತ್ಯಾದಿ ಹಬ್ಬಗಳ ಆಚರಣೆ ಹಾಗೂ ಆ ಸಂದರ್ಭದಲ್ಲಿ ಹಾಡುವ ಜಾನಪದ ಗೀತೆಗಳ ಬಗ್ಗೆ ಸಂಗ್ರಹಣೆ ಅಧ್ಯಯನಗಳು ನಡೆದಿವೆ.

ಮದುವೆಯ ಕಾಲದಲ್ಲಿ ಹಾಕುವ 'ಹಾಸಕ್ಕಿ'ಯ ಚಿತ್ರ, ಹಚ್ಚೆ, ರಂಗೋಲೆ ಇತ್ಯಾದಿ ಧಾರ್ಮಿಕ ಸಂಪರ್ಕ ಹೊಂದಿದ ಕಲೆಗಳು ಜಿಲ್ಲೆಯಲ್ಲಿ ಜೀವಂತವಿದೆ. ಜಿಲ್ಲೆಯ ಜಾನಪದ ಕಲೆಯನ್ನೇ ಕುರಿತು ಡಾ|| ಎನ್.ಸಿ. ಪಾಟೀಲರ ಜಾನಪದ ಚಿತ್ರಕಲೆ ಒಂದು ಅಧ್ಯಯನ, ಡಾ|| ಶಿವಾನಂದ ಗುಬ್ಬಣ್ಣನವರ್ ಅವರ 'ಲಿಂಗಾಯತ ಸಂಸ್ಕಾರಗಳು' ಹಾಗೂ ಡಾ|| ಎಂ. ಚಿದಾನಂದ ಮೂರ್ತಿ ಅವರ 'ಲಿಂಗಾಯತ ಅಧ್ಯಯನಗಳು' ಇತ್ಯಾದಿ ಗ್ರಂಥಗಳಲ್ಲಿ ಅನೇಕ ಉಪಯುಕ್ತ ಮಾಹಿತಿಗಳನ್ನು ಅಧ್ಯಯನ ಸಂಶೋಧನೆಗಳನ್ನು ಕಾಣಬಹುದು.

ಜಾನಪದ ಗೀತೆಗಳ ಸಂಗ್ರಹ ಅಧ್ಯಯನ ಕಾರ್ಯಗಳು ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಈ ಪ್ರದೇಶದಲ್ಲಿ ಆದುದು ಉಲ್ಲೇಖನೀಯ. ಜಾನ್‌ಫ್ಲಿಟ್ 1885 ರಲ್ಲಿಯೇ ಈ ಪ್ರದೇಶದಲ್ಲಿ ಸಂಗ್ರಹಿಸಿ, ಪ್ರಕಟಿಸಿದ ಲಾವಣಿಗಳು, ಜಾನಪದ ಗೀತೆಗಳ ಸಂಗ್ರಹದ ಪ್ರಥಮ ಪ್ರಯತ್ನ. 'ಇಂಡಿಯನ್ ಆ್ಯಂಟಿಕ್ವೇರಿ'ಯಲ್ಲಿ ಪ್ರಕಟವಾದ ಐದು ಲಾವಣಿಗಳಲ್ಲಿ ನರಗುಂದದ ಬಂಡಾಯ ಕುರಿತ ಲಾವಣಿಯೂ ಒಂದು. ಇದಲ್ಲದೆ ಜಿಲ್ಲೆಯ ಇನ್ನೂ ಹಲವಾರು ಗೀತೆಗಳನ್ನು ಫ್ಲೀಟ್ ಅವರು ಸಂಗ್ರಹಿಸಿ ಪ್ರಕಟಿಸಿದರು. ಅವುಗಳಲ್ಲಿ ಹುಬ್ಬಳ್ಳಿಯ ಗುರುಸಿದ್ದ ಎಂಬಾತ ಬರೆದ ಲಾವಣಿಯಲ್ಲಿ 'ಹುಟ್ಟುವಳಿಯ ಮೇಲೆ ತೆರಿಗೆ' ಹಾಕಿದಾಗ ಹೊಮ್ಮಿದ್ದ ಹೃದಯ ಸ್ಪರ್ಶಿಯದ ಕಥಾನಕವಿದೆ. ಇದಲ್ಲದೆ 'ಮುಂಡರಗಿ ಬಂಡಾಯ ಲಾವಣಿ', 'ರಾಮ-ರಾವಣರ ಯುದ್ಧ ಹುಬ್ಬಳ್ಳಿ ಮರ್ಕಟಗಳ ದುಂದುಮೆ' ಇತ್ಯಾದಿ ಜನಪದ ಗೀತೆಗಳಲ್ಲದೆ ಶಿಶುನಾಳ ಶರೀಫರ ಗೀತೆಗಳಲ್ಲಿ, ಶಾಂತಕವಿಗಳ ದುಂದುಮೆಗಳಲ್ಲಿ ಜನಪದ ಅಂಶ ಕಾಣಬಹುದು. ಸವದಿ ಅಣ್ಣಾರಾಯ ಎಂಬುವವರು ಪ್ಲೇಗ್ ಕುರಿತು ಜನರನ್ನು ಎಚ್ಚರಿಸುವಂತಹ ಲಾವಣಿಯನ್ನು ರಚಿಸಿದ್ದಾರೆ. 1931 ರಲ್ಲಿ ಗೆಳೆಯರ ಗುಂಪಿನವರಲ್ಲಿ ಒಬ್ಬರಾದ ಚನ್ನಮಲ್ಲಪ್ಪ ಹಲಸಂಗಿ (ಮಧುರ ಚನ್ನ) ಉಳಿದವರೊಂದಿಗೆ ಸೇರಿ ಪ್ರಕಟಿಸಿದ 'ಗರತಿಯ ಹಾಡು' ಈ ಬಗ್ಗೆಯ ಮೊದಲ ಪ್ರಯತ್ನವಾಗಿದ್ದು ಇದರಲ್ಲಿ ಜಿಲ್ಲೆಯ ಜನಪದ ಗೀತೆಗಳೂ ಸೇರಿವೆ. ಇದಕ್ಕೂ ಮೊದಲೇ 1927 ರಲ್ಲಿ ಗದಗಿನ ಹಳ್ಳಿಗುಡಿಯಿಂದ 'ಸಾವಿರ ಮಾತಿನ ಸರದಾರ' ಎಂಬ ಜನಪದ ಗೀತೆಗಳ ಸಂಗ್ರಹ ಹೊರಬಂದಿತ್ತು. ಗದ್ದಗೀಮಠ ಅವರು 1952 ರಲ್ಲಿ 'ನಾಲ್ಕುನಾಡ ಪದಗಳು' ಸಂಕಲನ ತಂದರು. 1953 ರಲ್ಲಿ ಆರ್.ಎಸ್. ಪಂಚಮುಖಿ ಅವರು 'ಕರ್ನಾಟಕ ಜಾನಪದ ಗೀತೆ'ಗಳನ್ನು 1955 ರಲ್ಲಿ ಎಂ. ಜೀವನ ಅವರು 'ಜಾನಪದ ಗೀತೆಗಳು'ನ್ನು ಸಂಪಾದಿಸಿದರು.

ಜಾನಪದ ಗೀತೆಯ ಸಂಗ್ರಹಣೆ ಅಧ್ಯಯನಗಳಲ್ಲಿ ಡಾ|| ಗದ್ದಗೀಮಠ ಅವರ ಕೊಡುಗೆ ತೀರಾ ಹಿರಿದಾದುದು. 1955 ರಲ್ಲಿ 'ಕಂಬಿಯ ಹಾಡುಗಳು', 56 ರಲ್ಲಿ 'ಜನತಾ ಗೀತೆಗಳು' ಹಾಗೂ 'ಮಲ್ಲಮಲ್ಲಾಣಿ' 59 ರಲ್ಲಿ 'ಕುಮಾರ ರಾಮನ ದುಂದುಮೆ' ಇತ್ಯಾದಿ ಸಂಗ್ರಹಗಳನ್ನು ಹೊರತಂದರು. ಇವುಗಳಲ್ಲಿ ಈ ಪ್ರದೇಶದ ಜನಜೀವನ ಐತಿಹಾಸಿಕ ಅಂಶಗಳು, ವಿಧಿ ಕ್ರಿಯೆ, ಆಚರಣೆಗಳ ಬಗ್ಗೆ ಅನೇಕ ಸಂಗತಿಗಳು ತಿಳಿದು ಬರುವಂತಾಯಿತು. 1955 ರಲ್ಲಿ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪಿಎಚ್.ಡಿ ಮಹಾಪ್ರಬಂಧ 'ಕನ್ನಡ ಜಾನಪದ ಗೀತೆಗಳು' ಈ ಬಗೆಯ ಮೊದಲ ಪ್ರಬಂಧವಾಗಿದ್ದು ಮುಂದಿನ ಕೃತಿಗಳಿಗೆ ಮಾರ್ಗದರ್ಶಕ ಕೃತಿಯಾಯಿತು.

ಆರ್ ಸಿ ಹಿರೇಮಠ ಹಾಗೂ ಸುಂಕಾಪುರ ಅವರುಗಳ ನಿರ್ದೇಶನ ಹಾಗೂ ಮಾರ್ಗದರ್ಶನದಲ್ಲಿ 1970 ರಲ್ಲಿ ಗೋಕಾಕದಲ್ಲಿ ಜಾನಪದ ಸಮ್ಮೇಳನ ನಡೆಸಿ ಜಾನಪದ ಅಧ್ಯಯನಕ್ಕೆ ಒಂದು ವೈಜ್ಞಾನಿಕ ಅಸ್ಥಿಭಾರವನ್ನು ಹಾಕಿದರು. ಹಳ್ಳಿಗರ ಬಾಯಲ್ಲಿದ್ದ ಇಲ್ಲವೆ ಬರಹ ರೂಪದಲ್ಲಿದ ಸಣ್ಣಾಟ ದೊಡ್ಡಾಟಗಳಲ್ಲದೆ ಗೀತೆಗಳ ಸಂಗ್ರಹ ಕಾರ್ಯವೂ ಆರಂಭವಾಯಿತು. ಸುಂಕಾಪುರ ಅವರು 'ಜೀವನ ಜೋಕಾಲಿ' ಎಂಬ ಶಿರೋನಾಮೆಯಲ್ಲಿ 'ಚೌಪದನಗಳು', 'ಸರಸ ವಿರಸ', 'ಗರತಿಯ ಗರಿಮೆ' ಇತ್ಯಾದಿ ಹಲವಾರು ಗೀತ ಸಂಗ್ರಹಗಳನ್ನು ಪ್ರಕಟಿಸಿದರು. 'ಜಾನಪದ ಸಾಹಿತ್ಯ ಮಾಲೆ'ಯಲ್ಲಿ ಹೋಳಿ ಹಾಡು, ಗುಮ್ಮನ ಪದಗಳು, ಡೊಳ್ಳಿನ ಹಾಡು, ಇತ್ಯಾದಿ

ಜಾನಪದ ಗೀತೆಗಳೂ ಶ್ರೀ ಕೃಷ್ಣಪಾರಿಜಾತ, ಅಲ್ಲಮ ಪ್ರಭು, ಪ್ರಮೀಳ ಮುಂತಾದ ಬಯಲಾಟಗಳೂ ಬೆಳಕುಕಂಡು ಅಧ್ಯಯನಕ್ಕೆ ಆಕರಗ್ರಂಥಗಳಾದವು. 'ಜೀವನ ಜೋಕಾಲಿ' ಮಾಲಿಕೆ ಇಂದಿಗೂ ಮುಂದುವರೆದಿದ್ದು ಈಚೆಗೆ 25ನೇ ವರ್ಷದ ಬೆಳ್ಳಿಹಬ್ಬ ಆಚರಿಸಿತು. (ಮಾರ್ಚ್ 95) ಜೀವನ ಜೋಕಾಲಿ ಮಾಲಿಕೆಯಲ್ಲಿ 9 ಭಾಗಗಳೂ, ಜಾನಪದ ಸಾಹಿತ್ಯ ದರ್ಶನದಲ್ಲಿ 18 ಪುಸ್ತಕಗಳೂ ಬಂದಿವೆ. ಇದಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಲ್‌ಆರ್ ಹೆಗಡೆ ಅವರ 'ಗುಮ್ಮನ ಪದಗಳು', 'ಉತ್ತರ ಕನ್ನಡ ಜಿಲ್ಲೆಯ ಜಾನಪದ ಕಥೆಗಳು', 'ಹಾಲಿನ ಕೆನೆ', ಸೋಮಶೇಖರ್ ಇಮ್ರಾಪುರ ಅವರ 'ಕನ್ನಡ ಸಾವಿರ ಒಗಟುಗಳು', ಎಂ.ಎಸ್. ಸುಂಕಾಪುರ ಅವರ 'ಶ್ರೀ ಕೃಷ್ಣ ಸಂಧಾನ' ರೆವರೆಂಡ್ ಫಾದರ್ ಸಿ.ಸಿ.ಎಷ್ಯೆ ಅವರ 'ಜಾನಪದ ವೈಜ್ಞಾನಿಕ ಕಾರ್ಯಕ್ಷೇತ್ರ'. ಬಿ ಬಿ ಹಂಡಿ ಅವರ 'ಆಯ್ದ ಜಾನಪದ ಕಥನ ಗೀತಗಳು', ಶಿವಾನಂದ ಗುಬ್ಬಣ್ಣವರ್ ಅವರ 'ದೇವರ್ ಬಂದಾವ್ ಬನ್ನಿರೆ', ಬಸವರಾಜ ಮಲಶೆಟ್ಟಿ ಅವರ 'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು', ಎನ್‌ಆರ್ ನಾಯಕ್ ಮತ್ತು ಶಾಂತಿ ಎನ್. ನಾಯಕ ಅವರ 'ಉತ್ತರ ಕನ್ನಡ ಜಿಲ್ಲೆಯ ಜಾನಪದ ಆಟಗಳು', ಎಂ.ಟಿ. ಧೂಪದ ಅವರ 'ಶ್ರೀ ಕೃಷ್ಣ ಪಾರಿಜಾತ-ಜಾನಪದ ಶೈಲಿ ಭಾಮಾಕಲಾಪಮು ಕೂಚಿಪುಡಿ ಶೈಲಿ', ವಿಲ್ಯಂ ಮಾಡ್ತಾ ಅವರ 'ಜಾನಪದ ಭಾಷಾ ವಿಜ್ಞಾನ', ಎನ್‌ಆರ್ ನಾಯ್ಕ ಅವರ 'ಗ್ರಾಮೊಕ್ಕಲ ಮಹಾಭಾರತ', ಎಸ್.ಕೆ. ಹೂಗಾರ್ ಅವರ 'ಕಲೆ ಮತ್ತು ಹಬ್ಬ' ಇತ್ಯಾದಿ ಹಲವಾರು ಗ್ರಂಥಗಳನ್ನೂ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ಅನೇಕ ಪುಸ್ತಿಕೆಗಳನ್ನು ಹೊರತಂದಿದೆ.

ಹುಬ್ಬಳ್ಳಿ ಧಾರವಾಡ ಗದಗಗಳ ಖಾಸಗಿ ಪ್ರಕಾಶಕರು ಜಾನಪದ ಗೀತೆಯ ಹೆಸರಿನಲ್ಲಿ ಶೃಂಗಾರ ಪರವಾದ ಗೀತೆಗಳ ಹಲವಾರು ಜನಪ್ರಿಯ ಆವೃತ್ತಿಗಳನ್ನು ತಂದಿದ್ದಾರೆ. ಈಚೆಗೆ ಜಿಲ್ಲೆಯ ಹಲವಾರು ಮಠಮಾನ್ಯಗಳು ಪ್ರೌಢ ಪ್ರಬಂಧಗಳನ್ನು ಪ್ರಕಟಿಸುತ್ತಿದ್ದು ಅವುಗಳನ್ನು ಜಾನಪದಕ್ಕೆ ಸಂಬಂಧಿಸಿದ ಗ್ರಂಥಗಳೂ ಹೊರಬರುತ್ತಿವೆ. ಡಾ॥ ಎನ್.ಸಿ. ಪಾಟೀಲರ 'ಜಾನಪದ ಚಿತ್ರಕಲೆ ಒಂದು ಅಧ್ಯಯನ' ಗದಗಿನ ಮಠದ ಸಹಕಾರದೊಂದಿಗೆ ಹೊರಬಂದ ಪ್ರೌಢಗ್ರಂಥವಾಗಿದೆ.

ಧಾರವಾಡದ ಕನ್ನಡ ಅಧ್ಯಯನ ಪೀಠದಿಂದ ಈವರೆಗೆ (ಮಾರ್ಚ್ 95) 22 ಜಾನಪದ ಸಮ್ಮೇಳನಗಳು ನೆರವೇರಿದ್ದು ಅಧ್ಯಯನದ ಖಚಿತತೆ, ವೈಜ್ಞಾನಿಕ ದೃಷ್ಟಿಕೋನ ಸುವ್ಯವಸ್ಥಿತ ವಿಚಾರ ಪ್ರತಿಪಾದನೆಗಳಿಗೆ ಮಹತ್ವದ ಕಾಣಿಕೆಯಾಗಿದೆ. ಜಾನಪದ ಕಾವ್ಯಗಳ ಭಾಷೆ, ಛಂದಸ್ಸು, ಲಯಗಳಲ್ಲದೆ ಕತೆಯ ವಿಕಾಸ, ಪಾಠಾಂತರ, ರಚನಾತ್ಮಕ ವಿಶ್ಲೇಷಣೆ ಕುರಿತು ಪ್ರಬಂಧಗಳು ಮಂಡಿತವಾಗಿವೆ. ಹಬ್ಬಗಳ ಆಚರಣೆ, ವಿಧಿಕ್ರಿಯೆಗಳ ಬಗ್ಗೆ ಅಧ್ಯಯನಗಳಾಗುವಂತಾಗಿವೆ. ದೊಡ್ಡಾಟ, ಪಾರಿಜಾತ, ಗೊಂಬೆಯಾಟ ಇತ್ಯಾದಿಗಳ ಬಗ್ಗೆ ಆಳವಾದ ಚರ್ಚೆ ತೀರ್ಮಾನಗಳಾಗಿವೆ. ನಶಿಸಿ ಹೋಗುತ್ತಿರುವ ಅನೇಕ ಕಲೆ ಹಾಗೂ ಕಲಾವಿದರನ್ನು ಬೆಳಕಿಗೆ ತರುವಂತೆ ಆಗಿದೆ. ಸಮ್ಮೇಳನದ ಅಂಗವಾಗಿ ಜರಗುವ 'ಜಾನಪದ ರಂಗ ದರ್ಶನ'ದಲ್ಲಿ ಹಲವಾರು ಕಲೆಗಳ ಪ್ರಾತ್ಯಕ್ಷಿಕೆಯನ್ನು ಕಾಣುವಂತಾಗುತ್ತದೆ. ಧಾರವಾಡ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಿಗೆ ಜನಪದ ಒಂದು ವಿಷಯವಾಗಿದೆ.

ಕನ್ನಡ ಮತ್ತು ಸಂಸ್ಕೃತ ಇಲಾಖೆ ಜಾನಪದ ಕಲೆಯ ಉಳಿವಿಗಾಗಿ ಸಾಕಷ್ಟು ಕಾರ್ಯಕ್ರಮ ರೂಪಿಸಿದೆ. ಹಾವೇರಿಯಲ್ಲಿ 1993 ರಲ್ಲಿ ಬೆಳಗಾವಿ ವಲಯ ಜಾನಪದ ಸಮ್ಮೇಳನ ಹಾಗೂ 94 ರಲ್ಲಿ ರೋಣದಲ್ಲಿ ಜಿಲ್ಲಾ ಜಾನಪದ ಸಮ್ಮೇಳನ ರೂಪಿಸಿ ನೂರಾರು ಕಲಾವಿದರಿಂದ ಪ್ರಾತ್ಯಕ್ಷಿಕೆ ಏರ್ಪಡಿಸಿತ್ತು. ವಿಚಾರ ಸಂಕೀರ್ಣಗಳೂ ನಡೆದವು.

ಜಿಲ್ಲೆಯಲ್ಲಿ ದೊಡ್ಡಾಟ, ಸಣ್ಣಾಟ, ಯಕ್ಷಗಾನ (ಮೂಡಲಪಾಯ)ಗಳಲ್ಲದೆ ಡೊಳ್ಳು, ಕೋಲಾಟ, ಹಲಗೆ, ಸೂತ್ರದಗೊಂಬೆ, ಲಾವಣಿ, ಕೀಲುಕುದುರೆ, ಕರಡಿ ಮಜಲು, ಚೌಡಿಕೆ, ಜಗ್ಗಲಿಗೆ ಇತ್ಯಾದಿ ಹಲವಾರು ಜಾನಪದ ಕಲೆಗಳು ಜೀವಂತವಿದ್ದು ಗ್ರಾಮ ಗ್ರಾಮಗಳಲ್ಲಿ ಹಲವಾರು ಉತ್ಸಾಹಿ ಕಲಾವಿದರು ತಂಡಗಳನ್ನು ರೂಪಿಸಿಕೊಂಡು ದೇಶವಿದೇಶಗಳಲ್ಲಿ ಕಾರ್ಯಕ್ರಮವನ್ನು ನೀಡಿದ್ದಾರೆ. ದೈನಂದಿನ ಬದುಕನ್ನು ಕಲಾತ್ಮಕವಾಗಿಸಿಕೊಂಡಿದ್ದಾರೆ.

ಕಳೆದ ಶತಮಾನದ ಅಂತ್ಯದವರೆವಿಗೂ, ದೊಡ್ಡಾಟ, ಸಣ್ಣಾಟಗಳು ಗ್ರಂಥಸ್ಥವಾಗದೆ 'ತೋಂಡಿ' ಯಾಗಿಯೇ ಇದ್ದುದು ಮುದ್ರಣದ ಅವಿಷ್ಕಾರದೊಂದಿಗೆ ಪುಸ್ತಕರೂಪದಲ್ಲಿ ಪ್ರಕಟಗೊಳ್ಳುವಂತಾಯಿತು. ಧಾರವಾಡದ ಅತ್ತಿಗೇರಿ ಮಾಸ್ತರರ 'ಪ್ರಮೀಳ', 'ಇಂದ್ರಕೀಲ', 'ದುಶ್ಯಾಸನವಧ' ಕಳೆದ ಶತಮಾನದಲ್ಲಿ ರಚಿತವಾದವು. ನಂತರದಲ್ಲಿ ನಲವಡಿ ಶ್ರೀಕಂಠಶಾಸ್ತ್ರಿಗಳ (1887-1972) 'ರತಿ ಕಲ್ಯಾಣ', 'ಕಾರ್ತವೀರ್ಯಾರ್ಜುನ', 'ಹನುಮಂತ ಲಿಂಗಧಾರಣ', ಬಳಗಾನೂರು ಮರಿಸ್ವಾಮಿಯವರ (1860-1930) 'ಗಿರಿಜಾ ಕಲ್ಯಾಣ', 'ಶಿವಜಲಂಧರ', ಅಣ್ಣಿಗೇರಿ ವೀರಬಸಪ್ಪ (1890-1941) ಅವರ 'ಐರಾವಣ ಮೈರಾವಣ' ಮುಂತಾದ ದೊಡ್ಡಾಟಗಳೂ,

ಧಾರವಾಡದ ಗುರಪ್ಪ ಗೋಡಿ (1882-1964) ಅವರ 'ನಿಜಗುಣಾರ್ಯ', ಮುತನಾಳದ ಜಾದರ ಮಲ್ಲೇಶಿ (1890-1950) ಅವರ 'ಗುರು ಭಕ್ತಾಂಡಾರಿ' ಮುಂತಾದ ಸಣ್ಣಾಟದ ಕೃತಿಗಳು ಈ ಶತಮಾನದ ಆರಂಭದಲ್ಲಿ ಬಂದವು. ದೊಡ್ಡಾಟಗಳಲ್ಲಿ ಸಾಮಾನ್ಯವಾಗಿ ವೀರರೌದ್ರರಸ ಪ್ರಧಾನವಾದ, ಭರ್ಜರಿ ವೇಶಭೂಷಣದ, ಭವ್ಯ ರಂಗ ಸಜ್ಜಿಕೆಯ, ರಭಸದ ಕುಣಿತಗಳನ್ನು ಪೌರಾಣಿಕ ಕಥೆಗಳೊಂದಿಗೆ ಕಾಣಬಹುದಾದರೆ, ಸಣ್ಣಾಟಗಳು ಶಾಂತಿ, ಸಮಾಧಾನ, ಭಕ್ತಿ ಪ್ರೇಮಗಳಿಗೆ, ವೀರಶೈವ ಧರ್ಮಕ್ಕೆ/ಶೃಂಗಾರಪರ ಕಥೆಗೆ ಹೆಚ್ಚು ಒತ್ತು ನೀಡುವಂತಹದು.

ಜಿಲ್ಲೆಯಲ್ಲಿ ಹೆಚ್ಚು ಹೆಸರುವಾಸಿಯಾದ ನವಲಗುಂದ ತಾಲೂಕಿನ ಗುಡಿಸಾಗರದ ಫಕೀರವ್ವ ಗೀಗೀ ಪದಗಳ ಅಪಾರ ಸಂಗ್ರಹ ಹೊಂದಿರುವಾಕೆಯಷ್ಟೇ ಅಲ್ಲ, ಪದಗಳ ಮೂಲಕ ಸಾಮಾಜಿಕ ಅನಿಷ್ಟಗಳನ್ನು ತೊಡೆಯಲು ಶ್ರಮಿಸುತ್ತಿರುವಾಕೆ. ಫಕೀರವ್ವ (1925) ಮಾನಿಕಟ್ಟಿ ಗಂಗೂಬಾಯಿಯಿಂದ ಗೀಗೀ ಪದ ಕಲಿತರು. 1993 ರಲ್ಲಿ ಅವರಿಗೆ ರಾಜ್ಯ ಪ್ರಶಸ್ತಿ ದೊರೆತಿದೆ. ರೋಣದ ಶೇಖರಪ್ಪ ಚೌಡಿಕೆಯಲ್ಲಿ ಪ್ರವೀಣರಿದ್ದು ಆಕಾಶವಾಣಿ ದೂರದರ್ಶನದಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಇವರೊಂದಿಗೆ ಮುಳಗುಂದದ ಪರಶುರಾಮ್ ಹಾಗೂ ಹನುಮಂತಪ್ಪ ಬೋಪಲಾಪುರ ಸಾಥಿಯಾಗಿ ನುಡಿಸುತ್ತಾರೆ. ಧಾರವಾಡದ ವಿರೂಪಾಕ್ಷಪ್ಪ ಕ್ಷತ್ರಿ ಹೆಸರಾಂತ ತೊಗಲುಗೊಂಬೆ ಆಟಗಾರರಾಗಿದ್ದು ಪೌರಾಣಿಕ ಕಥೆಗಳಲ್ಲದೆ ಕುಟುಂಬ ಕಲ್ಯಾಣ ಇತ್ಯಾದಿಯ ಬಗ್ಗೆ ತಾವೇ ರಚಿಸಿದ ನಾಟಕಗಳನ್ನು ತೊಗಲುಗೊಂಬೆಗೆ ಅಳವಡಿಸಿಕೊಂಡಿದ್ದಾರೆ. ಅನಕ್ಷರಸ್ಥರಾದ ಇವರು ತಮ್ಮ ಗೊಂಬೆಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಯೂರೋಪಿನಾದ್ಯಂತ ಸಂಚರಿಸಿ ಪ್ರದರ್ಶನಗಳನ್ನು ನೀಡಿ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಡೊಳ್ಳಿನ ಪದ ಹಾಡುವ ಮುಸ್ಲಿಂ ಕಲಾವಿದ ಐ.ಎಂ. ಟೇಲರ್, ಅಪೂರ್ವ ಜಾನಪದ ಗೀತೆಗಳ ಗಾಯಕಿಯರಾದ ಗಂಗೂಬಾಯಿ ಅಣ್ಣಿಗೇರಿ, ರಮಾ ಸಬನೀಸ್ ಅವರು ಆಕಾಶವಾಣಿಯಲ್ಲಿಯೂ ಹಾಡಿದ್ದಾರೆ. ಹುಕ್ಕೇರಿಯ ಶಾಂತವ್ವ ನಾವಲಗಟ್ಟಿ ಅವರು ರಾಧಾನಾಟದ ಹಾಡುಗಳನ್ನು ಹಾಡುತ್ತಾರೆ. ಶಹನಾಯಿವಾದಕ ಹನುಮಪ್ಪ ಭಜಂತ್ರಿ ಅಗಡಿ ಅವರು ಕರಡಿಮಜಲು ಹಾಗೂ ಹಲಗೆ ನುಡಿಸುವುದರಲ್ಲಿ ಪ್ರವೀಣರಿದ್ದಾರೆ.

ಕೆಲವು ಗ್ರಾಮೀಣ ಪ್ರದೇಶದ ವಿದ್ಯಾವಂತರೂ ಜಾನಪದ ಗೀತೆ ಕಲೆಗಳಲ್ಲಿ ಪರಿಶ್ರಮ ಹೊಂದಿದ್ದು ವಿವಿಧ ರೀತಿಗಳಲ್ಲಿ ಪ್ರದರ್ಶಿಸುವುದುಂಟು. ರಾಜ್ಯಮಟ್ಟದ ಯುವಜನ ಮೇಳದಲ್ಲಿ ಚಿನ್ನದ ಪದಕ ಗಳಿಸಿರುವ ರೋಣದ ಶಂಕರಪ್ಪ ರಾಮಪ್ಪ ಸಂಕಣ್ಣವರ್ ಅವರು ಲಾವಣಿ, ಗೀಗೀ ಪದಗಳಿಂದ ಜನ ಜಾಗೃತಿ ಮಾಡುತ್ತಿದ್ದಾರೆ. ನಾಟಕದ ಕ್ಯಾಸೆಟ್‌ಗಳಿಗೆ ಧ್ವನಿ ನೀಡುತ್ತಾರೆ. ಧಾರವಾಡದ ಡಾ|| ಅಂಬೇಡ್ಕರ್ ಸರ್ವಾಂಗೀಣ ಅಭಿವೃದ್ಧಿ ಸಂಘದವರು ಬಾಲಕರಿಗಾಗಿ ಕರಡಿ ಮಜಲಿನ ಮೇಳವನ್ನು ಕರೆಪ್ಪ ಸಣ್ಣಪ್ಪ ಮೇತ್ರಿ ಅವರ ನೇತೃತ್ವದಲ್ಲಿ ಸಂಘಟಿಸಿದ್ದು ಮೇಳದಲ್ಲಿನ ಬಾಲಕರು ಜಾತ್ರೆ, ಮದುವೆ ಇತ್ಯಾದಿ ಕಡೆಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಆಕಾಶವಾಣಿಯಲ್ಲೂ ಕಾರ್ಯಕ್ರಮ ನೀಡಿದ್ದಾರೆ. ನೀಲಾ ಕಟ್ಟಿ, ಗೀತಾ ಕುಲಕರ್ಣಿ, ಕೆ ಜಿ ಮಂಗಳಾ, ಮಂಜುಳಾ ಮುಂತಾದ ಅನೇಕರು ಜಾನಪದ ಗೀತೆಗಳನ್ನು ಹಾಡುತ್ತಾರೆ. ಯಶವಂತ ಹಳಬಂಡಿ ಭಾವಗೀತೆ ಹಾಗೂ ಜಾನಪದ ಗೀತೆಗಳ ಅಪರೂಪದ ಕಲಾವಿದ ಎನ್ನಿಸಿಕೊಂಡಿದ್ದಾರೆ. ಆಕಾಶವಾಣಿ ದೂರದರ್ಶನಗಳಲ್ಲಿ ಕಾರ್ಯಕ್ರಮ ನೀಡಿದ್ದಾರಲ್ಲದೆ ಇವರ 25 ಕ್ಕೂ ಹೆಚ್ಚು ಕ್ಯಾಸೆಟ್‌ಗಳು ಬಂದಿದೆ. ಇದೇ ರೀತಿ ಸಂಗೀತಾ ಕಟ್ಟಿಯವರು ಜಾನಪದ ಹಾಗೂ ಭಾವಗೀತೆಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಹಾವೇರಿಯ ಬಾಲಕ ಕೊಟ್ಟೂರ ಬಸವೇಶ ಚೌಶೆಟ್ಟಿ, ಪುರವಂತಿಕೆ ವೇಷಧಾರಿಯಾಗಿ ನಿರರ್ಗಳವಾಗಿ ತಾಸುಗಟ್ಟಲೆ ಅಭಿನಯಿಸಬಲ್ಲ.

ಜಿಲ್ಲೆಯಲ್ಲಿ ಎರಡು ಸಾವಿರಕ್ಕೂ ಮಿಕ್ಕಿ ಜಾನಪದ ಕಲಾವಿದರು ಇರುವುದಾಗಿ ತಿಳಿದು ಬರುತ್ತದೆ. ಅವರುಗಳಲ್ಲಿ ದೇಶ ವಿದೇಶಗಳಲ್ಲಿ ಪ್ರದರ್ಶನ ನೀಡಿದ ಹೆಸರಾಂತ ಕೆಲವು ಕಲಾವಿದರನ್ನು ತಂಡಗಳನ್ನು ಹೆಸರಿಸಬಹುದು. ಮುಂಡರಗಿಯ ಸಂಗಪ್ಪ ಕಲೇಗಾರ್ (ಗಂಟಾತರಂಗ), ಧಾರವಾಡದ ಮಹದೇವಪ್ಪ ಬಾರಣ್ಣನವರ (ಸಮರ ಕಲೆ), ಡೋಣಿಯ ನೀಲಪ್ಪ ನೆ. ತೋಟಗಂಟ (ಗೊರವರ ನೃತ್ಯ), ತೊಂಡೂರಿನ ನೀಲಪ್ಪ ಹರಿಜನ (ಕೋಲಾಟ), ಸುಳ್ಳದ ಮಡಿವಾಳಪ್ಪ ದ್ಯಾಮಪ್ಪ ಕುಂಬಾರ್ (ಜಗ್ಗಲಿಗೆ), ಕೊಣ್ಣೂರಿನ ನಾ.ಬಾ. ಗಾಜಿಯವರ (ಡೊಳ್ಳು), ಬಿಂಕದಕಟ್ಟಿಯ ವಿರೂಪಾಕ್ಷಪ್ಪ ಕಿಳ್ಳೇಕ್ಯಾತರ (ತೊಗಲು ಗೊಂಬೆ), ಅಡವಿ ಸೋಮಾಪುರದ ಚನ್ನಪ್ಪ ಅಂಗಡಿ (ಗೀಗೀ ಮೇಳ), ಕಲಘಟಗಿಯ ಅಕ್ಕವ್ವ ಲಂಬಾಣಿ (ಲಂಬಾಣಿ ನೃತ್ಯ), ಅಂತರವಳ್ಳಿಯ ಜೀವನಗೌಡ್ರ ಗೊಂಜಗೌಡ್ರ (ಸೂತ್ರದಗೊಂಬೆ), ಕೆಲಗೇರಿಯ ಶಿವಪ್ಪ ಮಳಗಿಮನಿ (ಹೆಜ್ಜೆ ಕೋಲಾಟ) ನರಗುಂದದ ಮಾನೆ (ಕರಡೆ ಕೋಲಾಟ) ಇತ್ಯಾದಿ. *

ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆಯಲ್ಲದೆ ವಾರ್ಷಿಕ ಪ್ರಶಸ್ತಿಯನ್ನು ನೀಡಿದೆ. 1980 ರಲ್ಲಿ ನಾರಾಯಣಪ್ಪ ಹನುಮಂತಪ್ಪ ಶಿಡಗನಾಳ (ಸೂತ್ರದಗೊಂಬೆ), 81 ರಲ್ಲಿ ಹಜರತ್ ಸಾಬ

* (ಮಾಹಿತಿ : ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಧಾರವಾಡ ತಾ: 31.12.94)

ಶರೀಫನವರ (ಹಾಡುಗಾರಿಕೆ) ಮತ್ತು ಶಿವಲಿಂಗಮ್ಮ (ಹಾಡುಗಾರಿಕೆ), 82 ರಲ್ಲಿ ಮುದ್ದಣ್ಣ ಓಲೆಕಾರ (ಲಾವಣಿ) ಮತ್ತು ಹನುಮಗೌಡ ರಾ. ಜೇವನಗೌಡರ (ಯಕ್ಷಗಾನ ಸೂತ್ರದಗೊಂಬೆ), 83 ರಲ್ಲಿ ಎಂ.ಎಂ. ಮರಿದೇವರಮಠ (ದೊಡ್ಡಾಟ) ಮತ್ತು ಚಂಪಾಬಾಯಿ ಸುಳೆ (ಕೃಷ್ಣಪಾರಿಜಾತ) 84 ರಲ್ಲಿ ಫಕೀರವ್ವ ಗುಡಿಸಾಗರ (ಗೀಗೀಪದ), 85 ರಲ್ಲಿ ರಾಜಪ್ಪ ಭೀಮಪ್ಪ ಮಾಳಿಗಿಮನಿ (ಜಗ್ಗಲಿಗೆ), 86 ರಲ್ಲಿ ಫಕೀರವ್ವ ಹನುಮಂತಪ್ಪ ತಟ್ಟೀಮನಿ (ಸಣ್ಣಾಟ) ಅವರುಗಳಿಗೆ ಪ್ರಶಸ್ತಿ ಬಂದಿದೆ.[1]

**ಜನಪದ ಕಲಾವಿದರು** : ಜಿಲ್ಲೆಯಲ್ಲಿ ದೊಡ್ಡಾಟ ಕಲಾವಿದರಲ್ಲಿ ಈರಪ್ಪ ಚನ್ನಪ್ಪ ಮನ್ನಂಗಿ, ಎಂಕಪ್ಪ ಘೋರ್ಪಡೆ, ಎಲ್ಲಪ್ಪದ್ಯಾಮಣ್ಣ, ಕರಿಯಸಾಬಿ, ಕಲ್ಲಪ್ಪ ದ್ಯಾಮಣ್ಣ ಪೂಜಾರಿ, ಕೊಲ್ಹಾಪುರ ಎಂ.ಎಲ್, ಗುಡ್ಡಪ್ಪ ಕುಲಕರ್ಣಿ, ಗೂಳಪ್ಪ ಮಲ್ಲಪ್ಪ ಬಿಜ್ಜುಗತ್ತಿ, ಗೂಳಪ್ಪ ನಿಂಗಪ್ಪ, ಚನ್ನಪ್ಪ ವೀರಭದ್ರಪ್ಪ, ಚನ್ನಬಸಪ್ಪ ಬಿ. ಹಲಗೂರು, ದೇವಪ್ಪ ನಾಗಪ್ಪ ಮೇವುಂಡಿ, ಧರ್ಮ ಸ. ಕುಬೇರದ, ನಾಗಪ್ಪ ಯಲ್ಲಪ್ಪ ಮೇಟಿ, ಪರನಪ್ಪ, ಯಲ್ಲಪ್ಪ, ಕರಿಯಪ್ಪ ಕಾಟೇಕರ, ಪರಪ್ಪಾ ಶಿವಪ್ಪ ಕಮತಗ, ಬಸಪ್ಪ ಕ್ಯಾಸನೂರ, ಇತ್ಯಾದಿ ಅನೇಕರನ್ನೂ, ***ಸಣ್ಣಾಟ*** ಕಲಾವಿದರಲ್ಲಿ ಕಳಿಕೆಯ್ಯ ಸ್ವಾಮಿ ಚನ್ನಬಸವಯ್ಯ, ಗದಿಗಯ್ಯ ಸಿದ್ದಪ್ಪ ಹಿರೇಮಠ, ಗುಡ್ಡಪ್ಪ, ನೀಲಪ್ಪ, ಮಹಾದೇವಪ್ಪ, ಫಕೀರಪ್ಪ ನಾಯ್ಕರ, ಲಮಾಣಿ ಐ.ಜಿ, ವೀರಪ್ಪ ಯಲ್ಲಪ್ಪ ಬೇಶಿ ಮುಂತಾದವರನ್ನು, ಯಕ್ಷಗಾನ ಬಯಲಾಟ (ಮೂಡಲಪಾಯ)ದಲ್ಲಿ ಈಶ್ವರ ಯಶವಂತಪ್ಪಕೋಟೆ, ಎಲ್ಲಪ್ಪ ಬಸವನಗೌಡ ಪಾಟೀಲ, ಗುರಪ್ಪನವರ ಎಂ.ಸಿ. ಚನ್ನಬಸಪ್ಪ ಮಲ್ಲಪ್ಪ ಭಾರ್ಗಣ್ಣವರ, ಚನ್ನಬಸಪ್ಪ ಬಸಣಯಪ್ಪ, ದುಂಡಪ್ಪ ಪುಟ್ಟಪ್ಪ ಗುಳ್ಳದಕೇರಿ, ಪರಪ್ಪ ಕರವೀರಪ್ಪ ಭಂಗಿ, ಫಕೀರಪ್ಪ ಆನಂದಪ್ಪ, ಬಸವರಾಜ ಶಿವಪ್ಪ ಹೆರೂರ, ಭವನಾಪ್ಪ ಚನ್ನಮುಳಗುಂದ, ಮುಂತಾದವರು, **ಪಾರಿಜಾತಾಟ**ದಲ್ಲಿ ಯಲ್ಲಪ್ಪ ಮಲ್ಲಪ್ಪ ಸೀಗಿಹಳ್ಳಿ, ಸೂತ್ರದ ಗೊಂಬೆಯಾಟದಲ್ಲಿ ಕಾಳಾಚಾರಿ ವೀರಬಸಪ್ಪಾಚಾರಿ, ನಿಂಗಪ್ಪ ಹನುಮಂತಪ್ಪ, ಭಾಗವತ ನಾರಾಯಣಪ್ಪ, ಹನುಮಪ್ಪ ರಾಮನಗೌಡ, ಹಾಲಿನಗೌಡ ಎಂ., ಶಿವರುದ್ರಯ್ಯ ಬಸಯ್ಯ ಚಿಟ್ಟೆ, ***ತೊಗಲುಗೊಂಬೆ***ಯಲ್ಲಿ ಹನುಮಂತಪ್ಪ ಫಕೀರಪ್ಪ ಕಿಳ್ಳಕ್ಯಾತರ, ಹಾಲಪ್ಪ ತಿರುಗಪ್ಪ, ಹುಲಿಗೆಪ್ಪ ಹನುಮಂತಪ್ಪ ಹೊಳೆ ಬಸಪ್ಪ, ಹಲಗೆಕುಣಿತ ದಲ್ಲಿ ಈರಪ್ಪ ಬಸಪ್ಪ ಭಜಂತ್ರಿ, ಗುಡ್ಡಪ್ಪ ಬಂಕಾಪುರ, ನಾಗಪ್ಪ ದುರ್ಗವಪ್ಪ ಗುಡೇರ, ನಿಂಗಪ್ಪ ಕಲ್ಲಪ್ಪ ಅರಳಿಹಳ್ಳಿ, ಫಕೀರಪ್ಪ ದುರ್ಗಪ್ಪ ಮಣ್ಣಪ್ಪನವರ, ಭರಮಪ್ಪ ಕೆಂಚಣ್ಣವರ, ಭರಮಪ್ಪ ಯಲ್ಲಪ್ಪ ಪರಸನಟ್ಟಿ, *ಕರಡಿ ಮಜಲು ಕುಣಿತ*ದವರಲ್ಲಿ ಬಸವಂತಪ್ಪ ಗಿರಿಯಪ್ಪ ಮಧ್ಲಿ, ಬಸಪ್ಪ ಯಮನಪ್ಪ ನಾಗಲಾಪುರ, ಬಾಲಪ್ಪ ಹನುಮಂತಪ್ಪ ತಳವಾರ, ಮುದುಕಪ್ಪ ಫಕೀರಪ್ಪ ನೇಸರಗಿ, ಮಲ್ಲಪ್ಪ ಫಕೀರಪ್ಪ, ರುದ್ರಪ್ಪ ಲಕ್ಷ್ಮಣ ಕೋಲಕಾರ, ವೆಂಕಪ್ಪ ಶಂಕ್ರಪ್ಪ ಪುನೆ, ಶಂಕ್ರಪ್ಪಮ.ಬಾಳಕಾಟ್ಟಿ, ಶಂಬನಗೌಡ ಪಾಟೀಲ ಶಿವಬಸಪ್ಪ ಜಿ. ಕಾರ್ರೋಳ್ಳಿ; ***ಕೀಲುಕುದುರೆ*** ಕಲಾವಿದರಲ್ಲಿ ಗುಡ್ಡಪ್ಪ ನೀಲಪ್ಪ ಗಡ್ಡೆಹೊಳೆ, ಫಕೀರಪ್ಪ ಸಾಬ್ ಅಗಸರ, ಬಾಬು ಸಾಬ ಮುಳಗುಂದ, ಮಹದೇವಪ್ಪ ರಜಪೂತ, ಹನುಮಂತಪ್ಪ ಚಲುವಾದಿ, ***ಗೀಗೀ ಪದ*** ಹಾಡುವವರಲ್ಲಿ ತಾಜುಸಾಬ ಕಾಮಸಾಬ ಮುಲ್ಲಾ, ದುರ್ಗವ್ವ ಬಡಕಮ್ಮ, ಪರುತಪ್ಪ ನೀಲಪ್ಪ, ಬಸವಂತಪ್ಪ ಬಿ. ನೇಕಾರ, ಮಾರುತೆಪ್ಪ ಹನುಮಪ್ಪದಾಸರ್, ಮಾಹದೀನಸಾಬ್ ಖಾದರ್‌ಸಾಬ್, ಮಲ್ಲಪ್ಪ ಫಕೀರಪ್ಪ, ಮಲ್ಲಿಕ ಸಾಬ್ ಯಮಮಾರ ಸಾಬ್, ರಾಮದಾಸ್ ಹನುಮದಾಸ, ಹಸನ ಸಾಬ ರಾಜೇಸಾಬ ಕೀಟಾಪುರ, ಹುಸೇನಸಾಬ ರಾಯಸಾಬ ಹಾದಿಮನಿ, **ಲಾವಣಿ** ಹಾಡುವವರಲ್ಲಿ ಕರಿಬಸಪ್ಪ ಈರಪ್ಪ ದೋತೇಶಿ, ಕೇರಪ್ಪ ಕಮ್ಮಾರ್ರಸಾಲೆ, ಕಾಶಿಂಸಾಬ್ ಹಜರತ್ ಸಾಬ್, ಜಂಬಣ್ಣ ರಾಯಪ್ಪ, ದುರುಗಪ್ಪ ಭರಮಪ್ಪ ಬೀದಿನ ಮರದ, ಕರಿಮಲ್ಲಪ್ಪ ರುದ್ರಪ್ಪ, ಇತ್ಯಾದಿಯವರಲ್ಲದೆ **ಏಕತಾರಿ** ನುಡಿಸುವ ಎಳವಪ್ಪ ನಾಯ್ಕರ, ಗೊಂದಲಿಗರ ಎಲ್ಲಪ್ಪ ಕೆಂಚನಗೌಡ ***ಸೋಬಾನೆ*** ಹಾಡುವ ಗಂಗವ್ವ ನಾಗಪ್ಪ ತಳವಾರ, ಗುಡ್ಡಹಟ್ಟಿ ಉಡಚಪ್ಪ, ಮರಿಯಪ್ಪ ಹನುಮಂತಪ್ಪ ಹರಿಜನ, ರಾಚಯ್ಯ ಗುರಯ್ಯ ಚಿಕ್ಕವಾಡ, ***ಲಂಬಾಣಿ ನೃತ್ಯ*** ಅಕ್ಕಮ್ಮ ಬೆಳ್ಳಕ್ಕಿ, ಗುರವ್ವ ಲಮಾಣಿ, ಸಾವಕ್ಕ ಲಮಾಣಿ, ಸಾವಮ್ಮ ಸಿಂಗಪ್ಪ ಲಮಾಣಿ, ಸೀತಮ್ಮ ಶಂಕ್ರಪ್ಪ ಮುಂತಾದವರೂ, ***ಚೌಡಿಕೆ***ಯಲ್ಲಿ ಚನ್ನವೀರಪ್ಪ ಕಾಲಾಟಪ್ಪ ಹಡಪದ, ಪಟಕುಣಿತದಲ್ಲಿ ಜಟ್ಟಪ್ಪ ಗೂಳಪ್ಪ ಪೂಜಾರ, ***ಡಪ್ಪಿನಾಟ***ದಲ್ಲಿ ಜೀವಣ್ಣ ನರಸಪ್ಪ ಕಂಬಾಳೆ ಕತ್ತವರಸೆಯಲ್ಲಿ ಯಲ್ಲಪ್ಪ ವೈ. ಪವಾಡ, ***ವೇಷಗಾರ***ರಲ್ಲಿ ರಾಮಣ್ಣ ಸಿದ್ದರಾಮಪ್ಪ, ***ಪುರವಂತಿಕೆ*** ಮೇಳದಲ್ಲಿ ವೀರಪ್ಪ ರುದ್ರಪ್ಪ ದುಗ್ಗಾಣಿ, ವೀರಪ್ಪ ಶಿವಲಿಂಗಪ್ಪ ಹುಗ್ಗಿ, *ವೀರಗಾಸೆ*ಯಲ್ಲಿ ಶಿವಪ್ಪ ವೀರಭದ್ರಪ್ಪ ಕಂತಿ, ***ಕೊಂಡಮಾಮನ*** ಪದಗಳಲ್ಲಿ ಸುಬ್ರಾಯ ತಾಯಿಕರಿಯಪ್ಪ ಕರೋಶಿ ಮುಂತಾದ ಅನೇಕ ಜನಪದ ಕಲಾವಿದರನ್ನು ಹೆಸರಿಸಬಹುದು. ಡೊಳ್ಳು, ಕೋಲಾಟ, ಭಜಂತ್ರಿ, ರಿವಾಯತ್, ಭಜನೆ ಮುಂತಾದ ಅನೇಕ ಜನಪದ ಕಲೆಗಳಲ್ಲಿ ನುರಿತ ನೂರಾರು ಕಲಾವಿದರು ಜಿಲ್ಲೆಯಲ್ಲಿದ್ದಾರೆ.[2]

ಈಚೆಗೆ ಜೈನರ ಶ್ರೀ ಅರಹಂತ ಝೂಂಜ್ ಪಥಕ್, ಬಾಳಂಬೀಡು, ಹಾನಗಲ್ ತಾಲೂಕು, ಅವರು ಜನಪದ ಹಾಗೂ ಶಿಷ್ಟ ವ್ಯಾಯಾಮಗಳಿಂದ ಕೂಡಿದ ಮೇಳವೊಂದನ್ನು ರೂಪಿಸಿದ್ದು ಕಲಾ ಪ್ರದರ್ಶನ ನೀಡುತ್ತಿದ್ದಾರೆ.

---

1. 'ಜಾನಪದ' ಕುರಿತ ಈ ಉಪ ಅಧ್ಯಾಯಕ್ಕೆ ಡಾ: ದೇವೇಂದ್ರಕುಮಾರ್ ಹಕಾರಿಯವರ 'ಜಾನಪದ ಸಾಮಾಜಿಕ ಕಥನ ಗೀತಗಳಲ್ಲಿ ದುಃಖಾಂತ ನಿರೂಪಣೆ'ಯಿಂದ ಮಾಹಿತಿಯನ್ನು ತೆಗೆದುಕೊಳ್ಳಲಾಗಿದೆ.
2. ಹಂಪ. ನಾಗರಾಜಯ್ಯ, (ಸಂ) 'ಜನಪದ ಕಲಾವಿದರ ಸೂಚಿ', ಕ ಸಾ ಪ ಬೆಂಗಳೂರು, 1982